

ಇದುವೇ ಜೀವನ
ಸಾಕ್ಷಾತ್ಕಾರ
TRUE REALIZATION
ಪರಬ್ರಹ್ಮಸ್ವರೂಪದ
ದಿವ್ಯಆತ್ಮಜ್ಞಾನ ಸಿದ್ಧಿಯ
ದರ್ಶನ
ಸಂದರ್ಶನ
ಸಮ್ಮಿಲನ
ಡಾ|| ಸಿ. ರಾಮಸ್ವಾಮಿ. M.B.B.S., Ph.D., ( U.S.A. )
ಪುನರ್ಜನ್ಮ ಸಂಶೋಧನ ಕೇಂದ್ರ




# ಪುನರ್ಜನ್ಮ ಸಂಶೋಧನ ಕೇಂದ್ರ

(1) ಕತ್ತಲಿನಿಂದ ಬೆಳಕಿನೆಡೆಗೆ (2) ಅಸತ್ಯದಿಂದ ಸತ್ಯದಕಡೆಗೆ (3) ಅಜ್ಞಾನದಿಂದ ಜ್ಞಾನದಕಡೆಗೆ (4) ಮೃತ್ಯುವಿನಿಂದ ಅಮೃತತತ್ವದೆಡೆಗೆ (5) ವಿಶ್ವಅಶಾಂತಿಯಿಂದ ವಿಶ್ವಶಾಂತಿಯೆಡೆಗೆ, ಪುನರ್ಜನ್ಮ ಸಂಶೋಧನೆ ಮತ್ತು ಆತ್ಮದ ಅಸ್ತಿತ್ವದ ಆಧಾರಗಳಿಂದ ನಮ್ಮ ಮಾನವ ಜನಾಂಗ ವನ್ನು ಒಂದು ಗೂಡಿಸಿ, ಕೈಹಿಡಿದು ಕರೆದೊಯ್ಯುವ ದಾರಿದೀಪಗಳಾಗಿ ಈ ಕೆಳಕಂಡ ಸತ್ಯಯುಗದ ಜ್ಞಾನವೇದಗಳು ಪರಿಪೂರ್ಣವಾಗಿವೆ.

ಪುನರ್ಜನ್ಮ ಸಂಶೋಧನ ಕೇಂದ್ರ ತನ್ನ 40 ವರ್ಷಗಳ ಸಾಧನೆ–ಶೋಧನೆ–ಸಂಶೋಧನೆಗಳ, ಜ್ಞಾನ–ವಿಜ್ಞಾನ–ಸುಜ್ಞಾನ–ದಿವ್ಯಜ್ಞಾನಸಾರ ವನ್ನು, ಕಾಲಗರ್ಭದಲ್ಲಿ ಧಾರ್ಮಿಕಪ್ರಜ್ಞೆ ಮತ್ತು ಧರ್ಮಸಹಿಷ್ಣುತೆಯನ್ನು ಎತ್ತಿಹಿಡಿದಿದ್ದ ಮಾನವ ಸಂಸ್ಕೃತಿಯ ಶಿಖರಪ್ರಾಯವಾದ ಸುವರ್ಣಕರ್ನಾಟಕದ ಕನ್ನಡ ಸಂಸ್ಕೃತಿಯನ್ನು ಮತ್ತೆ ಸ್ಥಾಪಿಸುವ ಉದ್ದೇಶದಿಂದ ಕಸ್ತೂರಿಯಾದ ಕನ್ನಡಭಾಷೆಯಲ್ಲಿ, ಮಕರಂದವಾದ ಕನ್ನಡ ಸಾಹಿತ್ಯದಲ್ಲಿ ಮುಂದಿನ ಸತ್ಯಯುಗದ ಅಂದರೆ ಸುವರ್ಣಯುಗದ ಈ ಪಂಚಮ ಜ್ಞಾನವೇದಗಳನ್ನು ರಚಿಸಿ ಮನುಕುಲಕ್ಕೆ ವಿಶ್ವ ಅಂತರ್‍ಜಾಲದ ( Internet ) ಮೂಲಕ ಉಚಿತವಾಗಿ ನೀಡುತ್ತಿದೆ.

ಈ ಪುನರ್ಜನ್ಮ ಜ್ಞಾನ ವೇದಗಳು ಕಲಿಯುಗದ ವೇದ ಮತ್ತು ಉಪನಿಷತ್‍ಗಳಂತೆ ನಮ್ಮ ಮಾನವ ಜನಾಂಗಕ್ಕೆ ದಾರಿದೀಪಗಳಾಗಿವೆ.

1. ಸಾಕ್ಷರತೆ = ಸಂಗೀತ – ಸಾಹಿತ್ಯ – ಸಂಸ್ಕೃತಿ
2. ಸಾರ್ಥಕತೆ = ನಿಜಜೀವನ ದರ್ಶನ – ಸಂದರ್ಶನ – ಸಮ್ಮಿಲನ
3. ಸಾಕ್ಷಾತ್ಕಾರ = ದಿವ್ಯಆತ್ಮಜ್ಞಾನ ದರ್ಶನ – ಸಂದರ್ಶನ – ಸಮ್ಮಿಲನ ಸಿದ್ಧಿ
4. ಮನಸ್ಸಿನ ರಹಸ್ಯ ಮತ್ತು ಮನೋರೋಗಗಳ ರಹಸ್ಯಗಳ ಸಂಶೋಧನೆ = ಈ ಶತಮಾನದ ಒಂದು ಮಹಾ ಸಂಶೋಧನೆ
5. ಪುನರ್ಜನ್ಮ ಸಂಶೋಧನೆ ಮತ್ತು ಆತ್ಮದ ಅಸ್ತಿತ್ವ = ಪ್ರಕೃತಿಯ ಮತ್ತು ಸೃಷ್ಟಿಯ ರಹಸ್ಯ.

ಜ್ಞಾನ – ವಿಜ್ಞಾನ – ಸುಜ್ಞಾನ – ದಿವ್ಯಜ್ಞಾನ ನಮ್ಮ ಸಂಶಯ, ಭಯ, ಚಿಂತೆಗಳನ್ನು ಪರಿಹಾರ ಮಾಡುತ್ತವೆ. ಇಂತಹ ಜ್ಞಾನಗಳಿಗೆ ಪಾಪ ಪರಿಹಾರ ಮಾಡುವ ಶಕ್ತಿಯೂ, ಕರ್ಮಬಂಧನವನ್ನು ಕಡಿದುಹಾಕುವ ಶಕ್ತಿಯೂ ಉಂಟು. ಆದುದರಿಂದ ವಿಕಾಸದ ಹಾದಿಯಲ್ಲಿ ಸಾಗುತ್ತಿರುವ ಮಾನವರಾದ ನಿಮಗೆ ಈ ಜನ್ಮಾಂತರ ಜ್ಞಾನಗಳಿಂದ ಈ ಒಂದೇ ಜನ್ಮದಲ್ಲಿ ಸಾವಿರಾರು ಜನ್ಮಗಳಲ್ಲಿ ಪಡೆಯಬೇಕಾಗಿದ್ದ ಜ್ಞಾನ ಲಭ್ಯವಾಗುವುದರಿಂದ ಮುಂದಿನ ಜನ್ಮಗಳಲ್ಲಿ ಕೆಳಗಿನ ಲೋಕಗಳಲ್ಲಿ ಸಾವಿರಾರು ಜನ್ಮಗಳನ್ನು ಪಡೆಯಬೇಕಾದ ಅವಶ್ಯಕತೆ ಇರುವುದಿಲ್ಲ. ಆದುದರಿಂದ ನೀವು ಅಧೋಲೋಕಗಳ ಅಂದರೆ ಕೆಳಗಿನ ಲೋಕಗಳ ಜನ್ಮಗಳಿಂದ ವಿಮುಕ್ತಿ ಹೊಂದುತ್ತೀರಿ.

# ಸಾಕ್ಷಾತ್ಕಾರ

## ಪರಬ್ರಹ್ಮ ಸ್ವರೂಪದ ದಿವ್ಯ ಆತ್ಮಜ್ಞಾನ ಸಿದ್ಧಿಯ ದರ್ಶನ–ಸಂದರ್ಶನ–ಸಮ್ಮಿಲನ

ಡಾ|| ಸಿ. ರಾಮಸ್ವಾಮಿ

– ಲೇಖಕರು –

**ಡಾ|| ಸಿ. ರಾಮಸ್ವಾಮಿ M.B.B.S., Ph.D. ( U.S.A. )**

ಲೇಖಕ – ಸಂಪಾದಕ – ಪುನರ್ಜನ್ಮ ಸಂಶೋಧಕ

ನಿರ್ದೇಶಕ

**ಪುನರ್ಜನ್ಮ ಸಂಶೋಧನ ಕೇಂದ್ರ**

ನಂ. 101, ಶ್ರೀ ಅಪಾರ್ಟ್ ಮೆಂಟ್ಸ್, ಕೃಷ್ಣ ಅಡ್ಡರಸ್ತೆ,

ಬಸವನಗುಡಿ, ಬೆಂಗಳೂರು – 500 004.

– ಪ್ರಕಾಶಕರು –

ಶ್ರೀಮತಿ ಬಿ.ಎಲ್. ಮಂಗಳಗೌರಿ. B.Sc., B.Ed.

**ಪುನರ್ಜನ್ಮ ಪ್ರಕಾಶನ**

ನಂ. 101, ಶ್ರೀ ಅಪಾರ್ಟ್ ಮೆಂಟ್ಸ್, ಕೃಷ್ಣ ಅಡ್ಡರಸ್ತೆ,

ಬಸವನಗುಡಿ, ಬೆಂಗಳೂರು – 500 004.

ದೂರವಾಣಿ : 2661 5449

# ಸಾಕ್ಷಾತ್ಕಾರ

## ಪರಬ್ರಹ್ಮ ಸ್ವರೂಪದ ದಿವ್ಯ ಆತ್ಮಜ್ಞಾನ ಸಿದ್ಧಿಯ ದರ್ಶನ–ಸಂದರ್ಶನ–ಸಮ್ಮಿಲನ

ಡಾ|| ಸಿ. ರಾಮಸ್ವಾಮಿ

**PUBLISHER**
**Smt. B. L. Mangala Gowri.** B.Sc. B.Ed.
**PUNARJANMA PUBLICATIONS**

**COPYRIGHT BY PUBLISHER / AUTHOR**
( Subjected to Bangalore Jurisdiction )

**First Edition :** August 2013
**COPIES : Unlimited** Free distribution
Through E-Mail **;** Web site & Print media

**PRICE :** Free distribution only

ವಿಶ್ವಮಾನವ ಸಂಸ್ಕೃತಿಯ ಸಾಕ್ಷರತೆ = ಸಂಗೀತ – ಸಾಹಿತ್ಯ – ಸಂಸ್ಕೃತಿ,

ಸಾರ್ಥಕತೆ – ಸಾಕ್ಷಾತ್ಕಾರ – ಜೀವನ್ಮುಕ್ತಿ

ಪುನರ್ಜನ್ಮ ಸಂಶೋಧನೆ ಮತ್ತು ಆತ್ಮದ ಅಸ್ತಿತ್ವ

ಮನಸ್ಸಿನ ರಹಸ್ಯ – ಮನೋರೋಗಗಳ ರಹಸ್ಯ – ಸೃಷ್ಟಿಯ ರಹಸ್ಯ

ಮಾನವ ಜನಾಂಗದ ಪುನರುತ್ಥಾನ ಮತ್ತು ವಿಶ್ವಶಾಂತಿ ಸ್ಥಾಪನೆ

ಈ ಜ್ಞಾನ – ವಿಜ್ಞಾನ – ಸುಜ್ಞಾನ – ದಿವ್ಯಜ್ಞಾನ ಸಂದೇಶವನ್ನೂ

ಮತ್ತು

ವಿಶ್ವಶಾಂತಿಯ ಅಮರ ಆದೇಶವನ್ನೂ ಮಾನವಜನಾಂಗದಲ್ಲಿ ಪ್ರಸರಿಸುವ ಉದ್ದೇಶದಿಂದ

ಪುನರ್ಜನ್ಮ ಸಂಶೋಧನ ಕೇಂದ್ರದ ಈ ಉಚಿತ ಪ್ರಕಟಣೆ.

**GRAPHIC DESIGNER Smt. R. Sushma CRISSP VISIONS**

**PUBLISHED BY: PUNARJANMA PRAKASHNA,**
**Shree apartments, Krishna Road Cross**
**Basavanagudi, Bangalore - 560 004.**
**Karnataka I N D I A**

# ಪರಿವಿಡಿ


| ಅಧ್ಯಾಯ | ವಿವರ | ಪುಟ |
|---|---|---|
| ಇದುವೇ ಜೀವನ ಸಾಕ್ಷಾತ್ಕಾರ | | 1 |
| ಆಧ್ಯಾತ್ಮಿಕ ಕ್ರಾಂತಿಯಿಂದ ವಿಶ್ವಶಾಂತಿ | | 2 |
| ಸಾಕ್ಷಾತ್ಕಾರ | | 3 |
| ಪರಿವಿಡಿ | | 5 |
| ಮೊದಲಮಾತು | | 8 |
| ಮುನ್ನುಡಿ | | 10 |
| ನಿವೇದನೆ | | 13 |
| ಕೃತಜ್ಞತೆ | | 15 |
| ಅರ್ಪಣೆ–ಸಮರ್ಪಣೆ | | 16 |
| ವಿಶ್ವಮಾನವ ಸಂಸ್ಕೃತಿ ಕನ್ನಡ ಕಹಳೆ ಮೊಳಗಲಿ | | 17 |
| ಸ್ವಾಗತ–ಸುಸ್ವಾಗತ | | 18 |


## ಭಾಗ – 1
## ಜೀವನ ದರ್ಶನ


| | |
|---|---|
| 1. ಸಾಕ್ಷಾತ್ಕಾರ ಸಂಶೋಧನೆಗೆ ಪ್ರೇರಣೆ | 19 |
| 2. ಅನ್ವೇಷಣೆಯ ಹಾದಿ | 24 |
| 3. ಎಮರ್ಜೆನ್ಸಿಯಲ್ಲಿ ಅರ್ಜನ್ಸಿ – ಹೌಸ್ ಸರ್ಜನ್ಸಿ | 32 |
| 4. ಪ್ರೀತಿಯ ಸೆಳೆತ – ಪ್ರೇಮದ ಮಿಡಿತ | 36 |
| 5. ಸವಿನೆನಪುಗಳ ಆಗರ – ಪ್ರೀತಿಯ ಸಾಗರ | 39 |
| 6. ಅಲೌಕಿಕ ಜೀವನ ಸಂದರ್ಶನ | 49 |
| 7. ಅನ್ವೇಷಣೆಯ ಹಾದಿಯ ಸಾಕ್ಷಾತ್ಕಾರದ ಅನುಭವಗಳು | 58 |

# ಭಾಗ – 2
# ಜೀವನ ಸಂದರ್ಶನ

## 8. ಜೀವನ್ಮುಕ್ತಿ

# ಭಾಗ – 2
# ಜೀವನ ಸಮ್ಮಿಲನ

## 9. ಮೋಕ್ಷ

# ಮೊದಲ ಮಾತು

## ಪ್ರಿಯ ಓದುಗರೇ,

ಕನ್ನಡ ಸಾಹಿತ್ಯ ಪರಿಷತ್ ಮತ್ತು ಕರ್ನಾಟಕ ರಾಜ್ಯ ಸರ್ಕಾರ ಅನೇಕ ಜಿಲ್ಲೆಗಳಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನಗಳನ್ನು ಮತು ್ತವಿಶ್ವಸಾಹಿತ್ಯ ಸಮ್ಮೇಳನಗಳನ್ನು ನಡೆಸುತ್ತಿರುವುದು. ಇದ್ದನ್ನೆಲ್ಲ ನೋಡಿದ ನಾನು, ನನ್ನ ಮಾತೃಭಾಷೆಯಾದ ಕನ್ನಡದ ಉದ್ಧಾರಕ್ಕೆ ಏನು ಮಡಿದ್ದೇನೆ ? ಎಂದು ಮತ್ತೆ ಮತ್ತೆ ಪ್ರಶ್ನಿಸಿಕೊಂಡೆನು.

"ತಿಳಿದಿರುವ ಜ್ಞಾನವನ್ನು ಮತ್ತೊಬ್ಬರಿಗೆ ತಿಳಿಸುವುದೇ ಮಾನವ ಜೀವನ"

– ತತ್ತ್ವಜ್ಞಾನಿ ಅರಿಸ್ಟಾಟಲ್

## ಮಾನವ ನುಡಿ

ಮನುಷ್ಯ ದೀಪವಾದರೂ ಆಗಬೇಕು, ಕನ್ನಡಿಯಾದರೂ ಆಗಬೇಕು. ಒಂದು ಬೆಳಕನ್ನು ಕೊಡುತ್ತದೆ. ಮತ್ತೊಂದು ಅದನ್ನು ಪ್ರತಿಬಿಂಬಿಸುತ್ತದೆ. ಪ್ರತಿಯೊಬ್ಬರೂ ದೀಪ ಆಗದೆ ಹೋಗಬಹುದು, ಆದರೆ ಕನ್ನಡಿಯಾಗಬಹುದು.

## ಹಣ – ಆಸ್ತಿ

ಮನುಷ್ಯರು ತಾವು ಸಂಪಾದಿಸಿದ ಹಣ ಮತ್ತು ಆಸ್ತಿಯನ್ನು ಬೇರೆಯವರಿಗೆ ಕೊಡಬಹುದು. ಆ ಹಣ ಮತ್ತು ಆಸ್ತಿಯನ್ನು ಬೇರೆಯವರಿಗೆ ಅವರು ಒಂದು ಸಾರಿ ದಾನಮಾಡಿದರೆ ಅವು ಅವರಿಗೆ ಒಂದು ಸಾರಿ ಮಾತ್ರ ಉಪಯೋಗವಾಗಿ ನಂತರ ಮತ್ತೊಮ್ಮೆ ಉಪಯೋಗಕ್ಕೆ ಬರುವುದಿಲ್ಲ. ಪುಸ್ತಕ ಜ್ಞಾನ ಓದುಗರ ಮನಸ್ಸಿನಲ್ಲಿ ಎಂದಿಗೂ ಬತ್ತದೆ ಅವರ ಜ್ಞಾನವನ್ನು ಬೆಳಗಿಸುತ್ತಿರುತ್ತದೆ.

ಜ್ಞಾನಜ್ಯೋತಿಯ ಪುಸ್ತಕಗಳು ಬೇರೆ ಎಲ್ಲಾ ಉಡುಗೊರೆಗಳಿಗಿಂತ ಅತ್ಯುತ್ತಮ ಉಡುಗೊರೆಗಳು.

ಅದಕ್ಕೆ ನಾನು ನನ್ನ 40 ವರ್ಷಗಳ ಸಾಧನೆ – ಶೋಧನೆ – ಸಂಶೋಧನೆಗಳ, ಜ್ಞಾನ – ವಿಜ್ಞಾನ – ಸುಜ್ಞಾನ – ದಿವ್ಯಜ್ಞಾನಸಾರವನ್ನು, "ಧಾರ್ಮಿಕಪ್ರಜ್ಞೆ ಮತ್ತು ಧರ್ಮಸಹಿಷ್ಣುತೆ"ಯನ್ನು ಎತ್ತಿಹಿಡಿದಿರುವ ಮಾನವ ಸಂಸ್ಕೃತಿಯ ಶಿಖರಪ್ರಾಯವಾದ ಸುವರ್ಣಕರ್ನಾಟಕದ ಕನ್ನಡ ಸಂಸ್ಕೃತಿಯನ್ನು ಮತ್ತೆ ಬೆಳಗಿಸುವ ಉದ್ದೇಶದಿಂದ ಕಸ್ತೂರಿಯಾದ ಕನ್ನಡಭಾಷೆಯಲ್ಲಿ, ಮಕರಂದವಾದ ಕನ್ನಡ ಸಾಹಿತ್ಯದಲ್ಲಿ, ಮುಂದಿನ ಸತ್ಯಯುಗದ ಅಂದರೆ ಸುವರ್ಣಯುಗದ ಈ ಪಂಚಮ ಜ್ಞಾನವೇದಗಳನ್ನು ಹೃದಯ ತುಂಬಿ ರಚಿಸಿದೆ.

ಈ ಪುನರ್ಜನ್ಮ ಜ್ಞಾನ ವೇದಗಳು ಕಲಿಯುಗದ ವೇದ ಮತ್ತು ಉಪನಿಷತ್‌ಗಳಂತೆ ನಮ್ಮ ಮಾನವ ಜನಾಂಗಕ್ಕೆ ದಾರಿದೀಪಗಳಾಗಿವೆ.

1. ಸಾಕ್ಷರತೆ = ಸಂಗೀತ – ಸಾಹಿತ್ಯ – ಸಂಸ್ಕೃತಿ – True Education
2. ಸಾರ್ಥಕತೆ = ನಿಜಜೀವನ ದರ್ಶನ – ಸಂದರ್ಶನ – ಸಂಮ್ಮಿಲನ – Right Living
3. ಸಾಕ್ಷಾತ್ಕಾರ = ದಿವ್ಯಆತ್ಮಜ್ಞಾನ ದರ್ಶನ – ಸಂದರ್ಶನ – ಸಂಮ್ಮಿಲನ ಸಿದ್ಧಿ – Self Realization
4. ಮನಸ್ಸಿನ ಮತ್ತು ಮನೋರೋಗಗಳ ರಹಸ್ಯಗಳ ಸಂಶೋಧನೆ–ಈ ಶತಮಾನದ ಮಹಾ ಸಂಶೋಧನೆ = Mystery of Mind & Mental diseases
5. ಪುನರ್ಜನ್ಮ ಸಂಶೋಧನೆ ಮತ್ತು ಆತ್ಮದ ಅಸ್ತಿತ್ವ = ಪ್ರಕೃತಿಯ ಮತ್ತು ಸೃಷ್ಟಿಯ ರಹಸ್ಯ.

= Research on Reincarnation and Survival of Soul

ಹಾಗೂ

ವಿಶ್ವಶಾಂತಿ ಸ್ಥಾಪನೆ ಮತ್ತು ಮಾನವ ಜನಾಂಗದ ಪುನರುತ್ಥಾನ

– Establish World Peace and Resuscitate Humanity

ವಿಶ್ವಮಾನವ ಸಂಸ್ಕೃತಿಯನ್ನು ಬೆಳಗಿಸುವ ಉದ್ದೇಶದಿಂದ ಈ ಸತ್ಕೃತಿಗಳನ್ನು ನಮ್ಮ ಪುನರ್ಜನ್ಮ ಸಂಶೋಧನ ಕೇಂದ್ರವು ಪ್ರಕಟಿಸಿ, ಉಚಿತವಾಗಿ ಮನುಕುಲಕ್ಕೆ ವಿಶ್ವ ಅಂತರ್‌ಜಾಲದ ( Internet ) ಮೂಲಕ ನೀಡುತ್ತಿದೆ. ನನ್ನ ಹಾಗೆ ಪ್ರತಿಯೊಬ್ಬ ಕನ್ನಡಿಗರೂ ಹಾಗೂ ಉಳಿದ ಮಾನವರೂ ತಾವು ಒಬ್ಬ ಮಾನವರಾಗಿ ಅವರವರ ಭಾಷೆಗೆ ಹಾಗೂ ಮಾನವ ಜನಾಂಗಕ್ಕೆ ಏನು ಮಾಡಿದ್ದೇವೆ ? ಎಂಬ ಪ್ರಶ್ನೆಯನ್ನು ತಾವೇ ಹಾಕಿಕೊಂಡು ಉತ್ತರ ನೀಡಿದರೆ " ಭಾಷೆ ಬೆಳೆಯುತ್ತದೆ, ಭಾಷೆ ಉಳಿಯುತ್ತದೆ, ವಿಶ್ವಮಾನವ ಸಂಸ್ಕೃತಿ ಬೆಳೆಗುತ್ತದೆ."

ಉರಿಯುತ್ತಿರುವ ಒಂದೇ ಒಂದು ಸೊಡರು ಜ್ಯೋತಿಯಿಂದ ನಾವು ಪ್ರಪಂಚಕ್ಕೆಲ್ಲಾ ಬೆಳಕನ್ನು ನೀಡುವಷ್ಟು ಅಸಂಖ್ಯಾತ ಸೊಡರುಗಳನ್ನು, ಅಂದರೆ ದೀಪಗಳನ್ನು ಹೊತ್ತಿಸಬಹುದು. ಈಗ ಈ ಶತಮಾನದ ಜ್ಞಾನ – ವಿಜ್ಞಾನ – ಸುಜ್ಞಾನ – ದಿವ್ಯಜ್ಞಾನಸಾರಾಮೃತವನ್ನೊಳಗೊಂಡ ಈ ಐದು ಸತ್ಕೃತಿಗಳು ಮಾನವ ಜನಾಂಗಕ್ಕೆ ಎಲ್ಲಾ ಉಡುಗೊರೆಗಳಿಗಿಂತ ಸರ್ವಶ್ರೇಷ್ಠವಾದ ಅತ್ಯುತ್ತಮ ಉಡುಗೊರೆಗಳೇ !!! ಓದಿ ಹೇಳಿ ?

ಈ ಕೃತಿಗಳನ್ನು ರಚಿಸುವಾಗ ನನಗೆ ಉಂಟಾದ ರಸಾಸ್ವಾದನೆಯಿಂದ ಬಂದಿರುವ ರಸಸುಖದಲ್ಲಿ ಒಂದಿನಿತನ್ನಾದರೂ ಇದನ್ನು ಓದುವವರು ಸವಿದು ಅವರಿಗೆ ಈ ಎಲ್ಲಾ ಜ್ಞಾನ ಉಂಟಾಯಿತೆಂದು ಗೊತ್ತಾದರೆ ಈ ಸತ್ಕೃತಿಗಳು ಸಾರ್ಥಕವಾದವೆಂದು ಭಾವಿಸುತ್ತೇನೆ. ಈ ಕೃತಿಗಳಿಗೆ ಸಂಬಂಧಪಟ್ಟಂತೆ ಯಾವುದೇ ಟೀಕೆ–ಟಿಪ್ಪಣೆಗಳಿದ್ದಲ್ಲಿ ಅದನ್ನು ಲಖಿತ ಮೂಲಕ ಅಥವಾ ಈ ಕೆಳಕಂಡ ಈ–ಮೇಲ್ ಮೂಲಕ ಲೇಖಕರಿಗೆ ತಿಳಿಸಬಹುದು.

**E-mail : reincarnationresearchcentre@gmail.com**

ಬುದ್ಧಂ ಶರಣಂ ಗಚ್ಛಾಮಿ
ಸಂಘಂ ಶರಣಂ ಗಚ್ಛಾಮಿ
ಧಮ್ಮಂ ಶರಣಂ ಗಚ್ಛಾಮಿ

–ಭಗವಾನ್ ಬುದ್ಧ

**( Triple Gems of Buddhism )**

ಸಂಗೀತಂ ಶರಣಂ ಗಚ್ಛಾಮಿ
ಸಾಹಿತ್ಯಂ ಶರಣಂ ಗಚ್ಛಾಮಿ
ಸಂಸ್ಕೃತಿ ಶರಣಂ ಗಚ್ಛಾಮಿ

–ಡಾ|| ಸಿ. ರಾಮಸ್ವಾಮಿ

**( Triple Gems of Humanity )**

# ಮುನ್ನುಡಿ

ಓದಿ ವಿಷಯವನ್ನು ಗ್ರಹಿಸಿಕೊಳ್ಳುವುದರ ಜೊತೆಗೆ ನಿತ್ಯಜೀವನಕ್ಕೆ ಸಂಬಂಧಪಟ್ಟ ಲೌಕಿಕ ವಿಷಯವನ್ನು ಸರಳವಾದ ಶೈಲಿಯಲ್ಲಿ ಬರೆಯುವ ಅಕ್ಷರಜ್ಞಾನವನ್ನು ಹೊಂದುವುದು ಅಕ್ಷರತೆ ಅಂದರೆ ಲಿಟರಸಿ ಎನ್ನುತ್ತೆವೆ. ಆ ಅಕ್ಷರತೆಯ ಅಕ್ಷರಜ್ಞಾನವನ್ನು ತಿಳಿದವನನ್ನು ಅಕ್ಷರಸ್ಥನೆನ್ನುತ್ತಾರೆ ಅಂದರೆ ಲಿಟರೆಟ್ ಎನ್ನುತ್ತೇವೆ.

ಆ ಸಾಕ್ಷರತೆ ಮಾನವನನ್ನು ಸುಶಿಕ್ಷಿತನನ್ನಾಗಿ ಮಾಡುತ್ತದೆ ಅಂದರೆ ಸುಸಂಸ್ಕೃತನನ್ನಾಗಿ ಮಾಡುತ್ತದೆ. ಇಂದಿನ ವಿದ್ಯಾರ್ಥಿಗಳಿಗೆ ದೊರೆಯುವ ಶಿಕ್ಷಣ ಕೇವಲ ಸರ್ಕಾರೀಯ ಅಥವ ಖಾಸಗಿ ಉದ್ಯೋಗವನ್ನು ಪಡೆದು ಹೊಟ್ಟೆ ಹೊರೆದುಕೊಳ್ಳವ ಗುರಿಯನ್ನು ಹೊಂದಿ, ಇದರಿಂದ ನಮ್ಮ ಜೀವನ ಧನ್ಯ ಎಂದು ಭಾವಿಸುವ ಶಿಕ್ಷಣವಾಗಿದೆ.

ಇಂದಿನ ಈ ರೀತಿಯ ದಾರಿತಪ್ಪಿದ ಶಿಕ್ಷಣ(Education)ನಮ್ಮ ಇಂದಿನ ಮಾನವ ಜೀವನವನ್ನು ಅಧಃಪಥನಕ್ಕೆ ತಳ್ಳಿದೆ. **Education** ಎಂಬ ಪದವು ಲ್ಯಾಟಿನ್ ಭಾಷೆಯ **Educare** ಎಂಬ ಪದದ ಉತ್ಪತ್ತಿ. ಇದರ ಅರ್ಥ ದಾರಿತೋರಿಸು, ಅಭಿವೃದ್ಧಿಪಡಿಸು ಎಂದಾಗುತ್ತದೆ. ಶಿಕ್ಷಣ ಎನ್ನುವುದು ಬೆಳವಣಿಗೆ, ಅಭಿವೃದ್ಧಿಗಳಿಗೆ ಅನ್ವಯಿಸುವ ಪದ.

ನಿಜವಾದ ಶಿಕ್ಷಣವೆಂದರೆ ಕೇವಲ ವಿದ್ಯಾದಾನವಲ್ಲ ಅದು ಜ್ಞಾನದಾನವಾಗಬೇಕು. ಅಂದರೆ ವಿದ್ಯಾರ್ಥಿಗೆ ದೊರೆಯುವ ಶಿಕ್ಷಣ ಕೇವಲ ಹೊಟ್ಟೆ ಹೊರೆದುಕೊಳ್ಳುವ ಗುರಿಯನ್ನು ಹೊಂದಿರುವ ಶಿಕ್ಷಣವಾಗಬಾರದು.

ಸರ್ಕಾರಿ ಉದ್ಯೋಗವನ್ನು ಪಡೆದು ನಮ್ಮ ಜೀವನ ಧನ್ಯ ಎಂದು ಭಾವಿಸುವ ಶಿಕ್ಷಣವಾಗಬಾರದು. ಶಿಕ್ಷಣವೆಂದರೆ ಕೇವಲ ಗ್ರಂಥಗಳ ಅಧ್ಯಯನವೂ ಅಲ್ಲ. ವಿಷಯಗಳ ಸಂಗ್ರಹಣೆಯೂ ಅಲ್ಲ. ನಿಜವಾದ ಶಿಕ್ಷಣ ವ್ಯಕ್ತಿಯನ್ನು ಮಾನವನನ್ನಾಗಿಸುವ ಶಿಕ್ಷಣ ಆಗಿರಬೇಕು. ಅಂತಹ ಮಾನವನ ಹಾಗೂ ಮಾನವೀಯ ಗುಣಗಳು ಅಭಿವೃದ್ಧಿಯಾಗಲು ತಕ್ಕ ಅವಕಾಶ ಮುಕ್ತವಾಗಿ ಶಿಕ್ಷಣದಲ್ಲಿ ದೊರೆಯಬೇಕು.

ಮನುಷ್ಯ ಮೊದಲು ಮಾನವನಾಗಿರಬೇಕು. ನಂತರ ಅವನು ವಿಜ್ಞಾನಿಯೋ, ವೈದ್ಯನೋ, ಇಂಜಿನಿಯರೋ, ವಕೀಲನೋ, ಕವಿಯೋ, ಕಲಾವಿದನೋ, ತತ್ವಶಾಸ್ತ್ರಜ್ಞನೋ ಮತ್ತೊಂದೋ ಆಗಬಹುದು.

ಹಾಗಾದರೆ ಶಿಕ್ಷಣದ ಮಹತ್ತರ ಉದ್ದೇಶ ಏನಾಗಿರಬೇಕು ?

ಶಿಕ್ಷಣಕ್ಕೆ ಮಹತ್ವ ಬರುವುದು ಅದನ್ನು ನೀಡುವ ಉದ್ದೇಶ, ಗುರಿ ಹಾಗೂ ವಿಧಾನಗಳಿಂದ ಮಾತ್ರ.. ಶಿಕ್ಷಣವೆಂದರೆ ಕೇವಲ ವಿದ್ಯಾದಾನವೇ ? ಅದು ಕೇವಲ ವಿದ್ಯಾದಾನವಾಗಿದ್ದರೆ ಇಂದಿನ ಸಾಮಾಜಿಕ ರಾಷ್ಟ್ರೀಯ ಹಾಗೂ ವೈಯಕ್ತಿಕ ಬದುಕು ಏಕೆ ಹದಗೆಡಬೇಕಾಗಿತ್ತು? ಲೌಕಿಕ ಬದುಕು ಉತ್ತಮಗೊಳ್ಳುತ್ತದೆ ಯೆಂದು ಕಂಡು ಬಂದರೂ ಮಾನವೀಯ ಬದುಕು ದಿನದಿಂದ ದಿನಕ್ಕೆ ಹದಗೆಡುತ್ತದೆ.

ವಿದ್ಯಾವಂತರ ಸಂಖ್ಯೆ ಹೆಚ್ಚಿದಷ್ಟು ಚಾರಿತ್ರ್ಯ ಹಾಗೂ ಮಾನವ ಸಂಬಂಧಗಳು ನಿಧಾನವಾಗಿ ಮಾಯವಾಗುತ್ತವೆ. ಜೀವನದ ಸೌಲಭ್ಯಗಳು ಹೆಚ್ಚಿದಷ್ಟು ಜೀವಿಗಳ ಬಾಂಧವ್ಯ ಮರೆಯಾಗುತ್ತಿದೆ. ಅಂದರೆ ನಮಗೆ ದೊರೆಕುತ್ತಿರುವ ಶಿಕ್ಷಣ ದೋಷಪೂರ್ಣವಾಗಿರಬೇಕು ಅಥವಾ ಅರ್ಥಪೂರ್ಣವಾಗಿಲ್ಲದಿರಬೇಕು.

ಸಮಾಜದ ಸಂಘಟನೆಯಲ್ಲಿ ರಾಷ್ಟ್ರದ ಅಭಿವೃದ್ಧಿಯಲ್ಲಿ ಮಾನವನ ಶಿಕ್ಷಣ ಒಂದು ಪ್ರಮುಖ ಪ್ರಕ್ರಿಯೆ. ನಿಜವಾದ ಶಿಕ್ಷಣವೆಂದರೆ ಮನುಷ್ಯನ ಇಚ್ಛಾಶಕ್ತಿಯನ್ನು ಸರಿಯಾದ ಮತ್ತು ಸಮರ್ಥವಾದ ರೀತಿಯಲ್ಲಿ ಬಳಸುವಂತೆ ತರಬೇತಿ ನೀಡುವುದು. ವ್ಯಕ್ತಿಯಲ್ಲಿ ಸುಪ್ತವಾಗಿ ಅಡಗಿರುವ ಜ್ಞಾನ ಸಂಪತ್ತನ್ನು ಉತ್ತಮ ಪರಿಸರದಲ್ಲಿ ವೀಕ್ಷಿಸುವಂತೆ ಮಾಡಿ ವ್ಯಕ್ತಿಯಲ್ಲಿ ಶಿಸ್ತು, ಚತುರತೆ, ಸ್ವಾತಂತ್ರ್ಯ ಹಾಗೂ ವಿಧೇಯತೆ ಭಾವನೆಯನ್ನು ಬೆಳೆಸುವುದೇ ಶಿಕ್ಷಣ.

ನಿಜವಾದ ದೈಹಿಕ ಬೌದ್ಧಿಕ ಹಾಗೂ ಭಾವನಾತ್ಮಕ ದೃಷ್ಟಿಗಳಿಂದ ವ್ಯಕ್ತಿಯು ಸಮನಾಗಿ ಬದಲಾವಣೆ ಹೊಂದುತ್ತ ಬೆಳವಣಿಗೆ ಹಾಗೂ ಅಭಿವೃದ್ಧಿಗಳನ್ನು ಸಾಧಿಸುತ್ತಾನೆ. ಇದನ್ನೇ ಶಿಕ್ಷಣ ಎನ್ನಬಹುದು.

ಜೀವನ ಪರ್ಯಂತ ಗಳಿಸುವ ಅನುಭವವೇ ಶಿಕ್ಷಣ. ನಿಜವಾದ ಶಿಕ್ಷಣ ಒಬ್ಬ ಕಾರ್ಯಗತ ವ್ಯಕ್ತಿಯಲ್ಲಿ ಪರಿವರ್ತನೆಯನ್ನುಂಟು ಮಾಡುತ್ತದೆ. ಇದೊಂದು ಜೀವನ ಪರ್ಯಂತ ನಡೆಯುವ ಕ್ರಿಯೆ. ಅದು ಹುಟ್ಟುಗುಣಗಳನ್ನು ವಿಕಾಶಮಾಡುತ್ತದೆ. ಉತ್ತಮ ಜೀವನ ನಡೆಸಲು ಸಹಾಯಕವಾಗುತ್ತದೆ. ವ್ಯಕ್ತಿಯ ಸರ್ವತೋಮುಖ ಬೆಳವಣಿಗೆಗೆ ಕಾರಣೀಭೂತವಾಗುತ್ತದೆ. ಮನುಷ್ಯನಲ್ಲಿ ಆಗಲೇ ಇರುವ ಮಾನವೀಯತೆಯ ಬೆಳವಣಿಗೆಯ ಪೂರ್ಣತೆಯನ್ನು ವ್ಯಕ್ತಗೊಳಿಸುವುದೇ ಶಿಕ್ಷಣ.

ಶಿಕ್ಷಣ ಪಡೆದ ವ್ಯಕ್ತಿಯು ಹೃದಯದಲ್ಲಿ ಅಪರಿಮಿತ ಅನುಕಂಪ ಭಾವನೆಯನ್ನು ಕಾರ್ಯಗತಗೊಳಿಸುವ ದಕ್ಷತೆ ಹಾಗೂ ಹಿಡಿದ ಕಾರ್ಯವನ್ನು ಬಿಡದೆ ಸಾಧಿಸಬಲ್ಲ ಎದೆಗಾರಿಕೆ ಹೊಂದಿರಬೇಕು.

## ಇಂದಿನ ಶಿಕ್ಷಣವನ್ನು ನೀವು ಸಂಸ್ಕಾರಯುತವನ್ನಾಗಿ ಮಾಡಬೇಕು

ಸಂಸ್ಕಾರವೆಂಬುದು ಜೀವನದ ಕ್ರಮ. ಸಾಮಾಜಿಕ ಪರಂಪರೆ ಮತ್ತು ಸಾಮಾಜಿಕ ವಿಧಾನಗಳು ವ್ಯಕ್ತಿಯ ದೇಹಕ್ಕೆ ಸೌಂದರ್ಯಕ್ಕೆ ಒಂದು ಕಡೆ ಮೆರಗು ನೀಡಿದರೆ ಮತ್ತೊಂದೆಡೆ ಸಂಗೀತ, ಕಲೆ, ಶಿಲ್ಪಕಲೆ, ಸಾಹಿತ್ಯ, ಸಂಸ್ಕೃತಿ ಮುಂತಾದವುಗಳ ಬೆಳವಣಿಗೆ ಮನಸ್ಸಿಗೆ ನೆಮ್ಮದಿ ನೀಡುತ್ತವೆ.

ಮಕ್ಕಳ ಗಮನವನ್ನು ಸಂಸ್ಕಾರವೆಂಬ ಶಬ್ದಾರ್ಥದ ಕಡೆಗೆ ಸೆಳೆದರೆ ಮಾತ್ರ ಅವರು ತಮ್ಮ ನಡುವಳಿಕೆಗಳನ್ನು ಸುಧಾರಿಸಿಕೊಂಡು ಉನ್ನತಿಕರಿಸುತ್ತಾರೆ. ಸುಸಂಸ್ಕೃತವಾದ ಒಬ್ಬ ವ್ಯಕ್ತಿ ಬೆಲೆಕಟ್ಟಲಾಗದಂತಹ ಅತ್ಯುನ್ನತ ಮೌಲ್ಯವುಳ್ಳ ಸಮಾಜದ ಬಹುದೊಡ್ಡ ಆಸ್ತಿ.

ಸಂಸ್ಕಾರವು ಒಂದು ರಾಷ್ಟ್ರದ ಜೀವನಾಡಿಯ ಪ್ರತೀಕ. ಆದ್ದರಿಂದಲೇ ಒಂದೊಂದು ರಾಷ್ಟ್ರವು ತನ್ನ ಸಾಂಸ್ಕೃತಿಕ ಹೆಸರನ್ನು ಹೇಳತ್ತಾ ಬಂದುದೆ.

ಉದಾ : ಭಾರತೀಯ ಸಂಸ್ಕೃತಿ, ಬ್ರಿಟಿಷ್ ಸಂಸ್ಕೃತಿ, ಅಮೇರಿಕಾಸಂಸ್ಕೃತಿ, ಜಪಾನ ಸಂಸ್ಕೃತಿ, ಇತ್ಯಾದಿ.

ಒಂದು ಜನಾಂಗದ ವೇಷ ಭೂಷಣಗಳು, ನಡವಳಿಕೆಗಳು ಆಚಾರ ವಿಚಾರಗಳು ಅವರ ಜ್ಞಾನ ಸಂಪತ್ತು, ಪ್ರತಿಭೆ, ನಾಗರಿಕ ಜನರ ಅಭಿಪ್ರಾಯ ಭವನೆಗಳೆಲ್ಲವೂ ಒಳಗೊಂಡಿರುವುದನ್ನು ಸಂಸ್ಕೃತಿ ಅಥವಾ ಸಂಸ್ಕಾರ ಎನ್ನುತ್ತೆವೆ.

ಒಂದು ಜನಾಂಗದ ಸತತವಾದ ವ್ಯವಸಾಯದಿಂದ ಉದ್ಭವಿಸಿದ ಅನುಭವವೇ ಸಂಸ್ಕಾರ. ಒಂದು ಜನಾಂಗ ತನ್ನ ಮುಂದಿನ ಜನಾಂಗಕ್ಕೆ ಈ ಸಂಸ್ಕಾರವನ್ನು ವರ್ಗಾಯಿಸುತ್ತಾ ಹೋಗುತ್ತದೆ. ಜೀವನದ ಉತ್ತಮ ಸಂಸ್ಕಾರ

ವ್ಯಕ್ತಿಯ ಅತ್ಯಂತ ಸೂಕ್ಷ್ಮ ನಡುವಳಿಕೆಗಳನ್ನು ಮತ್ತು ವೈಯಕ್ತಿಕ ವರ್ತನೆಗಳನ್ನು ವ್ಯಕ್ತಪಡಿಸುತ್ತದೆ. ಸುಸಂಸ್ಕೃತನಾದ ವ್ಯಕ್ತಿ ಆದರ್ಶ ಭಾವನೆಯನ್ನು, ಕಲೆಯನ್ನು ಮೆಚ್ಚುವನಲ್ಲದೆ ವಿಶಾಲವಾದ ಮಾನವೀಯತೆಯಿಂದ ಕೂಡಿದ ಆಸಕ್ತಿಯನ್ನು ಹೊಂದಿ ಸಮಾಜ ಮೆಚ್ಚುವ ರೀತಿಯಲ್ಲಿ ನಡೆದುಕೊಳ್ಳುತ್ತಾನೆ.

ನಿಜವಾದ ಶಿಕ್ಷಣದ ಕಾರ್ಯವೆಂದರೆ ವ್ಯಕ್ತಿಯನ್ನು ಸಂಸ್ಕಾರವುಳ್ಳವನನ್ನಾಗಿ ಮಾಡುವುದು. ಸತ್ ಚಿಂತನೆಗೆ ಸತ್ ಕಾರ್ಯಕ್ಕೆ ಸದ್ ವರ್ತನೆಗಳು ಪ್ರೇರಕ ಶಕ್ತಿಯಾಗಿ ನಿಲ್ಲುವುದೇ ದಿವ್ಯ ಸಂಸ್ಕೃತಿಯ ಲಕ್ಷಣ. ನಿಜವಾದ ಶಿಕ್ಷಣ ವ್ಯಕ್ತಿಗೆ ಸಂಸ್ಕಾರವನ್ನು ನೀಡುತ್ತದೆ. ಸಂಸ್ಕಾರವೇ ಶಿಕ್ಷಣ, ಶಿಕ್ಷಣವೇ ಸಂಸ್ಕಾರ.

ವ್ಯಕ್ತಿಯು ಜನನದಿಂದ ಮರಣದವರೆಗೆ ವಿವಿಧ ರೀತಿಯ ಸಂಸ್ಕಾರಗಳಿಗೆ ಒಳಗಾಗುತ್ತಾನೆ. ಹುಟ್ಟು, ಮುಂಜಿ, ಮದುವೆ, ಹಾಗೂ ಮರಣ ಇತ್ಯಾದಿಗಳಲ್ಲಿ ಸಂಸ್ಕಾರವೇ ಪ್ರಧಾನ. ಸಂಸ್ಕಾರ ವ್ಯಕ್ತಿಯ ಜೀವನವನ್ನು ಪಾವನವನ್ನಾಗಿ ಮಾಡುತ್ತದೆ.

ಸಂಸ್ಕಾರ ನಿಜೀವ ವಸ್ತುಗಳಲ್ಲಿ ದೈವೀಶಕ್ತಿಯನ್ನು ತುಂಬುತ್ತದೆ. ನಿಜೀವ ವಸ್ತುಗಳಿಗೆ ಸಂಸ್ಕಾರ ಕೊಡುತ್ತೇವೆ. ಅವುಗಳನ್ನು ಪೂಜ್ಯನೀಯವಾಗಿ ಆರಾಧಿಸುತ್ತೇವೆ. ಶಿಕ್ಷಣ ಮಾನವರಲ್ಲಿ ಸಂಸ್ಕಾರಯುಕ್ತ ಕ್ರಿಯೆಗಳನ್ನು ಪೂರೈಸಿ ವ್ಯಕ್ತಿಯನ್ನು ಪೂಜ್ಯನೀಯವಾಗಿ ಮಾಡುತ್ತದೆ.

ಶಿಕ್ಷಣ ಮತ್ತು ಸಂಸ್ಕಾರಗಳೆರಡೂ ಮನುಷ್ಯನಿಗೆ ಇಂದು ಅನಿವಾರ್ಯವಾಗಿದೆ. ಪೂಜ್ಯ ಮತ್ತು ಪಾವನ ಶಕ್ತಿಯ ಪ್ರತೀಕವೇ ಸಂಸ್ಕಾರ. ಸಂಸ್ಕಾರ ಮತ್ತು ಶಿಕ್ಷಣ ಮಕ್ಕಳನ್ನು ಶಕ್ತಿಯುತರನ್ನಾಗಿ ಹಾಗೂ ಪಾವನರನ್ನಾಗಿ ಮಾಡುತ್ತವೆ.

ನಿಜವಾದ ಶಿಕ್ಷಣ ಕ್ಷೇತ್ರದಲ್ಲಿ ವಿಶ್ವವಿದ್ಯಾಲಯಗಳ ಕಾರ್ಯ ಇಂದು ಅತಿ ಮಹತ್ವದು. ಜೀವನದ ನೆಮ್ಮದಿಗಾಗಿ ವಿವಿಧ ರಂಗಗಳಲ್ಲಿ ಕಾರ್ಯವೆಸಗಲು ಯೋಗ್ಯ ನಾಯಕರನ್ನು ರೂಪಿಸುವ ಹೊಣೆ ವಿಶ್ವವಿದ್ಯಾಲಯಗಳ ಪವಿತ್ರ ಕರ್ತವ್ಯವಾಗಬೇಕು.

ಅತ್ಯುತ್ತಮ ಶಿಕ್ಷಣ–ತರಬೇತಿ ಪಡೆದ ಯುವಜನ ನಿರ್ಮಾಣ ವಿಶ್ವವಿದ್ಯಾನಿಲಯಗಳ ಗುರಿಯಾಗಬೇಕು. ಈ ಶಿಕ್ಷಣ ಕೇವಲ ವಿದ್ಯಾರ್ಥಿಗಳಿಗೆ ಸೀಮಿತವಾಗಬಾರದು. ವಿಶ್ವವಿದ್ಯಾನಿಲಯದಲ್ಲಿ ಸಂಗ್ರಹವಾಗುವ ಜ್ಞಾನ ದೇಶದ ನಾಡಿನಾಡಿಯಲ್ಲೆಲ್ಲ ಪ್ರವಹಿಸಿವಂತಾಗಬೇಕು. ಆಗ ಮಾತ್ರ ವಿಶ್ವವಿದ್ಯಾನಿಲಯದ ಅಸ್ತಿತ್ವ ಸಾರ್ಥಕವಾಗುತ್ತದೆ. ಇದರಿಂದ ಒಟ್ಟಾರೆ ವೈಯಕ್ತಿಕ ಮತ್ತು ಸಮಾಜದ  ಬಾಳು ಸುಖಮಯವಾಗುತ್ತೆ.

**ಈಪವಿತ್ರ ಕರ್ತವ್ಯವನ್ನು ನೇರವೇರಿಸಲು ವಿಶ್ವವಿದ್ಯಾಲಯಗಳು ಜ್ಞಾನದಾನ ಮತ್ತು ಪ್ರಸಾರದ ಜೊತೆಗೆ ಸಂಗೀತ, ಸಾಹಿತ್ಯ, ಸಂಸ್ಕೃತಿಯ ಪೋಷಣೆಮಾಡಬೇಕು**

# ನಿವೇದನೆ

ಧರೆಗಿಳಿದು ಬಂದ
ವಿಶ್ವಮಾನವರೆಲ್ಲರಿಂದ
ಮೂಡಿಹುದು ನೋಡಿ
ಮುನ್ನುಡಿಯ ಈ ಮೋಡಿ
ದಿವ್ಯ ಪ್ರಾರ್ಥನೆಯ ತಾ ಮಾಡಿ
ಭವ್ಯ ಸುಸ್ವಾಗತವ ತಾ ನೀಡಿ
ಮಾನವ ಜೀವನದ ಸಾರ್ಥಕತೆಯ ಪರಿಚಯಿಸುತ್ತ ತಾ ಓಡಿ
ನವ್ಯ ನಿವೇದನೆಯ ಈ ಮುನ್ನುಡಿ ಹೇಗಿದೆ ಓದಿ ನೋಡಿ ॥

ಸಾರ್ಥಕತೆ : ಜೀವನ ದರ್ಶನ – ಜೀವನ ಸಂದರ್ಶನ – ಜೀವನ ಸಂಮ್ಮಿಲನ ಸತ್ಕೃತಿಯ ಆರಂಭದ ಅಮೃತ ಘಳಿಗೆಯಲ್ಲಿ ಆಕಾಶದಿಂದ ದೇವದೇವತೆಗಳು, ಋಷಿಮುನಿಗಳು ಹೂಮಳೆಗರೆದು ತಮ್ಮ ಅಭಯ ಹಸ್ತದಿಂದ ಆಶೀರ್ವಾದ ಮಾಡುತ್ತಿರುವುದನ್ನು ನೋಡಿ ಆನಂದಪರವಶನಾಗಿ ನನ್ನ ಕಲ್ಪನೆಯ ನೈಜ ಕನಸು ಮತ್ತು ನನಸುಗಳ ಈ ಸಾರ್ಥಕತೆ ಕೃತಿ ಹೇಗೆ ವಿರಚಿತವಾಗಿ ಮೂಡಿ ಬರಬೇಕೆಂಬ ಹೆಬ್ಬಯಕೆಯನ್ನು ನಯ, ವಿನಯ, ಒಲುಮೆ, ನಲ್ಮೆಯಿಂದ ನಿವೇದಿಸುತ್ತಿದ್ದೇನೆ.

ಕಸ್ತೂರಿಯಂತೆ ಕಂಪನ್ನು ಬೀರುವ ಕನ್ನಡ ಭಾಷೆಯ ನುಡಿಮುತ್ತುಗಳಲ್ಲಿ ಈ ಸಾರ್ಥಕತೆ ಮೂಡಿ ಬರಲಿ. ಹಿಂದಿನ ಕಾಲದ ಸಾಹಿತಿಗಳು, ವಿದ್ವಾಂಸರು, ವಿಮರ್ಶಕರು, ಕವಿಪುಂಗವರು, ವ್ಯಾಕರಣಕಾರರು, ಅಲಂಕಾರಶಾಸ್ತ್ರಜ್ಞರು, ಪಡಿತರು ಎತ್ತಿ ಹಿಡಿದಿರುವ ಆದರ್ಶಗಳನ್ನು, ವಿಚಾರಲಹರಿಗಳನ್ನು, ಕಾವ್ಯ ಲಕ್ಷಣಗಳನ್ನು, ಗ್ರಹಿಸಿ, ಆ ಸತ್ಕವಿಗಳಿಗೆಲ್ಲ ನಮಿಸಿ ಅವರ ಆದರ ಪ್ರಶಂಸೆಗೆ ಪಾತ್ರವಾಗುವಂತೆ ರಮಣೀಯ ಕಾವ್ಯಧರ್ಮದಿಂದ, ಕಾವ್ಯ ಕೃಷಿಯಿಂದ ಈ ಸತ್ಕೃತಿ ರಚಿತವಾಗಲಿ.

ವಿಶ್ವಮಾನ್ಯವಾದ ಪಾತ್ರಸೃಷ್ಟಿ, ಆಕರ್ಷಕ ಕಥಾವಸ್ತು, ಉತ್ತಮೋತ್ತಮ ಪಾತ್ರ ಪೋಷಣೆ, ಕುಶಲ ಸಂಭಾಷಣೆ, ಹೃದಯಂಗಮ ರಸಭಾವ ನಿರೂಪಣೆ, ಮನೋಹರವಾದ ಶೈಲಿ, ಪ್ರತಿಭಾಮಯವಾದ ವರ್ಣನೆ, ಉದಾರವೂ, ಗಂಭೀರವೂ, ಉಜ್ವಲವೂ ಆದ ಭಾವಗಳು, ಕಿವಿಗಿಂಪಾದ ಶಬ್ಧಾಲಂಕಾರಗಳು, ಚಿತ್ತ ಪರಿಪಾಕವನ್ನುಂಟು ಮಾಡುವ ನೀತಿಬೋಧೆ, ಜೊತೆಗೆ ವಿದ್ವಾಂಸರನ್ನು, ಜಾಣರನ್ನು, ರಸಿಕರನ್ನು, ಸಾಹಿತಿಗಳನ್ನು, ಕಲಾವಿದರನ್ನು ಮೆಚ್ಚಿಸುವ ಮಾಣಿಕ್ಯದಂತ ಮಾತುಗಳು, ರಸವತ್ತಾದ ಪದಪುಂಜಗಳು, ಸರಸವಾದ ಉಕ್ತಿಗಳ ಚಮತ್ಕಾರ, ಭಕ್ತಿಯ ಆವೇಶ, ಓಜಸ್ಸು, ತೇಜಸ್ಸುಗಳಿಂದ ತುಂಬಿ ತುಳುಕುವ ಕಥಾಕಥನ, ಭಾಷಾ ಮಾಧುರ್ಯ ಶೈಲಿ ಇವೆಲ್ಲವುಗಳ ಸಮೀಕರಣದಿಂದ ಮೈಗೂಡಿ, ಈ ಸಾರ್ಥಕತೆಯ ಕೃತಿ ಮೂಡಿಬರ

ಈ ಸಾರ್ಥಕತೆ ಕೃತಿ ವಿನೂತನವಾದ, ನಿತ್ಯನೂತನವಾದ, ನವಚೇತನವನ್ನು ಬಾಳಿಗೆ ನೀಡುವ ಲೌಕಿಕ ಮತ್ತು ಪಾರಮಾರ್ಥಿಕ ಸತ್ವಗಳಿಂದ, ತಾತ್ವಿಕ ವಿಷಯಗಳಿಂದ, ಸಿದ್ಧಾಂತಗಳ ಖನಿಯಾಗಿ, ಸ್ಫಟಿಕದಂತೆ, ವಿಚಾರಧಾರೆಗಳನ್ನು, ಪ್ರತಿಬಿಂಬಿಸುತ್ತ, ರಸಧಾರೆಗಳ ಬುಗ್ಗೆಗಳನ್ನು, ರಸಕಾರಂಜಿಗಳನ್ನು, ಸ್ಫುರಿಸುತ್ತ, ಮಾನವನ ಬಾಳಿನ ಅಂತರಿಕ ಹಾಗೂ

ಬಹಿರಂಗ ಜೀವನದ ಕಿಲುಬನ್ನು ಶುದ್ಧಿಗೊಳಿಸುತ್ತಾ ಮಾನವ ವಾತಾವರಣವನ್ನು ಪರಿಶುದ್ಧಿಗೊಳಿಸಿ, ಜೀವನವನ್ನು ಪಾವನಗೊಳಿಸಲಿ.

ಈ ಸಾರ್ಥಕತೆ ಕಾವ್ಯಪ್ರಪಂಚದ ಕಲ್ಪವೃಕ್ಷವಾಗಿ, ರಸಿಕರ ಕಾಮಧೇನುವಾಗಿ, ಸಹೃದಯರ ಚಿಂತಾಮಣಿಯಾಗಿ, ಸೃಜನಶೀಲ ವಿಚಾರಧಾರೆಗಳಿಂದ ಮೂಡಿಬರಲಿ. ಪುಷ್ಪ ಸಮುದಾಯದಲಿ ಗುಲಾಬಿ ಹೂವುಗಳ ಹಾಗೆ ಸೊಬಗು ಸುವಾಸನೆಗಳೆರಡನ್ನೂ ಏಕಕಾಲದಲ್ಲಿ ಪಡೆದು ಮೆರೆಯುವ ಭಾಗ್ಯ, ಕಾವ್ಯ ಸಮುದಾಯದಲ್ಲಿ ಈ ಸಾರ್ಥಕತೆಗೆ ದೊರೆಯಲಿ.

ಕರ್ನಾಟಕ ಕವಿಗಳೆಂಬ ಮಾವಿನ ತೋಪಿನ ವಸಂತಮಾಸವೆಂಬ ಕೋಗಿಲೆ ಆಹ್ಲಾದಕರವಾಗಿ ಹಾಡಿದಂತೆ ಈ ಶ್ರೇಷ್ಠವೂ, ಪವಿತ್ರವೂ ಆದ ಸಾರ್ಥಕತೆಯು ಸಮಸ್ತ ವಿದ್ವನ್ಮಂಡಲಿಯು ವಿನಯದಿಂದ ಮೆಚ್ಚಿ ನಲಿಯುವಂತೆ ಮೂಡಿ ಬರಲಿ. ಈ ಸಾರ್ಥಕತೆಯ ಮಕರಂದವು ರಸಿಕರೆಂಬ ಗಿಳಿಗಳನ್ನೂ, ಗಮಕಿಗಳೆಂಬ ಕೋಗಿಲೆಗಳನ್ನೂ, ಸಹೃದಯರೆಂಬ ದುಂಬಿಗಳನ್ನೂ, ಜಿಜ್ಞಾಸುಗಳೆಂಬ ಜೀವ ಕೋಟಿಗಳನ್ನು ಸದಾ ತನ್ನೆಡೆಗೆ ಬರಮಾಡಿಕೊಳ್ಳಲಿ. ಓದುಗರೆಂಬ ದುಂಬಿಗಳು ಈ ಸಾರ್ಥಕತೆಯೆಂಬ ಹೂವಿನ ಮಧುರವಾದ ಮಕರಂದವನ್ನು ಹೀರಿ, ವಿದ್ವಾಂಸರ ಸಭೆಯೆಂಬ ಸರೋವರದಲ್ಲಿ ಸುಲಲಿತವಾಗಿ ಝೇಂಕರಿಸಲಿ.

ಹೃದಯ ಸಂವೇದನೆಯಂತೆ, ಸಂದೇಶದಂತೆ ಸತ್ಯತೆಯು ಸಾಬೀತಾಗಿ ಮಾನವಮತದ ವಿಶ್ವಪಥದ ಹಿರಿಮೆಗರಿಮೆಗಳನ್ನು ಸಾರುವ ಮಹಾಮೇರು ಕಾವ್ಯವಾಗಿ, ಕಾವ್ಯ ಪ್ರಪಂಚದಲ್ಲಿ ಸಾರ್ಥಕತೆ ಬೆಳಗಲಿ.

ಈ ಸಾರ್ಥಕತೆಯು ಭಾರತೀಯ ಸಂಸ್ಕೃತಿಯ ಅಳತೆಗೋಲಾಗಿ ಭಾವಿಸಲ್ಪಟ್ಟು, ಭಾರತೀಯ ಸಾಹಿತ್ಯ ಪ್ರಪಂಚದಲ್ಲಿ ಜನಪ್ರಿಯವಾಗಿ, ಭಾರತೀಯ ಕಾವ್ಯಾಮೃತವನ್ನು ಪಾನ ಮಾಡಬೇಕೆಂದು ಬಯಸುವ ವಿಶ್ವದ ಸಮಸ್ತ ಕೋಟಿಮಾನವರಿಗೂ ಹಾಲಿನ ಹೊಳೆಯಾಗಲಿ, ಅಮೃತ ಸಾಗರವಾಗಲಿ, ವಿಶ್ವಮಾನವರ, ಭಾರತೀಯರ ಹಾಗೂ ಕನ್ನಡಿಗರ ಅಭಿಮಾನವನ್ನು ಕೆರಳಿಸಿ, ಕನ್ನಡ ಸಾಹಿತ್ಯದ ಶೆಹನಾಯ್ ಊದಿ, ಕನ್ನಡ ಕಹಳೆ ಮೊಳಗಲಿ. ಈ ಸಾರ್ಥಕತೆಯ ಕೀರ್ತಿಲತೆ ಕನ್ನಡ ನಾಡಿನಲ್ಲೆಲ್ಲಾ ಹಬ್ಬಿ, ಭಾರತದೇಶದಲ್ಲೆಲ್ಲಾ ಹರಡಿ, ವಿಶ್ವದಾದ್ಯಂತ ವ್ಯಾಪಿಸಲಿ.

ಡಾ॥ ಸಿ. ರಾಮಸ್ವಾಮಿ

ಕನ್ನಡಕ್ಕಾಗಿ ಕೈಯೆತ್ತು, ನಿನ್ನ ಕೈ ಕಲ್ಪವೃಕ್ಷವಾಗುತ್ತದೆ,

ಕನ್ನಡಕ್ಕಾಗಿ ಕೊರಳೆತ್ತು, ಅಲ್ಲಿ ಪಾಂಚಜನ್ಯ ಮೂಡುತ್ತದೆ,

ಕನ್ನಡಕ್ಕಾಗಿ ಕಿರು ಬೆರಳೆತ್ತಿದ್ದರೂ ಸಾಕು,

ಅದೇ ಗೋವರ್ಧನ ಗಿರಿಯಾಗುತ್ತದೆ.

– ಕನ್ನಡದ ಕಂಪು ಕುವೆಂಪು

ಸಂಗೀತಕ್ಕಾಗಿ ಕೊರಳೆತ್ತು, ನಿನ್ನ ಕಂಠಸ್ವರ ಕಾಮಧೇನುವಾಗುತ್ತದೆ.
ಸಾಹಿತ್ಯಕ್ಕಾಗಿ ಕೈಯೆತ್ತು, ನಿನ್ನ ಕೈ ಕಲ್ಪವೃಕ್ಷವಾಗುತ್ತದೆ.
ಸಂಸ್ಕೃತಿಗಾಗಿ ಕಿರು ಬೆರಳೆತ್ತಿದ್ದರೂ ಸಾಕು,
ವಿಶ್ವ ಶಾಂತಿಗೆ ನಾಂದಿಯಾಗುತ್ತದೆ.

ಡಾ॥ ಸಿ. ರಾಮಸ್ವಾಮಿ

# ಕೃತಜ್ಞತೆ

" ಸಾರ್ಥಕತೆ : ಜೀವನ ದರ್ಶನ – ಜೀವನ ಸಂದರ್ಶನ – ಜೀವನ ಸಂಮ್ಮಿಲನ " ಈ ಸತ್ಕೃತಿಯ ರಚನೆಯಲ್ಲಿ ಕನ್ನಡ ಹಾಗೂ ಆಂಗ್ಲಭಾಷೆಯ ಹಲವಾರು ಗ್ರಂಥಗಳಿಂದ ಪ್ರಯೋಜನ ಪಡೆದಿದ್ದೇನೆ. ವಿವಿಧ ಕ್ಷೇತ್ರಗಳಲ್ಲಿ ದುಡಿಯುತ್ತಿರುವ ಕಿರಿಯರ–ಹಿರಿಯರ ಅನೇಕ ಜೀವನಾನುಭವಗಳನ್ನು ಕೇಳಿ, ಓದಿ ತಿಳಿದುಕೊಂಡಿರುವುದನ್ನು ಈ ಬರಹದಲ್ಲಿ ಬಳಸಿಕೊಂಡಿದ್ದೇನೆ.

ಅನೇಕ ಮಹನೀಯರ ಸದ್ಗಂಥಗಳ ಸದ್ವಿಚಾರಗಳನ್ನು ಅಳವಡಿಸಿಕೊಂಡಿರುತ್ತೇನೆ. ಆಯಾಯ ಸಂದರ್ಭಗಳಲ್ಲಿ ಗ್ರಂಥ–ಗ್ರಂಥಕರ್ತರ ಹೆಸರುಗಳನ್ನು ವಿಶದವಾಗಿ ಸೂಚಿಸಬಯಸಿದ್ದೆ. ಆದರೆ ಆ ಗ್ರಂಥ–ಗ್ರಂಥಕರ್ತರ ಹೆಸರುಗಳನ್ನು ಸ್ಥಳಾವಕಾಶದ ಕೊರತೆಯಿಂದ ಅಲ್ಲಲ್ಲೇ ಸೂಚಿಸಲು ಸಾಧ್ಯವಾಗಿಲ್ಲ. ಅವರೆಲ್ಲರಿಗೂ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತಿದ್ದೇನೆ. ಈ ಸತ್ಕೃತಿಯ ಹಸ್ತಪ್ರತಿಯನ್ನು ಓದಿ ತಮ್ಮ ಅಮೂಲ್ಯ ಸಲಹೆಗಳನ್ನು ನೀಡಿ ಶದ್ಧೆಯಿಂದ ಸಕಾಲದಲದಲ್ಲಿ ಬಿ.ಕೆ. ಮರಿಯಪ್ಪ ಧರ್ಮಸಂಸ್ಥೆಯ ವ್ಯವಸ್ಥಾಪಕ ಧರ್ಮದರ್ಶಿ ಶ್ರೀ ಎನ್. ಪುಟ್ಟರುದ್ರರವರಿಗೂ, ಶ್ರೀ ಎಂ.ಆರ್. ನರೇಂದ್ರರವರಿಗೂ ನನ್ನ ಹೃತ್ಪೂರ್ವಕ ವಂದನೆಗಳು.

ಈ ಪ್ರಕಟಣೆಯ ಮುನ್ನಡೆಯನ್ನು ಆಗಿಂದಾಗ್ಗೆ ವಿಚಾರಿಸಿ, ಅನೇಕ ರೀತಿಯ ಸಹಾಯಮಾಡಿ ಪ್ರೋತ್ಸಾಹಿಸಿದ ಪುನರ್ಜನ್ಮ ಸಂಶೋಧನಾ ಕೇಂದ್ರದ ಅಭಿಮಾನಿಗಳಾದ ಶ್ರೀ ಎಸ್.ರಮೇಶ್, ಶ್ರೀ ಎಮ್.ಎಸ್. ರಾಮಯ್ಯ ಇತ್ಯಾದಿ ಸಹೃದಯರಿಗೆ ನನ್ನ ಅನಂತ ಧನ್ಯವಾದಗಳು.

ಈ ಸತ್ಕೃತಿಯನ್ನು ಹೊರತರಲು ನನ್ನೊಡನೆ ಬಾಗಿಗಳಾದ ನನ್ನ ಧರ್ಮಪತ್ನಿ ಶ್ರೀಮತಿ ಬಿ.ಎಲ್. ಮಂಗಳಗೌರಿ, ನನ್ನ ಸುಪುತ್ರಿಯರಾದ ಶ್ರೀಮತಿ ಆರ್. ಸೌಮ್ಯ, ಶ್ರೀಮತಿ ಆರ್. ಸುಷ್ಮ, ಕುಮಾರಿ ಆರ್.ಸುಷುಪ್ತಿ ಇವರುಗಳು ನೀಡಿದ ಸಹಕಾರವನ್ನು ನಾನು ಎಂದೆಂದಿಗೂ ಮರೆಯಲಾರೆ. ವಾನೀಗ ಅವರ ಸಹಾಯವನ್ನು ಕೃತಜ್ಞತೆಯಿಂದ ನೆನೆಯುತ್ತಿದ್ದೇನೆ.

ಡಾ॥ ಸಿ. ರಾಮಸ್ವಾಮಿ

"ಕುಮಾರವ್ಯಾಸನು ಹಾಡಿದನೆಂದರೆ
ಕಲಿಯುಗ ದ್ವಾಪರವಾಗುವುದು !
ಭಾರತ ಕಣ್ಣಲಿ ಕುಣಿಯುವುದು
ಮೈಯಲ್ಲಿ ಮಿಂಚಿನ ಹೊಳೆ ತುಳುಕಾಡುವುದು"

– ಕನ್ನಡದ ಕಂಪು ಕುವೆಂಪು

" ಪುನರ್ಜನ್ಮ ಸಂಶೋಧಕ ರಚಿಸಿದನೆಂದರೆ

ಕಲಿಯುಗ ಕೃತಯುಗವಾಗುವುದು

ವಿಶ್ವಮಾನವ ಧರ್ಮ ಉದಯಿಸುವುದು

ಭೂಲೋಕದಲ್ಲಿ ಸಾಕ್ಷತ್ಕಾರ ಜ್ಞಾನ ಮಿಂಚುವುದು "

ಡಾ॥ ಸಿ. ರಾಮಸ್ವಾಮಿ

# ಅರ್ಪಣೆ – ಸಮರ್ಪಣೆ

ಸಂಪತ್ತಿನ ಸಂಗ್ರಹದಲ್ಲಿ, ಸಲ್ಲದ ಸಲ್ಲಾಪದಲ್ಲಿ,
ಸಂಕಷ್ಟಗಳ ಸುಳಿಯಲ್ಲಿ ಸದಾ ಸುತ್ತುತ್ತಾ
ಸಂತೃಪ್ತರಾಗಿರುವ ಸಾಮಾನ್ಯರಿಗೆ,
ಸಿದ್ಧಹಸ್ತರಾಗಿ ಸಹಾಯ ಸಹಕಾರಗಳನ್ನು ಸಂವತ್ಸರಗಳಿಂದ
ಸನ್ಮಾರ್ಗದಿಂದ ಸದಾ ನೀಡುತ್ತಾ ಸತ್ಸಂಗದ ಸದ್ವಿಚಾರಗಳಿಂದ
ಸರ್ವರನ್ನೂ ತಮ್ಮೆಡೆಗೆ ಸೆಳೆಯುತ್ತಿದ್ದ

ನನ್ನ ಪರಮಪೂಜ್ಯ ಮಾತಾಪಿತೃಗಳಾದ
ಶ್ರೀಮತಿ ಸಿದ್ದಮ್ಮ ಮತ್ತು ಶ್ರೀ ಚನ್ನೇಗೌಡರ



ಪಾದಾರವಿಂದಗಳಿಗಳಿಗೆ ಗೌರವ ಹೃತ್ಪೂರ್ವಕ

**ಅರ್ಪಣೆ – ಸಮರ್ಪಣೆ**

## ವಿಶ್ವಮಾನವ ಸಂಸ್ಕೃತಿಯ ಕನ್ನಡದ ಕಹಳೆ ಮೊಳಗಲಿ

ಕನ್ನಡದ ರವಿ ತಾ ಮೂಡಿ ಬಂದ ಬೆಳಕನ್ನು ತಾ ತಂದಾ

ವಿದ್ಯೆಯ ಕಲಿತು ವಿದ್ಯೆಯ ಕಲಿಸಿ ಜ್ಞಾನವಾ ಹರಡೋಣ

ಸತ್ಯ ಧರ್ಮ ನ್ಯಾಯದ ಮಾರ್ಗದಲ್ಲಿ ಮುಂದೆ ಸಾಗೋಣ

ಪ್ರೇಮ ಕರುಣಯ ಕಲಿಸಿ ಶಾಂತಿ ಸಹನೆಯ ಬೆಳೆಸೋಣ

ಜಾತಿ ಧರ್ಮ ಭೇದವ ತೊರೆದು ಒಂದಾಗಿ ಬಾಳೋಣ

ಒಂದೇ ಜಗವು ಒಂದೇ ಕುಲವು ಒಂದೇ ದೈವವು

ಸತ್ಯ ಧರ್ಮಗಳೆರಡು ನಮ್ಮ ಬಾಳಿನ ಕಣ್ಣಾಗಿರಲಿ

ಶಾಂತಿಯೆ ಉಸಿರಾಗಿರಲಿ ಸೇವೆಯೆ ಗುರಿಯಾಗಿರಲಿ

ಒಮ್ಮನದಿಂದ ಎಲ್ಲರು ದುಡಿದು ಜಗವನೆಗೆಲ್ಲೋಣ

ವಿಶ್ವಮಾನವ ಸಂಸ್ಕೃತಿಯ ನವಯುಗ ನಿರ್ಮಿಸೋಣ

ಸಿರಿಗನ್ನಡದ ಭಾಷಾಸಾಹಿತ್ಯವ ಸ್ವರ್ಣಾಕ್ಷರದಲ್ಲಿ ಬರೆಯೋಣ

ಲೋಕ ಸನ್ಮಾನಿತ ಸತ್ಯಯುಗ ಉದಯ ಚರಿತ್ರೆಯ ಸ್ವಾಗತಿಸೋಣ

ಮೊಳಗಲಿ

ಮೊಳಗಲಿ

**ಮೊಳಗಲಿ ವಿಶ್ವಮಾನವ ಸಂಸ್ಕೃತಿಯ**

**ಕನ್ನಡ ಕಹಳೆ ಮೊಳಗಲಿ**





# ಸಿರಿಗನ್ನಡಂ ಗೆಲ್ಗೆ

# ಸಿರಿಗನ್ನಡಂ ಬಾಳ್ಗೆ


# ಇದು

# ಪುನರ್ಜನ್ಮ ಸಂಶೋಧನಾ ಕೇಂದ್ರ ಆಚರಿಸುತ್ತಿರುವ

# ಕನ್ನಡ ರಾಜ್ಯೋತ್ಸವ

# ಕನ್ನಡ ವಿಜಯೋತ್ಸವ



## ಸ್ವಾಗತ – ಸುಸ್ವಾಗತ

**ಸರ್ವರನು ಸುಸ್ವಾಗತಿಸುವ ಸುಯೋಗದ ಸವಿನೆನಪಿನಲ್ಲಿ ನಾ ನಿಂದು**

**ಓದುಗರಿಗೆ ಹೊಸ ಹೊಸ ಆಸೆ–ಆಕಾಂಕ್ಷೆಯ ಸುಜ್ಞಾನ ಸಂದೇಶ ನಾ ತಂದು**
**ಮುಂದಿನ ಕೃತಯುಗದಲ್ಲಿ ಪಂಚಮ ವೇದಗಳೆಂದೇ ಕರೆಯಬಹುದಾದ ಈ ಸತ್ಕೃತಿಗಳ**
**ಜ್ಞಾನ, ವಿಜ್ಞಾನ, ಸುಜ್ಞಾನ, ದಿವ್ಯಜ್ಞಾನ ದೇಗುಲಕೆ**
**ಎಲ್ಲರೂ ಕೈಮುಗಿದು ಬನ್ನಿರೆಂದು**
**ವಿನಂತಿಸಿ ಸುಸ್ವಾಗತಿಸುವ ಕಾಲ ಸಮೀಪಿಸುತ್ತಿರುವುದು ನಿಮ್ಮೊಡನಿಂದು**

**ಇದೊಂದು ಶುಭಘಳಿಗೆ**
**ಅನೇಕ ಜನ್ಮಜನ್ಮಾಂತರಗಳಿಗೆ**

**ಒಮ್ಮೊಮ್ಮೆ ತಾ ಮೂಡಿ ಬರುವ ಸಾರ್ಥಕತೆಯ ಜ್ಞಾನಾನುಭವದ ಶುಭಗಳಿಗೆ**
**ಸರ್ವರೂ ಸವಿಯ ಬಯಸುವ ಸಾಕ್ಷಾತ್ಕಾರ ದಿವ್ಯಜ್ಞಾನಾಮೃತದ ಅಮರಗಳಿಗೆ**

# 1. ಸಾಕ್ಷಾತ್ಕಾರ ಸಂಶೋಧನೆಗೆ ಪ್ರೇರಣೆ

ಲೋಕ ಪಿತಾಮಹನಿಂದ ಸೃಷ್ಟಿಯಾದ ವಿಶ್ವ ಐವತ್ತು ಕೋಟಿಕೋಟಿ ಯೋಜನ ವಿಸ್ತೀರ್ಣದಿಂದ ಥಳಥಳನೆ ಹೊಳೆಯುತ್ತ, ಕಣ್ಣುಗಳಿಗೆ ಅಂದವಾಗಿ ಕಾಣಿಸುತ್ತ ಶೋಭಿಸುತ್ತಿದೆ. ಈ ಬ್ರಹ್ಮಾಂಡಗೋಲದ ಮಧ್ಯದಲ್ಲಿ ಜಂಬೂದ್ವೀಪ ನಾಮಾಂಕಿತ ಭರತವರ್ಷದ ಭರತಖಂಡವು ಸಪ್ತಸಾಗರಗಳಿಂದ ಸುತ್ತುವರಿದು ಕಂಗೊಳಿಸುತ್ತಿದೆ. ಈ ಭರತಖಂಡ ಯುಗಯುಗಗಳಿಂದ ಜ್ಞಾನ, ಯೋಗ, ಆತ್ಮಸಾಕ್ಷಾತ್ಕಾರಗಳ ತಪೋಭೂಮಿಯಾಗಿ ಪುಣ್ಯಭೂಮಿಯೆಂದು ಪ್ರಸಿದ್ಧಿ ಪಡೆದು ಭೂಲೋಕದಲ್ಲಿ ಮೆರೆಯುತ್ತಿದೆ. ಈ ಭಾರತಮಾತೆಯ ತನುಜಾತೆಯಾಗಿ, ಅದರ ಮಡಿಲಲ್ಲಿ ಕರ್ನಾಟಕನಾಡು ಪ್ರಕೃತಿ ಸೌಂದರ್ಯದ ಬೀಡಾಗಿ, ಭೂಸಿರಿ ಸಂಪತ್ತುಗಳಿಂದ ಶೋಭಿಸುತ್ತಿದೆ. ಈ ನಾಡಿನ ಪ್ರಕೃತಿ ಸೌಂದರ್ಯದ ತವರುಮನೆಯಂತೆ ಕಂಗೊಳಿಸುತ್ತಿರುವ ಬೆಂಗಳೂರಿನ "ಲಾಲ್‌ಬಾಗ್ ಸಸ್ಯಕಾಶಿ" ಜನರ ಕಣ್ಮನ ಹೃದಯಗಳನ್ನು ತಣಿಸಿ ತೃಪ್ತಿಪಡಿಸುತ್ತಿದೆ.

ಈ ಸಸ್ಯಕಾಶಿಗೆ ಸಮೀಪದಲ್ಲೇ "ಬೆಂಗಳೂರು ಮೆಡಿಕಲ್ ಕಾಲೇಜು" ಎಂಬ ಶಿರೋನಾಮೆ ಧರಿಸಿದ ವೈದ್ಯಕೀಯ ವಿಜ್ಞಾನ ಮಂದಿರ ಒಂದು ಸ್ಥಾಪಿತವಾಗಿದೆ. ಈ ಕಾಲೇಜಿನ ಗೋಪುರದ ಮೇಲೆ ಅದೋ ನೋಡಿ ಗರುಡ ಒಂದು ಕೇಕೆ ಹಾಕಿ ನನ್ನನ್ನು ಸ್ವಾಗತಿಸುವ ಹರ್ಷಚಿತ್ತದಿಂದ ಈ ರೀತಿ ಹಾಡುತ್ತಾ, ಹಾರಾಡುತ್ತಿದೆ.

ಬಾ ರಾಮ ಬಾ ರಾಮ ರಾಮ ಎಂದು

ಬರುತಿಹನು ಇಹನು ಇಹನು ಎಂದು

ಯುಗಯುಗದಿ ನಿನಗಾಗಿ ಕಾದು ನಾ ನಿಂದು

ಸ್ವಾಗತಿಸುವೆ ನಿನ್ನನು ನಾ ಇಂದು

ಇದೇ ಸಮಯದಲ್ಲಿ ಚೈತ್ರಮಾಸ ಕಾಲಿಟ್ಟ ಸೂಚನೆಯೋ ಎಂಬಂತೆ ಮುದ್ದು ಕೋಗಿಲೆ ಸಂಗಾತಿಗಳು ಫಲಹೊತ್ತು ನಿಂತ ಮಾವಿನಮರದ, ಪುಷ್ಪಹೊತ್ತು ನಿಂತ ಸಂಪಿಗೆ ಮರದ ಕೊಂಬೆಗಳ ಮೇಲೆ ಕುಳಿತು "ಚಿಗೂಹೂ, ಚಿಗೂಹೂ" ಎಂದು ಮಧುರವಾದ ಧ್ವನಿಯಲ್ಲಿ ಇಂಪಾಗಿ ಹಾಡುತ್ತಿವೆ. ರಸ್ತೆಯ ಸಾಲುಮರಗಳು ತಮ್ಮ ಕೆಂಪು, ಹಳದಿ, ನೀಲಿ, ಬಿಳಿ ಮುಂತಾದ ಬಣ್ಣಬಣ್ಣದ ಹೂಗಳನ್ನು ಗಾಳಿ ಬೀಸಿದಾಗ ಪುಷ್ಪ ಮಳೆಗರೆದು, ರಸ್ತೆಯು ಬಣ್ಣಬಣ್ಣದ ಹೂಗಳಿಂದ ಕೂಡಿ, ಈ ರಸ್ತೆಯು ಹೂವಿನ ರಸ್ತೆಯೇನೋ! ಎಂಬಂತೆ ವರ್ಣರಂಜಿತವಾದ ಪುಷ್ಪಗಳಿಂದ ಶೋಭಿಸುತ್ತಿದೆ.

ಕಾಲೇಜಿನ ಮುಂಭಾಗದಲ್ಲಿರುವ ದೇವಸ್ಥಾನವು ತಳಿರು ತೋರಣಗಳಿಂದ ಶೃಂಗರಿಸಲ್ಪಟ್ಟು, ಮಹಾವಿಷ್ಣುವಿನ ಮೆರವಣಿಗೆ ವೈಭವ ವಿಜೃಂಭಣೆಗಳಿಂದ ಹೊರಡುವ ಸಿದ್ಧತೆಯಲ್ಲಿದೆ. ದೂರದಿಗಂತದ ಸೂರ್ಯನ ಬೆಳಗಿನ ಹೊಂಗಿರಣಗಳು ಬೆಳ್ಳಿಮೋಡಗಳ ಮಧ್ಯದಿಂದ ತೂರಿ ಬಂದು, ಒಂದು ಸುಂದರ ವಾತಾವರಣವೇ ಬೆಂಗಳೂರು ಮೆಡಿಕಲ್ ಕಾಲೇಜಿನ ಸುತ್ತ ಇಂದು ಸೃಷ್ಟಿಯಾಗಿದೆಯೋ ಎಂಬಂತೆ ಭಾಸವಾಗುತ್ತಿದೆ. ಈ ಎಲ್ಲಾ ಶುಭಶಕುನಗಳ ಸಮ್ಮಿಲನದಿಂದಲೇ ಉದ್ಭವವಾಗುತ್ತಿರುವ ಈ ಶುಭಘಳಿಗೆಯಲ್ಲಿ, ನಾನು ಕಾಲೇಜಿನ ಹೆಬ್ಬಾಗಿಲಿನತ್ತ ಪಾದಾರ್ಪಣೆ ಮಾಡಿದೆ.

ಬೆಂಗಳೂರು ಮೆಡಿಕಲ್ ಕಾಲೇಜಿನ ಒಳ ಆವರಣದಲ್ಲಿ ಸಡಗರದಿಂದ ಗುಂಪು ಗುಂಪಾಗಿ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಬಂದು ಕಿಕ್ಕಿರಿದಿದ್ದರು. ನೋಟೀಸ್ ಬೋರ್ಡ್‌ನಲ್ಲಿ ಟೈಪ್‌ಮಾಡಿ ಹಾಕಿದ್ದ ಬಿಳಿಹಾಳೆಗಳನ್ನು ಅಲ್ಲಿದ್ದ ಎಲ್ಲರ ಕಣ್ಣುಗಳು ನೋಡಲು ಕಾತರವಾಗಿದ್ದವು.ಅದಕ್ಕಾಗಿ ಒಬ್ಬರ ಮೇಲೊಬ್ಬರು ನುಗ್ಗುತ್ತಿದ್ದರು. ಅವರು ಕುತ್ತಿಗೆ ನಿಕ್ಕಳಿಸಿ ತುದಿಗಾಲುಗಳ ಮೇಲೆ ನಿಂತು, ತಮ್ಮ ಹೆಸರುಗಳನ್ನು ನೋಡಲು ಹವಣಿಸುತ್ತಾ ಮುಂದೆ ನಿಂತಿದ್ದವರನ್ನು ನೂಕುತ್ತಿದ್ದರು. ಮುಂದೆ ಇದ್ದ ಕೆಲವರು ಸ್ಪಷ್ಟವಾಗಿ ತಿಳಿದ ಮೇಲೆ ನನ್ನದು ಮೆಡಿಕಲ್ ಪೋಸ್ಟಿಂಗ್, ನಿನ್ನದು ಸರ್ಜಿಕಲ್ ಪೋಸ್ಟಿಂಗ್, ಆತನದು ಓ.ಬಿ.ಜಿ. ಪೋಸ್ಟಿಂಗ್, ಈತನದು ರೂರಲ್ ಪೋಸ್ಟಿಂಗ್ ಎಂದು ಹಸನ್ಮುಖದಿಂದ ಅಲ್ಲಿಗೆ ಬರುತ್ತಿದ್ದ ತಮ್ಮ ಕ್ಲಾಸ್‌ಮೇಟ್‌ಗಳ ಜೊತೆ ಕೈಕುಲುಕುತ್ತಿದ್ದರು.

ಕಾಲೇಜಿನ ಹೆಬ್ಬಾಗಿಲಿನಿಂದ ಒಳಆವರಣಕ್ಕೆ ಬಂದ ನಾನು ನನ್ನ ಹೆಸರನ್ನು ನೋಟೀಸ್ ಬೋರ್ಡ್ ನಲ್ಲಿ ಹುಡುಕಿದೆ. ನನ್ನ ಹೆಸರು ರಾಮುಸ್ವಾಮಿ ಬದಲು ಡಾ॥ರಾಮುಸ್ವಾಮಿ ಆಗಿ ಸರ್ಜಿಕಲ್ ಪೋಸ್ಟಿಂಗ್‌ನಲ್ಲಿ ಅನೌನ್ಸ್ ಆಗಿತ್ತು. ತಕ್ಷಣ ಹಿಂದಿನಿಂದ ಸುಮಾರು ಐವತ್ತರ ಆಚೆ ಈಚೆ ವಯಸ್ಸಿನ ವ್ಯಕ್ತಿ ನನ್ನ ಬೆನ್ನು ತಟ್ಟಿ "ನಮಸ್ಕಾರ ಡಾಕ್ಟ್ರೇ" ಅಂದರು. ನಾನು ಹಿಂದುರುಗಿ ನೋಡಿದೆ. ನನ್ನ ಹೈಸ್ಕೂಲ್ ಕನ್ನಡ ಮಾಸ್ತರರು ಬೆಳ್ಳನೆಯ ಮಲ್ಲು ಪಂಚೆಯ ಕಚ್ಚೆ, ಅಚ್ಚ ಬಿಳಿಯಷರಟು, ಸಾಧಾರಣ ಬಣ್ಣದ ಕೋಟು ಮತ್ತು ಅಚ್ಚುಕಟ್ಟಾದ ಪೇಟ ಧರಿಸಿ ನಿಂತಿದ್ದನ್ನು ಕಂಡು ನನ್ನ ಹೃದಯ ಸುಸ್ಪಂದಿಸಿತು. ಭಾವಾತಿಶಯದಿಂದ ನನ್ನ ಕೈಗಳು ವಿಕಂಪಿಸುತ್ತಿದ್ದವು. ನನಗಾದ ಆನಂದಾತಿಶಯವನ್ನು ವರ್ಣಿಸಲು ಸಾಧ್ಯವಿಲ್ಲವೆಂಬಂತೆ ವಿನಯದಿಂದಲೂ, ನಮ್ರತೆ ಯಿಂದಲೂ "ನಮಸ್ಕಾರ ಸಾರ್" ಎಂದೆನು.

ಆಗ ಶ್ರೀನಿವಾಸಶಾಸ್ತ್ರಿಗಳು ನನ್ನ ಕ್ರಾಪು, ಕೂಲಿಂಗ್‌ಗ್ಲಾಸ್, ಟೈ, ಮಿರುಗುವ ಉಣ್ಣೆಯ ಕೋಟು, ಪ್ಯಾಂಟು, ಬೂಟ್ಸು ಎಲ್ಲವನ್ನೂ ಮೆಚ್ಚುವಂತೆ, ಸಮ್ಮತಿಸುವಂತೆ ಸಭ್ಯ ಸಂಪ್ರದಾಯದ ಮುಗುಳುನಗೆ ಬೀರಿ ನನ್ನ ಎರಡೂ ಭುಜಗಳನ್ನು ತಮ್ಮ ಕೈಗಳಿಂದ ಹಿಡಿದುಕೊಂಡು, ಒಂದು ತೈಲವರ್ಣದ ಕಲಾ ಕೃತಿಯನ್ನು ಅವಲೋಕಿಸುವಂತೆ ದಿಟ್ಟಿಸಿ, ದಿಟ್ಟಿಸಿ, ಎವೆಯಿಕ್ಕದೆ ನೋಡಿದರು. ಮಹಿಮರಿಗೆ ಮಹಿಮರನ್ನು ಗುರುತಿಸಲು ಸಾಧ್ಯವಾಗುವಂತಹ ಒಂದು ವಿಶೇಷತೆ ನನ್ನಲ್ಲಿ ಅವರಿಗೆ ಗೋಚರಿಸಿತ್ತು.

ಅವರು ಭಾವಪರವಶರಾಗಿ ಉದ್ವೇಗದಿಂದ ನನ್ನನ್ನು ಬಿಟ್ಟಕಣ್ಣು ಮುಚ್ಚದೆ, ಸಂಭ್ರಮಾ ತಿಶಯದಿಂದ ನನ್ನನ್ನೇ ನೋಡುತ್ತಾ "ಆನಂದವಾಯಿತು, ಮಹದಾನಂದವಾಯಿತು"ಎಂದರು. ಅವರ ಆನಂದವೂ ಹೇಳತೀರದಂತೆ ಗಂಗಾನದಿಯಾಗಿ ಪ್ರವಾಹದಂತೆ ಹರಿದಿತ್ತು. ಆವರ ಆನಂದದಲ್ಲಿ ನಾನು ಕೊಚ್ಚಿ ಹೋದೆ. "ನನ್ನ ಮಗ ಮಹೇಂದ್ರನದು ಮೆಡಿಕಲ್‌ಸೈಡ್ ಪೋಸ್ಟಿಂಗ್ " ಅಂತ ಹೇಳಿ ನನ್ನ ಪೋಸ್ಟಿಂಗ್ ಯಾವುದು ಎನ್ನುವಂತೆ ಶ್ರೀನಿವಾಸಶಾಸ್ತ್ರಿಗಳು ಪ್ರಶ್ನಾರ್ಥಕ ದೃಷ್ಟಿ ಬೀರಿದಾಗ " ನನ್ನದು ಸರ್ಜಿಕಲ್ ಪೋಸ್ಟಿಂಗ್ ಎಮರ್ಜೆನ್ಸಿ ವಾರ್ಡ್‌ನಿಂದ ಪ್ರಾರಂಭ '' ಎಂದು ಹೇಳಿ ಮುಗುಳ್ನಕ್ಕೆ. ಮೊದಲೇ ಹಿಡಿದಿದ್ದ ನನ್ನ ಕೈಯನ್ನು ಶ್ರೀನಿವಾಸ ಶಾಸ್ತ್ರಿಗಳು ಮತ್ತೊಮ್ಮೆ ಕುಲುಕುತ್ತಾ ''ಕಂಗ್ರಾಜ್ಯುಲೇಷನ್ ಡಾಕ್ಟರ್, ಅಂತೂ ಜೀವನದ ಗುರಿ ಮುಟ್ಟಿದಿರಿ. ನಿಮ್ಮ ಜೀವನವು ಸಾರ್ಥಕವಾಯಿತು'' ಎಂದು ಆತ್ಮ ತೃಪ್ತಿಯಿಂದ ತುಂಬಿ ಬಂದವರಂತೆ ಸಹಜವಾಗಿ ಹೊಗಳಿ ಅಭಿನಂದಿಸಿದರು. ಈ ಮಾತಿನಿಂದ ನನ್ನ ತನುಮನ ಒಮ್ಮೆಲೆ ರೋಮಾಂಚನ ಗೊಂಡಿತು.

" ನಾವು ಎಂ.ಬಿ.ಬಿ.ಎಸ್. ಪಾಸ್ ಮಾಡಿದ ತಕ್ಷಣ ನಮ್ಮ ಜೀವನ ಸಾರ್ಥಕ!!! " ಎಂದು ಹುಬ್ಬೇರಿಸಿ ನುಡಿದ ನಾನು ಪ್ರಶ್ನಾರ್ಥಕವಾಗಿ ಶಾಸ್ತ್ರಿಗಳ ಮುಖ ನೋಡಿದೊಡನೆಯೇ, ಕಾಲೇಜಿನ ಎದುರಿಗಿದ್ದ ದೇವಸ್ಥಾನದಲ್ಲಿ ಮಹಾ ಮಂಗಳಾರತಿ ಸಮಯದ ಅರ್ಚನೆಯ ಘಂಟಾನಾದವು ಜಾಗಟೆ, ಶಂಕನಾದದ ಧ್ವನಿ,

ವಾದ್ಯಗಳ ಘೋಷಣೆ ಜೊತೆಗೆ ಮೊಳಗುತ್ತಿತ್ತು. ಶಾಸ್ತ್ರಿಯವರ ಮುಖಭಂಗಿಯಲ್ಲಿ ತಾವು ಆಡುತ್ತಿರುವ ಮಾತಿನ ಪವಿತ್ರತೆಯ ಅರಿವಿನಿಂದ ಮುಡಿದುದೋ ಎಂಬಂತಹ ಏನೋ ಆನಂದದ ಮಂದಹಾಸ ಮೂಡಿ ಗಾಂಭೀರ್ಯ ತುಂಬಿತ್ತು. ಅವರ ಚೇತನವೆಲ್ಲ ಏನೋ ಒಂದು ಧನ್ಯತೆಯನ್ನು ಅನುಭವಿಸುವಂತಿತ್ತು.

" ಹೌದು, ಸಾಕಿ, ಸಲಹಿ, ಆಸೆ ಆಕಾಂಕ್ಷೆಗಳಿಂದ ನಿಮ್ಮನ್ನು ಓದಿಸಿದ ತಂದೆ-ತಾಯಿಯರ ಆಸೆಯನ್ನು ನೆರವೇರಿಸಿದ್ದೀರಿ. ಅಂದ ಮೇಲೆ, ನಿಮ್ಮ ಜೀವನ ಸಾರ್ಥಕವಾದ ಹಾಗೆ ತಾನೇ " ವಿವರಿಸಿ ಹೇಳಿದರು ಶ್ರೀನಿವಾಸಶಾಸ್ತ್ರಿಗಳು. "ನಮ್ಮನ್ನು ಓದಿಸಿದ್ದರಿಂದಲೇ, ತಂದೆತಾಯಿಯರಾದ ನಿಮ್ಮ ಆಸೆಗಳೆಲ್ಲಾ ಈಡೇರಿವೆ ಯೇ ?" ಮತ್ತೆ ನಾನು ಪ್ರಶ್ನಿಸಿದೆ. "ಹೌದು, ಇನ್ನೂ ಒಂದು ಇದೆ. ಅದು ನಿಮ್ಮ ಮದುವೆ ಮಾಡಿದರೆ ತಂದೆ ತಾಯಿಯರಾದ ನಮ್ಮ ಆಸೆಗಳೆಲ್ಲಾ ಈಡೇರಿದ ಹಾಗೇನೆ. ಅಂದ ಹಾಗೆ ಒಳ್ಳೆಯ ಮಾವನನ್ನು ಹಿಡಿದು ಬೇಗ ಮದುವೆಯಾಗಿ ನಮಗೆಲ್ಲ ಊಟಹಾಕಿಸಿಬಿಡಿ" ಎಂದು ತಮ್ಮ ಮಾತಿಗೆ ತಾವೇ ನಕ್ಕರು.

"ನಿಮ್ಮ ಮಗ ಡಾ॥ಮಹೇಂದ್ರನ ಮದುವೆ ಊಟ ಮೊದಲು ಹಾಕಿಸಿ" ಎನ್ನುತ್ತಾ ಆಗ ತಾನೇ ಬಂದಿದ್ದ ಮಹೇಂದ್ರನತ್ತ ತಿರುಗಿ ನಾನು ಕಣ್ಣಿನಲ್ಲೇ ನಕ್ಕೆ. ಕೆಲವು ಸಮಯ ನಾವಿಬ್ಬರೂ ಹೈಸ್ಕೂಲ್ ಜೀವನದ ಸವಿ ನೆನಪುಗಳನ್ನು ವಿನಿಮಯ ಮಾಡಿಕೊಂಡು ಸವಿದು ಪ್ರಸನ್ನಗೊಂಡವು.

ಮಹೇಂದ್ರನ ಜೊತೆಯಲ್ಲಿ ಬಂದ ನನ್ನ ಸ್ನೇಹಿತರನ್ನೆಲ್ಲ ನಾನು ಹತ್ತಿರ ಕರೆದು, ನನ್ನ ಕನ್ನಡ ಮಾಸ್ತರರನ್ನು ಅವರ ಕನ್ನಡದ ಹಿರಿಮೆಯನ್ನು ಪರಿಚಯ ಮಾಡಿಸಿದೆನು. ನನ್ನ ಸ್ನೇಹಿತರ ಹಿಂಡನ್ನು ನೋಡಿ, ಸಂತಸಗೊಂಡು ಶ್ರೀನಿವಾಸಶಾಸ್ತ್ರಿಗಳು "ಕಂಗ್ರಾಜ್ಯುಲೇಷನ್ ಡಾಕ್ಟರ್ಸ್, ಅಂತೂ ನೀವೆಲ್ಲರೂ ಜೀವನದ ಒಂದು ಗುರಿ ಮುಟ್ಟಿದ್ದೀರಿ, ನಿಮ್ಮ ಜೀವನವೂ ಸಾರ್ಥಕವಾಯಿತು. ನಿಮ್ಮ ಮುಂದಿನ ಜೀವನವು ಸುಖವಾಗಿ ಸಾರ್ಥಕವಾಗಿ ಸದಾ ರೋಗಿಗಳ ಸೇವೆಯಲ್ಲಿ ನಿರತರಾಗುವ ನಿಮ್ಮೆಲ್ಲರಿಗೂ, ಈ ಜನ್ಮದಲ್ಲೇ ಆ ಭಗವಂತನ ಸಾಕ್ಷಾತ್ಕಾರವಾಗಲೀ ಎಂಬುದೇ ನನ್ನ ಶುಭ ಹಾರೈಕೆ" ಎಂದು ತಮ್ಮ ಬಯಕೆಯ ಆಶೀರ್ವಾದವನ್ನು ಹರಸಿದರು.

ಅಲ್ಲೇ ನಿಂತು ಸರ್ಜಿಕಲ್ ಫಸ್ಟ್ ಯೂನಿಟ್‌ಗೆ ತನ್ನನ್ನು ಪೋಸ್ಟಿಂಗ್ ಮಾಡಿರುವುದನ್ನು ಹುಡುಕಿದ್ದರೂ, ಡಾ॥ಲೀಲಾ ಈ ಗುರುಶಿಷ್ಯರ ಕುಶಲ ಸಂಭಾಷಣೆಯನ್ನು ಆಸಕ್ತಿಯಿಂದ ಆಲಿಸುತ್ತ, ಇನ್ನೂ ನೋಟೀಸ್ ಬೋರ್ಡ್‌ನಲ್ಲಿ ತನ್ನ ಕ್ಲಾಸ್ ಮೇಟ್‌ಗಳ ಹೆಸರನ್ನು ಹುಡುಕುತ್ತಿರುವಂತೆ ನಟಿಸಿ ನಿಂತಿದ್ದಳು.

ನನ್ನ ಸ್ನೇಹಿತರೆಲ್ಲರೂ ಮಾಸ್ತರರನ್ನು ಹತ್ತಿರದಲ್ಲೇ ಇದ್ದ ಆನಂದ ವಿಹಾರ ಹೋಟಲಿಗೆ ಒತ್ತಾಯಿಸಿ ಕಾಫಿಗೆ ಕರೆದೊಯ್ದರು. ತಿಂಡಿ ತಿಂದು, ಕಾಫಿ ಹೀರುತ್ತ ಕುಳಿತಾಗ ನನ್ನ ಡಾಕ್ಟರ್ ಸ್ನೇಹಿತರುಗಳೆಲ್ಲರನ್ನೂ ಒಬ್ಬೊಬ್ಬರನ್ನಾಗಿ ನಾನು ಪರಿಚಯಿಸಿದೆನು. ಅವರೆಲ್ಲರೂ ಶ್ರೀನಿವಾಸಶಾಸ್ತ್ರಿಗಳ ಸಲುಗೆಯ, ಸಭ್ಯತೆಯ, ಸರಳತೆಯ ಮತ್ತು ವಿನಯ ಮಾಧುರ್ಯದ ಸವಿಯನ್ನು ಮನದಣಿದು ಆಸ್ವಾದಿಸಿ ಆಹ್ಲಾದಿತರಾದರು. ಶ್ರೀನಿವಾಸಶಾಸ್ತ್ರಿಗಳು ತಮ್ಮ ಮಗ ಮಹೇಂದ್ರನ ಜೊತೆ ಊರಿಗೆ ಹೊರಟಾಗ ನಾನು, ತಂದೆ ಮಕ್ಕಳಿಗೆ ಕೈ ಬೀಸುತ್ತಾ ನನ್ನ ಸ್ನೇಹಿತರ ಜೊತೆ ಹಾಸ್ಟೆಲ್ ರೂಂ ಕಡೆ ಹೊರಟೆ. ನನಗೆ ಆಗ ಗೊತ್ತಿರಲಿಲ್ಲ ಶಾಸ್ತ್ರಿಯವರ ಈ ಭೇಟಿಯಿಂದ ನನ್ನ ಜೀವನದಲ್ಲಿ ಎಂತಹ ಮಹಾಕ್ರಾಂತಿಕಾರಕ ಘಟನೆ ಸಂಭವಿಸುತ್ತದೆ ಎಂದು !

ಸ್ನೇಹಿತರಿಂದ ಬೀಳ್ಕೊಂಡು ನನ್ನ ರೂಮಿಗೆ ಹೋಗುತ್ತಿರುವಾಗಲೇ ಶ್ರೀನಿವಾಸಶಾಸ್ತ್ರಿಗಳ ಮಾತು ನನ್ನ ಮನಸ್ಸಿನಲ್ಲಿ ಗುಂಯ್ ಗುಡತೊಡಗಿತು. ಪ್ರತಿಧ್ವನಿತವಾಗುತ್ತಿತ್ತು. "ಕಂಗ್ರಾಜ್ಯುಲೇಷನ್ ಡಾಕ್ಟರ್ಸ್, ಅಂತೂ ನೀವೆಲ್ಲರೂ ಜೀವನದ ಒಂದು ಗುರಿ ಮುಟ್ಟಿದ್ದೀರಿ, ನಿಮ್ಮ ಜೀವನವೂ ಸಾರ್ಥಕವಾಯಿತು. ನಿಮ್ಮ

ಮುಂದಿನ ಜೀವನವು ಸುಖವಾಗಿ, ಸಾರ್ಥಕವಾಗಿ ಸದಾ ರೋಗಿಗಳ ಸೇವೆಯಲ್ಲಿ ನಿರತರಾಗುವ ನಿಮ್ಮೆಲ್ಲರಿಗೂ ಈ ಜನ್ಮದಲೇ ಆ ಭಗವಂತನ ಸಾಕ್ಷಾತ್ಕಾರವಾಗಲೀ ಎಂಬುದೇ ನನ್ನ ಶುಭ ಹಾರೈಕೆ". ಈ ಮಾತುಗಳು ಮತ್ತೆ ಮತ್ತೆ ಮೇಲೆದ್ದು, ಮನಸ್ಸನ್ನು ತೀವ್ರವಾಗಿ ಕಾಡುತ್ತಿದ್ದವು. ಮನಸ್ಸಿನ ತಳಮಳ ಅನೇಕ ಪ್ರಶ್ನೆಗಳನ್ನು ಕೇಳುತ್ತಿತ್ತು. ?

ಆಗ ಆ ಕ್ಷಣದಲ್ಲಿ ವಿಧಿಯ ಆಟ ನನ್ನ ಜೀವನದಲ್ಲಿ ಈ ರೀತಿ ಆರಂಭವಾಯಿತು.

ಎಂ. ಬಿ. ಬಿ. ಎಸ್. ಪಾಸ್ ಮಾಡಿದ ತಕ್ಷಣ ನಮ್ಮ ಜೀವನ ಸಾರ್ಥಕವಾಯಿತೇ ?

ಎಂ. ಬಿ. ಬಿ. ಎಸ್. ಮಾಡಿದ್ದರಿಂದ, ಜೀವನದ ಗುರಿ ಮುಟ್ಟಿದ ಹಾಗಾಯಿತೇ ?

ಮದುವೆ ಮಾಡಿಕೊಂಡಾಕ್ಷಣ, ತಂದೆತಾಯಿಯರ ಆಸೆಗಳು ಪೂರೈಸುತ್ತವೆಯೇ ?

ಈ ಜನ್ಮದಲ್ಲಿ ನಮ್ಮೆಲ್ಲರಿಗೂ ಸಾಕ್ಷಾತ್ಕಾರ ಸಾಧ್ಯವೇ ? ಹಾಗಾದರೆ ಆತ್ಮ, ಪುನರ್ಜನ್ಮ ಉಂಟೇ ?

ಮನುಷ್ಯನ ಜೀವನದಲ್ಲಿ ನಿಜವಾಗಿಯೂ ಸಾರ್ಥಕತೆ ಎಂಬುದು ಇರುವುದೆ ?

ಜನ್ಮಾಂತರಗಳಿಂದ ಮುಕ್ತಿ ಪಡೆದಾಗ ಮಾತ್ರ, ಸಾಕ್ಷಾತ್ಕಾರ ಉಂಟಾಗುವುದೇ ?

ಹಾಗೆಂದು ಜನಸಾಮಾನ್ಯರು ಹೇಳುತ್ತಾರೆ. ಹಾಗಾದರೆ ಪುನರ್ಜನ್ಮ ಉಂಟೇ ? ಮನುಷ್ಯನ ಜೀವನದಲ್ಲಿ ನಿಜವಾದ ಸಾರ್ಥಕತೆ ಮತ್ತು ಸಾಕ್ಷಾತ್ಕಾರಗಳಿದ್ದರೆ ಅವುಗಳ ಲಭ್ಯವಾದರೂ ಹೇಗೆ ?

ನನ್ನ ಹೆಸರಿನ ಹಿಂದೆ ಡಾಕ್ಟರ್ ಎಂಬ ಅಂಕಿತ ಬಂದಾಕ್ಷಣ ನಾನು ಜೀವನದ ಗುರಿ ತಲುಪಿದ್ದೇನೆಂದಾಗಲಿ ಜೀವನ ಸಾರ್ಥಕವಾಯಿತೆಂದಾಗಲಿ ತನಗೇಕೆ ಅನಿಸುತ್ತಿಲ್ಲ. ಇಲ್ಲಿಯವರೆಗೆ ಸಾಹಿತ್ಯ, ವಿವಿಧ ವಿಜ್ಞಾನ ಕ್ಷೇತ್ರಗಳಲ್ಲೇ ಹೆಚ್ಚು ಆಸಕ್ತಿ ತೋರಿಸುತ್ತಿದ್ದ ನನ್ನ ಮನದಲ್ಲಿ ಈ ಪ್ರಶ್ನೆಗಳು ಪದೇ ಪದೇ ಏಳುತ್ತಿದ್ದವು. ಈ ಪ್ರಶ್ನೆಗಳಿಗೆ ನನ್ನಲ್ಲಿ ಸ್ಪಷ್ಟವಾದ ಉತ್ತರವಿರಲಿಲ್ಲ. ನಾನು ಇನ್ನೂ ತಿಳಿಯುವುದು ತುಂಬಾ ಇದೆ ಅಂದುಕೊಂಡೆ. ನನ್ನ ಮನದಲ್ಲಿ ಈ ಪ್ರಶ್ನೆಗಳಿಗೆಲ್ಲ ಸಮಂಜಸವಾದ ಉತ್ತರ ಪಡೆಯಲೇಬೇಕೆಂಬ ಪ್ರೇರಣೆಯಾಗಿ, ಜೀವನ ಸಾರ್ಥಕತೆಯ ಮತ್ತು ಸಾಕ್ಷಾತ್ಕಾರಗಳ ಸಂಶೋಧನೆಯನ್ನು ಮಾಡಬೇಕು ಎನ್ನುವ ತೀವ್ರ ಆಸೆ ಅಂಕುರಿಸಿತು. ಜೀವನ ಸಾರ್ಥಕತೆಯ ಮತ್ತು ಸಾಕ್ಷಾತ್ಕಾರಗಳ ಗುರಿಯನ್ನು ಸಾಧಿಸುವತ್ತ ಪ್ರಯತ್ನ ಮಾಡಬೇಕು. ಆ ಹಾದಿಯಲ್ಲಿ ನಾನು ನಡೆಯಬೇಕು, ಜನ್ಮ-ಪುನರ್ಜನ್ಮಗಳ ಸತ್ಯಾಸತ್ಯತೆಯನ್ನು ತಿಳಿಯಬೇಕು. ಅವುಗಳ ಅಸ್ತಿತ್ವದ ಸತ್ಯಾಸತ್ಯತೆಯನ್ನು ಸಂಶೋಧಿಸಬೇಕು ಎನ್ನುವ ತೀವ್ರ ಹಂಬಲ ನನ್ನಲ್ಲಿ ಅಂಕುರಿಸಿತು.

ಹೌಸ್‌ಸರ್ಜನ್ ಪೋಸ್ಟಿಂಗ್ ಅಟೆಂಡ್ ಮಾಡುವುದಕ್ಕೆ ಇನ್ನೂ ಎರಡು ತಿಂಗಳು ಇವೆ ಎಂದು ತಿಳಿದಿದ್ದ ನಾನು ಆ ಸದಾವಕಾಶದಲ್ಲಿ ಸಾರ್ಥಕತೆ ಮತ್ತು ಸಾಕ್ಷಾತ್ಕಾರ ಪದಗಳ ಅರ್ಥದ ಸಂಶೋಧನೆಯಲ್ಲಿ ತೊಡಗಿ, ಅನ್ವೇಷಣೆಯ ಹಾದಿಯಲ್ಲಿ ತಲ್ಲೀನನಾಗಲು ನಿರ್ಧರಿಸಿದೆನು. ಈ ರೀತಿ ಜೀವನ ಸಾರ್ಥಕತೆ, ಜನ್ಮ-ಆತ್ಮ-ಪುನರ್ಜನ್ಮಗಳ ಮತ್ತು ಸಾಕ್ಷಾತ್ಕಾರ ಸಂಶೋಧನೆಯ ಮೊಳಕೆ ನನ್ನ ಮನದಲ್ಲಿ ಅಂಕುರಿಸಿ ಚಿಗುರೊಡೆಯಿತು.

ನಾನು ಕಿಟಕಿಯ ಬಳಿ ಕುಳಿತು ಹೊರಗೆ ನೋಡಿದೆ. ನೀಲಾ ಆಕಾಶದಲ್ಲಿ ಅಲ್ಲೊಂದು ಇಲ್ಲೊಂದು ಬಿಳಿಮೋಡದ ತುಂಡುಗಳು ಸ್ವಲ್ಪವೂ ಅಲುಗಾಡದೆ ನಿಂತಿವೆಯೋ ಎಂಬಂತೆ ತೇಲುತ್ತಿದ್ದವು. ಆಧುನಿಕ ಸಮಾಜದಲ್ಲಿ ಸಾಮಾನ್ಯವಾಗಿ ಧನಸಂಗ್ರಹ ಮಾಡುವುದು, ಅಧಿಕಾರಗಳಿಸುವುದು, ಸ್ಥಾನಮಾನ ಪಡೆ

ಯುವುದು, ಜನಪ್ರಿಯತೆಯ ದಾರಿ ಹುಡುಕುವುದು, ಭೋಗವಿಲಾಸಗಳಲ್ಲಿ ತೊಡಗುವುದು ಜನರ ಧ್ಯೇಯ ವಾಗಿರುತ್ತದೆ. ಹೀಗಿರುವಾಗ, ನನ್ನ ಮನಸ್ಸಿನ ಅಂತರಾಳವನ್ನು ಪ್ರವೇಶಿಸಿದ ಶ್ರೀನಿವಾಸಶಾಸ್ತ್ರಿಯವರ " ಸಾಕ್ಷಾತ್ಕಾರ " ವೆಂಬ ನುಡಿ, ಸ್ಫೂರ್ತಿಯ ಕಿಡಿಯಾಗಿ, ಆಧುನಿಕ ಸಮಾಜದ ಜನರ ಧ್ಯೇಯಕ್ಕೆ ವಿರುದ್ಧ ದಿಕ್ಕಿನಲ್ಲಿ ನಡೆಯುವ ಶಕ್ತಿಗೆ ಕಾರಣವಾಗಿ, ಸಾಮಾನ್ಯ ವ್ಯಕ್ತಿಯಾಗಿದ್ದ ನನ್ನನು ಅಸಾಮಾನ್ಯ ವ್ಯಕ್ತಿಯಾಗಲು ಪ್ರೇರೇಪಿಸಿ, ನನ್ನ ಬದುಕಿನ ದಿಕ್ಕನ್ನೇ ಬದಲಾಯಿಸಿ ನನ್ನ ಬಾಳಿನ ಯಶಸ್ಸು ವಿಜಯಗಳ ಮೂಲ ಮಂತ್ರವಾಗಿ ಸಾಕ್ಷಾತ್ಕರ, ಸಾರ್ಥಕತೆಯ ಸಂಶೋಧನೆಗೆ ನಾಂದಿಯಾಯಿತು. ಸಾವಿರ ಮೈಲುಗಳ ಯಾತ್ರೆ ಒಂದು ಹೆಜ್ಜೆಯಿಂದ ಪ್ರಾರಂಭವಾಗುವಂತೆ, ಸಾವಿರಾರು ಪುಟಗಳ ಗ್ರಂಥ ಒಂದು ಅಕ್ಷರದಿಂದ ಪ್ರಾರಂಭವಾಗುವಂತೆ ನನ್ನ " ಸಾಕ್ಷಾತ್ಕಾರ, ಸಾರ್ಥಕತೆ "ಯ ಸಂಶೋಧನೆ ಶಾಸ್ತ್ರಿಯವರ ಒಂದು ನುಡಿಯಿಂದ ಪ್ರಾರಂಭವಾಯಿತು.

ಈ ರೀತಿ ಶಾಸ್ತ್ರಿಯವರ ಒಂದು ನುಡಿ ನನಗೆ "ಸಾಕ್ಷಾತ್ಕಾರ, ಸಾರ್ಥಕತೆ"ಯ ಅನ್ವೇಷಣೆಯಲ್ಲಿ ತೊಡಗಲು ಪ್ರೇರೇಪಿಸಿ, ನನ್ನ ಅನ್ವೇಷಣೆಯ ಹಾದಿ ಹಿಡಿಯುವುದಕ್ಕೆ ಹೇಗೋ ಈ ಘಟನೆ ನಾಂದಿಯೋ ಅಥವಾ ಪ್ರಾರಂಭದ ಗುದ್ದಲಿ ಪೂಜೆಯೋ ಆಯಿತು. ನನ್ನ ಬದುಕಿಗೂ ಒಂದೊಂದು ಹೊಸಹೊಸ ಬಾಗಿಲು ತೆರದಂತಾಯ್ತು. ನನ್ನ ಬದುಕಿನಲ್ಲಿ ಒಂದೊಂದು ಹೊಸ ವಿಸ್ಮಯಕಾರಕ ನೂತನ ಪ್ರಪಂಚಕ್ಕೂ ಪ್ರವೇಶಿಸಿ ದಂತಾಯ್ತು.

ನನ್ನ ಪ್ರಜ್ಞೆಗೆ ನನಗರಿಯದಂತೆ "ಸಾಕ್ಷಾತ್ಕಾರ, ಸಾರ್ಥಕತೆ"ಯ ಅನ್ವೇಷಣೆಯ ದೀಕ್ಷೆಯಾಯಿತು. ಒಟ್ಟಿನಲ್ಲಿ ಇದೊಂದು ಮಹಾಸುದಿನವಾಗಿ ಪರಿಣಮಿಸಿತು. ಈ ಘಟನೆ ನನ್ನ ಬದುಕಿನ ದಿಕ್ಕನ್ನು ಬದಲಾಯಿಸಲು, ವಿಧಿವ್ಯೂಹ ರಚಿಸುತ್ತಿದ್ದ ಪೂರ್ವಭಾವಿ ವಿನ್ಯಾಸದಂತೆ ತೋರುತ್ತಿತ್ತು. ಜರುಗುವ ವಾಸ್ತವಸಂಗತಿ ನಿಮಿತ್ತ ಮಾತ್ರವಾಗಿ, ಅಂಕುರಿಸಿ ಪ್ರೇರಣೆಯಾಗುತ್ತದೆ.

# 2. ಅನ್ವೇಷಣೆಯ ಹಾದಿ

ಮಾನವನ ಇತಿಹಾಸದಲ್ಲಿ ಬದುಕಿನ ಸಂಬಂಧದ ಸಂವೇದನೆಗಳ, ನೂರಾರು ಸಮಸ್ಯೆಗಳ ಸುಳಿಯ ಅಂತರ್ಯವನ್ನು ಸೂಕ್ಷ್ಮವಾಗಿ ಅರಿತುಕೊಳ್ಳಲು ಸಾವಿರಾರು ಮನಸ್ಸುಗಳು ಅನ್ವೇಷಣೆ ಮಾಡಿವೆ, ಮಾಡುತ್ತ ಅವೆ. ಬದುಕಿನ ಒಂದೊಂದು ಹಂತಕ್ಕೆ, ಅವಸ್ಥೆಗೆ, ಆಕಾಂಕ್ಷೆಗೆ ನೂರಾರು ಮುಖಗಳಿವೆ. ಈ ಮುಖಗಳನ್ನು ವೀಕ್ಷಿಸಿ, ಗ್ರಹಿಸಿ, ಅರ್ಥಮಾಡಿಕೊಳ್ಳುವಲ್ಲಿ, ಅರ್ಥೈಸುವಲ್ಲಿ ಅಸಂಖ್ಯಾತ ದೃಷ್ಟಿಗಳಿವೆ. ಮುಂದೆ ಈ ದೃಷ್ಟಿಗಳೇ ಹೊಸ ಹೊಸ ವಿಚಾರಗಳಾಗಿ, ದರ್ಶನಗಳಾಗಿ ಹರಿದು ಬಂದಿವೆ. ಅಂತಹ ಹೊಸದೊಂದು ಜೀವನ ದೃಷ್ಟಿಯ ಚಿಂತಕನಾಗಿ, ಆ ಹುಣ್ಣಿಮೆಯ ದಿನದಂದು ನಾನು ತಲೆಯನ್ನು ಕುರ್ಚಿಯ ಬೆನ್ನಿಗೆ ಕೊಟ್ಟು ಕಣ್ಣುಮುಚ್ಚಿ ಕುಳಿತಿದ್ದೆ. ನನ್ನ ಮನದಾಳದಲ್ಲಿ ವಿಚಾರದ ಸುಳಿಯೇ ಏಳುತಿತ್ತು.

ಸೃಷ್ಟಿಯ ಅಸ್ಥಿತ್ವದ ಅವಶ್ಯಕತೆಯ ಉದ್ದೇಶವೇನು? ಅದರ ರಹಸ್ಯವೇನು? ಬದುಕು ಆಶ್ಚರ್ಯ, ಸಾವು ರಹಸ್ಯ! ಹೌದು ಈ ಸತ್ಯವನ್ನು ನಾನೆಂದೂ ಯೋಚಿಸಲೇ ಇಲ್ಲ. ಹತ್ತಾರು ದೃಷ್ಟಿಕೋನಗಳಿಂದ ಯೋಚಿಸುವುದು ನನಗೆ ತಿಳಿದಿರಲಿಲ್ಲ. ಈ ರಹಸ್ಯಗಳನ್ನು ವಿಜ್ಞಾನದ ರೀತಿಯಲ್ಲಿ ಭೇದಿಸಲು ಸಾಧ್ಯವೇ? ಎಂದು ಚಿಂತಿತನಾಗಿ ನಾನು ಹಾಗೇ ಕುಳಿತನು. ಅಷ್ಟರಲ್ಲೇ ಸೆಕೆ ಎನಿಸಿ, ಪಕ್ಕಕ್ಕೆ ಬಗ್ಗಿ ಫ್ಯಾನಿನ ಸ್ವಿಚ್ಚನ್ನು ಒತ್ತಿ, ಮತ್ತೆ ಕಣ್ಣು ಮುಚ್ಚಿದೆನು. ಫ್ಯಾನು ಗಿರ್ರೆಂದು ಸುತ್ತುತ್ತಿತ್ತು. ಮನದ ತರ್ಕ ಮುಂದುವರಿಯತೊಡಗಿತ್ತು. ಜೀವನದ ಎಲ್ಲಾ ಸಮಸ್ಯೆಗಳನ್ನೂ ಒಂದು ಹೊಸ ಬೆಳಕಿನಲ್ಲಿ ನೋಡಬೇಕು. ಯುಗ ಯುಗಾಂತರದ ಪುರಾಣ, ಇತಿಹಾಸ ಎಲ್ಲವನ್ನೂ ನಂಬುವವರಿದ್ದಾರೆ. ಕಾಣದ ದೇವರು, ಸ್ವರ್ಗ, ನರಕ ಎಲ್ಲವನ್ನೂ ಕಂಡದ್ದಕ್ಕಿಂತ ಹೆಚ್ಚಾಗಿ ವರ್ಣಿಸುತ್ತಾರೆ. ರಾಮಾಯಣ, ಮಹಾಭಾರತ, ಭಾಗವತ, ವೇದ, ಉಪನಿಷತ್ತು, ಪುರಾಣ ಎಲ್ಲವನ್ನೂ ಈಗಿನವರು ಪ್ರತ್ಯಕ್ಷ ಕಂಡಿದ್ದರೇನು? ಅವರು ಬರೆದಿದ್ದಾರೆ, ಇವರು ನಂಬಿದ್ದಾರೆ. ಸಂಪ್ರದಾಯದ ಯಾವ ಎಲ್ಲೆಕಟ್ಟಿಗೂ ಸಿಲುಕಬಾರದು. ಹಳೆಯದಾದ ಮಾತ್ರಕ್ಕೆ ಎಲ್ಲವೂ ಒಪ್ಪಲ್ಲ. ಇಂದಿನ ಒಪ್ಪು ನಾಳಿನ ತಪ್ಪಾಗ ಬಹುದು. ಅಪ್ಪ ತೋಡಿಸಿದ ಬಾವಿಯೆಂದ ಮಾತ್ರಕ್ಕೆ, ಉಪ್ಪು ನೀರು ಸಿಹಿ ಯಾಗಲಾರದು. ನಾವು ಯಾರದೇ, ಯಾವುದೇ ವಿಚಾರದ ನೆರಳಾದ ಕ್ಷಣ ನಮ್ಮ ಸತ್ಯಾನ್ವೇಷಣೆ ಸಾಯುತ್ತದೆ. ಹಣೆಯ ಮೇಲೆ ಮುತ್ತಿನಂತೆ ನಿಂತಿದ್ದ ಬೆವರು ಮರೆಯಾದ ಮೇಲೆ ಹಾಯೆನಿಸಿದಂತೆ ಸ್ವಲ್ಪ ಹೊತ್ತಿನಿಂದ ತಟಸ್ಥವಾಗಿದ್ದ ಯೋಚನೆಯ ಸುರುಳಿ ಮತ್ತೆ ಬಿಚ್ಚಿದಂತಾಗಿ ತಲೆಯ ಮೇಲೆ ತಿರುಗುತ್ತಿದ್ದ ಫ್ಯಾನಿನೊಂದಿಗೆ ಸ್ಪರ್ಧಿಸುವಂತೆ ಬಿರುಸಾಗಿ ಸುತ್ತುತ್ತಿತ್ತು. ತಾನು ತಿಳಿಯಬೇಕು, ಪ್ರಯತ್ನಿಸಬೇಕು ಎಂಬ ಆಸೆ ಪ್ರಬಲವಾಗುತ್ತಿತ್ತು. ಅನೇಕ ಪ್ರಶ್ನೆಗಳನ್ನು ಕೇಳುತ್ತಿತ್ತು. ಜೀವನದ ಆಗು ಹೋಗುಗಳ ಬಗ್ಗೆ ತರ್ಕ ಮುಂದುವರಿಯುತ್ತಿತ್ತು.

ಹುಟ್ಟುವುದು, ಅಪ್ಪಅಮ್ಮಂದಿರ ಅಕ್ಕರೆಯ ಸಕ್ಕರೆಯನ್ನು ಸವಿದು ಬೆಳೆಯುವುದು, ಅವರು ಒಪ್ಪಿದ, ಒಲಿದಿತ್ತ ಚೆಲುವಿನ ನಲ್ಲನಲ್ಲೆಯರನ್ನು ಕೈ ಹಿಡಿಯುವುದು, ಚೆನ್ನಾಗಿ ದುಡಿದು ಸಂಪಾದಿಸಿ ನೆಮ್ಮದಿಯಿಂದ ಬಾಳುವುದು, ಮಕ್ಕಳನ್ನು ಹೆತ್ತು, ಸಾಕಿ, ಸಲಹಿ ದೊಡ್ಡವರನ್ನಾಗಿ ಮಾಡುವುದು, ಮತ್ತೆ ಅವರಿಗೆ ಮದುವೆ ಮಾಡುವುದು. ಇದೇ ತಾನೇ ಬಾಳಿನ ಹೆದ್ದಾರಿ ಮತ್ತು ಗುರಿ. ಈ ಗುರಿತಪ್ಪಿದ ಮೇಲೆ ಸಾಮಾನ್ಯರಿಗೆ ಜೀವನ ಉದ್ದೇಶವಿಲ್ಲದೆ ಅರ್ಥಹೀನವಾಗುತ್ತದೆ, ಶೂನ್ಯವಾಗುತ್ತದೆ. ತಿನ್ನುವುದು, ಕುಡಿಯುವುದು, ಕುಣಿಯುವುದು ಮಕ್ಕಳನ್ನು ಹಡೆಯುವುದು ಮೊದಲಾದ ಇಂದ್ರಿಯ ವ್ಯಾಪಾರಗಳಿಗಿಂತ ಹಿರಿದಾದ ಗುರಿ ಮಾನವನ ಪಾಲಿಗಿದೆಯೇ? ಇದ್ದರೆ ಅದು ಏನು? ಎಂಬುದನ್ನು ಅರಿತುಕೊಳ್ಳಬೇಕು. ಸುಖದು:ಖಗಳ ಮೂಲವೇನು?

ಜೀವನದ ಅರ್ಥ, ಉದ್ದೇಶಗಳೇನು ? ಎಂಬುದನ್ನು ಸ್ಪಷ್ಟಪಡಿಸಿಕೊಳ್ಳಬೇಕು. ಅದು ಸಾಧ್ಯವಾಗುವವರೆಗೂ, ಮನುಷ್ಯನ ಬದುಕಿಗೊಂದು ನೆಲೆ, ಬೆಲೆ, ಗೊತ್ತು, ಗುರಿ ಇಲ್ಲದಂತಾಗುತ್ತದೆ. ಉದ್ದೇಶವಿಲ್ಲದ ಜೀವನ ಚುಕ್ಕಾಣಿ ಇಲ್ಲದ ಬಂಡಿಯಂತೆ, ದಿಕ್ಸೂಚಿಯಿಲ್ಲದ ಹಡಗಿನಂತೆ ಎಲ್ಲೆಲ್ಲೋ ಸಾಗುತ್ತದೆ. ಹುಟ್ಟಿದ ವ್ಯಕ್ತಿ ಮರಣದವರೆಗೂ ನಗು, ಅಳು, ನಿರಾಶೆ, ರಾಗ, ದ್ವೇಷ, ಸೋಲು, ಗೆಲುವು ಈ ದ್ವಂದ್ವಗಳಲ್ಲಿ ತೇಲುತ್ತಿರುತ್ತಾನೆ. ಹಳ್ಳಿಯ ಹೈದನೂ, ದಿಲ್ಲಿಯ ದಿವಾನನೂ, ಪಶ್ಚಿಮ ದೇಶದ ಬಿಳಿಯನೂ ಆಫ್ರಿಕಾದೇಶದ ಕರಿಯನೂ, ಅರಮನೆ, ಗಿರಮನೆ, ಗುರುಮನೆಗಳಲ್ಲಿರುವವನೂ, ಗುಹೆ ಗುಡಿಸಲಲ್ಲಿರುವವನೂ, ಈ ದ್ವಂದ್ವಗಳನ್ನು ದಾಟಲಾರನು. ಹಾಗಾದರೆ ಮನುಷ್ಯನ ಸ್ಥಿತಿ ಇಷ್ಟೆಯೇ? ಇದೇ ಅವನ ಗತಿಯೇ? ನಮ್ಮ ಜೀವನಕ್ಕೊಂದು ಗುರಿಬೇಕು, ಜೀವನದಲ್ಲಿ ನಿಶ್ಚಿತವಾದ ಹಾಗೂ ಸ್ಪಷ್ಟವಾದ ಉದ್ದೇಶ ಬೇಕು. ಅದರ ಸ್ಪಷ್ಟವಾದ ಜ್ಞಾನದ ಅರಿವು ಇದ್ದಾಗ, ಆ ಒಂದು ವಿಶಿಷ್ಟ ಆಸೆ ಅಥವಾ ಭಾವನೆ ನಮ್ಮನ್ನು ಕಾರ್ಯ ಪ್ರವೃತ್ತರನ್ನಾಗಿ ಮಾಡುತ್ತದೆ. ನಮ್ಮ ಸಮಸ್ಯೆಗಳಿಗೆ ನಾವೇ ಉತ್ತರ ಹುಡುಕಬೇಕು. ಇತರರೇನೋ ನಮಗೆ ಮಾರ್ಗದರ್ಶನ ಮಾಡಬಹುದು. ಆದರೆ ಆ ಮಾರ್ಗದಲ್ಲಿ ನಡೆಯ ಬೇಕಾದವರು ನಾವೇ. ಆಗ ಮಾತ್ರ ನಮ್ಮ ಬಾಳಿಗೊಂದು ಸಾರ್ಥಕತೆ ಬಂದೀತು. ಇಲ್ಲದ ಗೌರವ ಆದರಗಳಿಂದ ಮೆರೆದಾಡಿ, ಅಹಂಕಾರ ಮಮಕಾರಗಳಿಂದ ಹಾರಾಡಿ, ತನ್ನ ಬಗ್ಗೆ ಯಥಾವತ್ತಾಗಿ ಏನನ್ನೂ ತಿಳಿಯದೆ, ಕೇವಲ ಹುಳುಹುಪ್ಪಟೆಗಳಂತೆ ಸಾವನ್ನಪ್ಪುವ ಮನುಷ್ಯರ ಸ್ಥಿತಿ ಶೋಚನೀಯವಲ್ಲದೆ ಮತ್ತೇನು ?

ಮಹಾತ್ಮರು, ಪುಣ್ಯಪುರುಷರು, ರಾಜಾಧಿರಾಜರು, ವೀರರು ಹಾಗೂ ಶೂರರು ಜೀವನದ ಬಗ್ಗೆ ಯಾವ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ ಎಂದು ತಿಳಿಯುವ ಕಾತರದಿಂದ ನಾನು ಮಾರನೆಯ ದಿನ ಕಬ್ಬನ್‌ಪಾರ್ಕ್ ಸೆಂಟ್ರಲ್ ಪಬ್ಲಿಕ್ ಲೈಬ್ರರಿಯತ್ತ ಹೊರಟೆ. ಲೈಬ್ರರಿಯ ಬಾಗಿಲಲ್ಲೇ ಇದ್ದ ಸ್ಟ್ಯಾಂಡ್‌ಗಳ ಮುಂದೆ ನಿಂತು ಕೆಲವರು ಪತ್ರಿಕೆಗಳನ್ನು ಓದುತ್ತಿದ್ದರು. ಒಳಗಡೆ ಒಂದು ಹಾಲ್‌ನಲ್ಲಿ ದೊಡ್ಡ ದೊಡ್ಡ ಮೇಜಿನ ಸುತ್ತ ಇದ್ದ ಕುರ್ಚಿಗಳ ಮೇಲೆ ಕುಳಿತು ಮತ್ತೆ ಕೆಲವರು ಮಾಸಪತ್ರಿಕೆಗಳನ್ನೋದುತ್ತಿದ್ದರು. ಅವರನ್ನೆಲ್ಲ ಹಾಯ್ದು ನಾನು ರೂಂ ಒಳಗೆ ಹೋದೆ. ಉನ್ನತವಾದ ಬೀರುಗಳಲ್ಲಿ ಕನ್ನಡಿ ಬಾಗಿಲುಗಳ ಹಿಂದೆ ಸಾಲಾಗಿ ಜೋಡಿಸಿದ್ದ ಗ್ರಂಥರಾಶಿಗಳನ್ನು ನಾನು ನೋಡಿ, ಬೆರಗು ಬಡಿದಂತಾಗಿ ನಿಂತೆ. ಆ ಗ್ರಂಥಗಳು ಬಣ್ಣಬಣ್ಣದ ಕ್ಯಾಲಿಕೋ ರಟ್ಟುಗಳಿಂದ ಶೋಭಾಯಮಾನ ವಾಗಿ ಮನಮೋಹಿಸುತ್ತ ಚಿನ್ನದ ಅಕ್ಷರಗಳಲ್ಲಿ ರಂಜಿಸುತ್ತ ಮಿಂಚುತ್ತಿದ್ದವು. ಗ್ರಂಥಾಲಯದ ಮಹೋನ್ನತ ಬೀರುಗಳಲ್ಲಿ ಹಂತ ಹಂತವಾಗಿ ಸಾಲುಗೊಂಡಿದ್ದ ಪುಸ್ತಕಗಳನ್ನು ಸಾವಕಾಶವಾಗಿ ಅವಲೋಕನ ಮಾಡಿದೆ. ಗ್ರಂಥಲೋಕದ ವಿಸ್ತಾರ ವೈವಿಧ್ಯಗಳಿಗೆ ಬೆರಗಾದೆ. ಅಲ್ಲಿ ಅನೇಕ ಪುಸ್ತಕಗಳನ್ನು ಪರಿಶೀಲಿಸಿದೆ. ಲೈಬ್ರೇರಿಯನ್ ಜೊತೆ ವಿಚಾರ ವಿನಿಮಯ ಮಾಡಿಕೊಂಡೆ. ಅಲ್ಲಿಂದ ಬುಕ್ ಸ್ಟಾಲುಗಳಿಗೆ ಭೇಟಿ ನೀಡಿ ಅನೇಕ ಪುಸ್ತಕಗಳನ್ನು ಖರೀದಿ ಮಾಡಿದೆ. ಪ್ರತಿದಿನ ಬೆಳಗ್ಗೆಯಿಂದ ಸಾಯಂಕಾಲದವರೆಗೆ, ವೀರರ, ಧೀರರ, ಶೂರರ ಪುಸ್ತಕಗಳನ್ನು, ಚರಿತ್ರೆಗಳನ್ನು, ಸಾಧುಸಂತರ ಮಹಾಪುರುಷರ ಜೀವನದ ಸತ್ಯಕಥೆಗಳನ್ನು, ವೇದಾಂತದ ಪುಸ್ತಕಗಳನ್ನು ಅತ್ಯಂತ ಕುತೂಹಲದಿಂದ ಓದಿ, ಅನೇಕ ವ್ಯಕ್ತಿಗಳ ಜೀವನ ಪರಿಚಯ ಮಾಡಿಕೊಂಡೆ. ಹಾಳೆಯ ಮೇಲೆ ಹಾಳೆ ಓದುತ್ತಾ ಹೋದಂತೆ, ನಾನೂ ಒಬ್ಬ ಚೈತನ್ಯನಾಗುವ ಆವೇಶದಿಂದ ಕೂಡಿದ್ದೆ. ಕೆಲವು ಕಾವ್ಯಗಳನ್ನೂ, ತತ್ವಗ್ರಂಥಗಳನ್ನೂ ಜೀವನ ಚರಿತ್ರೆಗಳನ್ನೂ ಓದುತ್ತಿದ್ದಾಗ, ನನ್ನ ಮನಸ್ಸು ಉನ್ನತಾವಸ್ಥೆಗೇರುತ್ತಿತ್ತು. ಆತ್ಮ ಆಕಾಶಗಾಮಿಯಾಗುತ್ತಿತ್ತು. ಒಂದೊಂದು ಸಾರಿ ರಾತ್ರಿ ಎರಡು ಅಥವಾ ಮೂರು ಘಂಟೆಯವರೆಗೂ ನನ್ನ ಕೊಠಡಿಯಲ್ಲಿ ದೀಪ ಉರಿಯುತ್ತಿತ್ತು. ಪುಸ್ತಕಗಳನ್ನು ಓದುತ್ತಿದ್ದಾಗ ಮಹಾಪುರುಷರ ಜೀವನ ಚರಿತ್ರೆಯ ಎದುರು ನಾನು ನಿಂತಾಗ ನಾನೂ ಅವರಂತಾಗಬೇಕೆಂದು ನನಗೆ ಒಂದು ಮಹಾತ್ವಾಕಾಂಕ್ಷೆಯು ಉಂಟಾಗು ತ್ತಿತ್ತು. ಸಾಹಿತ್ಯದ ಜಗತ್ ಪ್ರಸಿದ್ಧ ಕವಿಗಳು, ಕಾವ್ಯ ಮಿಮಾಂಸಕರು, ನಾಟಕಕಾರರು, ಪ್ರಬಂಧಕಾರರು,

ಸಾಹಿತ್ಯ ವಿಮರ್ಶಕರು ನನ್ನ ಬುದ್ಧಿಗೆ ಪುಷ್ಟಿಯನ್ನು, ಭಾವಕ್ಕೆ ಕಾಂತಿಯನ್ನು ಒದಗಿಸಿದರು. ಆಧ್ಯಾತ್ಮಿಕ ವಿಭೂತಿಗಳ ಜೀವನ ಚರಿತ್ರೆಗಳ ಅಧ್ಯಯನದಿಂದ ನನ್ನ ಆತ್ಮ ಒಂದು ಅದ್ವೈತ ಭಾವದಲ್ಲಿ ಓಲಾಡುತ್ತ ಆಕಾಶಗಾಮಿಯಾಗಿತ್ತು.

ಅಂದು ರಾತ್ರಿ ನನಗೆ ನಿದ್ದೆ ಬರಲಿಲ್ಲ. ಹಾಸಿಗೆಯ ಮೇಲೆ ಹೊರಳಾಡುತ್ತ ಮಲಗಿದಾಗ, ನನ್ನ ಮನದ ತರ್ಕ ಮತ್ತು ವಿಚಾರ ಮುಂದುವರಿಯಿತು. ತೀವ್ರ ಹಂಬಲ,ತೀವ್ರ ಅಭೀಷ್ಟಗಳೇ ಗುರಿಸಾಧಿಸಲೂ ಯೋಗ್ಯವಾದ ವಾತಾವರಣದೆಡೆಗೆ ನಮ್ಮನ್ನು ಸೆಳೆಯುವುದು. ಆಧ್ಯಾತ್ಮಿಕ ಜಗತ್ತಿನಲ್ಲೂ ತೀವ್ರಹಂಬಲ, ತೀವ್ರ ವ್ಯಾಕುಲತೆ ಇತ್ತು ಎಂದಾದರೆ ದೇವರನ್ನು ಪಡೆಯಬಹುದು ಎನ್ನುತ್ತಾರೆ. ಹಾಗಾದರೆ ನಾನೂ ಅಂಥ ಒಂದು ಸಾಹಸವನ್ನು ಏಕೆ ಕೈಗೊಳ್ಳಬಾರದು ಎಂಬ ಯೋಚನೆ ನನಗೆ ಬರತೊಡಗಿತು. ಮತ ಸ್ಥಾಪಕರು ಮತ್ತು ಧಾರ್ಮಿಕ ಸಂತರು ದೇವರನ್ನು ಕಂಡಂತೆ ನಾನೂ ದೇವರನ್ನು ಕಾಣಬೇಕೆಂದು ಕೊಂಡಾಗ ನನ್ನ ಚೇತನ ಉಬ್ಬುತ್ತಿತ್ತು. ಮನಸ್ಸಿನಲ್ಲೇ ಹೇಗೆ, ಏನು, ಎತ್ತ ಎಂದು ಚಿತ್ರಿಸಿದೆ. ಸಮಸ್ಯೆಯನ್ನು ಹಲವು ದೃಷ್ಟಿಕೋನಗಳಿಂದ ವಿಶ್ಲೇಷಿಸಿದೆ. ಏಕಾಗ್ರಚಿತ್ತನಾಗಿ ಬಿಡದೆ ಚಿಂತನದ ಮಂಥನ ನಡೆಸಿದೆ. ಮನಸ್ಸಿನ ಪೂರ್ಣಶಕ್ತಿಯನ್ನು ಪ್ರಯೋಗಿಸಿ ನಿರಂತರ ಶ್ರಮಿಸಿದೆ. ಹಗಲಿರುಳೂ ಕಾತರಿಸಿದೆ. ಅನವರತ ತದೇಕ ಧ್ಯಾನಪರನಾದೆ. ಅತ್ಯಂತ ಕುತೂಹಲಕಾರಿಯೂ, ಆಶ್ಚರ್ಯದಾಯಕವೂ ಆದ ಅನ್ವೇಷಣೆಯ ಹಾದಿ ಈಗ ನನ್ನದಾಗಿತ್ತು. ನನ್ನ ಮನಸ್ಸೇ ಪ್ರಯೋಗಶಾಲೆ, ವಿಚಾರವೆಂಬ ಖಡ್ಗವೇ ಸಮಸ್ಯೆಯ ಕಗ್ಗಂಟನ್ನು ಕಡಿಯುವ ಉಪಕರಣ, ಯಾವ ಪದವೀಧರನೂ ಯೋಚಿಸದ ಜ್ಞಾನದಾಹ ನನ್ನದು. ಒಮ್ಮೆ ಆದರ್ಶದ ಗುರಿಯನ್ನು ಹುಡುಕಿ ಅದು ಎಟುಕುವ ಮಾರ್ಗವನ್ನು ಧೃಡಪಡಿಸಿಕೊಂಡೆ. ನಾನು ಆ ಮಾರ್ಗದಲ್ಲಿ ತದೇಕ ನಿಷ್ಠೆಯಿಂದ ನಿಶ್ಚಿತನಾಗಿ ಮುನ್ನೆಡೆದೆ. ನನ್ನ ಬಿಡದ ಛಲವೇ ಸಾಧನೆಯ ಚಾಲನೆಯ ಶಕ್ತಿಯಾಗಿತ್ತು. ಅಂದು ನನ್ನ ಮನದಲ್ಲಿ ವಿಚಾರದ ಅಲೆಗಳು ಮತ್ತೆ ಮತ್ತೆ ಏಳುತ್ತಿದ್ದವು. ಮನಸ್ಸಿನ ತರ್ಕ ಲಗಾಮು ಇಲ್ಲದ ಕುದುರೆಯ ಹಾಗೇ ಓಡುತ್ತಿತ್ತು. ಮನುಷ್ಯ ತಾನು ಕಾಣದ ಕೈನ ಗೊಂಬೆ ಎಂದು ಕೊಂಡಿದ್ದಾನೆ. ಆ ಕಾಣದ ಕೈ ಮನಸ್ಸಿನ ಭ್ರಾಂತಿಯೇ? ಕಲ್ಪನೆಯೇ? ಇಲ್ಲ ಮಾಯೆಯೇ? ಆ ಮಾಯೆಯ ಪ್ರಭಾವದಿಂದ ಹೊರಬರುವುದು ಸುಲಭಕಾರ್ಯವಲ್ಲವೇ? ಎಲ್ಲರಿಂದಲೂ ಸಾಧ್ಯವಿಲ್ಲವೇ? ಯಾರೋ ಒಬ್ಬರು ಮಹಾ ಮಹಿಮರಿಗೆ ಮಾತ್ರ ಸಾಧ್ಯವೇ? ಹಾಗೆನ್ನುವುದು ಬುದ್ಧಿವಂತಿಕೆಯ ಹೇಡಿತನ ವಲ್ಲವೇ? ಮನುಷ್ಯ ಸಾಮಾನ್ಯವಾಗಿ ಹಿಂದಿನಿಂದ ನಡೆದು ಬಂದ ಒಂದು ಸಾಂಪ್ರದಾಯಿಕ ಜಾಲದಲ್ಲಿ ಸಿಕ್ಕಿ ಬಿದ್ದಿದ್ದಾನೆ. ಅದರಂತೆ ನಡೆದು ಕೊಳ್ಳುತ್ತಾನೆ. ಅದರಲ್ಲಿ ತನ್ನ ವಿವೇಕವನ್ನು ಉಪಯೋಗಿಸುವುದಿಲ್ಲ. ಆದರೂ, ಪ್ರತಿಕ್ಷಣದಲ್ಲಿಯೂ ಅವನಲ್ಲಿಯ ವಿಚಾರಶೀಲತೆ ಅವನನ್ನು ಹಿಡಿದು ನಿಲ್ಲಿಸಿ ಪ್ರಶ್ನೆ ಮಾಡುತ್ತಿರುತ್ತದಲ್ಲವೇ? ಅವನು ಜೀವನವನ್ನು ಶಾಂತಿಯಿಂದ ಸಾಗಿಸುವ ಇಚ್ಛೆಯಿಂದ ಈ ತಾಕಲಾಟವನ್ನು ಕಂಡೂ ಕಾಣದಂತೆ ಉದಾಸೀನ ಮಾಡುತ್ತಾನಲ್ಲವೇ? ಆದರೆ ಈ ವಿಚಾರ ಪ್ರವೃತ್ತಿ ಅವನನ್ನು ಅಲ್ಲಿಗೆ ಬಿಡದೆ ಮತ್ತೆ ಬೆನ್ನಟ್ಟುತ್ತ ದಲ್ಲವೇ? ಅವನು ಸಾಗುತ್ತಿರುವ ದಾರಿಯಲ್ಲಿನ ದೋಷಗಳನ್ನು ತೋರಿಸುತ್ತದೆಯಲ್ಲವೇ? ಗೋಡೆಯ ಗಡಿ ಯಾರ ಅರ್ಧಘಂಟೆಯ ಸಂಕೇತವಾಗಿ ಒಂದು ಸಲ 'ಢಣ್' ಎಂದು ಬಾರಿಸಿದಾಗ, ಯೋಚನೆ ಎತ್ತೆತ್ತಲೋ ಹರಿಯುತ್ತಿದ್ದದು ಕಾರು ಗಕ್ಕನೆ ನಿಂತಾಗ, ಎಡವಿದಂತೆ ತಟಸ್ಥವಾಗಿ ಮತ್ತೆ ಮುಂದುವರಿಯಿತು.

"ಹುಟ್ಟು ಸಾವುಗಳು ನಿಜ. ಮಹಾತ್ಮರ ಪ್ರಕಾರ ಜನ್ಮ ಜನ್ಮಾಂತರಗಳು ನಿಜ. ಆಸೆಯೇ ದು:ಖಕ್ಕೆ ಮೂಲಕಾರಣ. ಆಸೆಯನ್ನು ಬಿಡುವುದೇ ಜೀವನದ ಸಾರ್ಥಕತೆಯ ಸಾಧನೆ ಹಾಗೂ ಜೀವನ್ಮುಕ್ತಿಗೆ ದಾರಿ" ವಾಸ್ತವಿಕತೆ ಹೀಗಿರುವಾಗ, ತಾನೂ ಡಾಕ್ಟರ್ ಆದುದರಿಂದ, ಜೀವನದಲ್ಲಿ ಯಾವ ಸಾಧನೆಯೂ ಆಗಿದೆ

ಅನಿಸಲಿಲ್ಲ ನನಗೆ. ಏಕೆಂದರೆ ''ಜೀವನದ ಉದ್ದೇಶ, ಜೀವನದ ಉದ್ದೇಶವೇನು ಎಂಬುದನ್ನು ಕಂಡು ಹಿಡಿಯುವುದೇ ಆಗಿದೆ.'' (The Purpose of Living is to discover the Purpose of Living beings) ಆಗಲೇ, ಜೀವನದ ನಿಜ ಸಾಧನೆ ಮತ್ತು ಸಾರ್ಥಕತೆ ಸಾಧ್ಯವೆನ್ನಿಸೀತು. ನನ್ನ ಮನದಲ್ಲಿ ಅದೇನೋ ನಿರ್ಧಾರ, ಆತ್ಮತೃಪ್ತಿಗಳು ಮೂಡಿದವು. ಬುದ್ಧನ ಉಪದೇಶಗಳಿಂದ ಜೀವನದಲ್ಲಿ ಸಾರ್ಥಕತೆಯಿದೆ ಎಂಬುದನ್ನು ಕಂಡು ಕೊಂಡಿದ್ದು ಆತ್ಮತೃಪ್ತಿ ಮೂಡುವುದಕ್ಕೆ ಕಾರಣವಾಯಿತು. ಒಂದು ಉದ್ದೇಶ ಸಾಧನೆಯ ಪ್ರಖರತೆ ನನ್ನ ಅಂತರಂಗವನ್ನು ವ್ಯಾಪಿಸಿತು.

ಅಂದು ನನ್ನ ಮನದ ತರ್ಕ ಕೆಲವು ನಿರ್ಧಾರಗಳನ್ನು ಧೃಢೀಕರಿಸುವೆಡೆಗೆ ಸಾಗಿತ್ತು.

ಸರ್ವ ಕ್ಷಣಿಕಃ ಕ್ಷಣಿಕಃ, ಸರ್ವ ದುಃಖಃ ದುಃಖಃ, ಸರ್ವ ಶೂನ್ಯಃ ಶೂನ್ಯಃ "

ಎಂಬುದಾಗಿ ಬೌದ್ಧಮತದ ಮೂಲಸಿದ್ಧಾಂತಗಳು ಸಾರುತ್ತವೆ. ಬುದ್ಧನ ಪ್ರಕಾರ, ಆಸೆಯೇ ದುಃಖಕ್ಕೆ ಮೂಲ ಕಾರಣ. ದುಃಖಕ್ಕೆ ಕಾರಣವಾದ ಆಸೆಗಳನ್ನು ಬಯಸಬಾರದು. ಮದುವೆ ಮಾಡಿಕೊಂಡು ಸಂಸಾರ ಕಟ್ಟಿ ಕೊಳ್ಳುವುದರ ಬದಲು, ನನ್ನ ಜೀವನದ " ಸಾಕ್ಷಾತ್ಕಾರ, ಸಾರ್ಥಕತೆ " ಮಾಡಿಕೊಳ್ಳಬೇಕೆಂಬ ಸಾಹಸದ ಸಂಕಲ್ಪ ಮಾಡಿ ಒಂದು ಭೀಷ್ಮ ಪ್ರತಿಜ್ಞೆಯನ್ನೇ ಆಗ ನಾನು ಮಾಡಿದೆ. ಈ ವಿಶ್ವದಲ್ಲಿ ಹುಟ್ಟಿ ಸತ್ತರೆ ಏನು ಫಲ ? ಶ್ರಮದ ಗರ್ಭದಲ್ಲಿಯೇ ಸಂತೋಷದ ಸಂಜೀವಿನಿ ಹುದುಗಿದೆ. ನಂಬಿಕೆಯೇ ಎಲ್ಲ ಧೈರ್ಯ ಸಾಹಸಗಳಿಗೂ ಮೂಲಾಧಾರ. ನಂಬಿಕೆಯೇ ಶ್ರದ್ಧೆ ಮತ್ತು ವಿಜಯಗಳ ಮೂಲ ಆಧಾರವೂ ಆಗಿದೆ.

ಜ್ಞಾನವೇ ಶಕ್ತಿ, ಶಕ್ತಿಯೇ ಜೀವನ, ಅಜ್ಞಾನವೇ ದೌರ್ಬಲ್ಯ, ದೌರ್ಬಲ್ಯವೇ ಮರಣ. ಕುಡಿದ ನೀರು ಅಲುಗದ ಹಾಗೆ ಬದುಕಿ ಬಿಟ್ಟರೇನು ಪ್ರಯೋಜನ ? ಬದುಕಿನ ಕಷ್ಟ-ನಷ್ಟಗಳನ್ನು ಅರಿತುಕೊಳ್ಳುವುದು ಹೇಗೆ ? ಬರೀ ಶ್ರೀಮಂತಿಕೆಯಲ್ಲಿ ಯಾವ ಮಾನವೀಯತೆಯ ಸೋಂಕೂ ಇರಲಾರದು. ಅದಕ್ಕೇಯೇನೋ ನನ್ನ ಮನಸ್ಸು ಅಪ್ರತ್ಯಕ್ಷವಾಗಿ ಶ್ರೀಮಂತಿಕೆಯನ್ನು ದ್ವೇಷಿಸುತ್ತಿತ್ತು. ''ಮನುಷ್ಯ ಹೇಗೆ ಸಾಯುವನೆಂಬುದು ಮುಖ್ಯ ವಲ್ಲ !ಹೇಗೆಬದುಕುವನೆಂಬುದು ಮುಖ್ಯ.!'' ಸುಖ-ದುಃಖಗಳೆರಡು ಆಯಾ ಘಳಿಗೆಯನ್ನು ಅವಲಂಬಿಸಿವೆ. ಈ ರೀತಿ ವಿಚಾರ ಸುರುಳಿಗಳ ತಾಕಲಾಟ ನಡೆಸಿದ ನನ್ನ ಮನದಲ್ಲಿ, ನಾನು ಸಾರ್ಥಕತೆಯ ಪಥದಲ್ಲಿ ನಡೆಯ ಬೇಕೆಂಬ ಏಕದೃಷ್ಟಿ, ಸ್ಥಿರಚಿತ್ತ ಆತ್ಮವಿಶ್ವಾಸಗಳು ಮನೆ ಮಾಡಿದ ಹಾಗೆ ಆಯಿತು. ಅಂದಿನಿಂದ ತ್ಯಾಗ ಜೀವನ, ಯೋಗ ಜೀವನ, ಸಾಧು ಜೀವನ ನನ್ನನು ಆಕರ್ಷಿಸಿತು. ಆಧ್ಯಾತ್ಮಿಕ ಸಾಧನೆಗೂ, ಬ್ರಹ್ಮಚರ್ಯಪಾಲನೆಗೂ, ಆಹಾರ ನಿಯಂತ್ರಣ ಬಹಳ ಅವಶ್ಯಕ. ನಾನು ಇನ್ನು ಮೇಲೆ ಮಾಂಸಾಹಾರವನ್ನು ಸಂಪೂರ್ಣವಾಗಿ ಬಿಟ್ಟುಬಿಡಲು ನಿರ್ಧರಿಸಿದೆನು. ದೇವರ ಮೇಲೆ ಆಣೆಯಿಟ್ಟು ಶಪಥ ಮಾಡಿದೆನು. ಇನ್ನು ಮೇಲೆ ಮಾಂಸಾಹಾರ ಸೇವಿಸುವುದಿಲ್ಲವೆಂದು ! ಅದೇನೂ ಸಾಧಾರಣ ನಿರ್ಧಾರವಾಗಿರಲಿಲ್ಲ. ಆ ನಿರ್ಧಾರ ಬುದ್ಧನ ಪತ್ನಿ, ಪುತ್ರ, ರಾಜ್ಯ ಪರಿತ್ಯಾಗಕ್ಕಿಂತಲೂ ಕಡಿಮೆಯಾಗಿರಲಿಲ್ಲವೆಂಬುದು ಮಾಂಸಾಹಾರದ ರುಚಿಯರಿತ ನಾಲಿಗೆಗಳಿಗಲ್ಲದೆ, ಉಳಿ ದವರಿಗೆ ಗೊತ್ತಾಗುವುದಿಲ್ಲ. ನಾನು ಆಧ್ಯಾತ್ಮ ಸಾಹಿತ್ಯದೊಡನೆ ಹೋರಾಡಿ, ಅದರ ಅರ್ಥದೊಡನೆ ಗುದ್ದಾಡಿ, ತಪ್ಪೋ-ನೆಪ್ಪೋ, ಭಾವಗಳೊಡನೆ ಗರಡಿಯಾಡಿ, ಬುದ್ಧಿಗೆ ವ್ಯಾಯಾಮ ಒದಗಿಸಿ, ಭಾವಶಕ್ತಿಯನ್ನು ಉಜ್ಜಿ ಉಜ್ಜಿ ಉಜ್ವಲ ಮಾಡಿದಾಗ, ನನ್ನ ಪ್ರತಿಭೆಗೆ ಒಂದು ಕೆಚ್ಚು ಲಭಿಸಿ, ಆತ್ಮ ಪ್ರತ್ಯಯ ನಿಷ್ಠೆಗೆ ನಾಂದಿಯಾಯಿತು.

ಬೆಳಿಗ್ಗೆ ಸ್ನಾನ ಮಾಡಿದ ಮೇಲೆ ಎರಡು ಗಂಟೆಗಳ ಕಾಲ, ಸಾಯಂಕಾಲ ಎರಡು ಗಂಟೆಗಳ ಕಾಲ ನಾನು ಧ್ಯಾನಾಸಕ್ತನಾಗಿರುತ್ತಿದ್ದೆನು. ನಿರ್ಧಿಷ್ಟವಾದ ಕಾಲಕ್ಕೆ ಪ್ರಾಣಾಯಾಮ ಮುಗಿಸಿ ಮೇಲೇಳುತ್ತಿದ್ದೆನು.

ಕೋಣೆಯ ನಿಶ್ಶಬ್ದ ವಾತಾವರಣದಲ್ಲಿ ನಾನು ತನ್ನನ್ನೇ ಮರೆಯುತ್ತಿದ್ದೆನು. ಆ ಸಮಯದಲ್ಲಿ ಸುತ್ತ ಮುತ್ತಲಾಗುತ್ತಿದ್ದ ಸದ್ದು, ನನಗೆ ಕೇಳಿಸುತ್ತಿರಲಿಲ್ಲ. ಸ್ವಾರ್ಥ, ಆಸೆ, ಆಕಾಂಕ್ಷೆಗಳನ್ನೆಲ್ಲಾ ನಾನು ಧ್ವಂಸ ಮಾಡಿ, ಹೊಸ ಹೊಸ ಭಾವನೆಗಳನ್ನು ಹೀರಿ, ಆಧ್ಯಾತ್ಮಿಕ ವಿಷಯಗಳನ್ನು ಸಂಗ್ರಹಿಸಿ, ಸತ್ಯ-ಸಾಕ್ಷಾತ್ಕಾರವನ್ನೇ ನನ್ನ ಗುರುಯಾಗಿಟ್ಟುಕೊಂಡು ನಿರಂತರ ಹೋರಾಟ ನಡೆಸಿದನು. ಆದರೂ ಎಷ್ಟೋ ಸಾರಿ ಹಳೆಯ ರಾಗ-ದ್ವೇಷಗಳಿಂದ ಆ ಪ್ರಯತ್ನ ವಿಫಲವಾಗುತ್ತಿತ್ತು. ಆದರೂ, ನಾನು ಎದೆಗುಂದದೆ ಸಾಧನೆಯಲ್ಲಿ ತೊಡಗಿದ್ದೆನು. ರಾತ್ರಿಯ ಗಂಭೀರ ಧ್ಯಾನ ಮಯ ಜಗತ್ತಿನಲ್ಲಿ ನನ್ನ ಮನಸ್ಸು ಇದ್ದಕ್ಕಿದ್ದಂತೆ ಪ್ರಶಾಂತವಾಗುತ್ತಿತ್ತು. ನನಗೆ ಯಾವುದೋ ಒಂದು ಅನಿರ್ವಚನೀಯ ಅನುಭವ ಉಂಟಾಗಿ ಸಂಸಾರವೆಂಬ ಕಹಿಯನ್ನು ತಿರಸ್ಕರಿಸಿ ಜ್ಞಾನನೆಂಬ ಸಿಹಿಯನ್ನು ತೆಗೆದುಕೊಂಡು ವಿವೇಕ-ವೈರಾಗ್ಯಗಳನ್ನು ಸಾಧಿಸ ತೊಡಗಿದೆನು. ಈ ಮಾಯಾ ಜಗತ್ತಿನ ಹಿಂದಿರುವ ಜಗತ್ತಿನ ಆನಂದ ಸ್ವರೂಪವನ್ನು ಮುಟ್ಟುವುದೇ ನನ್ನ ಗುರಿಯಾಗಿತ್ತು. ಅಜ್ಞಾನ ಅಳಿಯದೇ, ಆ ಆಂತರಿಕ ತತ್ವದ ಪರಿಚಯವಾಗದು. ನನ್ನ ಹೋರಾಟಕ್ಕೆ ಅಂತ್ಯವಿರದು. ನಿಯಮಿತ, ನಿರಂತರ ಪ್ರಯತ್ನದಿಂದ ನಾನು ನನ್ನಲ್ಲೇ ನನ್ನನ್ನು ಕಂಡು, ನಾನೇ ನಾನಾಗಿ ನಾನು 'ನಾನು' ಅನ್ನು ಭೇದಿಸಿ ನೋಡಿದಾಗ, ಅದರ ಹಿನ್ನೆಲೆಯಲ್ಲಿರುವ ಗೂಢತತ್ವ ಮತ್ತು ಶಕ್ತಿಯ ಪರಿಚಯ ನನಗೆ ಆಗತೊಡಗಿತು.

ನನ್ನ ವಿಚಾರ, ಯುಕ್ತಿ, ಅನುಭವಗಳಿಂದ ನನ್ನ ನೈಜಸ್ವರೂಪವನ್ನು ತಿಳಿಯಲು ಯತ್ನಿಸಿದಾಗ, ನಾನು ನನ್ನಲ್ಲೇ ಮುಳುಗಿದ್ದೆನು. ಆಗ ಇಲ್ಲಿಯವರೆಗೆ ನನ್ನ ಅರಿವಿಗೆ ಬಾರದ, ಆದರೆ ನನ್ನಲ್ಲೇ ಆಗಲೇ ಇದ್ದ ಶಕ್ತಿಯ ನೆಲೆಯನ್ನು ತಿಳಿದಾಗ, ನಾನು ನನ್ನ ಪರಿಮಿತಿಗಳಿಂದ, ರಾಗ-ದ್ವೇಷಗಳಿಂದ ಪಾರಾಗಿ ಸ್ವತಂತ್ರ ಪ್ರಾಜ್ಞನಾಗ ತೊಡಗಿದೆ. ಆಗ ನನ್ನ ನಡೆ, ನುಡಿ, ಆಚಾರ, ವ್ಯವಹಾರಗಳಲ್ಲಿ ಆಶ್ಚರ್ಯಕರ ಬದಲಾವಣೆ ಪ್ರಾರಂಭವಾಯಿತು. ನನ್ನ ಹೃದಯಲ್ಲಿ ಏನೋ ಒಂದು ಮಹಾಪರಿವರ್ತನೆ ಆಗುತ್ತಿತ್ತು. ಉಲ್ಲಾಸದ ಬುಗ್ಗೆ ಒಮ್ಮೊಮ್ಮೆ ಕಣ್ಣು ಬಿಡುತ್ತಿತ್ತು. ನನ್ನ ಮನಸ್ಸಿನ ಮೊಗ್ಗು ತನ್ನ ಬುದ್ಧಿಯ ಬಾಗಿಲ ತೆರೆದು ಮೆಲ್ಲಮೆಲ್ಲನೆ ಅರಳಿತು. ಈ ಸೃಷ್ಟಿ, ಜಗತ್ತು, ಜೀವ, ಹುಟ್ಟು, ಸಾವು, ಪಾಪ, ಪುಣ್ಯ, ದೇವರು, ಸ್ವರ್ಗ, ನರಕ ಇತ್ಯಾದಿ ವಿಷಯಗಳಲ್ಲಿ ನನ್ನ ಚೇತನ ತಡಕಾಡತೊಡಗಿತು. ನನ್ನ ಚಿಂತನ ಪ್ರಂಪಚದಲ್ಲಿ ನಡೆಯುತ್ತಿದ್ದ, ಆಲೋಚನೆಗಳು ಮತ್ತು ಭಾವನೆಗಳು ಮಂಥನ ಸ್ವರೂಪವಾಗಿ ನಡೆಯುತ್ತಿದ್ದವು.

ಅಂತಿಮ ಎಂ.ಬಿ.ಬಿ.ಎಸ್. ಮುಗಿಸಿ ಹೌಸ್ ಸರ್ಜನ್ ಪೋಸ್ಟಿಂಗ್ ನೋಡಿಕೊಂಡು ತನ್ನ ಊರಿಗೆ ಹೋಗಿದ್ದ ಡಾ॥ಲೀಲಾ ಮರು ದಿನ ಮನೆಯ ಮುಂಭಾಗಕ್ಕೆ ಬಂದು ನಿಂತಳು. ಸಹ್ಯಾದ್ರಿಯ ಭವ್ಯ ಏಕಾಂತದಲ್ಲಿ ಮಲೆನಾಡಿನ ಎಲ್ಲಾ ಹಳ್ಳಿಗಳಂತೆ, ಅದು ಒಂದೇ ಮನೆಯ ಹಳ್ಳಿ. ಹಿಂದಿನ ದಿನ ಸಾಯಂಕಾಲ ಮಳೆ ಸುರಿದಿದ್ದರಿಂದ, ವಾಯುಮಂಡಲ ನಿರ್ಮಲವಾಗಿತ್ತು. ದೂರ ದೂರವಾಗಿದ್ದ ತುಂಡು ಮೋಡಗಳನ್ನು ಬಿಟ್ಟರೆ ಆಕಾಶ ಸ್ವಚ್ಛವಾಗಿತ್ತು. ಮಳೆಯಲ್ಲಿ ಮಿಂದ ಮರಗಿಡ ಬಳ್ಳಿಗಳ ಹಸುರೆಲೆಗಳು ಮತ್ತಷ್ಟು ಹಸುರೇರಿ ಕಾಡುಗಳೆಲ್ಲ ಕಳಕಳಸಿ ನಗುವಂತಿದ್ದವು. ಆ ದಿನದ ಬೆಳಗಿನ ಬೆಚ್ಚನೆಯ ಮಲೆನಾಡಿನ ಹೊಂಬಿಸಲಲ್ಲಿ, ಹಚ್ಚನೆಯ ಹಸುರಿನ ಮೇಲೆ ಮೂಡಿ ನಿಂತ ಮಳೆ ಹನಿಗಳು ನೂರು, ಸಾವಿರ, ಕೋಟಿ, ಕೋಟಿ ಸಂಖ್ಯೆಯಲ್ಲಿ ಬಣ್ಣಬಣ್ಣದ ಸಣ್ಣ ಸಣ್ಣ ರನ್ನ ಸೊಡರುಗಳಂತೆ ಕಿಡಿ ಕಿಡಿಯಾಗಿ, ಉರಿ ಉರಿಯಾಗಿ, ಮಿಣಿಕಿ ಮಿಣಿಕಿ ಮಿರುಗುತ್ತಿದ್ದವು.

ಮನೆಯ ಮುಂದಿನ ಉದ್ಯಾನವನದ ಅರೆಅರಳಿದ ಹೂಗಳಿಗೆ ಆ ಹೊಂಬಿಸಿಲು ಅನುಪಮ ಮೆರಗನ್ನು ಉಡುಗೊರೆ ಕೊಟ್ಟು ಅದು ತಪೋವನದಂತೆ ಶೋಭಿಸುತ್ತಿತ್ತು. ವಿಶಾಲವಾದ ಕಾಂಪೌಂಡಿನ ನಡುವೆಯಿದ್ದ ಭವ್ಯವಾದ ಬಂಗಲೆಯ ಸುತ್ತಲೂ ಬಗೆಬಗೆಯ ಬಣ್ಣದ ಪುಷ್ಪಗಳು ಗಾಳಿಯಲ್ಲಿ ತಲೆದೂಗಿ ನರ್ತಿಸುತ್ತ ಮನೆಗೆ

ಅಲಂಕಾರಪ್ರಾಯವಾಗಿ ಕಂಗೊಳಿಸುತ್ತಿದ್ದವು. ಮನೆಯ ಮುಂಭಾಗದಲ್ಲೊಂದು ನೀರಿನ ಪುಟ್ಟಚಿಲುಮೆ. ಆ ಚಿಲುಮೆಯ ನಡುವೆ ರಾಧಾಕೃಷ್ಣರ ಬಿಳಿಯ ಶಿಲೆಯ ವಿಗ್ರಹವೊಂದು ಶೋಭಿಸುತ್ತಿತ್ತು. ವನದೇವಿಯ ಹೃದಯ ವೀಣೆಯ ತಂತಿಗಳನ್ನು ಮಿಡಿಯುವಂತೆ, ಕೋಗಿಲೆಗಳು, ಕಾಜಾಣಗಳು, ಕಾಮಳ್ಳಿಗಳು ಆಗ ಆಲಾಪನೆ ಮಾಡುತ್ತಿದ್ದವು. ತೊಯ್ದ ನೆಲದ ತಂಪು, ಮಿಂದ ಹಸುರಿನ ತಂಪು, ಮೃದುಗಾಳಿಯ ತಂಪುಗಳಿಂದ ಜಗವೆಲ್ಲ ತಂಪಾಗಿತ್ತು. ಜೀವಿಸುವುದಕ್ಕಿಂತಲೂ ಹೆಚ್ಚಾದ ಜೀವನದ ಗುರಿ ಮತ್ತೊಂದಿಲ್ಲ ಎಂಬಂತೆ ಡಾ॥ಲೀಲಾಳಿಗೆ ಭಾಸವಾಗುತ್ತಿತ್ತು.

ಡಾ॥ಲೀಲಾ ತನ್ನ ಪ್ರೀತಿಯ ಗುಲಾಬಿಗಿಡದ ಮುಂದೆ ಬಂದು ನಿಂತಾಗ ಹೂವಿನ ಒಡವೆಗಳನ್ನು ಪಡೆದಿದ್ದ ಆ ಗಿಡವನ್ನೇ ಏಕೋ ದಿಟ್ಟಿಸಿ ನೋಡುತ್ತಿದ್ದಳು. ಬಳ್ಳಿಯ ಸಾರ್ಥಕತೆ ಹೂವಿಗೆ ಜನ್ಮ ಕೊಡುವುದರಲ್ಲಿ, ಹೂವಿನ ಸಾರ್ಥಕತೆ ಹಣ್ಣಿನಲ್ಲಿ, ಹಣ್ಣಿನ ಮುಕ್ತಿ ದೇವರು ಮಾನವರಿಗೆ ಅರ್ಪಿತವಾದಾಗ ಎಂಬ ಸಿದ್ಧಾಂತ ಅವಳ ಮನಸ್ಸಿನಲ್ಲಿ ಮೂಡಿ ನಿಂತಿತು. ಹಾಗಾದರೆ ಹೆಣ್ಣಿನ ಸಾರ್ಥಕತೆ ಗಂಡಿಗೆ ಅರ್ಪಿತವಾಗಿ ಮಕ್ಕಳನ್ನು ಹಡೆಯುವುದರಲ್ಲಿ ಮುಕ್ತಾಯವಾಗುವುದೇ? ಎಂಬ ಪ್ರಶ್ನೆ ಅವಳಿಗೆ ಹೊಳೆಯಿತು. ಹಿಂದೆಯೇ ಮತ್ತೊಂದು ಸವಾಲಿನಪ್ರಶ್ನೆ ಉದಯಿಸಿತು. ಹೆಣ್ಣಾದ ಅವಳ ಸಾರ್ಥಕತೆ ಯಾವುದರಲ್ಲಿದೆ?ಎಂಬುದು. ಅವಳು ಸರಸ್ವತಿಯ ಮುಕ್ತಹಸ್ತದಿಂದ ಸಂಗೀತವಿದ್ಯೆಯ ಆಶೀರ್ವಾದ ಪಡೆದು, ಸಿರಿಯ ಸಮುದ್ರದಲ್ಲಿ ಹೊರಳಾಡಿ ಎದ್ದು ಬಂದ ಶ್ರೀಲಕ್ಷ್ಮೀಯಂತೆ, ಸೌಂದರ್ಯದ ಅರಮನೆಯಲ್ಲಿ ಶೃಂಗರಿಸಲ್ಪಟ್ಟ ರೂಪಿನ ಅಧಿದೇವತೆಯಂತೆ ತಾಯಿತಂದೆಯರ ಮುದ್ದಿನ ಮಗಳಾಗಿ, ಅವರಿವರ ಅರಗಿಳಿಯಾಗಿ ಬೆಳೆದಿದ್ದಳು.

ಅಂದು ಗುಲಾಬಿ ಪೊದೆಯ ಬಳಿಯಲ್ಲಿ ನಿಂತಿದ್ದ ಡಾ॥ಲೀಲಾಳ ಮನಸ್ಸಿನಲ್ಲಿ ನನ್ನ ವಿಚಾರ ಸುಳಿದು, ಅವಳ ಕೆನ್ನೆಗೆ ರಕ್ತವೇರಿ ಮುಖ ಕೆಂಪಾಯಿತು. ಪೂರ್ವಸ್ಮೃತಿ ಎಚ್ಚೆತ್ತು, ಇಷ್ಟು ದಿನವೂ ಸುಪ್ತವಾಗಿದ್ದ ಪರಿಚಯದ ಇತಿಹಾಸವೆಲ್ಲ ಸ್ಮತಿಪಟಲದಲ್ಲಿ ಹಾದು ನನ್ನ ವಿಚಾರವಾಗಿ ಅನೇಕ ಭಾವಗಳು, ಅನುಭಾವಗಳು ದೃಶ್ಯಗಳು ಅವಳ ಚಿತ್ತಭಿತ್ತಿಯಲ್ಲಿ ಚಿತ್ರಿತವಾದಾಗ, ಅವಳು ಬಾಹ್ಯ ಪ್ರಜ್ಞಾಶೂನ್ಯಳಾಗಿ ನೆನಪಿನ ನಂದನವನದಲ್ಲಿ ಅಪ್ಸರೆಯಾಗಿ ಸಂಚರಿಸತೊಡಗಿದ್ದಳು.

ಮೂರನೆ ವರ್ಷದಲ್ಲಿಯೇ ಡಾ॥ಲೀಲಾಗೆ ನನ್ನ ಪೂರ್ಣ ಪರಿಚಯವಾದದ್ದು.ಮೂರು ವರ್ಷಗಳಿಂದಲೂ ಎಲ್ಲರಿಗೂ ಪರಿಚಯವಿದ್ದ ನಾನು ಯಾರನ್ನೂ ಅತಿಯಾಗಿ ಹಚ್ಚಿಕೊಳ್ಳುವವನಲ್ಲ ಅನ್ನಿಸುತ್ತಿತ್ತು. ಮಾತು ಬಹಳ ಮೃದು, ಗದ್ದಲವಿಲ್ಲದ ನಗೆ, ಎಂತಹ ಉದ್ವೇಗಗೊಳ್ಳಬಹುದಾದ ಸಂದರ್ಭಗಳಲ್ಲೂ ಒಂದಿಷ್ಟೂ ದುಡುಕದೆ ನ್ಯಾಯವಾಗಿ, ನೇರವಾಗಿ, ಸ್ಪಷ್ಟವಾಗಿ ಮಾತನಾಡುವ ಒಂದು ವಾಚನ ಕಲೆ ನನಗೆ ಹೃದ್ಗತವಾಗಿತ್ತು. ಇದು ಡಾ॥ಲೀಲಾಳಿಗೆ ಮೆಚ್ಚುಗೆಯಾಗಿತ್ತು. ನನ್ನನೊಡನೆ ಒಂದಿಷ್ಟು ಹೆಚ್ಚು ಮಾತನಾಡಲು ಆಶಿಸುತ್ತಿದ್ದಳು. ಅದಕ್ಕೆ ಅವಕಾಶವೇ ಸಿಗುತ್ತಿರಲಿಲ್ಲ. ಕಾಲೇಜು ಮುಗಿದೊಡನೆ ನಾನು ನನ್ನ ಹಾಸ್ಟೆಲ್‌ಗೆ ಹೊರಟು ಹೋಗುತ್ತಿದ್ದೆ. ಅವಳು ತನ್ನ ಹಾಸ್ಟೆಲ್‌ಗೆ ಹೋಗುತ್ತಿದ್ದಳು.

ಕೊನೆಯ ವರ್ಷ ನನ್ನನೊಡನೆ ಮಾತನಾಡಬಹುದಾದ ಒಂದು ಸಂದರ್ಭವೂ ಸಿಕ್ಕಿತ್ತು. ಅಂದು 'ಕ್ಲಾಸ್ ಸೋಶಿಯಲ್ ಡೇ' ಡಾ॥ಲೀಲಾ ನಾನು ಒಂದೇ ಟೇಬಲಿನಲ್ಲಿ ಸೇರಿದ್ದೆವು. ಅದು ಆಕಸ್ಮಿಕವೇ ಎನ್ನಬೇಕು. ಅಂದು ಸಾಂಪ್ರದಾಯಿಕವಾಗಿ 'ಹಲೋ' ಎಂದೆ ನಾನು. ಅವಳಿಗೆ ಮೈ ರೋಮಾಂಚನವಾಯಿತು. ಅದಕ್ಕೆ ಕಾರಣ ಮೂರುವರ್ಷಗಳಿಂದ ನನ್ನ ಪ್ರಶಾಂತ ಮುಖ ಪ್ರತಿದಿನವೂ ನೋಡುತ್ತಿದ್ದರೂ ವೈಯಕ್ತಿಕವಾಗಿ ಮಾತನಾಡಲೂ ಸಾಧ್ಯವಾಗಿರಲಿಲ್ಲ. 'ಏಕೋ' ನನ್ನ ಸಾನ್ನಿಧ್ಯ ಬೇಕೆನಿಸಿತು. ಪಕ್ಕದ ಕುರ್ಚಿಯಲ್ಲಿ ಕೂರುತ್ತಾ

ಮೃದು ನಗೆ ಚೆಲ್ಲಿ, 'ಹಲೋ'ಎಂದಳು. ಆಗ ಅವಳನ್ನೇ ನೋಡುತ್ತಿದ್ದ ನನ್ನ ಕಣ್ಣಿಗೆ ಕಣ್ಣಿಟ್ಟು ನೋಡಿದಳು. ನಮ್ಮ ಬ್ಬರ ಕಣ್ಣಗಳೂ ಸಂಧಿಸಿದೊಡನೆಯೇ, ಆ ಒಂದು ಕ್ಷಣದಲ್ಲಿ ಒಂದು ಅತೀಂದ್ರಿಯ ವ್ಯಾಪಾರ ನಡೆಯಿತು. ಆ ಒಂದು ಕ್ಷಣ ಮಾತ್ರಕ್ಕೆ, ಈ ಜನ್ಮದ ಮಾಯಾತೆರೆ ಎದ್ದು ಬಿದ್ದಂತಾಗಿ ನನ್ನಲ್ಲಿ ಅವಳ ಹಿಂದಿನ ಜನ್ಮದ ಗಂಡನನ್ನು ಕಂಡಳು ! ಆ ಅನುಭವ ನೆನಪಿನ ರೂಪದ್ದಾಗಿಯೂ ಇರಲಿಲ್ಲ. ಅದೊಂದು ಕಾಣುವಿಕೆಯಾಗಿತ್ತು. ಆ ಒಂದು ಕ್ಷಣ ಅಂತರ್ದರ್ಶನದಲ್ಲಿ ಅವಳು ನಾನು ಹಿಂದಿನ ಜನ್ಮದಲ್ಲಿ ರಾಜದಂಪತಿಗಳಾಗಿದ್ದುದನ್ನು 'ಆಗಿ' ಅನುಭವಿಸಿ ಕಂಡಳು !

ಒಂದು ಕ್ಷಣದಲ್ಲಿ ಹಿಂದಿನಜನ್ಮದ ಯಾವಚಿತ್ರವೊ, ಸಂದರ್ಭವೊ, ಸನ್ನಿವೇಶವೊ, ಘಟನೆಯೊ, ಸ್ಮೃತಿಯೊ ಮಿಂಚಿಣಿಕಿ ವಿಸ್ಮೃತಿಯ ಕಗ್ಗತ್ತಲೆಯ ಪಾತಾಳ ಪ್ರವೇಶ ಮಾಡಿದಂತಾಗಿತ್ತು. ಆಗ ಡಾ॥ಲೀಲಾಳಿಗೆ ನಾನು ಒಂದು ಅಲಭ್ಯವೂ, ಅಪೂರ್ವವೂ ಆದ ಅನರ್ಘ್ಯವಸ್ತುವಾಗಿ ಕಂಡೆನು. ಆ ವೇಳೆಯಲ್ಲಿ ನಾನು ಮಂದ ಸ್ಮಿತ ವದನದಿಂದ ಸುತ್ತಲೂ ನೋಡತೊಡಗಿದ್ದೆ, ಇನ್ನು ಅವಳಾಗಿ ಮಾತಾಡಿಸದಿದ್ದರೆ, ನಾನು ಮಾತನಾಡುವವ ನಲ್ಲವೆಂದು ಡಾ॥ಲೀಲಾಳಿಗೆ ತಿಳಿಯಿತು. ಒಂದು ವಾಸ್ತವದ ಪ್ರಶ್ನೆ ಹಾಕಿದಳು.

" ನಿಮ್ಮ ಊರು ಯಾವುದು ? "

" ಚನ್ನಪಟ್ಟಣ "

" ಓಹೋ ಮಕ್ಕಳ ಬಣ್ಣದ ಬೊಂಬೆಗೆ ಪ್ರಸಿದ್ಧವಾದ ಊರು " ಅವಳೆಂದಳು.

" ಬರೀ ಮಕ್ಕಳ ಬೊಂಬೆ ಯಾಕೆ, ದೊಡ್ಡವರ ಬೊಂಬೆ ಸಹಾ ಸಿಕ್ಕುತ್ತೆ " ಎಂದಾಗ, ಇಬ್ಬರು ಮುಸಿಮುಸಿ ನಕ್ಕವು.

ಮುಂದೆ ಆಕೆಯ ಬಗ್ಗೆ ಏನನ್ನಾದರೂ ಕೇಳದಿರುವುದು ಅಲೌಕಿಕವೆನಿಸಿ ಸ್ವಲ್ಪ ಹೊತ್ತು ಬಿಟ್ಟು ಕೇಳಿದೆ.

" ನಿಮ್ಮ ಊರು ? "

ಡಾ॥ಲೀಲಾಳ ಮನ ಹಿಗ್ಗಿತು. "ನನ್ನದು ಶೃಂಗೇರಿ. ನಮ್ಮ ಎಸ್ಟೇಟುಗಳು ಮಲೆನಾಡಿನ ಅನೇಕ ಭಾಗ ಗಳಲ್ಲಿವೆ. ತಲಕಾವೇರಿಗೆ ಹೋಗುವ ರಸ್ತೆಯಲ್ಲಿರುವ ಜೇನುಗೂಡು ಎಸ್ಟೇಟೇ ದೊಡ್ಡದು. ಉಳಿದವುಗಳು ಚಿಕ್ಕಮಗಳೂರಿನಲ್ಲಿವೆ."

"ಓಹೋ ಹಾಗಾದರೆ ಅಪ್ಪಟ ಜೇನುತುಪ್ಪಕ್ಕೆ ಪ್ರಸಿದ್ಧಿ ಪಡೆದಿರುವ ಎಸ್ಟೇಟ್" ನಾನು ತಲೆ ಯಾಲ್ಲಾಡಿ ಸಿದೆ.

"ಬರೀ ಅಪ್ಪಟ ಜೇನೇ ಯಾಕೆ ಆರೆಂಜುಗಳು, ಇನ್ನೂ ಏನೇನೊ ಅಪ್ಪಟಾನೇ ಸಿಕ್ಕುತ್ತೆ" ನಾನು ಹೇಳಿದ ಧಾಟಿಯಲ್ಲೇ ಡಾ॥ಲೀಲಾ ಹೇಳಿದಳು. ಅಷ್ಟರಲ್ಲೇ ತಿಂಡಿ ಮುಗಿದುದರಿಂದ ಕಾಫಿ ಹೀರುತ್ತಿದ್ದೆವು.

ಒಂದು ಘಳಿಗೆ, ನಾನು ಅವಳ ಮುಖ ನೋಡಿ " ನಮ್ಮ ಹತ್ತಿರದ ಸಂಬಂಧಿಕರ ಮಗನಿಗೆ ಅಲ್ಲೇ ಹೆಣ್ಣು ತಂದಿದ್ದಾರೆ. ನಾನು ಮದುವೆಗೆ ಬಂದು ಆ ಊರುಗಳನ್ನು ನೋಡಿದ್ದೆ " ಎಂದೆ. " ಯಾವ ಊರೋ ? " ಡಾ॥ಲೀಲಾ ವಿಚಾರಿಸಿದಳು. ನಾನು ಒಂದು ಘಳಿಗೆ ಹುಬ್ಬುಗಂಟಿಕ್ಕಿ ಜ್ಞಾಪಿಸಿಕೊಂಡು "ಭಾಗಮಂಡಲವೋ, ಉದಕಮಂಡಲವೋ ಇರಬೇಕು ನನಗೆ ಅಷ್ಟಾಗಿ ನೆನಪಿಲ್ಲ" ಎಂದೆ. ಅವಳಿಗೆ ಹರುಷವಾಯಿತು, ಪ್ರಸನ್ನಳಾಗಿ

ಅಂದಳು. ಉದಕಮಂಡಲ ಅಲ್ಲ, ಭಾಗಮಂಡಲ ಇರಬೇಕು. ನಮ್ಮ ಎಸ್ಟೇಟನಿಂದ ಏಳು ಮೈಲಿದೂರದಲ್ಲಿದೆ. ನಮ್ಮ ತಂದೆ ಅಲ್ಲಿರುವ ಜೇನುಗೂಡು ಎಸ್ಟೇಟಿಗೆ ಆಗಾಗ ಹೋಗಿ ಬರುತ್ತಾರೆ.

" ನಿಮ್ಮ ತಂದೆ ?"

"ಚೀಫ್ ಇಂಜಿನಿಯರ್ ಆಗಿದ್ದರು. ನಿವೃತ್ತರಾದ ಮೇಲೆ, ನಮ್ಮ ತಂದೆಯವರೇ ಐದು ಎಸ್ಟೇಟ್ ಗಳನ್ನು ನೋಡಿಕೊಳ್ಳುತ್ತಾರೆ. ಬೇರೆ ಯಾರೂ ಇಲ್ಲ. ನಮ್ಮ ತಂದೆಗೆ ನಾನೊಬ್ಬಳೇ ಮಗಳು" ಅವಳಾಗಿಯೇ ಉತ್ತರವಿತ್ತಳು. ಪಾಪ ಎನ್ನುವಂತಿತ್ತು ನನ್ನ ನೋಟ. ಮತ್ತೆ ಅವಳೇ ಮಾತನಾಡಬೇಕಾಯಿತು.

" ನಿಮ್ಮ ತಂದೆತಾಯಿ ಎಲ್ಲಾ ?"

" ಹಳ್ಳಿಯಲ್ಲಿ ವ್ಯವಸಾಯ ಮಾಡಿಕೊಂಡಿದ್ದಾರೆ."

ಆಸೆಯನ್ನು ಮನದಲ್ಲಿಟ್ಟು ಕೇಳಿದಳು ಡಾ॥ಲೀಲಾ " ಮತ್ತೆ ನಿಮ್ಮ ಸಂಬಂಧಿಕರು ಯಾರದಾದರೂ ಮದುವೆಗೆ ಆ ಕಡೆ ಬಂದರೆ, ನೀವು ನಮ್ಮ ಎಸ್ಟೇಟ್ ನೋಡಬೇಕು. ನಂದನವನ ಇದ್ದ ಹಾಗೆ ಇದೆ" ಎಂದು ಎಲ್ಲರೂ ಹೇಳುತ್ತಾರೆ. ಉತ್ತರವಾಗಿ, ನಾನು ಕಿರುನಗೆ ನಕ್ಕ.

ಸುತ್ತಲೂ ಅಸಾಧ್ಯ ಕೋಲಾಹಲ, ನಗೆಹುಯಿಲು, ಅಟ್ಟಹಾಸ ಯಾರ ಯಾರ ಜೊತೆಗೊ ಯಾರು ಯಾರೋ ಸೇರಿಕೊಂಡು ಹರಟೆ ಹೊಡೆಯುತ್ತಿದ್ದರು. ನಾನು ಡಾ॥ಲೀಲಾ ಮತ್ತೆ ಮೆಡಿಕಲ್ ವಿಷಯ, ಅದು ಇದು ಒಂದಿಷ್ಟು ಮಾತಾನಾಡಿದವು. ಈ ಚೆಲುವಿನ ಹೆಣ್ಣು ತೀರಾ ಸಮೀಪ ಕುಳಿತಿದ್ದರಿಂದಲೋ ಏನೋ ನನಗೆ ಒಂದಿಷ್ಟು ಮಾತಾನಾಡೋಣ ಅನ್ನಿಸಿರಬಹುದು. ಕೆಲವು ಹುಡುಗಿಯರು ಸ್ಟೇಜ್ ಮೇಲೆ ಹೋಗಿ ಹಾಡಿ ಬರುತ್ತಿದ್ದರು. ಡಾ॥ಲೀಲಾ ಕೂಡ ಸುಮಧುರವಾಗಿ ಒಂದು ಹಾಡು ಹಾಡಿ ಬಂದಳು.

ನಾನು ಮೆಚ್ಚಿಗೆ ಸೂಸಿ ಅಭಿನಂದಿಸಿದೆ. ಸಮಾರಂಭದ ಕೊನೆಯಲ್ಲಿ ಒಬ್ಬೊಬ್ಬರಾಗಿ ಹೊರಡ ತೊಡಗಿದರು. ಡಾ॥ಲೀಲಾ ಹೊರ ಬಂದಾಗ, ನನ್ನ ಮುಖನೋಡಿ, "ಬರ್ತೇನೆ, ಗುಡ್ ನೈಟ್" ಎಂದಳು. ನಾನು " ಥ್ಯಾಂಕ್ಯು ಗುಡ್‌ನೈಟ್ " ಎಂದೆ ಹಿತವಾಗಿ. ಈ ರೀತಿ ಡಾ॥ಲೀಲಾ ತನ್ನ ಭಾವನಾ ಲೋಕದಲ್ಲಿ ವಿಹರಿಸುತ್ತಿರುವಾಗಲೇ ಅವಳ ತಾಯಿಯ ಕರೆ ಅವಳನ್ನು ಎಚ್ಚರಿಸಿತು.

# 3. ಎಮರ್ಜೆನ್ಸಿಯಲ್ಲಿ ಅರ್ಜನ್ಸಿ – ಹೌಸ್ ಸರ್ಜನ್ಸಿ

ಹೊತ್ತು ಗೊತ್ತಿಲ್ಲದೆ ದಿನದ 24 ಗಂಟೆಗಳು ತುರ್ತುಚಿಕಿತ್ಸೆಗೆ ಬರುವ ಅಪಘಾತ, ಅನಾಹುತ, ಆತ್ಮಹತ್ಯೆ, ಮಾನಸಿಕ ಆಘಾತ ಹಾಗೂ ಅನೇಕ ರೀತಿಯ ದೈಹಿಕ ಕಾಯಿಲೆಗಳ ಜೊತೆಗೆ, ಇನ್ನೂ ವಿವಿಧ ರೀತಿಯ ಚಿತ್ರವಿಚಿತ್ರ ರೀತಿಯ ಕೇಸುಗಳನ್ನು ತಕ್ಷಣವೇ ಅಟೆಂಡ್ ಮಾಡಲು ಆಸ್ಪತ್ರೆಯ ಹೊರರೋಗಿಗಳಿಗೆ ಸದಾ ಸಿದ್ಧವಾಗಿರುವ ವಿಭಾಗವೇ ಕ್ಯಾಷುಯಾಲಿಟಿ ವಾರ್ಡ್. ಚಿಕಿತ್ಸೆ ನೀಡುವ ವಿಭಾಗವೇ ಎಮರ್ಜೆನ್ಸಿ ವಾರ್ಡ್.

ವಿಕ್ಟೋರಿಯಾ ಆಸ್ಪತ್ರೆಯ ಎಮರ್ಜೆನ್ಸಿವಾರ್ಡ್ ಸುಮಾರು ಐವತ್ತು ಬೆಡ್‌ಗಳಿರುವ ಮೂರು ಹಾಲ್ ಗಳಿಂದ ಕೂಡಿತ್ತು. ನಾಲ್ಕುಬೆಡ್‌ಗಳನ್ನು ಬಿಟ್ಟರೆ ಉಳಿದೆಲ್ಲವುಗಳಲ್ಲಿ ರೋಗಿಗಳಿದ್ದರು. ಎಲ್ಲಾ ಸೀರಿ ಯಸ್ ಕೇಸು ಗಳ ತವರು ಮನೆಯಾದುದರಿಂದ, ಈ ವಾರ್ಡ್ ಬೇರೆ ವಾರ್ಡ್‌ಗಳಿಗಿಂತ ಭಿನ್ನವಾಗಿತ್ತು. ಕೆಲವರು ಮಂಚದ ಸುತ್ತ ಕಳವಳ ನಿರಾಶೆ, ದು:ಖದಿಂದ ಕೂಡಿದ ಜನ, ಪೋಲೀಸ್ ಪೇದೆಗಳ ಓಡಾಟ, ಅಲ್ಲಿಂದಿಲ್ಲಿಗೆ ಇಲ್ಲಿಂದಲ್ಲಿಗೆ ಸರಸರನೆ ಓಡಾಡುತ್ತಿರುವ ಡಾಕ್ಟರುಗಳು, ನರ್ಸ್‌ಗಳು, ರೋಗಿಗಳ ಚೀರಾಟ, ನರಳಾಟ ಹೇಳತೀರದು.

ವಿಕ್ಟೋರಿಯಾ ಆಸ್ಪತ್ರೆಯ ಮುಂಭಾಗದಲ್ಲೇ ಇದ್ದ ಕೃಷ್ಣರಾಜೇಂದ್ರ ಮಾರ್ಕೆಟ್‌ನ ಗಿಜಿಗಿಜಿ, ಗಡಿ ಬಿಡಿಯನ್ನೇ ಈ ಎಮರ್ಜೆನ್ಸಿ ವಾರ್ಡ್ ಎಲ್ಲಾ ವಿಧದಲ್ಲಿಯೂ ಹೋಲುತ್ತಿತ್ತು. ಬೆಂಗಳೂರಿನ ಸಂತೆಪೇಟೆ ಯಾಗಿದ್ದ ಈ ಮಾರ್ಕೆಟ್ ದಿನಸಿ ಅಂಗಡಿಗಳು ಮತ್ತು ಮಂಡಿಗಳ ತವರುಮನೆಯಾಗಿತ್ತು. ಬೆಳಗಾಯಿತೆಂದರೆ ನಾನಾ ಧಾನ್ಯದಿನಸಿ, ತರಕಾರಿ, ಹಣ್ಣುಹಂಪಲು, ಹೂವುಗಳಿಂದ ತುಂಬಿದ ಗಾಡಿಗಳು ಬರ ತೊಡಗಿ ಕಿಕ್ಕಿರಿಯು ತ್ತಿದ್ದವು. ಇಲ್ಲಿ ವಿವಿಧ ವಿನೋದಾವಳಿಯ ಶಬ್ದ, ಗಾಡಿಯ ಸದ್ದು, ಘಂಟೆಯ ಸದ್ದು ಬೈಸಿಕಲ್‌ಗಳ ಟ್ರಿನ್ ಟ್ರಿನ್, ಕಾರುಗಳ ಪೋಪ್ಂ ಪೋಪ್ಂ, ಜಟಕಾಗಾಡಿಯವರ ಹೈ ಹೈ ಸದ್ದು, ಆಟೋದವರ ಡುರು ಡುರು ಸದ್ದು, ಕಾಗೆಗಳ ಕಾದಾಟದ ಕಾಕಾ ಸದ್ದು ಬೀದಿ ನಾಯಿಗಳ ಕಚ್ಚಾಟದ ಸದ್ದು, ಕೂಲಿಗಾರರ ಕೂಗು, ಗಾಡಿ ಹೊಡೆಯು ವವರ ಕಾಕು, ಗಿರಾಕಿಗಳ ಚೌಕಾಸಿಯ ಮಾತುಗಳ ಹೋರಾಟದ ಸದ್ದುಗಳಿಂದ ಕೂಡಿ ಮಾರ್ಕೆಟ್‌ನ ದಿನ ನಿತ್ಯದ ವ್ಯಾಪಾರ - ವ್ಯವಹಾರಗಳು ಒಂದು ತರದ ಸದ್ದಿನ ಸಂತೆಯಾಗಿತ್ತು.

ಎಮರ್ಜೆನ್ಸಿ ವಾರ್ಡಿನ ಸೀನಿಯರ್ ಡಾಕ್ಟರ್, ಡಾ॥ಶ್ರೀದೇವಿ ಡೈಯೇರಿಯ ಕೇಸಿಗೆ ಗ್ಲೂಕೋಸ್ ಡ್ರಿಪ್‌ಸ್ಟಾರ್ಟ್ ಮಾಡುತ್ತಿದ್ದಳು. ಸ್ಟ್ರೆಚರ್ ಮೇಲೆ ವಾರ್ಡ್‌ಬಾಯ್‌ಗಳು ಮತ್ತಿಬ್ಬರು ರೋಗಿಗಳನ್ನು ಕರೆ ತಂದರು. ಅಕ್ಕಪಕ್ಕದ ಬೆಡ್‌ಗಳಲ್ಲೇ ಹಾಕಿದರು.

ಜೊತೆಯಲ್ಲೇ ಬಂದ ಲೇಡಿ ಹೌಸ್ ಸರ್ಜನ್ ಡಾ॥ಲೀಲಾ ಸಿಸ್ಟರ್‌ಗೆ ಏನೋ ಹೇಳಿದಳು. ಟಪಟಪ ಹೆಜ್ಜೆ ಹಾಕುತ್ತಾ ಸಿಸ್ಟರ್ ಪಕ್ಕದ ರೂಮಿಗೆ ಹೋದಳು. ಗಡಗಡ ಶಬ್ದ ಮಾಡುತ್ತಾ ಆಕ್ಸಿಜನ್ ಗಾಡಿ ಬಂತು. ಕೇಸುಗಳು ಸೀರಿಯಸ್ ಸಂಬಂಧಿಕರು ಬಂದು ಸೇರಿದರು. ಅಳು ಪ್ರಾರಂಭವಾಯಿತು.

"ಸಾವು ಯಾರಿಗೂ ತಪ್ಪಿದ್ದಲ್ಲ, ಆದರೆ, ಈ ವಯಸ್ಸಿನಲ್ಲಿ ಹೀಗಾಗಬಾರದಿತ್ತು. ಪ್ರಯತ್ನ ನಮ್ಮದು ಆಯುಷ್ಯ ಕೊಡುವುದು ದೇವರದು" ಎಂದು ಅವರನ್ನು ಸಂತೈಸುವ ಧ್ವನಿಯಲ್ಲಿ ಡಾ॥ಶ್ರೀದೇವಿ ಹೇಳಿ ತನ್ನ ಟೇಬಲ್ ಬಳಿ ಹೋದರು.

"ಇಲ್ಲಿ ನೋಡಿ ಇದು ಆಸ್ಪತ್ರೆ, ಇಲ್ಲಿ ಗಲಾಟೆ ಮಾಡಬಾರದು, ನೀವು ಹೊರಗೆ ಹೋಗಬಹುದು" ಎಂದು ಹೇಳಿ ಸಿಸ್ಟರ್ ಅವರನ್ನೆಲ್ಲಾ ಹೊರಗೆ ಕಳುಹಿಸುತ್ತಿದ್ದಳು.

ಈ ಮಧ್ಯೆ ಕೈಯಲ್ಲಿ ಸ್ಟೆತೋಸ್ಕೋಪ್ ಹಿಡಿದು, ನಾನು ಡಾ॥ಶ್ರೀದೇವಿಯ ಮುಂದೆ ನಿಂತು "ಡಾಕ್ಟರ್, ನನ್ನನ್ನು ಈ ವಾರ್ಡಿಗೆ ಹದಿನೈದು ದಿನಗಳವರೆಗೆ ಪೋಸ್ಟಿಂಗ್ ಮಾಡಿದ್ದಾರೆ" ಎಂದು ರಿಪೋರ್ಟ್ ಮಾಡಿ ಕೊಂಡೆ. ಆಕೆ ತಲೆ ಎತ್ತಿ ಎದುರುನಿಂತ ನನ್ನನ್ನೇ ನೋಡಿದಳು. ನನ್ನ ದಪ್ಪನಾದ ಹುಬ್ಬುಗಳನ್ನೂ, ಎಡಗಡೆಗೆ ಬೈತಲೆ ತೆಗೆದು, ಇಡೀ ದಟ್ಟ ಕೂದಲನ್ನು ಹಣೆಯ ಮೇಲೆ ಬಿಟ್ಟುಕೊಂಡ ವೈಖರಿಯನ್ನು ಮೆಚ್ಚುತ್ತಾ ಅವಳು ಎದ್ದು ನಿಂತಳು. ನನ್ನನು ಕಂಡಾಗ, ಅವಳ ಹೃದಯ ಏಕೋ ಬಡಿದುಕೊಳ್ಳತೊಡಗಿತು.

ಪ್ರತಿ15 ದಿನಗಳಿಗೆ ಒಂದು ಬಾರಿ ಹೊಸ ಹೌಸ್ ಸರ್ಜನ್‌ಗಳು ಬರುತ್ತಾರೆ. ರೂಪ, ಯೌವನ, ಸೌಂದರ್ಯವೆಂದರೆ ಎಲ್ಲವೂ ಚೆಂದ ಎಂದು ಅವಳ ನಂಬಿಕೆ. ಹೊಸ ಹೌಸ್ ಸರ್ಜನ್‌ಗಳ ಹತ್ತಿರವೇ ನಿಂತು ಚೆಲ್ಲುಚೆಲ್ಲಾಗಿ ಮಾತನಾಡುವುದೆಂದರೆ ಡಾ॥ಶ್ರೀದೇವಿಗೆ ಬಲು ಇಷ್ಟ. ನನ್ನ ರೂಪು, ಲಾವಣ್ಯ, ವರ್ಚಸ್ಸು, ಠೀವಿಯನ್ನು ನೋಡಿ ನನ್ನಲ್ಲಿ ಏನಾದರೂ ಮಾತನಾಡಿ ಸ್ವಲ್ಪ ರೇಗಿಸಬೇಕೆಂದುಕೊಂಡು ಗಾಂಭೀರ್ಯದಿಂದ "ವೆಲ್ ಕಮ್ ಟು ಯು ಡಾಕ್ಟರ್, ವಾಟ್ ಈಸ್ ಯುವರ್ ನೇಮ್ ?" ಎಂದು ನನ್ನನು ಡಾ॥ಶ್ರೀದೇವಿ ಸ್ವಾಗತಿಸುವ ರೀತಿಯಲ್ಲಿ ಮಾತನಾಡಿಸಿದಳು.

ಅದಕ್ಕೆ ನಾನು "ನನ್ನ ಹೆಸರು ಡಾ॥ರಾಮುಸ್ವಾಮಿ" ಎಂದು ಚಿಗುರು ಮೀಸೆಗಳಡಿಯಿಂದಲೇ ಕಿರುನಗೆ ಬೀರಿ ಅವಳ ಸ್ವಾಗತವನ್ನು ಸ್ವೀಕರಿಸಿದೆ. ಡಾ॥ಶ್ರೀದೇವಿ ನನ್ನನು ಕೂಲಂಕುಷವಾಗಿ ಪರೀಕ್ಷಿಸುತ್ತಿದ್ದಂತೆ, ನಾನು ಸಹ ಅವಳನ್ನು ಅಡಿಯಿಂದ ಮುಡಿಯವರೆಗೆ ದಿಟ್ಟಿಸಿದೆ . ಅವಳು ಉಟ್ಟಿದ್ದ ಒಪ್ಪವಾದ ನೂಲಿನ ಸೀರೆ, ಗಾಂಭೀರ್ಯವನ್ನು ತುಂಬುತ್ತಿದ್ದ ಕನ್ನಡಕ ಹಾಗೂ ಕೊಂಡೆಯನ್ನು ಕಂಡು, ನನ್ನ ತುಟಿಗಳ ಮೇಲೆ ನಸುನಗೆ ಹಾದುಹೋಯಿತು.

"ನೀವು ರ‍್ಯಾಂಕ್ ಸ್ಟೂಡೆಂಟೇನು ?" ಡಾ॥ಶ್ರೀದೇವಿ ಕೇಳಿದಳು. ಆ ಪ್ರಶ್ನೆ ಕುಹಕ ಗರ್ಭಿತವಾಗಿ ಕೆಣಕುವ ಧ್ವನಿಯಿಂದ ಕೂಡಿತ್ತು. ಅವಳ ಪ್ರಶ್ನೆಯ ಹಿಂದಿನ ವ್ಯಂಗ್ಯವನ್ನು ಗಮನಿಸಿದ ನಾನು ಆಕೆಯನ್ನು ಸ್ವಲ್ಪ ತರಾಟೆಗೆ ತೆಗೆದುಕೊಳ್ಳಬೇಕೆಂದು ಮನದಲ್ಲಿ ನಿರ್ಧರಿಸಿ, ಪ್ರಶ್ನೆಗೆ ನೇರವಾಗಿ ಉತ್ತರಿಸಿದೆ "ತಾವು ರ‍್ಯಾಂಕ್ ಸ್ಟೂಡೆಂಟೇನು ?" ಎಂದು ಮರು ಪ್ರಶ್ನೆ ಹಾಕಿದೆ.

"ಹೌದು ನಾನು ಕಾಲೇಜು ಕೆರೀರ್‌ನಲ್ಲೇ ರ‍್ಯಾಂಕ್" ಹೆಮ್ಮೆಯಿಂದಲೇ ಹೇಳಿದಳು ಡಾ॥ಶ್ರೀದೇವಿ. "ಅದನ್ನು ಹೇಳಿ ಕೊಳ್ಳುವುದಕ್ಕೆ ನನಗೆ ಈ ಪ್ರಶ್ನೆ ಹಾಕಿದ್ದೀರಿ ಅಂತ ಕಾಣುತ್ತೆ." ನನ್ನ ಧ್ವನಿಯಲ್ಲಿ ವ್ಯಂಗ್ಯವು ಬೆರೆತಿತ್ತು. ನನ್ನ ಈ ಅನಿರೀಕ್ಷಿತ ಕೀಟಲೆಯಿಂದ ಡಾ॥ಶ್ರೀದೇವಿ ಅವಾಕ್ಕಾಗಿ ನನ್ನನ್ನೇ ನೋಡುತ್ತ ನಿಂತುಬಿಟ್ಟಳು.

"ನೀವು ಓದಿನಲ್ಲಿ ಮಾತ್ರ ರ‍್ಯಾಂಕೋ ಅಥವಾ ಜೀವನದಲ್ಲೂ ರ‍್ಯಾಂಕೋ ?" ಎಂದು ನಸುನಗುತ್ತ ನಾನು ಮತ್ತೊಮ್ಮೆ ಶ್ರೀದೇವಿಯನ್ನು ಕೆಣಕಿದೆ. ಈ ಅನಿರೀಕ್ಷಿತ ಪ್ರಶ್ನೆಯಿಂದ ತಬ್ಬಿಬ್ಬಾದ ಡಾ॥ಶ್ರೀದೇವಿ "ಏನು ನಿಮ್ಮ ಮಾತಿನ ಅರ್ಥ ? ನಾನು ರ‍್ಯಾಂಕ್ ಸ್ಟೂಡೆಂಟ್ ಆದರೂ, ನನ್ನ ಸಾಮರ್ಥ್ಯದ ಬಗ್ಗೆ ಸಂಶಯ ಪಡುತ್ತಿದ್ದೀರಿ." ಎಂದು ಬಿಗುಮಾನದಿಂದ ನುಡಿದಳು.

ಸ್ವಲ್ಪ ಹೊತ್ತು ಸುಮ್ಮನಿದ್ದು ನಾನು ಹೇಳಿದೆ. ರ‍್ಯಾಂಕ್ ಜೀವನ ಸಾಗಿಸುವುದಕ್ಕೆ ಅವಶ್ಯಕವಲ್ಲ ಮೇಡಂ. ಅದರಿಂದ ಸ್ವಲ್ಪ ಸಹಾಯವಾಗ ಬಹುದಷ್ಟೆ. (Rank is an advantage but not a necessity).

"ನಿಮ್ಮ ಅರ್ಥದಲ್ಲಿ ರ್‍ಯಾಂಕ್‌ಗೆ ಬೆಲೆಯೇ ಇದ್ದ ಹಾಗೆ ಕಾಣುವುದಿಲ್ಲ" ಬಿರುಸಿನಿಂದ ಬೇಸರಗೊಂಡಂತೆ ಡಾ॥ಶ್ರೀದೇವಿ ನುಡಿದಳು.

ಆಗ ನಾನು ನಿರ್ಧಾರದ ನುಡಿಯಲ್ಲಿ "ಉತ್ತಮ ಜೀವನ ನಡೆಸಲು ರ್‍ಯಾಂಕ್ ತೆಗೆದುಕೊಳ್ಳಬೇಕೆಂದೇನಿಲ್ಲ." ಹಾಗೆ ನೋಡಿದರೆ ಫಸ್ಟ್ ಕ್ಲಾಸ್ ಅಥವಾ ರ್‍ಯಾಂಕ್ ಪಡೆದ ಅನೇಕರು ಜೀವನದಲ್ಲಿ ತಕ್ಕ ಕೆಲಸವೋ, ಪ್ರಮೋಷನ್ನೋ ಸಿಕ್ಕದೆ ಆತ್ಮಹತ್ಯೆ ಮಾಡಿಕೊಂಡ ಪ್ರಸಂಗಗಳು ದಿನ ನಿತ್ಯ ಪತ್ರಿಕೆಗಳಲ್ಲಿ ಬರುವ ಹಾಗೆ ಬಹಳ ಉಂಟು. ಸಾಮಾನ್ಯ ದರ್ಜೆಯಲ್ಲಿ ಉತ್ತೀರ್ಣರಾದ ಅನೇಕ ವ್ಯಕ್ತಿಗಳು ಜೀವನದ ನಿಜರೂಪವನ್ನು ತಿಳಿದುಕೊಂಡು ಉತ್ತಮ ಜೀವನವನ್ನು ನಡೆಸುತ್ತಿದ್ದಾರೆ. ಸುಖವಾಗಿ ಬಾಳುತ್ತಿದ್ದಾರೆ.

"ನಿಮಗೆ ವಿದ್ಯಾಭ್ಯಾಸದ ರ್‍ಯಾಂಕ್ ಸಾಕೋ ? ನಿಜ ಜೀವನದಲ್ಲಿ ಉತ್ತಮವಾಗಿ ಸುಖಸಂತೋಷವಾಗಿ ಬಾಳಬೇಕೋ ?" ತುಂಟ ನಗೆಯೊಂದಿಗೆ ಸವಾಲು ಹಾಕಿ ಹೇಳಿದೆ.

"ಹೌದು, ಈ ಸಮಾಜದಲ್ಲಿ ನನ್ನನ್ನು ಮದುವೆಯಾಗಲು ನನಗೆ ತಕ್ಕವರು ಮುಂದೆ ಬಂದ್ದಿದ್ದರೆ ನಾನು ಸಂಸಾರ ಮಾಡಿಕೊಂಡು ಸುಖ ಸಂತೋಷದಿಂದಲೇ ಇರುತ್ತಿದ್ದೆ." ನಿರ್ಧಾರ ತುಂಬಿದ ಧ್ವನಿಯಲ್ಲೇ ಮರು ಸವಾಲು ಹಾಕಿ ಹೇಳಿದಳು.

"ಏನು !ರ್‍ಯಾಂಕ್ ತೆಗೆದುಕೊಂಡ ನಿಮ್ಮನ್ನೇ ಮದುವೆಯಾಗಲು ಯಾರೂ ಮುಂದೆ ಬರಲಿಲ್ಲವೇ ?" ನಾನು ಛೇಡಿಸಿದೆ.

"ಬಂದಿದ್ದರೆ ಒಂಟಿ ಜೀವನದ ನಂಟಿರುತ್ತಿರಲಿಲ್ಲ" ಒಂಟಿ ಬಾಳು ಬೇಸರವಾಗಿ ಜಂಟಿ ಬಾಳಿಗಾಗಿ ಹಾತೊರೆಯುತ್ತಿದ್ದ ಡಾ॥ಶ್ರೀದೇವಿ ನಿರಾಶೆಯಿಂದ ನುಡಿದಳು.

"ಹಾಗಾದರೆ ನಿಮಗೆ ಜೀವನದ ಕೆರಿಯರ್, ರ್‍ಯಾಂಕ್‌ಗಿಂತ ಮುಖ್ಯ ಎನ್ನುವುದು ಅನುಭವವಾಗಿದೆ " ಎಂದು ನಾನು ಮತ್ತೆ ಛೇಡಿಸಿದೆ. "ನಾನು ಹಾಗೆ ಪ್ರಶ್ನೆ ಕೇಳಬಾರದಿತ್ತು. ಅದನ್ನು ಹಿಂತೆಗೆದುಕೊಳ್ಳುತ್ತೇನೆ. ಅಂದ ಹಾಗೇ ನೀವು ಚೆನ್ನಾಗಿ ವಿಚಾರ ಮಾಡುತ್ತೀರಿ". ಮುಂದೆ ವಾದಿಸಲು ಇಷ್ಟಪಡದೆ ನನ್ನ ವಾದಕ್ಕೆ ಸೋತವಳಂತೆ ನನ್ನನ್ನು ಪ್ರಶಂಸಿಸಿ ಹೇಳಿದಳು.

ಆ ವೇಳೆಗೆ ಹಿಂದಿನ ಬೆಡ್‌ನ ರೋಗಿ ನರಳುತ್ತಿರುವುದನ್ನು ನೋಡಲು ನಾನು ಆ ಕಡೆ ತಿರುಗಿ ನೋಡಿದೆ. ನಮ್ಮ ಸಂಭಾಷಣೆಯನ್ನು ಕೇಳುತ್ತಿದ್ದ ಲೇಡಿ ಹೌಸ್ ಸರ್ಜನ್ ಡಾ॥ಲೀಲಾ ನನ್ನ ಮತ್ತು ಡಾ॥ಶ್ರೀದೇವಿಯತ್ತ ಮುಗುಳ್ನಕ್ಕು, "ವೆರಿ ಇಂಟರೆಸ್ಟಿಂಗ್ ಟಾಕ್ " ಎಂದು ಪ್ರಶಂಸನೀಯ ದೃಷ್ಟಿಯಿಂದ ವೀಕ್ಷಿಸಿ ಮೆಚ್ಚುಗೆ ಸೂಚಿಸಿದಳು.

ಎಮರ್ಜೆನ್ಸಿ ವಾರ್ಡ್‌ನಲ್ಲಿ ಎಲ್ಲಾ ಎಮರ್ಜೆನ್ಸಿಯೆಂಬಂತೆ ಡಾ॥ಲೀಲಾಳ ಪ್ರೀತಿಗೆ ಈಗ ಎಮರ್ಜೆನ್ಸಿ ವಾರ್ಡ್‌ನಲ್ಲಿ ಅರ್ಜನ್ಸಿ ಉಂಟಾಯಿತು.

ಡಾ॥ಲೀಲಾ ಸರ್ಜಿಕಲ್ ಫಸ್ಟ್‌ಯೂನಿಟ್‌ನ ಹೌಸ್‌ಸರ್ಜನ್. ಆಗ ತಾನೇ ಬಂದ ಮುದುಕನಿಗೆ ಡ್ರೆಸ್ ಮಾಡಿ ತನ್ನ ಬಾಸ್ ಡಾ॥ರಾವ್‌ರವರ ಸಲಹೆಗೆ ಕಾಯುತ್ತಿದ್ದಳು. ಫುಟ್‌ಪಾತ್ ಮೇಲೆ ಮೊಮ್ಮಗನ ಕೈ ಹಿಡಿದು ಹೋಗುತ್ತಿದ್ದ ಮುದುಕನಿಗೆ ಬಿ. ಟಿ. ಎಸ್. ಬಸ್ ಬ್ರೇಕ್ ಫೇಲ್ ಆಗಿ ಬಡಿಯಿತಂತೆ. ಮುದುಕನಿಗೆ ಸುಮಾರು 80 ವರ್ಷ. ತಲೆಗೆ ಪೆಟ್ಟು ಬಿದ್ದಿದೆ. ಆತನನ್ನು ನೋಡಿ ನಾನು ಅನುಕಂಪದಿಂದ ಹೇಳಿದ " ಆರು ತಿಂಗಳಲ್ಲಿ ಸಾಯುವ ಮುದುಕನಿಗೆ ಬಸ್ ಆಕ್ಸಿಡೆಂಟ್ ಆಗಬೇಕೆ ?" ನನ್ನನೊಡನೆ ಮಾತನಾಡಲು ಕಾಯುತ್ತಿದ್ದಳೇನೋ

ಎಂಬಂತೆ ಮೊಮ್ಮಗನ ಬೆಡ್‌ನತ್ತ ಡಾ||ಲೀಲಾ ಕೈ ತೋರಿ "ಈ ಆರು ವರ್ಷದ ಹುಡುಗನಿಗೆ ಕೈಕಾಲು ಪುಡಿ ಪುಡಿ ಯಾಗಿರುವುದನ್ನು ನೋಡಿದರೆ, ದೇವರಿಗೆ ದಯೆಯಿಲ್ಲವೆಂದು ಕಾಣುತ್ತದೆ" ಎಂದು ತನ್ನ ಪ್ರತಿಕ್ರಿಯೆ ವ್ಯಕ್ತಪಡಿಸಿದಳು. ಡಾ||ಶ್ರೀದೇವಿ ನನಗೆ ನಾನು ಮಾಡಬೇಕಾಗಿರುವ ಕೆಲಸದ ಬಗ್ಗೆ ಮಾಹಿತಿ ನೀಡಿ, ತನ್ನ ಕೆಲಸದಲ್ಲಿ ಮಗ್ನಳಾದಳು.

ಅಂದು ರಾತ್ರಿ ನನಗೆ ನಿದ್ರೆ ಹತ್ತಲಿಲ್ಲ. ಆದರ್ಶಲೋಕದ ಸಂಚಾರಿಯಾಗಿದ್ದ ನಾನು ವಾಸ್ತವ ಪ್ರಪಂಚ ಪ್ರವಾಸಿಯಾಗಿ ವಿಚಾರ ಮಾಡಿ ನೋಡತೊಡಗಿದೆ. ಎಮರ್ಜೆನ್ಸಿ ವಾರ್ಡ್‌ನ ದೃಶ್ಯಗಳು ಕಣ್ಣಿಗೆ ಕಟ್ಟಿ ನಿಂತವು. ಜೀವನದ ವಿವಿಧ ದುರಂತ ಮುಖಗಳ ನಿಜವಾದ ಅನುಭವ ನನ್ನ ಹೃದಯ ದಾಳವನ್ನು ಕೆದಕಿದವು. ಸಾವಿನ ದವಡೆಯಲ್ಲಿ ನರಳುತ್ತಿರುವ ಅನೇಕ ರೋಗಿಗಳು ಈ ವಾರ್ಡಿನಿಂದಲೇ ತಮ್ಮ ಪರಲೋಕದ ಯಾತ್ರೆಯನ್ನು ಪ್ರಾರಂಭಿಸುತ್ತಿದ್ದರು. ಎಂಥ ವಿಚಿತ್ರ ಕೇಸುಗಳು, ಏನು ವಿಚಿತ್ರ ಜನ, ಎಂಥ ಗೋಳಾಟ ನರಳಾಟ, ಚೀರಾಟಗಳು ಮನುಷ್ಯನನ್ನು ಜೀವನದಲ್ಲಿ ಕಾಡುತ್ತವೆ ಎಂದೆನಿಸಿತು ನನಗೆ. ಅನೇಕ ಕಾರಣಗಳಿಗೆ ಆತ್ಮಹತ್ಯೆ ಪ್ರಯತ್ನ, ವಿವಿಧ ರೀತಿಯ ಅಪಘಾತಗಳು, ಚಿತ್ರ ವಿಚಿತ್ರ ರೋಗಗಳು, ದುರಂತ ಘಟನೆಗಳು, ಕೊಲೆಕೇಸುಗಳು, ಮಾನಸಿಕ ಆಘಾತಗಳು, ಭೀಕರ ಭೀಬತ್ಸದ ದೃಶ್ಯಗಳು ಮೈನಡುಗುವಂತಹ ಮತ್ತು ವಾಕರಿಕೆ ತರುವಂತಹ ಜಿಗುಪ್ಸೆಯ ನೋಟಗಳು ಈ ವಾರ್ಡ್‌ನಲ್ಲಿ ಕಣ್ಣಿಗೆ ಬೀಳುತ್ತಿದ್ದವು.

ವಾರ್ಡಿನ ಕಕ್ಕಸ್ಸುಗಳು ಡಾಂಟೆಯ ನರಕವನ್ನು ನಾಚಿಸುವಂತಿತ್ತು. ಮೂಗು ಮುಚ್ಚಿ ಕೊಂಡೆ ಅದನ್ನು ಸಮೀಪಿಸಬೇಕಾಗಿತ್ತು. ಕೆಲವರು ಅದರ ನಾತವನ್ನು ಎದುರಿಸಲು ಸಿಗರೇಟು ಹೊತ್ತಿಸಿ ಕೊಂಡು ಹೋಗು ತ್ತಿದ್ದರು. ಆದರೆ ಅವರೂ ಮೂಗು ಮುಚ್ಚಿಕೊಳ್ಳದೆ ಇರುವುದು ಅಸಾಧ್ಯವಾಗುತ್ತಿತ್ತು. ಕೆಲವರು ದುರ್ವಾಸನೆಯ ಆ ಕಕ್ಕಸ್ಸುಗಳಿಗೆ ದಿನವೂ ಹೋಗಿ ಬರುವ ಭಯಂಕರತೆಯಿಂದ ತಪ್ಪಿಸಿ ಕೊಳ್ಳಲು ಮಲಬದ್ಧತೆಯಂತಹ ರೋಗವನ್ನು ರಕ್ಷಣೆಗೆ ಕರೆದು ಆಶ್ರಯಿಸುತ್ತಿದ್ದರು.

ಈ ಜನರಿಗೆ ಎಮರ್ಜೆನ್ಸಿ ವಾರ್ಡ್ ದೇವಮಂದಿರವಾಗಿಯೋ, ನರಕವಾಗಿಯೋ ಪರಣಮಿಸುತ್ತಿತ್ತು. ಕೆಲವರ ಪಾಲಿಗೆ ಡಾಕ್ಟರುಗಳು ನರ್ಸ್‌ಗಳು ಯಮಕಿಂಕರರು. ಕೆಲವರಿಗೆ ದೇವರ ಪ್ರತಿಬಿಂಬ.

ಈ ವಾರ್ಡ್‌ನ ಅನುಭವದಿಂದ ನನಗೆ ಜೀವನ ಎಷ್ಟೋ ವೇಳೆ ಕಹಿಯಾಗಿರುತ್ತದೆ ಎನ್ನಿಸಿತು. ಬದುಕಿನ ಕೃಷ್ಣಪಕ್ಷದ ಪರಿಚಯದ ಅವಶ್ಯಕತೆಯನ್ನರಿತು ವಿಧಿ ನನಗೆ ಈ ಅನುಭವಗಳನ್ನು ದಯಪಾಲಿಸಿತೆಂದು ತೋರುತ್ತದೆ.

ಕೇವಲ ಕ್ಷಣಿಕವಾದ ಆನಂದಮಾತ್ರಕ್ಕಾಗಿ, ಜೀವನದಲ್ಲಿ ಸಾವಿರಾರು ಕಾಮ-ಪ್ರೇಮ ಪ್ರಕರಣಗಳು, ಆತ್ಮಹತ್ಯೆಗಳು, ಗರ್ಭಪಾತಗಳು, ಹೃದಯ ವಿದ್ರಾವಕ ದೃಶ್ಯಗಳು ನಡೆದು ಹೋಗುತ್ತವೆ. ತಾನು ಸುಖವಾಗಿರ ಬೇಕೆಂಬುದೇ ಮಾನವನ ನಿಜ ಜೀವನದ ತತ್ವವಾಗಿದೆ. ತನ್ನ ಸುಖಕ್ಕಾಗಿ ಮನುಷ್ಯ ಮೃಗತ್ವವನ್ನು ತಲುಪಿ ದ್ದಾನೆ. ಬಯಕೆ, ಅತೃಪ್ತಿಗಳ ಉಯ್ಯಾಲೆಯಾಗಿದೆ ಬಾಳ್ವೆ. ಕೀರ್ತಿ, ಸುಖ, ಧನಗಳಿಗಾಗಿ ನಿರಂತರ ಹೋರಾಟ ಸಾಗಿದೆ. ಆತ್ಮ, ನೀತಿ, ನ್ಯಾಯ, ಧರ್ಮಗಳ ಗಂಟೆ ಹೊಡೆದು, ಸದಾ ಮಾನವನನ್ನು ಎಚ್ಚರಿಸುತ್ತಿದ್ದರೂ, ಮನುಷ್ಯ ಅನ್ಯಾಯ, ಅಧರ್ಮಗಳ, ಅನೀತಿಯ ಪಥದಲ್ಲೇ ಸಾಗುತ್ತಿರಲು ಕಾರಣವೇನು ?

ಮನಸ್ಸೇ ಮಾರ್ಗದರ್ಶಕವಲ್ಲವೇ ?ಎಲ್ಲಾ ಸುಖದು:ಖಗಳಿಗೂ ಮನಸ್ಸೇ ಕಾರಣವಲ್ಲವೇ ? ಇನ್ನೂ ಅನೇಕ ಪ್ರಶ್ನೆಗಳನ್ನು ನನ್ನ ಮನಸ್ಸು ಕೇಳುತ್ತಿತ್ತು. ಆ ರಾತ್ರಿ ಈ ವಿಚಾರ ನಡೆದೇ ಇತ್ತು.

# 4. ಪ್ರೀತಿಯ ಸೆಳೆತ – ಪ್ರೇಮದ ಮಿಡಿತ

ಅಂದು ಡಾ||ರಾವ್ ಯೂನಿಟ್‌ನವರ ಜೊತೆ ಎಮರ್ಜೆನ್ಸಿ ವಾರ್ಡ್‌ನ ಕೇಸುಗಳನ್ನು ನೋಡಲು ಬಂದರು. ಇಂಜೆಕ್ಷನ್ ಲೋಡ್ ಮಾಡಿ, ಪೇಶೆಂಟ್ ಬೇಡ್‌ನತ್ತ ಹೋಗುತ್ತಿದ್ದ ನನ್ನ ದೃಷ್ಟಿ ಅಕಸ್ಮಾತಾಗಿ ಡಾ||ಲೀಲಾ ಕಡೆ ತಿರುಗಿತು. ಆಗ ಅವಳು ನನ್ನನ್ನೇ ಕಲ್ಲಿನಂತೆ ನಿಂತು ನೋಡುತ್ತಿರುವುದು ಕಂಡಿತು. ನನ್ನ ಕಣ್ಣನ್ನಲ್ಲ! ಹೃದಯಾಂತರಾಳವನ್ನೇ!! ಜೀವವನ್ನೆ!!! "ಏನಿರಬಹುದು?" ಎಂದು ಮನಸ್ಸಿನಲ್ಲೇ ಲೆಕ್ಕ ಹಾಕಿದೆ. ಮತ್ತೊಮ್ಮೆ ತಲೆಯೆತ್ತಿ ನೋಡಿದೆ. ಡಾ||ಲೀಲಾ ಮೊಗದಲ್ಲಿ ಏನೊ ಹರ್ಷದ ಛಾಯೆ ಸುಳಿದಂತೆ ನನ್ನತ್ತ ಕಡೆದ ಶಿಲೆಯಂತೆ ನೋಡತೊಡಗಿದಳು. ಆಗ ನಾನು ಅವಳನ್ನು ಚೆನ್ನಾಗಿ ನೋಡಿದೆ. ಮದುವೆಯಾಗುವ ವಿಚಾರವೇ ನನ್ನ ಮನಸ್ಸಿನಲ್ಲಿ ಇಲ್ಲದಿದ್ದರೂ ಹೆಣ್ಣಿನ ಚೆಲುವನ್ನು ಯಾವ ದುರ್ಭಾವನೆಯೂ ಇಲ್ಲದ ಗಂಡಸು ನೋಡುವಂತೆ ನೋಡಿದೆ. ಅವಳು ಒಂದೇ ಸಮ ನನ್ನನ್ನು ನೋಡುತ್ತಿದ್ದ ರೀತಿ ನಾನು ಅವಳನ್ನು ನೋಡಲಿ ಎಂದೇ ಹಾಗೆ ಮಾಡುತ್ತಿದ್ದಾಳೆಂದು ಅನುಮಾನವಾಗಿ, ನನ್ನ ಹೃದಯ ತುಸು ಹಿಗ್ಗಿ ದಂತಾಯ್ತು!

ಬಾಹ್ಯ ಸೌಂದರ್ಯ ಎಲ್ಲರನ್ನೂ ಆಕರ್ಷಿಸುತ್ತದೆ. ಪ್ರಕೃತಿದತ್ತವಾಗಿ ಸ್ತ್ರೀ ಪುರುಷರನ್ನು ಆಕರ್ಷಿಸಿ ಅವರಲ್ಲಿ ಆತ್ಮವಿಶ್ವಾಸ, ಉತ್ಸಾಹ ಮತ್ತು ಮಾನಸಿಕ ಸಂತೋಷವನ್ನುಂಟು ಮಾಡುತ್ತಾಳೆ. ಡಾ||ಲೀಲಾಳಿಗೆ ನನ್ನನ್ನು ನೋಡುವ ನನ್ನನೊಡನೆ ಮಾತಾನಾಡುವ ಬಯಕೆ ಹೆಚ್ಚಾಗುತ್ತಿತ್ತು.

ನಾನು ಆಕೆಯನ್ನೊಮ್ಮೆ ನೋಡಿದೆನು. ಆಗ ನನ್ನ ಕಣ್ಣುಗಳು ಅವಳ ಕಣ್ಣುಗಳೊಳಗೆ ನಾಟಿದವು. ಆಗ ಅವಳ ಕಣ್ಣುಗಳೇನೋ ಮಾತನಾಡಿ ಹೃದಯವೇನೋ ಹೇಳಿದ ಅನುಭವ. ಕೆಲವು ಕ್ಷಣಗಳು ಅವಳ ಹೃದಯದಲ್ಲಿ ಏನೋ ಏಕೋ ಮುದ ಕೊಡುವ ಅನುಭವ. ಅನುಭವದ ಮಧುರ ತುಣುಕನ್ನು ಮತ್ತೆ ಮತ್ತೆ ಮೆಲುಕು ಹಾಕುವಂತಾಯಿತು. ಗೌರವವರ್ಣದ ಅವಳ ಆ ತುಂಬಿದ ಮೊಗದಲ್ಲಿ ಇರುವ ಮಮತೆ, ದೊಡ್ಡ ದೊಡ್ಡ ಆ ಸುಂದರ ಕಣ್ಣುಗಳಲ್ಲಿ ಇರುವ ಅಕ್ಕರೆ, ಎಂದೋ ಕಳೆದುಕೊಂಡಿದ್ದ ಪ್ರಿಯತಮನನ್ನು ಬರಸೆಳೆದು ಅಪ್ಪಿ ಕೊಳ್ಳುವಂತೆ ಅವಳು ಸೂಕ್ಷ್ಮವಾಗಿ ದಿಟ್ಟಿಸುತ್ತಿರುವುದನ್ನು ನೋಡಿ, ನನ್ನ ದೇಹವೆಲ್ಲ ಒಮ್ಮೆ ಪುಳಕಿತವಾದ ಹಾಗೆ ಆಯಿತು.

ಅಂದು ಸಂಜೆ ಹಾಸ್ಟೆಲ್‌ಗೆ ಬಂದಾಗ, ಡಾ||ಲೀಲಾ ರೂಂನಲ್ಲಿ ಹಾಸಿಗೆಯ ಮೇಲೆ ಒಂಟಿಯಾಗಿ ಕಣ್ಣುಮುಚ್ಚಿ ಮಲಗಿದ್ದಳು. ಬೆಳಿಗ್ಗೆ ನಡೆದುದರ ಬಗ್ಗೆ ಅವಳು ಯೋಚಿಸುವಂತೆ ಮನಸ್ಸು ಒತ್ತಾಯಿಸುತ್ತಿತ್ತು, ಅನ್ನುವುದಕ್ಕಿಂತ ಆ ಯೋಚನೆ ತಾನಾಗೇ ಬರುತ್ತಿತ್ತು. ಅದರಲ್ಲಿ ಏನೋ ಮಧುರವಾದ ಸೆಳತವಿದೆ, ಹೃದಯ ಮಾಧುರ್ಯವಿದೆ ಎನಿಸಿತು.

ಆ ವೇಳೆಯಲ್ಲಿ ನನ್ನ ನೆನಪಿನಿಂದಲೇ ಡಾ||ಲೀಲಾಳಲ್ಲಿ ಹಿಂದೆಂದೂ ಉದ್ರೇಕಗೊಳ್ಳದಿದ್ದ ಪ್ರೇಮ ಭಾವನೆಗಳು ಜಾಗೃತಗೊಂಡವು. ಅವಳ ಹೃದಯದ ಮೂಲೆಯಲ್ಲೆಲ್ಲೋ ಮಧುರ ತಂತಿ ಮೀಟಿದಂತಾಯಿತು. ಅವಳಿಗರಿವಿಲ್ಲದೆಯೇ ಏನೋ ಸಂತೃಪ್ತಿಯ ಭಾವನೆ ಉಕ್ಕಿ ಬಂದಿತು.

ಆಗ ಇದೇನಿದು? ನಾನೇಕಿಷ್ಟು ಭಾವುಕಳಾಗಿ ಭ್ರಮಿಸುತ್ತಿದ್ದೇನೆ? ಅಯ್ಯೋ! ನಾನು ಅವನ ಪ್ರೇಮದ ಮೋಡಿಗೆ ಸಿಲುಕಿ ಬಿದ್ದಿಲ್ಲವಷ್ಟೆ? ಎಂದು ತನ್ನಲ್ಲೇ ಅಂದುಕೊಂಡಳು.

ತನ್ನೀ ಕಲ್ಪನೆಗಳಿಗೆ ಅವನ ಒಂದೇ ಒಂದು ರಸಮಯನೋಟ ಕಾರಣವಾಗುವುದಾದರೆ, ತನ್ನ ಮನಸ್ಸು ಅಷ್ಟೊಂದು ಹಸಿದು ದುರ್ಬಲಗೊಂಡಿದೆಯೆ? ಎಂಬ ಯೋಚನೆ ಗೊಂದಲಕ್ಕೀಡು ಮಾಡಿಕೊಡು ವುದರ ಬದಲು ಅವಳನ್ನು ಗಂಭೀರಳನ್ನಾಗಿ ಮಾಡಿತು. ಇದು ದೌರ್ಬಲ್ಯವೆನ್ನುವುದಕ್ಕಿಂತ ತನ್ನಲ್ಲಿದ್ದ ಪ್ರಕೃತಿಯ ಸಹಜಾಕಾಂಕ್ಷೆಗಳಿಗೆ ಓಗೊಟ್ಟುದರ ಫಲವಾಗಿ ತನ್ನಲ್ಲಿ ಆತನ ಬಗ್ಗೆ ತನಗೆ ಅರಿಯದ ಮಧುರ ಭಾವನೆ ಯಾದುದು ತಪ್ಪಿಲ್ಲವೆನಿಸಿತು.

ಆ ಭಾವನೆಯನ್ನು ಹೇಗೆ ಹೆಸರಿಸುವುದು? ಸೆಳೆತವೇ? ಆಕರ್ಷಣೆಯೇ? ಎಂಬ ಚಿಂತನೆಗೆ ತೊಡಗಿ ದಳು. ಡಾ॥ಲೀಲಾಳ ಹೃದಯದಲ್ಲಿ ಎಲ್ಲೋ ಸುಪ್ತವಾಗಿ ಹೋಗಿದ್ದ ಆಸೆಗಳು ಗರಿಗೆದರಲು ತವಕಿಸುತ್ತಿದ್ದವು. ತನ್ನಲ್ಲಿದ್ದ ಬದಲಾವಣೆಗೆ ಅವನ ಆಕರ್ಷಣೆ ಕಾರಣವಾದರೆ ಅದರ ಅರ್ಥ ವೇನಿರಬಹುದು? ಹೃದಯ ಭಾಷೆಗೆ ಸಂಬಂಧಪಟ್ಟುದರ ಬಗ್ಗೆ ತರ್ಕದ, ಬುದ್ಧಿವಂತಿಕೆಯ ಸಂಗತಿಗಳು ನಿಜವಾಗಿಯೂ ಅರ್ಥವಿಲ್ಲದವುಗಳು. ಭಾವನೆಗಳು ಬೀರಿದವು. ಹೃದಯ ಸೋತಿತು! ಕಲ್ಪನೆಗಳು ಕುಣಿದವು.

ತನ್ನಲ್ಲಿ ಉಂಟಾಗುತ್ತಿರುವ ಭಾವನೆಗಳು ಸ್ಪಷ್ಟ ಸ್ವರೂಪವೇನು? ನನ್ನ ಮತ್ತು ಅವನ ಮಧ್ಯೆ ಇರುವ, ಇರಬಹುದಾದ ಸಂಬಂಧ ಸೂಕ್ಷ್ಮತೆಗಳು ಎಂತಹವು? ಈ ಸಂಕೋಲೆಯಲ್ಲಿ ತಾನು ಸೇರಬೇಕೊ, ಬಿಡಿಸಿ ಕೊಳ್ಳಬೇಕೋ ಎಂದು ಚಿಂತನ ನಡೆಸಿದಳು.

ದೈಹಿಕವಾಗಿಯಾಗಲಿ, ಬುದ್ಧಿವಂತಿಕೆಯಲ್ಲಾಗಲಿ, ವಿದ್ಯೆಯಲ್ಲಾಗಲಿ, ಚಾಣಾಕ್ಷತನದಲ್ಲಾಗಲಿ ತನಗೆ ಸರಿ ತೂಗುವ ಗಂಡು ನಾನು ಎಂದು ನಿರ್ಧರಿಸಿದಳು. ಅವಳ ಮನಸ್ಸು ತನ್ನ ಅಂತರ್ಮುಖ ಪ್ರಪಂಚದಲ್ಲಿ ಅಲೆಯ ತೊಡಗಿತ್ತು. ಆ ಆಲೋಚನೆಗಳಿಗೆ ಒಂದು ತರ್ಕವಾಗಲಿ, ಕ್ರಮವಾಗಲಿ ಸ್ಪಷ್ಟವಾಗಿರಲಿಲ್ಲ. ತನ್ನದೇ ಆದ ಯಾವುದೋ ಕ್ರಮದಲ್ಲಿ ನೀರಿನ ತಳದಿಂದ ಮೇಲುಮೈಗೆ ಗುಳ್ಳೆಗಳೇಳುವಂತೆ ಅವು ಎದ್ದೆದ್ದು ಒಡೆಯುತ್ತಿದ್ದವು.

ಆಗ ಡಾ॥ಶೀಲಳ ಹೃದಯ ಸಂತಸದಿಂದ ಅರಳಿತು. ಆ ಮೆಚ್ಚುಗೆಯ ದೃಷ್ಟಿಯನ್ನು ಬೀರಿದ ನನ್ನ ಮುಖವನ್ನು ಅವಳು ಮರೆಯುವುದುಂಟೇ? ಮುಂದೆ ಹೊರಟ ಡಾ॥ಲೀಲಾಳ ನಡಿಗೆಯನ್ನು ನನ್ನ ನೋಟ ಹಿಂಬಾಲಿಸಿತು.

ಸುಕುಮಾರಿಯರು ಸುಂದರವಾದ ನಡಿಗೆಯಿಂದ ಸುಲಕ್ಷಣವಾಗಿ ಕಾಣುವರು. ನಡಿಗೆಯು ಒಂದ ಕಲೆ. ಡಾ॥ಲೀಲಾ ಠೀವಿಯಿಂದ ನಾಜೂಕಾಗಿ ನಡೆಯುತ್ತಿದ್ದಳು. ಅವಳು ಕಾಲಿಟ್ಟ ಕಡೆ ಹೂವಿನ ನಡೆಮುಡಿ ಹಾಸು ವಷ್ಟು ಮಾಧುರ್ಯತೆ ಇತ್ತು. ಆ ನೋಟದಲ್ಲಿ ಅವಳ ಕೊರಳಿನ ಕೊಂಕು, ನಗೆಯ ಬಿಂಕ ನನಗೆ ಕಚಗುಳಿ ಇಡುವಂತಿತ್ತು.

ಅವನೆಂದುಕೊಂಡ ಓ ...ಅದೆಂಥ ಚೆಲುವೆ ಈ ಹೆಣ್ಣು...ತನ್ನ ಪ್ರಥಮ ನೆಟ್ಟ ನೋಟದಿಂದಲೇ ಮನಸ್ಸನ್ನು ಅಪಹರಿಸಬಲ್ಲ ಸಮ್ಮೋಹನ ಚೆಲುವಿನ ಕಣಿ...ಈ ಮೈಮಾಟ, ಕುಡಿನೋಟ, ಶೃಂಗಾರ, ಹಾವಭಾವ, ಅವಳ ಮೈ ಕಣಕಣಗಳಲ್ಲಿ ಪ್ರೇಮ ಉನ್ಮಾದವಾಗಿ ಹಬ್ಬಿನಿಂತಿದೆ. ಅವಳನ್ನು ಕೈ ಹಿಡಿದವನು ನಿಜಕ್ಕೂ ಭಾಗ್ಯಶಾಲಿ. ಬೇಕೆನಿಸಿದಾಗ ಸೂರೆಗೊಳ್ಳಲು ಎಂತಹ ಶೃಂಗಾರನಿಧಿ ಸಿಕ್ಕುತ್ತೆ.

ಮುಂದಿನ ಡ್ಯೂಟಿಡೇ ದಿನ ಡಾ॥ಲೀಲಾ ಎಮರ್ಜೆನ್ಸಿ ವಾರ್ಡಿಗೆ ಹೊಸ ಕೇಸುಗಳನ್ನು ನೋಡಲು ಬಂದಳು. ಬಿ. ಪಿ. ಚೆಕ್‌ಮಾಡುತ್ತಿದ್ದ ನನ್ನನ್ನು ನೋಡಿ ಅವಳ ಮುಖ ಹಿಗ್ಗಿ ಅರಳಿತು. ಅವಳು ನನ್ನ ಹತ್ತಿರ ಬಿ. ಪಿ. ಆಪರೇಟಸ್ಸನ್ನು ತೆಗೆದುಕೊಂಡು ಪಕ್ಕದ ರೂಮಿನಲ್ಲಿದ್ದ ರೋಗಿಗೆ ಬಿ. ಪಿ. ಚೆಕ್ ಮಾಡಿದಳು.

ಆ ವೇಳೆಗೆ ನಾನು ವಾರ್ಡ್ ಟೇಬಲ್ ಹತ್ತಿರ ಬಂದೆನು. ಡಾ॥ಲೀಲಾ ಬಿ. ಪಿ. ಆಪರೇಟಸ್ಸನ್ನು ಟೇಬಲ್ ಮೇಲೆ ಇಡಲೂ ತಾನೂ ಅಲ್ಲಿಗೆ ಬಂದಳು. ಪ್ರಕೃತಿಯಲ್ಲಿ ವಸಂತವು ಉದಯವಾದಾಗ, ಗಿಡಮರಗಳಲ್ಲಿ ಹೂ ಕಾಯಿಗಳಾಗಿ ಹೊಸ ಜೀವನವು ಚಿಗುರುವುದು. ಹಾಗೆಯೇ ಬಿಡಿಯಾದ ಎರಡು ಸ್ತ್ರೀಪುರುಷ ಜೀವಗಳು ಪ್ರಣಯದ ಆಕರ್ಷಣೆಯಿಂದ ಒಂದಾಗಿ, ಬುನಾದಿಯಿಂದ ಬಂದ ಅಮರ ಜ್ಯೋತಿಯನ್ನು ರಕ್ಷಿಸುವ ಸಂತಾನ ಸ್ತ್ರೀಗೆ ಕಾರಣವಾಗುವುದು. ಹುಟ್ಟಿದಾಗ ಗುಪ್ತವಾಗಿರುವ ಗಂಡುತನ, ಹೆಣ್ಣುತನಗಳು ಅವರು ಬೆಳೆದಂತೆ ವ್ಯಕ್ತ ವಾಗುತ್ತ ಬರುವುದು. ಗಂಡಿನಲ್ಲಿ ವೀರ್ಯ ನಿರ್ಮಾಣವೂ, ಹೆಣ್ಣಿನಲ್ಲಿ ರಜಃಸ್ರಾವ(ಮುಟ್ಟು) ಬಾಲ ಬಾಲಿಕೆಯರು ಯೌವನವನ್ನೇರಿದ ಲಕ್ಷಣಗಳಾಗಿವೆ. ಆಗ ಅವರ ಶರೀರದ ಓಜೋಗ್ರಂಥಿಗಳಲ್ಲಿ ಶುಕ್ರೋದಯವಾಗಿ ಶುಕ್ರರಸವು ಸ್ರವಿಸಲಾರಂಭಿಸಿ ಹರೆತನವು ಹಣಕಿಕ್ಕುವುದು. ನಿಜವಾದ ಪ್ರೇಮ ಕಾಮದ ಅರಿವಾಗುವುದು.

ಅಂದು ಎಮರ್ಜೆನ್ಸಿ ವಾರ್ಡ್ ಕೆಲಸ ಮುಗಿಸುವ ವೇಳೆಗೆ ಮಧ್ಯಾಹ್ನ 12 ಗಂಟೆಯಾಗಿತ್ತು. ಆ ವಿರಾಮದ ಸಮಯದಲ್ಲಿ ಕಾಫಿಗೆ ಹೊರಟ ಡಾ॥ಶ್ರೀದೇವಿ ವಾರ್ಡಿನಲ್ಲಿದ್ದ ನನ್ನನು ಮತ್ತು ಡಾ॥ಲೀಲಾಳನ್ನು ಅವಳ ಜೊತೆಗೆ ಕಾಫಿಗೆ ಕರೆದಳು. ನಾವು ಆಸ್ಪತ್ರೆಯ ಆವರಣದೊಳಗಡೆ ಸುತ್ತಲೂ ಬೆಳೆದು ನಿಂತ ಹಸಿರು ಮರಗಳ ದಾರಿಯಲ್ಲಿ ಹತ್ತಿರದಲ್ಲೇ ಇದ್ದ ಕಾಮತ್‌ಕೆಫೆಯತ್ತ ಹೊರಟವು. ನನ್ನ ಅರ್ಥಗರ್ಭಿತವಾಗಿದ್ದ ಮಾತು, ಜೀವನದ ಬಗ್ಗೆ ತಿಳುವಳಿಕೆ, ಮಾತಿನ ಧಾಟಿ, ಡಾ॥ಲೀಲಾಳಿಗೆ ಬಹಳ ಮೆಚ್ಚುಗೆಯಾಗಿತ್ತು. ಅವಳಿಗೆ ನನ್ನಲ್ಲಿ ವಿಶೇಷ ಆಸಕ್ತಿ ಉಂಟಾಯಿತು. ಹೊಟೆಲ್‌ಗೆ ಬಂದಾಗ, ಡಾ॥ಲೀಲಾ ನನ್ನ ಪಕ್ಕದಲ್ಲೇ ಕುಳಿತಳು. ಮಾಣಿ ತಂದಿತ್ತ ತಿಂಡಿ ಹಾಗೂ ಕಾಫಿ ಸವಿಯುತ್ತಾ ಕುಳಿತ್ತಿದ್ದಾಗ, ಡಾ॥ಲೀಲಾ ಹೊಸ ಅನುಭವವೊಂದನ್ನು ಸವಿಯುತ್ತಿದ್ದಳು.

## 5. ಸವಿನೆನಪುಗಳ ಆಗರ – ಪ್ರೀತಿಯ ಸಾಗರ

ಅಂದು ಸಂಬಂಧಿಕರ ಮದುವೆಗೆಂದು ಬೆಂಗಳೂರಿಗೆ ಬಂದಿದ್ದ ನನ್ನ ಹೈಸ್ಕೂಲ್ ಸಹ ಪಾಠಿಗಳು ಹಾಗೇ ನನ್ನನ್ನು ನೋಡಲು ಬಂದಿದ್ದರು. ಆ ವಿಚಾರ ಈ ವಿಚಾರ ಸ್ವಲ್ಪ ಮಾತನಾಡಿ, ಹತ್ತಿರದಲ್ಲೇ ಇದ್ದ ಪ್ರಕಾಶ್ ಕೆಫೆಯಲ್ಲಿ ನನ್ನ ಜೊತೆ ತಿಂಡಿ ಕಾಫಿ ಮುಗಿಸಿ, ಹಳ್ಳಿಯ ಕಡೆ ಹೊರಟರು.

ಅವರನ್ನು ಬೀಳ್ಕೊಟ್ಟು ರೂಂಗೆ ಬಂದ ನನ್ನ ಮನದಲ್ಲಿ ಆಗ ನನ್ನ ಹಳ್ಳಿಯ ಶಾಲೆಯ ಸಂಗಡಿಗರ, ಶಾಲಾ ಮಾಸ್ಟರುಗಳ, ತಂದೆ ತಾಯಿಯರ, ಬಾಲ್ಯದ ಎಲ್ಲದರ ನೆನಪುಗಳ ಇತಿಹಾಸದ ಸುರುಳಿ ಕಣ್ಣಿನ ಮುಂದೆ ರೀಲಿ ನಂತೆ ಬಿಚ್ಚತೊಡಗಿತು. ಅದನ್ನು ನೆನೆದಾಗಲೆಲ್ಲ, ನನ್ನ ಮನಸ್ಸು ಯಾವುದೊ ಅನಂತಕಾಲದ ಗರ್ಭಗುಡಿಯ ಪವಿತ್ರತೆಯನ್ನು ಪ್ರವೇಶಿಸಿದಂತೆ ಪುಲಕಿತವಾಗುತ್ತಿತ್ತು.

ಚೋಳದೊರೆಯ ಪ್ರತಿನಿಧಿ ಬುಕ್ಕನಾಯಕನೆಂಬುವನು, ತಾನು ಬಿಡಾರ ಮಾಡಿದ್ದ ಸ್ಥಳದಲ್ಲಿ ಕೋಟೆ ಮತ್ತು ಪೇಟೆ ಕಟ್ಟಿಸಿ, ಅದಕ್ಕೆ ಸುಂದರನಗರ "ಚನ್ನಪಟ್ಟಣ" ಎಂದು ಕರೆದನು. ನಾನು ಹುಟ್ಟಿದ ಊರು ಈ ಚನ್ನಪಟ್ಟಣದಿಂದ ಎರಡು ಕಿಲೋಮಿಟರ್ ದೂರದಲ್ಲೇ ಇದ್ದ ನಿಸರ್ಗಸೌಂದರ್ಯದ ನೆಲೆವೀಡಾದ ತಿಟ್ಟಮಾರನಹಳ್ಳಿಯ ಬಡಾವಣೆಯಲ್ಲಿದ್ದ ಶಾಂತಿಗ್ರಾಮ.

ಚಿಕ್ಕದಾದರೂ ಚೊಕ್ಕದಾದ ಈ ಊರಿನ ಹೆದ್ದಾರಿಯಲ್ಲಿದ್ದ ನಾಲ್ಕಾರು ಕೆಂಪು ಹೆಂಚಿನ ಮನೆಗಳು ಊರಿಗೆ ಅಲಂಕಾರಪ್ರಾಯವಾಗಿದ್ದವು. ಸುತ್ತ ಹತ್ತು ಹಳ್ಳಿಗಳಿಗೆ ಹೆಸರಾದ ಈ ಶಾಂತಿಗ್ರಾಮ ಹಸಿರು ಕ್ರಾಂತಿ ಯನ್ನು ಚಿಮ್ಮುತ್ತಾ, ವಿಸ್ತಾರವಾಗಿ ಬೆಳೆದಿರುವ ಭತ್ತದ ಗದ್ದೆಗಳ ಮಧ್ಯೆ ಧರ್ಮದ ವೈಜಯಂತಿಯಂತೆ ನಿಸರ್ಗದ ಮಡಿಲಲ್ಲಿ ಕಂಗೊಳಿಸುತ್ತಿತ್ತು. ಅದರ ಸುತ್ತಲೂ ಇರುವ ಮಾವಿನತೋಪುಗಳೂ, ಫಲಹೊತ್ತು ನಿಂತಿರುವ ತೆಂಗಿನಮರಗಳೂ ಹಳ್ಳಿಗೆ ಬೆಡಗನ್ನು ಉಂಟು ಮಾಡಿದ್ದವು. ದಡಗಳ ಮೇಲೆ ಬಗೆಬಗೆಯ ಹಸಿರು ಗಿಡಮರ ಗಳಿಂದ ಅಲಂಕಾರವಾಗಿ ಹಳ್ಳಿಯ ಪಕ್ಕದಲ್ಲೇ ಹರಿಯುತ್ತಿದ್ದ ಕಣ್ವಹೊಳೆಯಂತೂ ಹಳ್ಳಿಯನ್ನು ಚೆಲುವಿನ ಕಾಂತಿಯ ಪ್ರವಾಹದಲ್ಲಿ ತೇಲಿಸಿಬಿಟ್ಟಿತ್ತು. ಕಣ್ವ ಮಹರ್ಷಿಗಳ ತಪೋಭೂಮಿಯಾದ್ದ ಈ ಫಲವತ್ತಾದ ಹಳ್ಳಿಯ ಭೂಮಿಯಲ್ಲಿ ರೈತರು ಭತ್ತ, ಕಬ್ಬು, ಉಪ್ಪುನೇರಳೆ, ತೆಂಗು, ತರಕಾರಿಗಳನ್ನು ಯಥೇಚ್ಛವಾಗಿ ಬೆಳೆದು ಪಟ್ಟಣ ಗಳಲ್ಲಿ ಮಾರುತ್ತಿದ್ದರು.

ನನ್ನ ಮನೆತನ ದೈವಭಕ್ತಿಗೆ, ಪ್ರಾಮಾಣಿಕತನಕ್ಕೆ ಮತ್ತು ಪರೋಪಕಾರಕ್ಕೆ ಪ್ರಸಿದ್ಧಿಯಾಗಿತ್ತು. ನನ್ನ ತಾತ ಶೂರಪ್ಪವನರು ಮಹಾದೈವ ಭಕ್ತರು. ತಾಲ್ಲೂಕಿನ ಪ್ರಮುಖ ಈಶ್ವರನ ಆರಾಧಕರಾಗಿದ್ದರು. ಅವರು ಅನಂತಕಾಲದಿಂದಲೂ ಬಂದಿದ್ದ ತನ್ನ ಪೂರ್ವಿಕರ ಆಚಾರ, ಶ್ರದ್ಧೆ, ಪೂಜೆ ಪುನಸ್ಕಾರ ರೀತಿಗಳನ್ನು, ಸಂಪ್ರದಾಯ ಸಂಸ್ಕೃತಿಗಳನ್ನು ನಿಷ್ಠೆಯಿಂದ ಪಾಲಿಸಿಕೊಂಡು ಬರುತ್ತಿದ್ದರು. ರಾಮಾಯಣ, ಭಾಗವತ, ಮಹಾಭಾರತಗಳನ್ನು ರಾಗವಾಗಿ ಓದಿ ಹೇಳಿ ಮನರಂಜನೆಯ ವಿಧಾನದಿಂದಲೇ ಹೃದಯವನ್ನು ಅರಳಿಸುವ, ಆಕರ್ಷಿಸುವ, ಧರ್ಮದಲ್ಲಿ ಬುದ್ಧಿಯುಂಟಾಗುವಂತೆ ಮಾಡುವ ಒಂದು ಗುರೂಪದೇಶ ಸಾಮರ್ಥ್ಯ ನಮ್ಮ ತಾತ ನಲ್ಲಿತ್ತು. ಇವುಗಳಿಂದ ಅವರು ತಾಲ್ಲೂಕಿನವರೆಲ್ಲರ ಪ್ರೀತಿ, ಗೌರವ, ನಂಬುಗೆಗಳಿಗೆ ಪಾತ್ರರಾಗಿದ್ದರು.

ನನ್ನ ತಂದೆ ಚನ್ನೇಗೌಡರ ನಡೆ, ನುಡಿ, ಆಚಾರ ವ್ಯವಹಾರಗಳು ವಿಶಿಷ್ಟವಾಗಿರುತ್ತಿದ್ದವು. ಬಡತನದ ಬೇಗೆಯಲ್ಲಿ ಬೆಂದು, ಕಷ್ಟನಷ್ಟ, ದು:ಖ ದುರ್ದಿನಗಳನ್ನು ಅಪಾರ ತಾಳ್ಮೆಯಿಂದ ಸಹಿಸಿ, ಮೂಳೆ ಮುರಿಯುವಂಥ

ದುಡಿಮೆಯ ಬಲದಿಂದಲೂ ಸ್ವಸಾಮರ್ಥ್ಯದಿಂದಲೂ, ನೈಪುಣ್ಯತೆಯಿಂದಲೂ, ಪುಣ್ಯದಿಂದಲೂ ಮೇಲೆ ಬಂದು ಜೀವನ ನಡೆಸುತ್ತಿದ್ದರು. ತಾರುಣ್ಯದಲ್ಲಿ ಗರಡಿ ಸಾಧನೆ ಮಾಡಿ, ಕತ್ತಿವರಸೆ, ದೊಣ್ಣೆ ವರಸೆ, ಮಲ್ಲಯುದ್ಧ ಮೊದಲಾದುವುಗಳಲ್ಲಿ ಅವರು ಹೆಸರು ಪಡೆದಿದ್ದರು. ಅವರ ಸತಿ ಸಿದ್ಧಮ್ಮವರು ದೈವಭಕ್ತಿಯಿಂದ, ಗುಣ ಸಂಪತ್ತಿನಿಂದ ಕಷ್ಟ ಸಹಿಷ್ಣುತೆಯಿಂದ ಪತಿಗೊಪ್ಪುವ ಸತಿಯಾಗಿ ಸಂಸಾರವನ್ನು ಅಚ್ಚುಕಟ್ಟಾಗಿ ನಡೆಸುತ್ತಿದ್ದರು.

ತಾವು ಮಾಡುವ ಪ್ರತಿಯೊಂದು ಕೆಲಸದಲ್ಲಿಯೂ ಅವರಿಬ್ಬರೂ ಸತ್ಯ, ಧರ್ಮ, ನ್ಯಾಯದ ದೃಷ್ಟಿಯಲ್ಲಿ ತೂಗಿ ನೋಡಿ ಮನಸ್ಸಿಗೆ ಒಪ್ಪಿದರೆ, ಅದರಂತೆ ನಡೆಯುತ್ತಿದ್ದರು. ಆಗಾಗ ಪೂಜೆ ಪುನಸ್ಕಾರ ಮಾಡಿ ಪುರೋಹಿತರು, ಬ್ರಾಹ್ಮಣರನ್ನು ಕರೆಸಿ ದಾನಧರ್ಮ ಮಾಡುವುದರಲ್ಲಿ ಊರಿಗೆ ಇವರ ಮನೆತನ ಎತ್ತಿದ ಕೈ ಆಗಿತ್ತು. ಬ್ರಾಹ್ಮಣರಿಗೆ ತೋರಿಸಬೇಕಾಗಿದ್ದ ಗೌರವದಲ್ಲಿಯೂ ಅವರಿಗೆ ನೀಡಬೇಕಾಗಿದ್ದ ದಾನ ದಕ್ಷಿಣೆಗಳ ವಿಚಾರದಲ್ಲಿಯೂ ತಮ್ಮ ಸಂಪ್ರದಾಯಬದ್ಧತೆಯಿಂದಲೂ, ನಿಷ್ಠೆಯಿಂದಲೂ, ಔದಾರ್ಯದಿಂದಲೂ ವಿಪ್ರ ಪೂಜಾಧುರಂದರ ಎಂದು ಚನ್ನಪಟ್ಟಣದ ಹಾರುವರಲ್ಲಿ ಧರ್ಮಪ್ಪ ಕೀರ್ತಿ ಪಡೆದಿದ್ದರು. ಇವರು ಗದ್ದೆ ತೋಟದಲ್ಲಿ ಬೆವರು ಹರಸಿ ದುಡಿಯುತ್ತಿದ್ದರು. ಬೆವರು ಸುರಿಸಿ ದುಡಿದು ಬದುಕಬೇಕು. ಅದೇ ಅವರ ಜೀವನ ಸಿದ್ಧಾಂತ, ಜೊತೆಗೆ ಅವರ ಜೀವನದ ಸಾರ್ಥಕತೆಯ ಸಾರ. ಗದ್ದೆಯಲ್ಲಿ ಸಾಕಷ್ಟು ಭತ್ತ, ಕಬ್ಬು, ಕಡಲೆಕಾಯಿ ತೋಟದಲ್ಲಿ ತೆಂಗು, ತರಕಾರಿ ಹಿಪ್ಪನೇರಳೆ ಬೆಳೆಯುತ್ತಿದ್ದುದರಿಂದ, ಚನ್ನೇಗೌಡರು ಸಂತೋಷವಾಗಿ ಜೀವನ ನಡೆಸು ತ್ತಿದ್ದರು.

ತಮ್ಮ ಮಕ್ಕಳಿಗೆ ಶಾಲಾ ಕಾಲೇಜುಗಳಲ್ಲಿ ಶ್ರದ್ಧೆಯಿಂದ ವಿದ್ಯಾಭ್ಯಾಸ ಮಾಡಿಸಿ, ಪದವೀಧರರನ್ನಾಗಿ ಮಾಡಲೂ ಓದಿಸುತ್ತಿದ್ದರು. ವಿದ್ಯಾವಂತರಾಗಬೇಕೆಂಬ ದೊಡ್ಡವರ ಕೈಗೂಡದ ಆಕಾಂಕ್ಷೆ ಅವರ ಮಕ್ಕಳ ಬದುಕಿನ ಮೇಲೆ ಬಹಳ ಮಹತ್ ಪ್ರಭಾವಶಾಲಿಯಾಗಿ ಪರಿಣಮಿಸಿತು. ಮಕ್ಕಳನ್ನು ಓದುವುದಕ್ಕೆ ಹಾಕಬೇಕು ಎಂಬ ಪ್ರಜ್ಞೆ ಅವರಲ್ಲಿ ಉದಯಿಸುವಂತೆ ಮಾಡಿತ್ತು. ಜೊತೆಗೆ ಇಂಗ್ಲೀಷನ್ನು ಕಲಿಯದಿದ್ದರೆ, ತಮ್ಮ ಮಕ್ಕಳು ಮುಂದುವರಿಯುವುದು ಸಾಧ್ಯವಿಲ್ಲ ಎಂಬ ಭಾವನೆ ಅವರ ಹೃದಯದಲ್ಲಿ ಮೂಡಿ ಮನವರಿಕೆಯಾಗಿತ್ತು. ನೊಂದ ಜೀವಿಗಳಿಗೆ ಮರುಗುವ, ಸಹಾಯಮಾಡಲು ಕೈ ನೀಡುವ ಬುದ್ಧಿ ದಂಪತಿಗಳಲ್ಲಿ ತಾನಾಗಿಯೇ ಬಂದು, ನಿಜವಾಗಿಯೂ ತಮ್ಮ ಹಳ್ಳಿಯವರ ಗೌರವ ಮನ್ನಣೆಗೆ ಪಾತ್ರರಾಗಿ ಸುಖವಾಗಿದ್ದರು.

ಬಡವರಾದ ಸಾಮಾನ್ಯ ಜನರಿಗೆ ಚನ್ನೇಗೌಡರಲ್ಲಿ ಒಂದು ಯಜಮಾನ ಕಳೆ ಕಾಣಿಸುತ್ತಿತ್ತು. ಕಷ್ಟಕಾಲ ದಲ್ಲಿ ಅವರ ಹಿತೋಪದೇಶದ ಮಾತುಗಳಿಗೆ ಮನ್ನಣೆ ಕೊಡುತ್ತಿದ್ದರು. ಜಾತಿ ಸಂಬಂಧವಾದ ವ್ಯಾಜ್ಯಗಳಲ್ಲಿ, ನೀತಿ ಸಂಬಂಧವಾದ ಬಹಿಷ್ಕಾರಾದಿ ವಿಷಯಗಳಲ್ಲಿ, ಹೆಣ್ಣು ಗಂಡುಕೊಟ್ಟುತರುವ ಸಂಬಂಧದಲ್ಲಿ ಉದ್ಭವಿಸುವ ಭಿನ್ನಾಭಿಪ್ರಾಯದ ಕಲಹಗಳಲ್ಲಿ ಆಗಲಿ, ಇವರ ತೀರ್ಪಿಗೆ ಯಾರೂ ಸಾಮಾನ್ಯವಾಗಿ ಎದುರು ಬೀಳುತ್ತಿರಲಿಲ್ಲ. ಅವರ ಬುದ್ಧಿವಂತಿಕೆ, ಯುಕ್ತಿ, ಶಕ್ತಿ, ಧೈರ್ಯಗಳ ವಿಚಾರವಾಗಿ ಅನೇಕ ಕಥೆಗಳು ಹಳ್ಳಿಯಿಂದ ಹಳ್ಳಿಗೆ ಹಬ್ಬಿ ಬಿಟ್ಟಿತ್ತು. ಚನ್ನೇಗೌಡರು " ಕಾನೂನು ಕಲಿತೇ ನೀವೆಲ್ಲ ಬೂದಿ ಹೊಯ್ಕೊಂಡಿದ್ದು, ಸರ್ಕಾರದಿಂದ ಕಾನೂನಾಗಿ ಬಂದ ಮಾತ್ರಕ್ಕೆ ಅನ್ಯಾಯ ನ್ಯಾಯವಾಗುವುದಿಲ್ಲ" ವೆಂದು ಬುದ್ಧಿಮಾತು ಆಡಿ, ಯಾರಿಗೂ ಅನ್ಯಾಯವಾಗದ ರೀತಿ ತೀರ್ಪು ಕೊಡುತ್ತಿದ್ದರು.

ಎಂಥ ಮನಷ್ಯನಿಗೂ ಹುಟ್ಟಿದ ಊರಿನಲ್ಲಿ ಗೌರವ ದೊರಕುವುದು ಒಂದು ಅಪೂರ್ವ ಸಂಗತಿ ಯಲ್ಲವೇ? ಅವರ ವಿಶಾಲದೃಷ್ಟಿ, ನ್ಯಾಯಪರತೆ, ಸರ್ವಸಮನ್ವಯ ಭಾವ, ಅವರಿಗೆ ಗೌರವ ದೊರೆಯಲೂ

ಕಾರಣವಾಗಿದ್ದವು. ಅವರು ಬಿಳಿಯ ಪೇಟ, ಕೋಟು, ಕಚ್ಚೆಪಂಚೆಹಾಕಿ ನೀಟಾಗಿರುತ್ತಿದ್ದರು. ತುಂಬಾ ಸೌಮ್ಯವಾಗಿ, ನಾಗರಿಕವಾಗಿ ನಗುನಗುತ್ತಲೇ ಇರುತ್ತಿದ್ದರು.

ಭಕ್ತಿಯ ಸಾಗರ ಜ್ಞಾನದ ಅಗರ ವಾಗಿದ್ದ ಚನ್ನೇಗೌಡರ ಮನೆಯಲ್ಲಿ ಎಂಟನೆಯ ಮಗುವಾಗಿ ನಾನು ಹುಟ್ಟಿದೆ. ನಾನು ಜನ್ಮವೆತ್ತಿದಾಗ, ಚನ್ನೇಗೌಡರು ನೆಮ್ಮದಿಯಾಗಿ ಬಾಳುವ ಸಂಸಾರಿಯಾಗಿದ್ದರು. ಹೊಲ, ಗದ್ದೆ, ತೋಟ, ಮನೆ, ಕೊಟ್ಟಿಗೆಯಲ್ಲಿ ದನಕರು, ಕೋಳಿ, ಕುರಿ, ನಾಯಿ, ಕಣಜದಲ್ಲಿ ಬತ್ತ, ಪೆಟ್ಟಿಗೆಯಲ್ಲಿ ಒಡವೆ, ವಸ್ತ್ರ, ದೇಹದಲ್ಲಿ ಬಲ, ಹೃದಯದಲ್ಲಿ ಹರುಷ, ಹಳ್ಳಿಯವರ ಗೌರವ, ಸ್ನೇಹ ಎಲ್ಲವೂ ಅವರಿಗಿದ್ದವು.

ನಾನು ಸಾಧಾರಣ ಶ್ರೀಮಂತರ ಮಕ್ಕಳಂತೆಯೇ ಬೆಳೆದನು. ತಂದೆ ತಾಯಿಯಂತೆ ದಷ್ಟಪುಷ್ಟನಾಗಿ ಭೀಮನ ಹಾಗೆ ಕಾಣುತ್ತಿದ್ದ ಮಗುವಿಗೆ ತಾತ ಏಕೋ ರಾಮನೆಂದು ನಾಮಕರಣ ಮಾಡಿಸಿದರು. ಎಲ್ಲರೂ ಮುದ್ದಿನಿಂದ ಬೆಳೆಸಿದರೂ ರಾಮ ಅವರ ಮುದ್ದಿನಿಂದ ಉಬ್ಬಿಹೊಗಲಿಲ್ಲ. ಚೇಷ್ಟೆಯ ಪುಟ್ಟನಾಗಲಿಲ್ಲ. ಓರಗೆ ಯವರೊಂದಿಗೆ ಆಟ ಕೂಟಗಳಲ್ಲಿಯೂ ಮೊದಮೊದಲು ಹೆಚ್ಚಾಗಿ ಭಾಗವಹಿಸುತ್ತಿರಲಿಲ್ಲ. ನನ್ನ ವಿದ್ಯಾಭ್ಯಾಸ ಶಾಂತಿ ಗ್ರಾಮದಿಂದಲೇ ಪ್ರಾರಂಭವಾಯಿತು. ಅಲ್ಲಿಯ ಪ್ರಾಥಮಿಕ ಶಾಲೆ ಹಳ್ಳಿಯ ಕಣ್ಣಿದ್ದಂತೆ, ಶಾಲೆಯ ಸ್ವಚ್ಛತೆ, ಅಂದಚೆಂದ, ಕೈ ತೋಟ, ಶಿಕ್ಷಕರ ಆದರ್ಶ ಜೀವನ ಮತ್ತು ಶಾಲೆಯ ಮಕ್ಕಳ ವಿನಯ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಮನೆಮಾತಾಗಿತ್ತು. ಶಾಲೆಯ ಹೂದೋಟದಲ್ಲಿ ಬಗೆಬಗೆಯ ಹೂಗಳು ಅರಳಿ ನಿಂತು ನಯನ ಮೋಹಕವಾಗಿದ್ದವು. ನಸುಕೆಂಪು, ತುಸುಕೆಂಪು, ಗುಲಾಬಿಗಳು, ಹಳದಿ, ಕೆಂಪು, ನೇರಳೆ, ಬಣ್ಣದ ಸೇವಂತಿಗೆ ಗಳು ಅರಳಿದ್ದವು. ಅಚ್ಚ ಬಿಳಿಯ ಮಲ್ಲಿಗೆ, ಜಾಜಿ, ದಾಸವಾಳ, ಮಿಂಚು ಪತ್ರೆ, ಮಲ್ಲೆಗಳು ಹುಲುಸಾಗಿ ಬೆಳೆದು ಅಂದವಾಗಿ ಹಬ್ಬಿ, ಹೂಬಿಟ್ಟು, ಕಂಪಿನ ಖನಿಯಾಗಿ, ಒಳ್ಳೆಯ ಪರಿಮಳವನ್ನು ಬೀರುತ್ತಾ, ನೆಟ್ಟು ಬೆಳೆಸಿದವರಿಗೆ ಕೃತಜ್ಞತೆಯನ್ನು ಸೂಚಿಸುತ್ತಿರುವಂತೆ ಭಾಸವಾಗುತ್ತಿತ್ತು. ಬಣ್ಣಬಣ್ಣಗಳಿಂದ ಕೂಡಿದ ಹೂಗಳ ಸೌಂದರ್ಯವು ನೋಡುವುದಕ್ಕೆ ಅಂದ, ಸುತ್ತಮುತ್ತಲೂ ಹರಡಿ ಹಬ್ಬಿದ ಘಮಘಮ ಸುವಾಸನೆಯ ಮಕರಂದ ವಿದ್ಯಾರ್ಥಿಗಳ ಮನಸ್ಸಿಗೆ ಆನಂದ ಉಂಟುಮಾಡುತ್ತಿದ್ದವು.

ಶುಕ್ರವಾರ ಸರಸ್ವತಿ ಪೂಜೆ ತಪ್ಪದೆ ನಡೆಯುತ್ತಿತ್ತು. ಅಂದು ಸ್ಕೂಲಿನ ಹೊರ ಅಂಗಳ, ಒಳ ಅಂಗಳದ ಹೆಬ್ಬಾಗಿಲುಗಳಲ್ಲಿ ಬಾಳೆಕಂಬಗಳನ್ನು ನೆಟ್ಟು ತೋರಣ ಕಟ್ಟುತ್ತಿದ್ದರು. ಶಾರದಾದೇವಿಯ ದೊಡ್ಡ ಬಣ್ಣದ ಚಿತ್ರ ವನ್ನಿಟ್ಟು ವೇದಿಕೆ ನಿರ್ಮಿಸಿ ಬಾಳೆ, ಹಲಸು, ಮಾವು ಇತ್ಯಾದಿ, ಹಸಿರು ಎಲೆಗಳಿಂದ ಅಲಂಕರಿಸಿ, ದೀಪದ ಸಾಲು ಇಡಲು ಅನುಕೂಲವಾಗುವಂತೆ, ಸಣ್ಣಸಣ್ಣ ಸಗಣಿ ಉಂಡೆಗಳನ್ನಿಟ್ಟು ಅಣಿಗೊಳಿಸುತ್ತಿದ್ದರು. ಆರತಿಗಳು, ಗಂಟೆ ಗಳು, ಶಂಖಗಳು, ಜಾಗಟೆಗಳು, ಹರಿವಾಣಗಳು, ಗಿಂಡಿಗಳು, ಪಂಚಪಾತ್ರೆಗಳು ಉದ್ಧರಣೆಗಳನ್ನು ಫಳಫಳ ಹೊಳೆಯುವಂತೆ ಬೆಳಗುತ್ತಿದ್ದರು. ಆರತಿಯ ಸಮಯದಲ್ಲಿ ಹಲವು ಬಣ್ಣದ ಹೂಗಳಿಂದ ಅಲಂಕೃತವಾದ ಶಾಂತ ಮುಖಮುದ್ರೆಯ ಶಾರದೆಯ ಫೋಟೊ, ರಂಗುರಂಗಿನ ರಂಗೋಲಿ, ಕರ್ಪೂರ, ಗಂಧ, ಗಂಧದಕಡ್ಡಿಯ ಘಮ ಘಮದ ಪರಿಮಳ, ತಟ್ಟೆಯಲ್ಲಿ ಕಂಗೊಳಿಸುವ ಹಣ್ಣುಕಾಯಿ, ಹೂಗಳು, ಸಾಲು ಹಿಡಿದು ನಿಂತಿರುವ ಮಕ್ಕಳ ಭಕ್ತಿಭಾವ, ನೋಡಿದವರನ್ನು ಮುಗ್ಧಗೊಳಿಸುತ್ತಿತ್ತು. ಕೊಬ್ಬರಿ, ಸಕ್ಕರೆ ಪೊಟ್ಟಣಗಳನ್ನು, ಬಾಳೆಹಣ್ಣಿನ ರಸಾಯನವನ್ನು ಕೊನೆಗೆ ಎಲ್ಲರೂ ಸಂತೃಪ್ತಿಯಿಂದ ತಿನ್ನುತ್ತಿದ್ದರು.

ಹಳ್ಳಿಯಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿದ ನಾನು ನಂತರ ಚನ್ನಪಟ್ಟಣದ ಮಾಧ್ಯಮಿಕ ಶಾಲೆ ಪ್ರವೇಶಿಸಿದೆನು. ಅದು ಮನೆಯಿಂದ ಎರಡು ಕಿ. ಮೀ. ದೂರವಿತ್ತು. ಅಲ್ಲಿಗೆ ಕೆರೆಯ ಏರಿಯ ಮೇಲೆ ನಡೆದೇ

ಹೋಗಬೇಕಿತ್ತು. ಓದುಬರಹಗಳಲ್ಲಿ ನಡೆನುಡಿಗಳಲ್ಲಿ, ಉಡುಗೆ ತೊಡಿಗೆಗಳಲ್ಲಿ ಇತರರಿಗಿಂತ ನಾನು ಉತ್ತಮ ಮಟ್ಟದಲ್ಲಿದ್ದೆನು. ಎಲ್ಲರಂತೆ ಮನೆಯಿಂದಲೇ ಊಟ ತಿಂಡಿಗಳನ್ನು ಒಯ್ದು ವಿರಾಮದ ವೇಳೆಯಲ್ಲಿ ಶಾಲೆಯ ಪಕ್ಕದಲ್ಲಿದ್ದ ಪ್ರವಾಸಿ ಮಂದಿರದ ಕೈತೋಟದಲ್ಲಿ ತಿಂದು ತೇಗಿ ನೀರು ಕುಡಿಯುತ್ತಿದ್ದೆನು. ಶಾಲೆಯ ಬೆಲ್ ಹೊಡೆದ ಕೂಡಲೆ "ಹೋ" ಎಂದು ಉದ್ಘೋಷಿಸುತ್ತಾ ಗುಂಪಿನಲ್ಲಿ ನೂಕು ನುಗ್ಗಲು ನುಗ್ಗಿ, ನನ್ನ ಹಳ್ಳಿಗೆ ಧಾವಿಸುತ್ತಿದ್ದೆನು.

ಮನೆಯಲ್ಲಿ ಕೊಡುವ ತಿಂಡಿ ತಿಂದು, ಕಾಫಿ ಕುಡಿದು, ಮತ್ತೆ ಚೆಂಡಾಟ, ಬುಗುರಿ, ಗೋಲಿ, ಚಿನ್ನಿದಾಂಡು ಆಟಕ್ಕೊ ಹೋಗುತ್ತಿದ್ದೆನು. ಇಲ್ಲ ಕ್ಯಾಟರ್‌ಬಿಲ್, ಕವಣೆ ತೆಗೆದುಕೊಂಡು ತೋಟದ ಕಡೆಗೆ ಆಟಕ್ಕೆ ಹೋಗು ತ್ತಿದ್ದೆನು. ಹೊಸ ಶಾಲೆ ಸೇರಿದಂದಿನಿಂದ ಫುಟ್‌ಬಾಲ್ ಆಟಗಳಲ್ಲಿ ಆಸಕ್ತಿ ವಹಿಸಿ, ತಂಡಗಳ ನಾಯಕನಾಗಿ ಆಗಾಗ್ಗೆ ಸ್ಪರ್ಧೆಗಳಲ್ಲಿ ಭಾಗವಹಿಸುತ್ತಿದ್ದೆನು. ರಜಾ ದಿನಗಳಲ್ಲಿ ತಂದೆಯ ಜೊತೆಗೆ ತೋಟ, ಹೊಲ, ಗದ್ದೆಗಳಲ್ಲಿ ವ್ಯವಸಾಯದ ಕೆಲಸದಲ್ಲಿ ನೆರವಾಗುತ್ತಿದ್ದೆನು. ಎಮ್ಮೆಕೋಣದ ಮೇಲೆ ಕುಳಿತು ತೋಟಕ್ಕೆ ಹೋಗುತ್ತಿದ್ದೆನು. ರಾತ್ರಿ ವೇಳೆ ಆಕಾಶಗಳಲ್ಲಿಯ ತಾರೆಗಳನ್ನು ನೋಡುತ್ತಾ ಕುಳಿತುಕೊಳ್ಳುವ ಅಭ್ಯಾಸ ನನಗೆ ಹತ್ತಿತ್ತು. ನನಗೆ ಗದ್ದೆ ತೋಟಗಳಲ್ಲಿ, ಹೊಳೆ, ಕೆರೆಗಳ ಕಡೆ ಅಲೆಯುವುದೆಂದರೆ ಬಹಳ ಇಷ್ಟ. ಹಳ್ಳಿಯ ನೈಸರ್ಗಿಕ ರಮಣೀಯತೆಯ ಸುವಿಶಾಲ ಸರೋವರದಲ್ಲಿ ನನ್ನ ಬಾಲಚೇತನ ಮರಿಮೀನಾಗಿ ಓಲಾಡಿ ತೇಲಾಡುತ್ತಿತ್ತು.

ಆಗಾಗ ವಿಶೇಷವಾಗಿ ರಜಾ ದಿನಗಳಲ್ಲಿ ಹಳ್ಳಿಯ ಪಕ್ಕದಲ್ಲೇ ಇದ್ದ ಕಣ್ವ ಹೊಳೆಗೊ ಇಲ್ಲ, ಕೆರೆಗೊಈಜಲು ನೀರಾಟವಾಡಲು ಹೊಗುತ್ತಿದ್ದೆನು. ಅಲ್ಲಿ ಗಂಟೆಗಟ್ಟಲೆ ಈಜಾಟದಲ್ಲಿ ತಲ್ಲೀನನಾಗುತ್ತಿದ್ದೆನು. ಬಂಡೆ ಬಂಡೆಗಳ ಹಿಂಡು ಹಿಂಡು ಮಲಗಿದ್ದ ಹೊಳೆಯಂಚಿನ ನೀರಿನಲ್ಲಿ ಬಟ್ಟೆ ಕೌಪೀನಧಾರಿಯಾಗಿ ನೀರಿಗಿಳಿದು ಈಜಿ, ಮಿಂದು ನಲಿದಾಡುತ್ತಿದ್ದೆನು. ಈಜುವಾಗ ನನಗೆ ಹಿಗ್ಗೋ ಹಿಗ್ಗು ಖುಷಿಯೋ ಖುಷಿ! ಮೊಣಕಾಲೆತ್ತರ ನೀರಿದ್ದ ದಾಟು ದಾರಿಯಲ್ಲಿ ಕಲ್ಲಿಂದ ಕಲ್ಲಿಗೆ ಕುಪ್ಪಳಿಸಿ ನೆಗೆಯುತ್ತಾ ಹೊಳೆ ಹಾದು ಆಚೆಯ ದಡ ಸೇರಿ ತೋಟಕ್ಕೆ ಹೋಗು ತ್ತಿದ್ದೆನು. ಅಲ್ಲಿ ಹೊಳೆಯ ದಡದ ಅಂಚಿನ ಮರಳರಾಶಿಯಲ್ಲಿ ಹುಲುಸಾಗಿ ಬೆಳೆದಿದ್ದ ಹೊಂಗೆಯ ಹೆಮ್ಮರಗಳ ನೆರಳಿನಲ್ಲಿ ಮಲಗಿ, ಆಯಾಸ ನೀಗಿಸಿಕೊಳ್ಳುತ್ತಿದ್ದೆನು. ನನಗೆ ಮಳೆಯಲ್ಲಿ, ಚಳಿಯಲ್ಲಿ, ಬಿಸಿಲಿನಲ್ಲಿ, ಗದ್ದೆಯಲ್ಲಿ, ತೋಟದಲ್ಲಿ ಕಾಡಿನಲ್ಲಿ, ಹೊಳೆಯಲ್ಲಿ ನಡೆದು ಅಭ್ಯಾಸವಾಗಿತ್ತು. ಮರದ ಮೇಲೆ ಕೋಗಿಲೆಗಳು ಹಸಿರು ಎಲೆಗಳ ಮಧ್ಯೆ ಕಗ್ಗ್ತೆ ಕುಳಿತು, "ಕೂಹೂ, ಕೂಹೂ" ಎಂದು ಕೂಗುತ್ತಿದ್ದವು. ಆ ಕೂಗು ನನಗೆ " ನನ್ನಂತಾಗು, ನನ್ನಂತಾಗು " ಎನ್ನುವಂತಿತ್ತು.

ಕೆಲವು ವೇಳೆ ನಾನು ಏಕಾಂತದಲ್ಲಿದ್ದಾಗ, ನಾನು ಗಾಢ ಚಿಂತನೆಯಲ್ಲಿದ್ದಂತೆ, ಬಾಹ್ಯಸ್ಥಿತಿಯನ್ನು ಮರೆ ತಂತೆ ಕುಳಿತಿರುತ್ತಿದ್ದೆನು. ಮನಸ್ಸು ಏನೇನನ್ನೊ ಮೆಲುಕುಹಾಕುತ್ತಿತ್ತು. ಒಮ್ಮೊಮ್ಮೆ ಅದು ತುಂಬಾ ಗಹನವೂ, ಉನ್ನತವೂ ಆದ ವಿಚಾರಗಳಿಗೂ ಏರಿ ಇಳಿಯುತ್ತಿತ್ತು. ದೇವರು, ಸೃಷ್ಟಿ, ಜಗತ್ತು, ವಿಧಿ, ಪಾಪ, ಪುಣ್ಯ, ಸೂರ್ಯ, ಚಂದ್ರ, ಗ್ರಹ, ನಕ್ಷತ್ರ ಹೀಗೆ ಆಲೋಚನೆ ಅಲೆಯುತ್ತಿತ್ತು. ಆಗ ನಾನು ಒಂದು ಜಗತ್ತಿನಿಂದ ಮತ್ತೊಂದು ಜಗತ್ತಿಗೆ ಬಿದ್ದವನಂತೆ ಎಚ್ಚೆತ್ತು ನೋಡುತ್ತಿದ್ದನು.

ಶಾಲೆಯ ಗಣಿತಶಾಸ್ತ್ರದ ಅಧ್ಯಾಪಕರಾಗಿದ್ದ ನಾಯಿಡುರವರು ನನಗೆ ಗಣಿತಶಾಸ್ತ್ರದಲ್ಲಿದ್ದ ಶ್ರದ್ಧಾನಿಷ್ಠೆ ಗಳನ್ನು ಅನೇಕ ಸಂದರ್ಭಗಳಲ್ಲಿ ಕೊಂಡಾಡಿದ್ದರು. ನಾನು ಮಾಧ್ಯಮಿಕ ಶಾಲೆ ಮುಗಿಸಿ, ಹೈಸ್ಕೂಲ್ ಸೇರಿ ದಾಗ, ಅವರು ಗಣಿತಶಾಸ್ತ್ರದಲ್ಲಿ ಅತಿ ಹೆಚ್ಚು ಅಂಕ ಪಡೆದ ನನಗೆ ತಮ್ಮ ಮೆಚ್ಚುಗೆಯ ಸಂಕೇತವಾಗಿ ಗೌತಮ

ಬುದ್ಧನ ಜೀವನ ಚರಿತ್ರೆಯ ಪುಸ್ತಕವನ್ನು ಬಹುಮಾನವಾಗಿ ನೀಡಿದ್ದರು. ಹೈಸ್ಕೂಲಿನಲ್ಲಿಯೂ, ಸೂರ್ಯ ನಾರಾಯಣ ಎಂಬ ಗಣಿತಶಾಸ ಮಾಸ್ತರು ನನಗೆ ಗಣಿತ ಶಾಸ್ತ್ರದಲ್ಲಿದ್ದ ಪರಿಣಿತಿಯನ್ನು ನೋಡಿ, ಅನೇಕ ವೇಳೆ ಪ್ರಶಂಸೆಯ ಮಾತುಗಳನ್ನು ಆಡುತ್ತಿದ್ದರು. ಇಂತಹ ಸನ್ನಿವೇಶದಲ್ಲಿ ನನ್ನ ಬಗ್ಗೆ ಸಹಾನುಭೂತಿಯನ್ನು ತೋರು ತ್ತಿದ್ದ ಮಾಸ್ತರನ್ನು ಕಂಡಾಗ, ಹೃದಯ ಕೃತಜ್ಞತೆಯಿಂದ ತುಂಬಿ ತುಳುಕುತ್ತಿತ್ತು. ಸೂರ್ಯನಾರಾಯಣರು ಕಾಯಾ, ವಾಚಾ, ಮನಸಾ ದುಡಿದು, ಶ್ರೇಷ್ಠ ಅಧ್ಯಾಪಕರೆನಿಸಿಕೊಂಡಿದ್ದರು. ಅವರ ಪಾಂಡಿತ್ಯ, ಶ್ರದ್ಧೆ ನಗು ಮೊಗ ವಿದ್ಯಾರ್ಥಿಗಳ ಹೃದಯವನ್ನು ಸೂರೆಗೊಂಡಿದ್ದವು. ಅವರ ಸೌಜನ್ಯ, ಸ್ನೇಹಪರತೆ ಅಧ್ಯಾಪಕ ವೃಂದ ವನ್ನೂ, ವಿದ್ಯಾರ್ಥಿವೃಂದವನ್ನೂ ಆಕರ್ಷಿಸಿದ್ದವು. ಅವರು ಜನಪ್ರಿಯ ಅಧ್ಯಾಪಕರಾಗಿ, ಹೆಚ್ಚು ಗೌರವ, ವಿಶ್ವಾಸಕ್ಕೆ ಪಾತ್ರರಾಗಿದ್ದರು.

ಒಮ್ಮೆ ತರಗತಿಯಲ್ಲಿ ಹಿಂದಿನ ಪ್ರಶ್ನೆಪತ್ರಿಕೆಯಲ್ಲಿ ಕೊಟ್ಟಿದ್ದ ಟ್ರಪಿಜಿಯಂ ರಚಿಸಲು ಹೊರಟ ಸೂರ್ಯ ನಾರಾಯಣರು ತಬ್ಬಿಬ್ಬಾದರು. ಅದನ್ನು ರಚಿಸಲು ಆಗಲಿಲ್ಲ. "ಪ್ರಶ್ನೆ ಪತ್ರಿಕೆಯಲ್ಲಿ ತಪ್ಪಾಗಿ ಪ್ರಶ್ನೆ ಪ್ರಿಂಟ್ ಆಗಿರಬೇಕು. ಹಾಗಿಲ್ಲದಿದ್ದಲ್ಲಿ ನಾಳೆ ಟ್ರಪಿಜಿಯಂ ರಚಿಸಿ ತೋರಿಸುವುದಾಗಿ ತಿಳಿಸಿದರು." ಆ ವೇಳೆಗೆ ಅವರಿಗೆ ಏನು ಅನ್ನಿಸಿತೋ, ಒಂದು ಸವಾಲು ಹಾಕಿ ಹೇಳಿದರು. "ಈ ಟ್ರಾಪಿಜಿಯಂನನ್ನು ಈಗ ನಾನು ರಚಿಸಲಾಗ ಅಲ್ಲ. ನಿಮ್ಮಲ್ಲಿ ಯಾರಾದರೂ ಇದನ್ನು ರಚಿಸುವುದಾದರೆ, ನಾನು ಸಾಧಿಸಲು ಆಗದೇ ಇರುವುದನ್ನು ಸಾಧಿಸು ವಂತಹ ವಿದ್ಯಾರ್ಥಿಯನ್ನು ನಾನು ತರಬೇತಿ ಮಾಡಿದ್ದೇನೆಂದು ಹೆಮ್ಮೆಪಡುತ್ತೇನೆ." ಎಂದರು. ವಿದ್ಯಾರ್ಥಿಗಳು ಒಬ್ಬರ ಮುಖವನ್ನು ಇನ್ನೊಬ್ಬರು ನೋಡಿಕೊಂಡು, ಸುಮ್ಮನೆ ಕುಳಿತಿರುವುದರಿಂದ ಉಪಾಧ್ಯಾಯರಿಗೆ ಬೇಸರ ವಾಗಿತ್ತು. ಆಗ ನಾನು ಎದ್ದು ನಿಂತೆನು. ನಾನು ನಿಂತಿದ್ದನ್ನು ಕಂಡು, ಅವರ ಮುಖದಲ್ಲಿ ಸಂತಸ ಮೂಡಿತು.

ನಾನು ಹೇಳಿದೆ "ಎರಡು ಸಮಾನಾಂತರ ಸರಳ ರೇಖೆಗಳನ್ನು ಮತ್ತೊಂದು ಸರಳರೇಖೆ ಛೇದಿಸಿದಾಗ ಉಂಟಾಗುವ ಒಳಕೋನ ಗಳ ಮೊತ್ತ 180 ಡಿಗ್ರಿ. ಆದುದರಿಂದ ABCD ಟ್ರಪಿಜಿಯಂನ DAB ಕೋನ 90 ಡಿಗ್ರಿ ADCಕೋನ 90 ಡಿಗ್ರಿ, ಬೇರೆ ಮೂರು ರೇಖೆಗಳ ಅಳತೆ ಕೊಟ್ಟಿದೆ. ಆದುದರಿಂದ ಟ್ರಪಿಜಿಯಂ ರಚಿಸ ಬಹುದು." ಆಗ ಸಂತಸಗೊಂಡ ಸೂರ್ಯನಾರಾಯಣರು ಧಾವಿಸಿ ಬಂದು, ನನ್ನ ಬೆನ್ನು ತಟ್ಟಿ, ಬಾಯಿ ತುಂಬಾ ನನ್ನನು ಹೊಗಳಿ, ಬಾಚಿ ತಬ್ಬಿಕೊಂಡರು.

ತಮ್ಮ ಶಿಷ್ಯನ ವಿಚಾರದಲ್ಲಿ ಅವರಿಗೆ ಅಪಾರ ಮಮತೆಯಿತ್ತು, ಹೆಮ್ಮೆಯೂ ಇತ್ತು. ಪ್ರಶಂಸೆಯಿಂದ ನನ್ನ ಹತ್ತಿರ ನಿಂತಿದ್ದು, ಸ್ಮೃತಿ ತರಂಗಮಯವಾದ ಅನೇಕ ಆಲೋಚನಾ ಪ್ರವಾಹನ್ನು ದಾಟಿದ ಅನಂತರವೇ, ಅವರು ತರಗತಿಯ ಹುಡುಗರ ಕಡೆಗೆ ತಿರುಗಿ, ಹೃದಯ ತುಂಬಿ ತಮಗಾದ ಆನಂದವನ್ನು ಪ್ರಂಶಸೆಯ ಅಮೃತಧಾರೆಯಲ್ಲಿ ಎಸೆದುಬಿಟ್ಟರು. "ಇಂದು ನನ್ನ ಜೀವನ ಸಾರ್ಥಕವಾಯಿತು. ನಾನು ಸಾಧಿಸಲಾರದ್ದನ್ನು ಸಾಧಿಸಿರುವಂತಹ ಒಬ್ಬ ವಿದ್ಯಾರ್ಥಿಯನ್ನು ತಯಾರುಮಾಡಿದ್ದೇನೆಂಬ ಹೆಮ್ಮೆ ನನ್ನ ಮನಸ್ಸಿನಲ್ಲಿ ಮನೆಮಾಡಿ, ಮೂಡಿ ನಿಂತಿದೆ" ಎಂಬ ಅವರ ಮಾತುಗಳನ್ನು ಕೇಳಿ ನನಗೆ ಆನಂದವಾಯಿತು. ಅವರ ಸರಳ ಹೃದಯ, ಸ್ನೇಹಮಯ ಆದರದ ಪವಿತ್ರತೆಗೆ ನಾನು ಶರಣಾದೆನು. ಆಗ ಉಳಿದ ವಿದ್ಯಾರ್ಥಿಗಳೆಲ್ಲ ನನ್ನನ್ನೇ ನೋಡುತ್ತಾ ಕೈ ಚಪ್ಪಾಳೆ ತಟ್ಟಿ ಕೇಕೆ ಹಾಕಿದರು. ನಾನು ಗಣಿತ ಶಾಸ್ತ್ರದಲ್ಲಿ ಪ್ರವೀಣನೆಂದು ಸ್ಕೂಲಿಗೆ ಸ್ಕೂಲೇ ಹೊಗಳುತ್ತಿತ್ತು.

ನನ್ನ ಮತ್ತೊಬ್ಬ ಅಚ್ಚು ಮೆಚ್ಚಿನ ಅಧ್ಯಾಪಕರೆಂದರೆ ಕನ್ನಡ ಪಂಡಿತರಾದ ಶ್ರೀನಿವಾಸಶಾಸ್ತ್ರಿಗಳು. ಅವರಿಗೆ ನನ್ನ ಸಾಹಿತ್ಯಜ್ಞಾನ ತುಂಬಾ ಹಿಡಿಸಿತ್ತು.

ಶಿಷ್ಯನ ಅಸಾಧಾರಣ ಬುದ್ಧಿ ಸಾಮರ್ಥ್ಯ ಕಂಡು, ಗುರುಗಳಿಗೆ ನನ್ನಲ್ಲಿ ಅತೀವ ಪ್ರೇಮ. ಅಂತಯೇ, ಶಿಷ್ಯನಿಗೂ ಗುರುವಿನಲ್ಲಿ ಅನನ್ಯ ಪೂಜ್ಯ ಭಾವನೆ.

ನನ್ನ ನಡೆ, ನುಡಿ, ಜಾಣತನ, ವಿದ್ಯಾಸಕ್ತಿ, ಸದಾಚಾರ, ಸಂಪನ್ನತೆ ನೋಡಿ ನನ್ನ ತಂದೆ ಹರ್ಷಗೊಂಡಿದ್ದರು. ಅವರಿಗೆ ತಮ್ಮ ಮಕ್ಕಳೆಲ್ಲರಲ್ಲಿ ನಾನು ಮೇಧಾವಿಯೆಂಬ ಭಾವನೆ ಅನುಭವಕ್ಕೆ ಬಂದಿತ್ತು.

ರಾತ್ರಿಯ ವೇಳೆ ಬಹು ಬೇಗ ಮಲಗಿಬಿಡುತ್ತಿದ್ದ ನನ್ನನು, ಬೆಳಿಗ್ಗೆ ನಾಲ್ಕುಗಂಟೆಗೆ ಓದಲು ಅವರು ಎಚ್ಚಿಸುತ್ತಿದ್ದರು. ತನ್ನ ಪಠ್ಯಪುಸ್ತಕಗಳ ಜೊತೆಗೆ ಅನೇಕ ಪಠ್ಯೇತರ ಪುಸ್ತಕಗಳನ್ನು ಬೆಳಗಾಗುವ ತನಕ ಓದುತ್ತಿದ್ದೆನು. ಇದರಿಂದಾಗಿ, ಭಾಷಾ ಸಾಮರ್ಥ್ಯದಲ್ಲಿ ನಾನು ಓರಗೆಯ ವಿದ್ಯಾರ್ಥಿಗಳಿಗಿಂತ ಬಹು ಮುಂದಿದ್ದೆನು. ನನ್ನ ಶಬ್ದ ಸಂಪತ್ತು ಅಪಾರವಾಗಿತ್ತು.

ಕಾಲಕ್ರಮೇಣ ನನ್ನಲ್ಲಿ ವ್ಯಾಸಂಗಾಸಕ್ತಿಯೂ, ಜ್ಞಾನದಾಹವೂ ಅಧಿಕವಾಗತೊಡಗಿದವು. ಯಾವಾಗಲೂ ಯಾವುದೋ ಒಂದು ಮೂಲೆಯಲ್ಲಿ ಕುಳಿತು ಓದಿನಲ್ಲಿ ತಲ್ಲೀನನಾಗಿರುತ್ತಿದ್ದೆನು. ಓದುಬರಹಗಳ ನಡುವೆ ನನ್ನನು ನಾನೇ ಮರೆಯುತ್ತಿದ್ದೆನು. ಅಷ್ಟೊಂದು ತನ್ಮಯತೆ, ಏಕಾಗ್ರತೆ. ನನ್ನ ಜ್ಞಾನದಾಹ ಹಿಂದಿನ ಚಕ್ರವರ್ತಿಯೊಬ್ಬನ ಸಾಮ್ರಾಜ್ಯ ದಾಹದಂತಿತ್ತು. ಎಷ್ಟೋ ವೇಳೆ ಓದಿನಲ್ಲಿ ತಲ್ಲೀನನಾಗಿ ಊಟ ತಿಂಡಿ ಎಲ್ಲವನ್ನೂ ಮರೆಯುತ್ತಿದ್ದೆನು. ನನಗೆ ಕೆಲವು ಸಂದರ್ಭಗಳಲ್ಲಿ ರಾತ್ರಿ ಕಳೆದು ಹಗಲಾದದ್ದೇ ತಿಳಿಯುತ್ತಿರಲಿಲ್ಲ. ಪ್ರತಿಯೊಂದು ಪುಸ್ತಕದ ಯಾವ ಪುಟದಲ್ಲಿ, ಯಾವ ಜಾಗದಲ್ಲಿ ಏನಿದೆ ಎನ್ನುವುದನ್ನು ಹೇಳಬಲ್ಲವನಾಗಿದ್ದೆನು. ಪುಸ್ತಕ ಒದಗಿಸಬಲ್ಲ ಬೋಧನೆಯೇ ರಂಜನೆ ಎನ್ನುವುದು ನನ್ನ ಸೂತ್ರವಾಗಿತ್ತು.

ಬಿಡುವಿನ ವೇಳೆಯಲ್ಲಿ ಯಾವುದಾದರೂ ಮನಸಂತೋಷ ಕೊಡುವ ಕೆಲಸದಲ್ಲಿ, ನಮ್ಮನ್ನು ನಾವೇ ತೊಡಗಿಸಿಕೊಳ್ಳುವುದು ಹವ್ಯಾಸ. ನನಗೆ ಕತೆ, ಕಾದಂಬರಿ, ವಾರಪತ್ರಿಕೆ, ಮಾಸಪತ್ರಿಕೆಗಳನ್ನು ಓದುವುದು ಒಂದು ಹವ್ಯಾಸವಾದರೆ, ಅವುಗಳಲ್ಲಿರುವ ಸ್ವಾರಸ್ಯಕರ ಸುದ್ದಿ ಸಂಗತಿಗಳನ್ನು ಒಳ್ಳೊಳ್ಳೆಯ ಸೂಕ್ತಿಗಳನ್ನು, ಹೊಸಶಬ್ದ, ನಗೆಹನಿಚುಟುಕಗಳನ್ನು ಬರೆದಿಟ್ಟು ಕೊಳ್ಳುವುದು ಎರಡನೆಯ ಹವ್ಯಾಸವಾಗಿತ್ತು. ಇವೆಲ್ಲ ನನ್ನ ಮನಸ್ಸಿನಲ್ಲಿ ಒಳ್ಳೆಯ ಭಾವನೆಗಳನ್ನು ಉಂಟು ಮಾಡಿದುದಲ್ಲದೆ, ಇನ್ನೂ ಹೆಚ್ಚು ತಿಳಿದುಕೊಳ್ಳಬೇಕೆಂಬ ಆಸಕ್ತಿಯನ್ನೂ ಮೂಡಿಸಿತು. ಇದರಿಂದ, ನನ್ನ ಜ್ಞಾನ ವೈಶಾಲ್ಯ ಹೆಚ್ಚಿ ಜಗತ್ತಿನ ಆಗುಹೋಗುಗಳ ಅರಿವುಂಟಾಗುತ್ತಿತ್ತು.

ಯಾರು ಪುಸ್ತಕಗಳನ್ನು ಬಲವಾಗಿ ಪ್ರೀತಿಸುತ್ತಾರೋ, ಅಂಥವರು ನಿಜವಾದ ಜ್ಞಾನ ಪೂಜಾರಿಗಳಾಗುತ್ತಾರೆ. ವಿದ್ಯೆಗೆ ಆಸಕ್ತಿಯೇ ತಾಯಿ, ಅಭ್ಯಾಸವೇ ತಂದೆ, ಅರಿವೆ ಗುರು, ನಿಷ್ಠೆಯೇ ಶ್ರೀರಕ್ಷೆ ಎಂದು ನನಗೆ ತಿಳಿದಿತ್ತು. ವಿದ್ಯಾವಂತನಾಗಬೇಕೆಂಬ ಆಸೆ, ಎಂದಾದರೊಂದು ದಿನ ಘನವಿದ್ವಾಂಸನಾಗ ಬೇಕೆಂಬ ಆಕಾಂಕ್ಷೆ ಮತ್ತು ಆತ್ಮ ವಿಶ್ವಾಸ ನನಗಿತ್ತು. ಗುರುಕರುಣೆಯೊಂದಿದ್ದರೆ ಲೋಕದಲ್ಲಿ ಯಾವುದು ತಾನೇ ಅಸಾಧ್ಯ? ಮಹಾಪುರುಷರ ಜೀವನ ಚರಿತ್ರೆಗಳನ್ನು ಓದಿದ್ದ ನನ್ನಲ್ಲಿ, ತಾನೂ ಮಹತ್ಕಾರ್ಯಗಳನ್ನು ಸಾಧಿಸಿ, ಕೀರ್ತಿವಂತನಾಗಬೇಕೆಂಬ ಮಹಾದಾಕಾಂಕ್ಷೆ ಉದ್ಭವಿಸಿತು. ಎಂತಹುದದು ಎಂಬುದು, ಆಗ ನನಗೆ ಹೊಳೆಯುತ್ತಿರಲಿಲ್ಲ.

ನಾನು ದೊಡ್ಡವರಿಗೆ ವಿಧೇಯನಾಗಿ ವರ್ತಿಸುತ್ತಿದ್ದರೂ, ಭಿನ್ನಾಭಿಪ್ರಾಯ ಅನಿವಾರ್ಯವಾದಾಗ, ನನ್ನ ಅಭಿಪ್ರಾಯವೇ ಸರಿ ಎಂದು ಮನಗಂಡಾಗ, ಅದನ್ನು ನಿರ್ದಾಕ್ಷಿಣ್ಯವಾಗಿ, ನಿರ್ಭಯವಾಗಿ ಅವರಿಗೆ ತಿಳಿಸಲು ಹಿಂಜರಿಯುತ್ತಿರಲಿಲ್ಲ.

ಪುಸ್ತಕಗಳ ಮನೆಯಲ್ಲಿ ನಾನು ಲೋಕವನ್ನೇ ಮರೆಯುತ್ತಿದ್ದೆನು. ಅಷ್ಟು ಜ್ಞಾನಾರ್ಜನೆಯ ಪಿಪಾಸೆ ನನ್ನಲ್ಲಿತ್ತು. ಅವುಗಳೇ ನನ್ನ ಜೀವನ ಸಂಗಾತಿಗಳಾದುವು ಗುರುವಾದುವು, ರಕ್ಷೆಯಾದುವು, ಸರ್ವಸ್ವ ವಾದುವು. ನಿಸ್ಸಂಗಿಯಾದವನಿಗೆ ಸಂಗ ದೊರಕಿದಂತಾಗಿ, ಸಮಾಜದಲ್ಲಿ ಕಾಣದ ಸ್ನೇಹ ವಾತ್ಸಲ್ಯಗಳನ್ನು ಅವುಗಳಲ್ಲಿ ಕಾಣತೊಡಗಿದೆನು. ಷೇಕ್ಸ್‌ಪಿಯರ್, ಮಿಲ್ಟನ್, ಗಿಬ್ಬನ್, ರಸ್ಕಿನ್, ಕಾರ್ಲೈನ್, ಲ್ಯಾಂಬ್ ಡೆಕ್ವಿನ್ಸಿ, ಡಾನಿಯೇಲ್ ಡೀಫ್ರೊ, ಮುಂತಾದ ಲೇಖಕರ ಬರಹ ಭಾಗಗಳು ಒಂದೊಂದೂ ನನಗೆ ಹೊಸಹೊಸ ಲೋಕ ಗಳನ್ನೇ ತೆರೆದು ತೋರಿಸುತ್ತಿದ್ದವು.

ಅವನ್ನು ಓದಿದಂತೆಲ್ಲ "ಬಾ ನನ್ನ ಲೋಕ ಪ್ರವೇಶಿಸು" ಎಂದು ಕೈ ಬೀಸಿ ಕರೆಯುತ್ತಿದ್ದವು. ಅವುಗಳನ್ನು ಓದ ತೊಡಗಿದಾಗ ನನ್ನಗಾದ ಅನುಭವ ಅತೀಂದ್ರಿಯ ಸದೃಶವಾಗಿತ್ತು. ನುಡಿಗಟ್ಟುಗಳ ಮರ್ಮ ಹೊಳೆಯುತ್ತಿರಲಿಲ್ಲ, ಪದಗಳಿಗೆ ಸ್ಪಷ್ಟ ಅರ್ಥ ತಿಳಿಯದಿದ್ದರೂ ನನಗೆ ಭಾವ ಹೊಳೆಯುತ್ತಿತ್ತು. ಓದಿದಂತೆಲ್ಲಾ ನನ್ನ ವರ್ತನೆ ಬದಲಾಗತೊಡಗಿತು. ಮಾತುಕತೆ ಗಂಭೀರವಾಗತೊಡಗಿತ್ತು. ಕಣ್ಣುಗಳಲ್ಲಿ ವರ್ಚಸ್ಸು ಹೆಚ್ಚಿತ್ತು. ನನ್ನ ವಿದ್ಯಾವೈಶಾಲ್ಯತೆ ವೈವಿಧ್ಯತೆಗಳ ನಿದರ್ಶನವಾಗಿತ್ತು. ನನ್ನ ತಂದೆ, ತಮ್ಮ ನನ್ನ ಕುಶಾಗ್ರಮತಿಗೆ ಮಾರು ಹೋಗಿ, ನನ್ನ ಭವಿಷ್ಯದ ಬಗ್ಗೆ ತುಂಬಾ ನೆಚ್ಚಿಗೆಯಿಟ್ಟು ಕೊಂಡಿದ್ದರು. ಅವರ ಪರೋಪಕಾರ ಬುದ್ಧಿ, ದಯೆ, ಸತ್ಯನಿಷ್ಠೆ, ನ್ಯಾಯಪರತೆ ಮತ್ತು ನಿರ್ಭಯತೆಗಳು ನನಗರಿವಿಲ್ಲದಂತೆಯೇ ಸೂಕ್ಷ್ಮಮತಿ ನನ್ನ ಎಳೆಯ ಹೃದಯ ದಲ್ಲಿ ಮುದ್ರಿತಗೊಳ್ಳುತ್ತಿದ್ದವು, ರಕ್ತಗತವಾಗುತ್ತಿದ್ದವು. S.S.L.C. ಪರೀಕ್ಷೇಯಲ್ಲಿ ನನ್ನ ಶಾಲೆಗೆ ಪ್ರಥಮದರ್ಜೆ ಯಲ್ಲಿ ಪಾಸಾದ ನನ್ನನು ನೋಡಿದ ತಂದೆಯ ನೇತ್ರಗಳಿಂದ ಆನಂದಬಾಷ್ಪ ಹರಿಯುತಿತ್ತು. ತಂದೆಯ ಬಾಯಿಂದ ಬರುತ್ತಿದ್ದ ಪ್ರಶಂಸೆಯ ಮಾತುಗಳು ಕೇಳಿದಾಗ, ನನ್ನ ದೇಹದಲ್ಲಿ ನವಚೈತನ್ಯ ಸಂಚರಿಸಿದಂತಾ ಗುತ್ತಿತ್ತು, ಹಾಗೂ ಮನಸ್ಸಿನ್ನಲ್ಲೆಲ್ಲಾ ಅದಮ್ಯ ಧೈರ್ಯೋತ್ಸಾಹಗಳು ವ್ಯಾಪಿಸಿಕೊಂಡಂತಾಗುತ್ತಿತ್ತು.

ನನಗೆ ತಂದೆಯವರಲ್ಲಿ ವಿಶೇಷವಾದ ಭಕ್ತಿಗೌರವಗಳಿದ್ದವು. ನನ್ನ ಜೀವನ ವಿಸ್ತಾರಕ್ಕೆ, ಜ್ಞಾನ ವಿಕಾಸಕ್ಕೆ ಕಾವ್ಯ ಸ್ಫೂರ್ತಿಗೆ ತಂದೆ ಅಸಾಧಾರಣ ಪ್ರಭಾವ ಬೀರಿದ್ದರು. ನನ್ನ ಜೀವನ ವಿಸ್ತಾರ, ಅಭ್ಯಾಸ, ಅಚಲನಿಷ್ಠೆ ಇವೆಲ್ಲವನ್ನೂ ನೋಡಿದ್ದರು. ನಾನು ಮುಂದೆ ಒಬ್ಬ ತತ್ವಜ್ಞಾನಿ ಆಗುವನೆಂದು ಎಣಿಸಿದ್ದರು.

ನನ್ನ ಮನಸ್ಸು ದೇವರ ವಿಚಾರವಾಗಿಯೂ, ಜೀವನ ವಿಚಾರವಾಗಿಯೂ, ಬದುಕಿನ ವಿಚಾರವಾಗಿಯೂ ಆಗಾಗ್ಗೆ ಚಿಂತಿಸುತ್ತಿತ್ತು. ಆ ಚಿಂತನೆ ಮತ್ತು ಆ ರೀತಿಯ ಅಂತರ್ಮುಖತೆ ಬದುಕಿನ ರಹಸ್ಯಮಯತೆಯನ್ನು ಅನುಭವಕ್ಕೆ ತರುತ್ತಿತ್ತು. ಯಾವುದೋ ಒಂದು ಮಬ್ಬುಮಬ್ಬಾದ, ಅಸ್ಪಷ್ಟವಾದ ದಿವ್ಯ ಆಕಾಂಕ್ಷೆ ಆಗಾಗ್ಗೆ ಹೃದಯ ಸಂಚಾರಿಯಾಗುತ್ತಿತ್ತು. ಯಾವ ವಿಷಯವೇ ಆಗಲಿ, ಅದನ್ನು ಕೂಲಂಕುಷವಾಗಿ, ಸೂಕ್ಷ್ಮವಾಗಿ, ಪರಿಶೀಲಿಸುವ ಸ್ವಭಾವ ನನಗೆ ವೇದ್ಯವಾಗಿದೆ, ಎಂದು ಅದನ್ನು ಅವಲೋಕಿಸಿದ ಅವರಿಗೆ ಮನದಟ್ಟಾಗುತ್ತಿತ್ತು.

ನನ್ನ ಬುದ್ಧಿ ಹೆಚ್ಚು ಹೆಚ್ಚು ಚಿಂತನ ಶೀಲವಾಗಿ ಬಯಲು, ಆಕಾಶ, ಬಿಸಿಲು, ಮೋಡ, ಮಳೆ, ಹೊಳೆ ಇತ್ಯಾದಿ ನೂರಾರು ನಿಸರ್ಗ ವ್ಯಾಪಾರ ಚೇಷ್ಟಿತಗಳಿಂದ ಭಗವತ್ಪರವಾದ ಭಾವನೆಗಳಿಗೆ ಪ್ರಚೋದಕವಾಗಿ

ಪ್ರಕೃತಿ ಸೌಂದರ್ಯವನ್ನು ಸವಿಯುವುದರ ಜೊತೆಗೆ, ಆ ಸವಿಯನ್ನು ಸವಿಯುವ ಧ್ಯಾನಶೀಲತೆ ಹೃದಯ ರಸನೆಗೆ ಪ್ರಾಪ್ತವಾಗಿತ್ತು. ನನ್ನ ಈ ಅಂತರಂಗ ಪರಿವರ್ತನೆ ಬಹಿರಂಗಕ್ಕೆ ಅಗೋಚರವಾಗಿತ್ತು. ಅದನ್ನು ಗುರುತಿಸುವ ವ್ಯಕ್ತಿಯಾಗಲಿ, ಅದನ್ನು ಅರಿಯಬಲ್ಲ ಶಕ್ತಿಯಾಗಲಿ ಯಾರಲ್ಲಿಯೂ ಇರಲಿಲ್ಲ.

ಐದನೇ ತರಗತಿಯಲಿ ಓದುತ್ತಿರುವಾಗ, ಓಮ್ಮೆ ವಿದ್ಯಾಧಿಕಾರಿಗಳು ಶಾಲೆಗೆ ಬಂದಾಗ ನನ್ನಿಂದ ಶಾಲಾ ಮಾಸ್ತರು ಹಾಡನ್ನು ಹಾಡಿಸಿದಾಗ, ಹಾಡನ್ನು ಕೇಳಿ ವಿದ್ಯಾಧಿಕಾರಿಗಳು ಮೆಚ್ಚುಗೆಸೂಸಿ ನನ್ನ ಬೆನ್ನು ತಟ್ಟಿ ಶಭಾಷ್‌ಗಿರಿಯನ್ನು ಹೇಳಿದರು.

ನಾನು ಚಿಕ್ಕಂದಿನಿಂದಲೇ ಸಾಹಿತ್ಯ ಪ್ರಪಂಚದತ್ತ ನನ್ನ ದೃಷ್ಟಿಯನ್ನು ಹೊರಳಿಸಿದೆ. ಪಂಪ, ರನ್ನ, ಹರಿಹರ, ರಾಘವಾಂಕ ಮುಂತಾದವರ ಕನ್ನಡ ಸಾಹಿತ್ಯವು ಕುವೆಂಪುರವರ ಕವಿತೆಗಳು, ಕುಮಾರವ್ಯಾಸನ ಅದ್ಭುತ ಕೌಶಲ್ಯ ನನ್ನ ಮನಸ್ಸನ್ನು ಸೆಳೆದು ತಣಿಸಿತು.

ನನಗೆ ಕನ್ನಡ ಪಂಡಿತರಾಗಿದ್ದ ಶ್ರೀನಿವಾಸಶಾಸ್ತ್ರಿಗಳು ನ್ಯಾಯ, ತರ್ಕ, ವ್ಯಾಕರಣ, ಜ್ಯೋತಿಷ್ಯ, ಅಲಂಕಾರ ಮೊದಲಾದ ಶಾಸ್ತ್ರಗಳನ್ನು, ಸಾಹಿತ್ಯವನ್ನೂ ಕರತಲಾಮಲಕ ಮಾಡಿಕೊಂಡು ಮಹಾಪಂಡಿತ ರಾಗಿದ್ದರು. ಅವರು ಜರಿಯಿಲ್ಲದ ಸಾದಾ ರುಮಾಲು ಸುತ್ತಿ ಕಚ್ಚೆಪಂಚೆ ಉಟ್ಟು, ಸಾಧಾರಣ ಬಟ್ಟೆಯ ಕೋಟು ಹಾಕಿ, ಅತ್ಯಂತ ಸರಳ ಜೀವಿಯಾಗಿದ್ದರು. ಮಾತಿನಲ್ಲಿ ಮೃಧುತ್ವ, ಸ್ನೇಹಪರತೆ ಸೂಸುತ್ತಿತ್ತು. ಜೊತೆಗೆ ಅವರು ಸುಸಂಸ್ಕೃತರಾಗಿಯೂ ನನ್ನ ಮೆಚ್ಚುಗೆಗೂ ಗೌರವಕ್ಕೂ ಬಹು ಬೇಗ ಪಾತ್ರರಾಗಿದ್ದರು.

ಪಾಠ ಹೇಳುವುದರಲ್ಲಿ ಶ್ರೀನಿವಾಸಶಾಸ್ತ್ರಿಗಳಿಗೆ ಒಂದು ಚೈತನ್ಯ ಪೂರ್ಣವಾದ ಸಂತೋಷವಿದ್ದು, ಆಲಿಸುತ್ತಿದ್ದ ವಿದ್ಯಾರ್ಥಿಗಳನ್ನು ನಗೆಯ ಹೊನಲಿನಲ್ಲಿ ತೇಲಿಸಿ ಬಿಡುತ್ತಿದ್ದರು. ಕವಿತೆಗಳ ಸ್ವಾರಸ್ಯ, ಅವುಗಳ ಹಾಸ್ಯರಸ ಅವರು ಓದಿದ ಧಾಟಿಯಿಂದಲ್ಲದೆ ಅಭಿವ್ಯಕ್ತವಾಗುತ್ತಿರಲಿಲ್ಲ.

ಅವರು ತಮ್ಮ ನೃತ್ಯಮಯ ಶೈಲಿಯಿಂದಲೂ ಬಾಲಚೇತನಗಳಿಗೆ ಕಚಗುಳಿಯಿಟ್ಟು ನಗಿಸುವಂತಹ ಹಾಸ್ಯದಿಂದಲೂ ವಿದ್ಯಾರ್ಥಿಗಳ ಮೆಚ್ಚುಗೆಯನ್ನು ಸೂರೆಗೊಂಡಿದ್ದರು.

ತಮಗೆ ನೂತನ, ಪ್ರಚಲಿತ, ಸ್ವಾರಸ್ಯಕರವಾಗಿ ತೋರಿದವುಗಳನ್ನೂ ಆಗಾಗ್ಗೆ ಪ್ರಸ್ತಾಪಿಸಿ ವಿದ್ಯಾರ್ಥಿ ಗಳ ಕುತೂಹಲಗಳನ್ನು ಕೆರಳಿಸಿ, ಚೇತನವನ್ನು ವಿಕಾಸಗೊಳಿಸುತ್ತಿದ್ದರು.

ಭಾರತೀಯರಿಗೆ ಲೋಕದ ಗೌರವ ಸಂದು ಕೋಡು ಮೂಡಿದಂತಾಗಿರುವುದನ್ನು ಆಲಿಸುತ್ತಿದ್ದ ಬಾಲಕರ ಹೃದಯಗಳಲ್ಲಿ ಹೆಮ್ಮೆ ಪುಲಕಿತವಾಗುವಂತೆ ವರ್ಣಿಸುತ್ತಿದ್ದರು.

ಜಗತ್ತಿನ ಮಹಾಪುರುಷರ, ಮಹಾಲೇಖಕರ, ಮಹಾಸೇನಾನಿಗಳ, ಮಹಾಕವಿಗಳ ಜೀವನದ ಸಂಗತಿ ಗಳನ್ನು ಸ್ವಾರಸ್ಯವಾಗಿ ಹೇಳಿ ನೀವು ಅವರಂತೆ ಆಗಬೇಕೆಂದು ಪ್ರೋತ್ಸಾಹಿಸುತ್ತಿದ್ದರು.

ಆಗ ನನ್ನ ಅಂತರ್ಚೇತನದಲ್ಲಿ ಪೆಟ್ರೋಲಿಗೆ ಬೆಂಕಿ ತೋರಿಸಿದಂತಾಗುತ್ತಿತ್ತು. ಕನ್ನಡ ಎಂದರೆ ಅವರಿಗೆ ಪ್ರಾಣ. ಅದರ ಗೆಲುವೇ ಅವರ ಜೀವನದ ಕೊನೆಯ ಗುರಿ ಮತ್ತು ಸಾರ್ಥಕತೆ.

ಅವರು ವಿಶೇಷ ವಿಮರ್ಶಕ ಮತಿಗಳಾಗಿದ್ದು ನಿಷ್ಠೂರ ಸತ್ಯನಿಷ್ಠೆಯ ವಿಚಾರವಂತರಾಗಿ ತುಂಬ ರಸವತ್ತಾಗಿ ಅವುಗಳ ಕಾವ್ಯತೆ ಮತ್ತು ಆಧ್ಯಾತ್ಮಿಕತೆಯನ್ನು ಹೃದಯ ಸ್ಪಂದಿಸುವಂತೆ ವಾಚಿಸುತ್ತಿದ್ದರು.

ಅದನ್ನು ವಾಗ್ವೈಖರಿಯಲ್ಲಿ ಅಭಿವ್ಯಕ್ತಪಡಿಸುವ ಭಾಷಾಸಾಮರ್ಥ್ಯ ಮತ್ತು ಭಾಷಾಜ್ಞಾನ ಅವರಲ್ಲಿತ್ತು. ಅವರಿಗೆ ಭಗವದ್ ವಿಷಯಕವಾದ ಶ್ರದ್ಧೆ ಮತ್ತು ಪೂಜ್ಯಬುದ್ಧಿಯಿತ್ತು.

ಕನ್ನಡ ನಾಡು-ನುಡಿಗಳ ಏಳಿಗೆಗಾಗಿ ಸದಾಕಾಲ ತಪಸ್ಸು ಮಾಡಿದ ರಸಋಷಿ ಕುವೆಂಪುರವರ, ಬಿ.ಎಂ.ಶ್ರೀಯವರ, ಅ.ನ.ಕೃ, ತ್ರಿವೇಣಿ, ಮಾಸ್ತಿ, ಬೇಂದ್ರೆಯವರ ಹಾಗೂ ಅಕ್ಕಮಹಾದೇವಿ, ಸರ್ವಜ್ಞ, ರನ್ನ, ಪಂಪ, ಕುಮಾರವ್ಯಾಸ, ಮುದ್ದಣ್ಣ ಇನ್ನೂ ಕೆಲವು ಸಾಹಿತಿಗಳ ಕನ್ನಡ ಹಿರಿಮೆಯ ಕವಿತೆಗಳನ್ನು ಆಗಾಗ ತರಗತಿಯಲ್ಲಿ ಪುನರುಚ್ಚರಿಸಿ ಸಾಹಿತ್ಯ ಸುಗಂಧವನ್ನು ಎಳೆಮನಸ್ಸುಗಳ ಮೇಲೆ ಸೂಸುತ್ತಿದ್ದರು. ಈ ರೀತಿ ಹೇಳಿ ಕನ್ನಡದ ರುಚಿ ಮತ್ತು ಅಭಿರುಚಿಗಳನ್ನು ಹೆಚ್ಚಿಸುತ್ತಿದ್ದರು.

" ಏರ್ ಕನ್ನಡ ಬಾವುಟ, ಹಾರ್ ಕನ್ನಡ ಬಾವುಟ"

" ಎಲ್ಲಾದರೂ ಇರು, ಎಂತಾದರೂ ಇರು, ಎಂದೆಂದಿಗೂ ನೀ ಕನ್ನಡವಾಗಿರು"

" ಕನ್ನಡ ಎನೆ ಕುಣಿದಾಡುವುದೆನ್ನೆದೆ "

" ಕನ್ನಡವು ಕಸ್ತೂರಿಯಲ್ತೆ ಸಿರಿಗನ್ನಡಂ ಗೆಲ್ಗೆ "

" ಬಾರಿಸು ಕನ್ನಡ ಡಿಂಡಿಮವ ಓ ಕರ್ನಾಟಕ ಹೃದಯ ಶಿವ "

ಕನ್ನಡಕ್ಕಾಗಿ ಕೈಯೆತ್ತು

ನಿನ್ನಕೈ ಕಲ್ಪವೃಕ್ಷವಾಗುತ್ತದೆ.

ಕನ್ನಡಕ್ಕಾಗಿ ಕೊರಳೆತ್ತು,

ಅಲ್ಲಿ ಪಾಂಚಜನ್ಯ ಮೂಡುತ್ತದೆ.

ಕನ್ನಡಕ್ಕಾಗಿ ಕಿರು ಬೆರಳೆತ್ತಿದ್ದರೂ ಸಾಕು

ಅದೇ ಗೋವರ್ಧನ ಗಿರಿಯಾಗುತ್ತದೆ. "

" ವ್ಯಾಮೋಹವ್ರೋ ಸಾಯಿ
ವೈರಾಗ್ಯವೇ ಕಾಯಿ
ಮುಕ್ತಿದೇವತೆ ತಾಯಿ"

ಬಂದೆನ್ನ ಹೃದಯ ಕಮಲದಿ ನೃತ್ಯವಾಡು
ಮಾಯೆಯನ್ನು ದೂಡು, ಶಕ್ತಿಯನು ನೀಡು "

" ಕುಮಾರ ವ್ಯಾಸನು ಹಾಡಿದನೆಂದರೆ
ಕಲಿಯುಗ ದ್ವಾಪರಯುಗವಾಗುವುದು !
ಭಾರತ ಕಣ್ಣಲಿ ಕುಣಿಯುವುದು
ಮೈಯಲಿ ಮಿಂಚಿನ ಹೊಳೆ ತುಳುಕಾಡುವುದು "

ಈ ಸಣ್ಣ ಕವನದ ಮಹಾಧ್ವನಿ ಸಂಪತ್ತಿಗೆ ನನ್ನ ಹೃದಯ ಕಣ್ಣುತೆರೆಯಿತು. ಯಾವುದೋ ಒಂದು ರಹಸ್ಯಮಯ ಸುಮಧುರ ಭಾವಾಲೋಕಕ್ಕೆ ಒಂದು ಹೊಸ ಗವಾಕ್ಷಿ ತೆರೆದಂತಾಗಿ ನನ್ನ ಚೇತನ ರಸೋನ್ಮಾದಿಯಾಯಿತು.

ಕುವೆಂಪುರವರ ಕವಿತೆಗಳಿಂದ ಪ್ರೇರಿತವಾದ ನಾನು ಅವರ ಬಗ್ಗೆ ಅಭಿಮಾನ ಮೂಡಿ ನನ್ನ ಒಂದು ಪುಟ್ಟ ಕವಿತೆಯನ್ನು ಈ ರೀತಿ ಬರೆದು ಶ್ರೀನಿವಾಸಶಾಸ್ತ್ರಿಗಳಿಗೆ ತೋರಿಸಿದನು.

" ಕನ್ನಡದ ಕಂಪು ಕುವೆಂಪು

ಅವರ ಕವಿತೆ ಬಹು ಇಂಪು

ನೀಡುವುದು ಮನಕ್ಕೆ ಬಹು ತಂಪು
ಕನ್ನಡ ಸಾಹಿತ್ಯಕ್ಕೆ ಇದು ದೊಡ್ಡ ಜಂಪು "

ಅದನ್ನು ನೋಡಿ ಮೆಚ್ಚಿ ಬಹಶ: ನನ್ನಲ್ಲಿ ಏನೋ ವಿಶೇಷತೆಯನ್ನು ಗುರುತಿಸಿದ ಅವರೂ ನನ್ನನೊಡನೆ ತುಂಬಾ ವಿಶ್ವಾಸದಿಂದ ವರ್ತಿಸುತ್ತಿದ್ದರು.

ನಾನು ಚಿಕ್ಕಂದಿನಿಂದಲೂ ಪ್ರಕೃತಿ ಸೌಂದರ್ಯೋಪಾಸಕನಾಗಿದ್ದೆನು. ನನ್ನ ಹಳ್ಳಿಯ ಸುಂದರವಾದ ತೋಟ, ಹೂಗಿಡಗಳು, ಕೆರೆ, ತೊರೆ, ಕಾಲುವೆಗಳು, ಆಕಾಶ ಎಲ್ಲವೂ ನನ್ನ ಮನಸ್ಸನ್ನು ಆಕರ್ಷಿಸುತ್ತಿದ್ದವು. ತೋಟದ ಕಲ್ಲು ಕೊರಕಲು ದಾರಿಯಲ್ಲಿ ಏರಿ, ಇಳಿದು, ಹತ್ತಿ, ದಾಟಿ ಆನಂದಿಸುತ್ತಿದ್ದೆನು. ಮಹದಾನಂದ ಹಾಗೂ ಪರಿಪೂರ್ಣತೃಪ್ತಿ ನೀಡುತ್ತಿದ್ದ ಪ್ರಕೃತಿ ಸೌಂದರ್ಯವನ್ನು ನೋಡುತ್ತಿದ್ದಂತೆ ಮೈ ಮರೆಯುತ್ತಿದ್ದ. ನಾನು ಸ್ವಭಾವತ: ಏಕಾಂತಪ್ರಿಯ, ಪ್ರಖರವಾದ ವಿಚಾರ ಶಕ್ತಿಯುಳ್ಳವನು. ನನ್ನ ಗ್ರಹಣಶಕ್ತಿ ತುಂಬಾ ಸೂಕ್ಷ್ಮ ವಾಗಿತ್ತು.

ನಮ್ಮ ತೋಟದ ಪ್ರಕೃತಿ ಸೌಂದರ್ಯಆನಂದದಾಯಕವಾಗಿತ್ತು. ಅಲ್ಲಿ ಬೃಹದಾಕಾರದ ಮರಗಳಿ ದ್ದವು. ಅವುಗಳಲ್ಲಿ ಹಕ್ಕಿಗಳು, ಹಾಡುತ್ತವೆ, ಹಾರುತ್ತವೆ, ಕುಣಿಯುತ್ತವೆ, ಕುಪ್ಪಳಿಸುತ್ತವೆ. ಆ ಮರಗಳ ನೆರಳು ಮಕ್ಕಳಿಗಂತೂ ವಿಶಾಲವಾದ ಆಟದ ಬಯಲಾಗಿತ್ತು. ಆಡುತ್ತಿದ್ದ ಮಕ್ಕಳನ್ನು ಗಂಟಗಟ್ಟಲೆ ನೋಡಿ ನಾನು ಮನಸ್ಸಿ ನಲ್ಲಿಯೇ ಸಂತೋಷ ಪಡುತ್ತಿದ್ದೆನು.

ಪ್ರಕೃತಿಯ ಬಗ್ಗೆ ಆತ್ಮೀಯ ಭಾವನೆ ಬೆಳಸಿಕೊಳ್ಳುತ್ತಿದ್ದೆನು. ಆಗ ನನ್ನಲ್ಲಿ ಸೌಂದರ್ಯ ಪ್ರಜ್ಞೆ ಎಚ್ಚೆತ್ತು ಅದಕ್ಕೆ ನಿಸರ್ಗಪ್ರೇಮ ದೀಕ್ಷೆಯಾಯಿತು. ಆ ಸೌಂದರ್ಯದ ಪ್ರಿಯತೆ ಬರುಬರುತ್ತ ಮಾನವರನ್ನು ಪ್ರೀತಿಸುವ ಮಟ್ಟಕ್ಕೇರಿತು. ಪ್ರಕೃತಿಯ ಸುಂದರ ಅನುಭವಗಳು ನನಗೆ ಪರಮಾತ್ಮನ ಅನುಭವವನ್ನು ತಂದು ಕೊಡುತ್ತಿತ್ತು. ಪ್ರಕೃತಿಯ ಆರಾಧನೆಯು ಪರಮಾತ್ಮನ ಆರಾಧನೆ ಮತ್ತು ಮುಕ್ತಿಯ ಸಾಧನೆ ಎಂಬುದು ನನ್ನ ಅಂತರಾತ್ಮಕ್ಕೆ ಅರಿವಾಗುತ್ತಿತ್ತು

# 6. ಅಲೌಕಿಕ ಜೀವನ ಸಂದರ್ಶನ

ಸಚ್ಚಿದಾನಂದ ಪೂರ್ಣಬ್ರಹ್ಮನನ್ನು ಧ್ಯಾನಿಸುತ್ತಾ ನಾನು ಆನಂದಮಯ ಹೃದಯದವನಾಗಿ ಅಂದು ನಿದ್ದೆ ಹೋದೆ. ಆಗ ನನ್ನ ಪಾಲಿಗೆ ಒಂದು ದಿವ್ಯ ಅನುಭವ ಗೋಚರಿಸಿತು. ಅಂತಹ ಒಂದು ಅನುಭವ ಹಿಂದೆಂದೂ ಆಗಿರಲಿಲ್ಲ.

ನನ್ನ ನೆನಪಿನ ಆಳದಲ್ಲಿ ಅಡಗಿದ್ದ ಹಳೆಯ ಚಿತ್ರಗಳು ಚಿತ್ತ ಭಿತ್ತಿಯ ಮೇಲೆ ಚಿತ್ರಿಸಿ ಕೊಳ್ಳತೊಡಗಿದವು. ನನ್ನ ಮಾತುಗಳನ್ನು ನಾನೇ ಆಡಿ ತೋರಿಸುವಂತೆ ನೆನಪಿನ ಸುರುಳಿ ಬಿಚ್ಚತೊಡಗಿದವು. ನನ್ನ ಜೀವಮಾನದ ಒಂದು ಪ್ರಮುಖ ಘಟನೆ ಸಂಭವಿಸಿತು.

ನನಗೆ ಹಿಂದೆ ಡಾ॥ಲೀಲಾಳನ್ನು ಎಲ್ಲೋ ನೋಡಿದ ನೆನಪು. ನೆನಪಿಗಿಂತ ನನ್ನ ಯಾವುದೋ ಸುಷುಪ್ತಿಯ ನೆನಪಿನ ಮಹಾಪೂರದಲ್ಲಿ ಗುಪ್ತಗಾಮಿನಿಯಾಗಿ, ಅವಳ ನೆನಪು ಹರಿಯುತ್ತಿತ್ತು. ನೆನಪಿನಾಳ ಕೆದಕಿದಾಗ, ನನ್ನ ನೆನಪು ಕಾಲಗರ್ಭಕ್ಕೆಳೆಯುತ್ತಾ ಹೋದಂತಹ ಅನುಭವ. ಕಾಲದೇಶಗಳನ್ನು ಕೊರೆದು ಮಾಡಿದ ಒಂದು ಮಾಯಾ ಸುರಂಗಮಾರ್ಗದ ಗವಾಕ್ಷಿಯಲ್ಲಿ ನನ್ನ ಕಲ್ಪನೆಗೂ ಎಟುಕದೆ ಒಮ್ಮೆಲೆ ಅಲೆಅಲೆಯಾಗಿ ಸಾಕಾರವಾಗಿ ಎಲ್ಲವೂ ಮಬ್ಬುಮಬ್ಬು, ಮಂಜುಮಂಜಾಗಿ ಯಾವುದೋ ಲೋಕದತ್ತ ಜಾರಿಕೊಂಡೋ ಅಥವಾ ಏರಿಕೊಂಡೋ ಹೋಗುತ್ತಿರುವಂತೆ ಅನ್ನಿಸಿತು. ನನ್ನ ಮುಂದೆ ಡಾ॥ಲೀಲಾ ಬಂದು ನಿಂತಂತೆ ಭಾಸವಾಯಿತು. ಅವಳ ಮಸುಕು ಮಸುಕು ಸ್ಮರಣೆಯನ್ನು ತರುತ್ತಿತ್ತು. ನನ್ನ ದೇಹವೆಲ್ಲಾ ರೋಮಾಂಚನವಾದಂತಾಯಿತು. ಈ ಮನೆ, ಮಠ, ಜಗತ್ತು ಎಲ್ಲವೂ ದೂರ ದೂರ ಹೋದಂತೆ ಭಾಸವಾಯಿತು.

ಒಂದು ಆಧ್ಯಾತ್ಮಿಕ ಸ್ವರ್ಗಾರೋಹಣದಂತೆ ಅದೊಂದು ಅಮೃತಮಯ ಚಿರಂತನ ಆಧ್ಯಾತ್ಮಿಕ ಅನುಭವದಂತೆ ನಿಗೂಢವೂ ಅಂತಃಸ್ಥಾಯಿಯೂ ಆಗಿರುವ ಸ್ಮೃತಿ ಮಂದಿರದ ನಂದಾದೀಪವಾಗಿ ಬೆಳಗತೊಡಗಿತು.

ವಿಸ್ತೀರ್ಣವಾದ ಪರ್ವತ ಪ್ರಾಂತ್ಯ ಒಂದು ಹಸಿರು ಗಿಡಮರಗಳಿಂದ ಶೋಭಿಸುತ್ತಿತ್ತು. ಪರ್ವತಗಳು ಆಕಾಶವನ್ನು ಮುಟ್ಟುವಂತೆ ಪ್ರಕಾಶಮಾನವಾದ ನೂರಾರು ಗಿರಿಶಿಖರಗಳ ಬಿಳಿಯ ಚಂದ್ರಕಾಂತ ಶಿಲೆಗಳಿಂದ ತುಂಬಿ, ರಮಣೀಯವಾಗಿ ಕಂಗೊಳಿಸುತ್ತಿದ್ದವು. ಆ ಪರ್ವತಶ್ರೇಣಿಯ ತಪ್ಪಲಿನಲ್ಲಿ ಮನೋಹರವಾದ ಕಣಿವೆ ಪ್ರದೇಶಗಳಿದ್ದವು. ಆ ಕಣಿವೆ ಪ್ರದೇಶಗಳು ತಂಪಾದ ಮಂಜು ಮುಸುಕಿರುವ ತಪ್ಪಲುಗಳಿಂದ, ಕಂದರಗಳಿಂದ, ಗುಹೆಗಳಿಂದ, ಋಷಿ-ಮುನಿಗಳ ಪರ್ಣ ಕುಟೀರಗಳಿಂದ, ಪುಣ್ಯಾಶ್ರಮಗಳಿಂದ, ತಪೋವನಗಳಿಂದ ಕೂಡಿ ಮೆರೆಯುತ್ತಿದ್ದವು. ಬಹುದೂರದ ಎತ್ತರದ ಮರಗಳು ಬಯಲುರಾಣಿಗೆ ತಳಿರನ್ನು ಕಟ್ಟಿದಂತೆ ಗೊಂಚಲು ಗೊಂಚಲಾಗಿ ಅರಳಿದ ಕೆಂಪು ಹೂಗಳನ್ನು ಮರಗಳ ನೆತ್ತಿಯಮೇಲೆ ಹೊತ್ತು ತಳಿರುತೋರಣದ ಮಂಗಳಮುಖಿಗಳಂತೆ ಶೋಭಿಸುತ್ತಿದ್ದವು.

ಈ ಮಧ್ಯೆ ವನ ಸ್ತ್ರೀಯ ಯೌವನ ಹರಿಯುವಂತೆ ನೀರು ಬಳಸಿ ಬಳಸಿ, ನುಗ್ಗಿ ನುಗ್ಗಿ ಹಾಲಿನ ಹೊಳೆಯಂತೆ ಧುಮುಕಿ ಧುಮುಕಿ ಹರಿಯುತ್ತಿತ್ತು. ಹರಿಯುವ ನದಿಯ ನೀರಿನ ಜುಳು ಜುಳುನಾದ ಸಂಗೀತವಾಗಿತ್ತು. ಹರಿಯುವ ನೀರಿನಲ್ಲಿ ಅದೇನು ಮೋಹಕ ಶಕ್ತಿ ಇದೆಯೋ ಏನೋ, ಅದರಲ್ಲಿ ಒಂದು ಅತೀಂದ್ರಿಯ ಆಹ್ವಾನವಿರುವಂತೆ ತೋರುತ್ತಿತ್ತು.

ಬಿದಿರಿನ ಪೊದೆಗಳು, ಬಿಳಿಲು ಬಿಟ್ಟ ಆಲದ ಮರಗಳು, ಕಾಡು ಬಳ್ಳಿಗಳು, ಮುಳ್ಳಿನ ಪೊದೆಗಳು, ಗಗನ ಚುಂಬಿತ ವೃಕ್ಷಸಮೂಹ, ಒಂದಕ್ಕೊಂದು ಬೆಸೆದುಕೊಂಡು ದಾರಿಯೇ ಕಾಣಿಸುತ್ತಿರಲಿಲ್ಲ. ಅಷ್ಟು ನಿಬಿಡವೂ, ಉನ್ನತವೂ, ಕಂದರಮಯವೂ, ಕರಾಳವೂ, ಆಗಿ ಕಾಣಿಸುತ್ತಿದ್ದ ಆ ಹೆಗ್ಗಾಡಿನಲ್ಲಿ ನಾನು ಇಳಿದು ಏರಿ, ಇಳಿದು ಏರಿ ಸರಲು ಸರಲುಗಳನ್ನು ದಾಟಿ ನೀರು ರಭಸವಾಗಿ ಬೀಳುತ್ತಿರುವ ಜಲಪಾತದ ಕಡೆಗೆ ಬಂದು ನಿಂತೆನು. ದೂರದ ದೃಷ್ಟಿಗೆ ಈ ಜಲ ಪ್ರವಾಹ ಹತ್ತಿಯನ್ನು ಬಿಲ್ಲಿನಿಂದ ಹೊಡೆದು ಹಾಕಿದ ಬೆಳ್ಳನೆಯ ರಾಶಿ ಕೆಳಗಿಳಿ ಯುತ್ತಿರುವಂತೆ ಕಾಣುತ್ತಿತ್ತು.

ನಾನು ಇನ್ನೂ ಸ್ವಲ್ಪ ಮುಂದೆ ಇಳಿದು, ಜಲಪಾತದ ಅಂಚಿಗೆ ಬಂದು ನಿಂತೆನು. "ಭೋ" ಎಂದು ಕಿವಿ ಯನ್ನು ಕಿವುಡು ಮಾಡುವ ಆರ್ಭಟದಿಂದ ಭೋರ್ಗರೆಯುತ್ತಾ ಪರ್ವತವನ್ನು ಛೇದಿಸಿಕೊಂಡು ದಟ್ಟವಾದ ಕಾಡುಗಳ ಮಧ್ಯದಲ್ಲಿ ನದಿ ವೇಗವಾಗಿ ಪ್ರವಹಿಸುತ್ತಾ ಪ್ರಪಾತದ ಹತ್ತಿರ ಜಲಪ್ರವಾಹವಾಗಿ ಧುಮುಕುತ್ತಿತ್ತು.

ಬಂಡೆಯಿಂದ ಬಂಡೆಗೆ ಪ್ರವಾಹದಿಂದ ಧುಮುಕುತ್ತಿದ್ದ ನೀರಿನ ಹೊಡೆತದಿಂದ ಉಂಟಾದ ನೀರಿನ ಸುಳಿಗಳು, ಬೊಬ್ಬುಳಿಗಳು, ನೀರ್ಗುಳ್ಳೆಗಳು ಮೇಲಕ್ಕೆದ್ದು ನೊರೆನೊರೆಯಾಗಿ, ತುಂತುರಾಗಿ, ತೆರೆತೆರೆಯಾಗಿ, ಬಿಸಿಲಿನಲ್ಲಿ ಮಿರಿಮಿರಿಗಿ ಕೆಳಕ್ಕೆ ಬೀಳುತ್ತಿರುವ ಜಲರಾಶಿಯ ಹನಿಗಳ ಸೊಗಸಿನ ರಮ್ಯ ನೋಟ ನನ್ನ ಕಣ್ಮನ ಗಳನ್ನು ಸೆರೆಹಿಡಿದು ನಿಲ್ಲಿಸಿತ್ತು. ಬೀಳುವ ನೀರಿನಲ್ಲಿ ಸೂರ್ಯನ ರಶ್ಮಿ ಬಣ್ಣದ ಬೆಡಗನ್ನು ತುಂಬಿತ್ತು. ಸೂರ್ಯಕಿರಣಗಳು ಜಲಕಣಗಳಲ್ಲಿ ಹೊಕ್ಕು ಕಾಮನಬಿಲ್ಲಿನ ನಾನಾ ಬಣ್ಣಗಳು ತಂಡ ತಂಡವಾಗಿ ನೃತ್ಯ ಮಾಡುತ್ತಿರುವಂತೆ ಕಾಣುತ್ತಿತ್ತು. ಜೊತೆಗೆ ಆ ಜಲಾಶಯವು ಕಮಲದ ಹೂಗಳಿಂದಲೂ, ಕನ್ನೈದಿಲೆಗಳಿಂದಲೂ ಅಂದವಾಗಿ ಕಾಣಿಸುತ್ತ ಬೆಳೆದು ರಾರಾಜಿಸುತ್ತಿತ್ತು. ಆ ತಾವರೆಹೂಗಳ ಸಾಲಿನಿಂದ ಹೊರಹೊಮ್ಮಿದ ನಾನಾ ರೀತಿಯ ಬಣ್ಣಗಳು ಕಾಮನಬಿಲ್ಲಿನಂತೆ ಕಣ್ಣಿಗೆ ಅಂದವಾಗಿ, ಸುಂದರವಾಗಿ, ನಯನ ಮೋಹಕವಾಗಿ ರಂಜಿಸುತ್ತಿತ್ತು.

ಈ ಭವ್ಯ ನಯನ ಮನೋಹರ ದೃಶ್ಯವನ್ನು ನಾನು ನೋಡಿ, ತಣಿದು, ಆನಂದ ಪರವಶನಾದೆನು. ಅಂಥ ಸೃಷ್ಟಿಯ ಸೊಬಗು ! ಅದನ್ನು ಸವಿದು, ಯಾವ ಜೀವಿಯ ಆತ್ಮ ತಾನೇ ಗಗನ ಸ್ಪರ್ಶಿಯಾಗುವುದಿಲ್ಲ ? ವಿಶ್ವದ ವ್ಯಕ್ತ ಸೌಂದರ್ಯದ ಉಪಾಸನೆಯೂ ಅವ್ಯಕ್ತ ಸೌಂದರ್ಯದ ಸತ್ಯದ ಅನುಭವವನ್ನು ಕಿಂಚಿತ್ತಾದರೂ ತಂದುಕೊಡುತ್ತದೆ.

ಕೆಳಗೆ ಬೀಳುವ ರಭಸದಲ್ಲಿ ನೀರು ಬಂಡೆಗೆ ಬಡಿಯುತ್ತಿದ್ದುಭೋರ್ಗರೆತ ಬಹುದೂರದ ತನಕ ಕೇಳಿಸು ತ್ತಿತ್ತು. ಕೆಳೆಗೆ ಬೀಳುತ್ತಿದ್ದ ಸುಳಿಗಳಿಂದ ಉಂಟಾದ ದೊಡ್ಡ ದೊಡ್ಡ ಅಲೆಗಳು ತಾಂಡವ ನೃತ್ಯ ವಾಡುತ್ತಾ, ಅಲೆಗಳ ಉತ್ಪಾತಗಳುಂಟಾಗಿ ಆ ಅಲೆಗಳು ಅಪ್ಪಳಿಸುತ್ತಾ ಅಲ್ಲೋಲಕಲ್ಲೋಲ ಉಂಟು ಮಾಡುತ್ತ ಕಣ್ಣಿಗೆ ರಮಣೀಯ ದೃಶ್ಯ ಒದಗಿಸುತ್ತಿದ್ದವು.

ಮುಂದೆ ನೊರೆ ಮತ್ತು ನೀರಗುಳ್ಳೆಗಳ ಸಾಲು, ಸಾಲುಸಾಲಾಗಿ ವ್ಯಾಪಿಸಿಕೊಂಡು ನದಿಯು ಕಲಕಲ ಶಬ್ದ ಮಾಡುತ್ತಾ ರಮ್ಯವಾಗಿ ಹರಿಯುತ್ತಿತ್ತು. ನಾನಾ ರೀತಿಯ ಕ್ರೀಡೆಯನ್ನು ತೋರಿಸುತ್ತಾ ಭರದಿಂದ ಸಾಗು ತ್ತಿತ್ತು. ಒಮ್ಮೆ ಉಬ್ಬಿ, ಮರುಕ್ಷಣವೇ ತಗ್ಗಿ, ಫಳಫಳನೆ ಹೊಳೆಯುತ್ತ, ಸೆಳೆಯುತ್ತ, ಉಯ್ಯಲಗಳಿಂದ ನಲಿದು ನರ್ತಿಸುತ್ತಾ ನಾನಾ ತೆರನಾಗಿ ಕಾಣಿಸಿಕೊಂಡು ಘನಗಾಂಭೀರ್ಯದಿಂದ ಪ್ರವಹಿಸುತ್ತಿತ್ತು. ಆ ಜಲಪಾತದ ಜಲರಾಶಿಯು ಅಲೆಗಳ ತೆರೆಗಳ ಅಥವಾ ತರಂಗಗಳ ಆವಾಸಸ್ಥಾನವೆಂಬಂತೆ ಶೋಭಿಸುತ್ತಿತ್ತು.

ಅದರಲ್ಲಿ ಮಿಂಚಿನಂತೆ ಹೊಳೆದು ಓಡಾಡುತ್ತಿರುವ ಜಲಚರಗಳು, ನಾನಾ ರೀತಿಯ ಮೀನುಗಳು ಕ್ರೀಡಿಸುತ್ತ ತಣಕ್, ಪಣಕ್, ಮಿಣುಕ್ ಎಂದು ಮಿಂಚಿ ಮಾಯವಾಗುತ್ತಿರುವ ಭವ್ಯವಾದ ನೋಟ ಕಣ್ಣಿಗೆ ಹಬ್ಬ ವನ್ನು ಉಂಟುಮಾಡುತ್ತಿತ್ತು. ಅಲ್ಲಿ ನಾನಾರೀತಿಯ ಮೀನುಗಳು ಮೊಸಳೆಗಳು ಏಲಾಟ ಆಡುತ್ತಿದ್ದವು. ಅದು ಕಪ್ಪೆಗಳ ಜನ್ಮಸ್ಥಾನ, ಮೀನುಗಳ ವಾಸಸ್ಥಾನ, ಕಪ್ಪೆಗಳಿಂದ ಮೀನುಗಳಿಂದ ಸೇವಿತವಾಗಿ ಚಿತ್ರ ವಿಚಿತ್ರವಾಗಿ ಕಣ್ಣಿಗೆ ಆನಂದಮಯವಾಗಿ ತೋರುತ್ತಿತ್ತು. ನಾನಾ ಜಾತಿಯ ನೀರು ಹಕ್ಕಿಗಳು, ಕೊಕ್ಕರೆಗಳು, ಸಾರಸಪಕ್ಷಿಗಳು, ನಿರ್ಭಯದಿಂದ ನೀರಾಟವಾಡುತ್ತ ಗುಂಪುಗುಂಪಾಗಿ ಬಂದು ಎರಗುತ್ತಿದ್ದವು.

ಸುತ್ತಲಿನ ವನದಲ್ಲಿ ಗಂಧಬಂಧುರವಾದ ಪುಷ್ಪಗಳೂ, ರಸತೊಟ್ಟಿಕ್ಕಿಸುವ ಫಲಗಳೂ ತುಂಬಿದ್ದವು. ಅಲ್ಲಿನ ಗಿಡಗಂಟಿಗಳಲ್ಲಿ ಚಿಲಿಪಿಲಿಗುಟ್ಟುತ್ತ, ಕೊಂಬೆಯಿಂದ ಕೊಂಬೆಗೆ ಕುಪ್ಪಳಿಸುತ್ತಿದ್ದರೂ ಹಕ್ಕಿಗಳು ಇಂಪಾಗಿ ಹಾಡುತ್ತಿದ್ದವು. ಅಲ್ಲಿ ಎತ್ತ ನೋಡಿದರು ಹಕ್ಕಿಗಳ ಚಿಲಿಪಿಲಿಗುಟ್ಟುವ ಕಲಕಲ ಧ್ವನಿ ಕೇಳಿ ಬರುತ್ತಿತ್ತು. ವನದೇವಿಯ ಹೃದಯ ವೀಣೆಯ ತಂತಿಗಳನ್ನು ಮಿಡಿಯುವಂತೆ ಕಾಜಾಣಗಳು, ಕೋಗಿಲೆಗಳು ಆಲಾಪನೆ ಮಾಡತೊಡಗಿ ದವು. ಅವುಗಳ ಗಾನವನ್ನು ಕೇಳಿ ನಾನು ಆನಂದಿಸಿದೆನು. ನವಿಲುಗಳ ನೃತ್ಯವೂ, ದುಂಬಿಗಳ ಗುಮ್‌ಗುಮ್ ನಾದದ ಮಧುರ ಗೀತವೂ, ಆಹ್ಲಾದವನ್ನುಂಟು ಮಾಡುತ್ತಿದ್ದವು. ಸಾವಿರಾರು, ಲಕ್ಷಲಕ್ಷ, ಕೋಟಿಕೋಟಿ ಜೇನುನೊಣಗಳು ಮರಗಳಲ್ಲಿ ಹೂವಿನಿಂದ ಹೂವಿಗೆ ಹಾರಿ ಝೇಂಕಾರನಾದವನ್ನು ಮಾಡುತ್ತ, ಹಿಂಡು ಹಿಂಡಾಗಿ ಮಕರಂದವನ್ನು ಹೀರುತ್ತಿದ್ದವು. ಆ ಜೇನುನೊಣಗಳ ಝೇಂಕಾರವು ಓಂಕಾರದಂತೆ ಕಾಡನ್ನೆಲ್ಲ ತುಂಬಿ, ನಿರಂತರ ನಾದವಾಹಿನಿಯಾಗಿ ಮೊರೆಯುತ್ತಿತ್ತು.

ದೂರದಲ್ಲಿ ಕಾಡಾನೆಯ ಘೀಳಿನ ಸದ್ದು, ಹುಲಿಯ ಅಬ್ಬರ ಕೇಳಿಸುತ್ತಿತ್ತು. ಆ ದಟ್ಟವಾದ ಕಾಡಿನಲ್ಲಿ ಎಲ್ಲೆಲ್ಲೂ, ಮೂಲೆ ಮೂಲೆಗಳಲ್ಲೂ, ಮೊಲಗಳ ಸಮೂಹಗಳು, ಎತ್ತ ನೋಡಿದರೂ ಜಿಂಕೆಗಳ ಗುಂಪು, ಸಹಸ್ರಾರು ಆನೆಗಳು ಗುಂಪು ಗುಂಪಾಗಿ ಅತ್ತಿತ್ತ ಓಡಾಡುತ್ತಿದ್ದವು. ತೋಳ, ಕರಡಿ, ಚಮರೀಮೃಗ, ಕಾಡು ಹಂದಿ, ಮುಳ್ಳುಹಂದಿ, ಹುಲಿ, ಚಿರತೆ, ಕಿರುಬ, ಸಿಂಹ, ಹೈನಾ, ಕಾಡುಕೋಣ, ಕಾಡೆಮ್ಮೆ ಮುಂತಾದ ನಾನಾ ಜಾತಿಯ ಕಾಡುಮೃಗಗಳ ಹಿಂಡುಹಿಂಡುಗಳಿಂದ ತುಂಬಿ ತುಳುಕುತ್ತಿತ್ತು.

ಕಾಡಿನಲ್ಲಿ ಹೂಬಿಟ್ಟು ಕಂಗೊಳಿಸುತ್ತಿದ್ದ ನೂರಾರು ಗಿಡಮರಗಳ ಹಸಿರು, ತಣ್ಣಗೆ ತಂಪನ್ನೂ, ಆನಂದ ವನ್ನೂ ನೀಡುತ್ತಿತ್ತು. ಪಾರಿಜಾತ, ಪಾದರಿ, ಬೆಟ್ಟದ ತಾವರೆ, ಗೋರಂಟಿ, ಕೋವಿದಾರ, ಪ್ರಿಯಂಗು, ಕಣಗಲೆ, ಸಂಪಿಗೆ, ನಂದಿಬಟ್ಟಲು, ತಿಲಕ, ಸುರಗಿ, ಮೇರು, ಸೇವಂತಿಗೆ ಮೊದಲಾದ ಹೂ-ಗಿಡಗಳಿಂದ ಕೂಡಿ ಆ ಕಾಡು, ಅವುಗಳು ಸೂಸುವ ಸುವಾಸನೆ, ಕಂಪು ಬೀರುವ ಹೂ ಗೊಂಚಲುಗಳಿಂದ ತುಂಬಿ ಪ್ರಕೃತಿ ದೇವಿಯು ತನ್ನನ್ನು ತಾನೇ ಸಿಂಗರಿಸಿಕೊಂಡಂತೆ ಕಾಣುತ್ತಿತ್ತು. ಹೃದಯಕ್ಕೆ ಪಥ್ಯವಾಗಿರುವ ತಂಪು ಮತ್ತು ಸುವಾಸನೆಯುಕ್ತವಾಗಿ ಮೆಲ್ಲಮೆಲ್ಲನೆ ಶೀತವಾಗಿ ಬೀಸುವಮಂದಮಾರುತವು ಹೂಗಳ ಮೇಲಿಂದ ಬೀಸುತ್ತಿತ್ತು. ಆ ಕಂಪಿಡಿಸುವ ಸುವಾಸನೆ, ಹೂಗಳ ಸೊಬಗು, ಕಣ್ಮನಗಳನ್ನು ಸೆರೆ ಹಿಡಿಯುತ್ತಿತ್ತು.

ವರ್ಣರಂಜಿತವಾದ ಜಲದೇವತೆಯ ಕೆನ್ನೆಯಲ್ಲಿ ಬಿಳಿ, ಕೆಂಪು ತಾವರೆ ಹೂಗಳು ಅರಳಿ ನಿಂತಂತೆ ಕಾಣುತ್ತಿದ್ದವು. ಆ ತಾವರೆ ಹೂಗಳ ಪರಾಗದಲ್ಲಿ ಹೊರಳಾಡಿ, ಮಕರಂದವನ್ನು ಹೀರಿ, ಸುವಾಸನೆಯಿಂದ ಮದಿಸಿದ ಭೃಂಗಗಳ ಸಾಲು ಸುತ್ತಲೂ ಹಾರಾಡುತ್ತಿದ್ದವು. ಪಕ್ಷಿಗಳು ಪಟಪಟನೆ ರೆಕ್ಕೆ ಬಡಿದು, ಗರಿ ಗೆದರಿ,

ಮುಗಿಲಿನ ಎತ್ತರಕ್ಕೆ ಪರ್ರನೆ ಏರಿ, ಜರ್ರನೆ ಇಳಿಯುತ್ತಿದ್ದವು. ಬೀಳುವ ನೀರು ಬಣ್ಣದ ನೀರು, ಹಾರುವ ಪಕ್ಷಿಗಳ ಗರಿ ಬಣ್ಣಬಣ್ಣದವು. ವಿಶ್ವವೇ ಬಣ್ಣತುಂಬಿ ನಿಂತಂತೆ ರಾಮುವಿಗೆ ಅನ್ನಿಸಿತು.

ಆ ಸ್ಥಳ ಒಂದು ಮನೋಹರವಾದ ಗಿರಿವನವಾಗಿ, ಆಹ್ಲಾದಕರವಾಗಿ, ಪ್ರಶಾಂತವಾಗಿ, ಪಕ್ಷಿಕೂಜನ ದಿಂದ ಸುಮಧುರವಾಗಿ ಕಾಣಿಸುವಂತಿತ್ತು. ಈ ಸಮ್ಮೋಹನ ದೃಶ್ಯವನ್ನು ನೋಡಿ, ಸಮಾಧಿ ಸ್ಥಿತಿಯನ್ನು ಪಡೆ ದವನಂತೆ, ಕಲ್ಲುಗೊಂಬೆಯಂತೆ ನಾನು ನಿಂತಲ್ಲಿಯೇ ನಿಂತುಬಿಟ್ಟನು. ನಿಸರ್ಗ ಸೌಂದರ್ಯವು ಭಾವನೆಯ ಅನಂತತೆಯ ಆನಂದವನ್ನು ವಾಸ್ತವವಾಗಿ ಪ್ರತಿಬಿಂಬಿಸುತ್ತಿತ್ತು. ಆಗ, ನಾನು ಆ ಪ್ರಕೃತಿಯ ಒಂದಂಶವಾಗಿ ದ್ದನು. ಬೆಟ್ಟದಲ್ಲಿ ಬಂಡೆಯಂತೆ, ಕಾಡಿನಲ್ಲಿ ಮರದಂತೆ, ಅದರ ಒಂದಂಗವಾಗಿದ್ದನು.

ಪ್ರಕೃತಿಯ ಸುಂದರ ಅನುಭವಗಳು, ಅವನಿಗೆ ಪರಮಾತ್ಮನ ಅನುಭವವನ್ನು ತಂದು ಕೊಟ್ಟಿತು. ಪ್ರಕೃತಿಯ ಆರಾಧನೆ, ಪರಮಾತ್ಮನ ಆರಾಧನೆ ಮತ್ತು ಮುಕ್ತಿಗೆ ಸಾಧನೆ ಎಂಬುದು ನನ್ನ ಅಂತರಾತ್ಮಕ್ಕೆ ಅರಿವಾಗಿತ್ತು.

ಎಲ್ಲಾ ರೀತಿಯ ಮೃಗ, ಪಕ್ಷಿ, ಮರಗಿಡಗಳ ಆವಾಸಸ್ಥಾನವಾಗಿದ್ದ ಆ ಸುಂದರತಾಣ ಪರಿಮಳದ ಸೌಂದರ್ಯದ ಬೀಡಾಗಿ, ವಿಹಾರದ, ಭೋಗದ, ಶೃಂಗಾರ ಭೂಮಿಯಾಗಿತ್ತು. ಅದು ದೇವಲೋಕದ ಯಕ್ಷ, ಗಂಧರ್ವ, ಕಿನ್ನರ, ಕಿಂಪುರುಷ, ಗರುಡ ಮುಂತಾದವರು ತಮ್ಮ ಪತ್ನಿಯರ, ಸುರಕನ್ಯೆಯರ, ಅಪ್ಸರೆಯರ ಜೊತೆಗೆ ವಿಹರಿಸುವ ಕ್ರೀಡಾಭೂಮಿಯಾಗಿತ್ತು, ಹಾಗೂ ಭೋಗಿಸುವ ಭೋಗ ಭೂಮಿಯಾಗಿತ್ತು.

ಇದೇ ಸಮಯದಲ್ಲಿ ಸುಮಧುರ ಸಂಗೀತದ ಧ್ವನಿ ಇಂಪಾಗಿ ತೇಲಿ ಬರುತ್ತಿತ್ತು. ಯಾರೋ ಹೆಣ್ಣು ಕಿಲಕಿಲನೆ ನಕ್ಕಂತಾಯಿತು. ಅವಳು ಹತ್ತಿರ ಹತ್ತಿರ ಬಂದಂತೆ ಬಳೆಗಳ ಕಿಣಿಕಿಣಿ ನಾದದೊಂದಿಗೆ ಅವಳ ನಗು ಬೆರೆತು ಒಂದು ಸುಂದರ ವಾತಾವರಣವೇ ಸೃಷ್ಟಿಯಾದಂತಾಯಿತು. ಆ ನಾದಸಂಕೇತ ಮೋಕ್ಷ ಅನುಭವ ಕ್ಕಿಂತ ಮಿಗಿಲಾಗಿತ್ತು.

ನನ್ನ ನೋಟ ಆ ಕಡೆ ಸರಿದಾಗ, ಮೋಡದ ಮರೆಯಿಂದ ತೂರಿಬರುವ ಚಂದ್ರಮನಂತೆ ಹರೆಯದ ಚೆಲುವೆ ಹಸಿರು ಪೀತಾಂಬರ ತೊಟ್ಟು ಬಂಗಾರದ ಬಳೆಗಳ ಕಿಣಿಕಿಣಿ ನಾದದೊಡನೆ ನಾಟ್ಯವಾಡುತ್ತಾ ಬರುತ್ತಿದ್ದಳು. ಅವಳ ಕಾಲ ಹೊಳೆವ ಗೆಜ್ಜೆಗಳ ಘಲ್ ಘಲ್ ನಾದವು ಮೋಡಗಳ ದನಿಯನ್ನು ಅನುಕರಿಸು ತ್ತಿದ್ದವು. ಆಕೆಯ ಮೈಮಾಟ ಮತ್ತು ಬಣ್ಣಗಳು ಇತರ ಹೆಣ್ಣುಗಳ ಹಾಗೆ ಇರಲಿಲ್ಲ. ಅವಳ ವಿವಿಧ ಅವಯವಗಳಲ್ಲಿ ಪ್ರಕೃತಿಯಲ್ಲಿ ಕಾಣುವ ಸುಂದರ ವಸ್ತುಗಳು, ಪ್ರಾಣಿಗಳು, ಪಕ್ಷಿಗಳು ಈ ರೀತಿ ನೆಲೆಗೊಂಡಂತೆ ಭಾಸವಾಗು ತ್ತಿತ್ತು. ಅವಳ ಮುಖಕಮಲವು ಸೂರ್ಯೋದಯದ ಕಾಲದಲ್ಲಿ ಅರಳಿ ವಿಸ್ತಾರವಾಗಿರುವ ತಾವರೆಹೂವಿನಂತೆ ಶೋಭಿಸುತ್ತಿತ್ತು.

ದುಂಡಾದ ಅವಳ ಮುಖದಲ್ಲಿ ಕೆನ್ನೆಗಳು ಕಳಿತ ಕಿತ್ತಲೆ ಹಣ್ಣಿನ ಅಂದವನ್ನು ತಾಳಿದ್ದವು.ನವಿಲಿನಂತಿರುವ ತುರುಬು, ಚಮರೀಮೃಗದ ಬಾಲದಂತಿರುವ ಮುಂಗುರುಳು, ಮುತ್ತುಗಳಂತಿರುವ ಮುಗುಳುನಗೆಯಿಂದ ಮೋಹಕವಾಗಿ ಜಿಂಕೆಯ ಕಣ್ಣ ಹೊಳಪನ್ನು ಅವಳು ಎರವು ಪಡೆದುಕೊಂಡಿದ್ದಳು. ಅವಳ ತೋಳುಗಳು ಎಳೆ ಬಿಸಿಲಿಗೆ ಮೈಯೊಡ್ಡಿ ತೂಗಾಡುವ ಸುಳಿಬಾಳೆಯಂತೆ ನಳನಳಿಸುತ್ತಿದ್ದವು. ಎದೆಯ ಮರೆಯಲ್ಲಿ ಅವಿತಿರುವ

ಸ್ತನಗಳು ಎಳೆಯ ಚಕ್ಕೋತ ಮಿಡಿತಗಳಾಗಿದ್ದವು. ಅವಳ ಮೈಕೊಂಕು, ಬಳಕುಗಳು ಮನಕ್ಕೆ ಹೊಸ ಬಗೆಯ ಸೊಗಸನ್ನು ತರುತ್ತಿದ್ದವು.

ಹದಿನೆಂಟರ ಹರೆಯದ ಮೋಹದ ಬೊಂಬೆಯಂತಿದ್ದ ಅವಳನ್ನು ಬ್ರಹ್ಮ ತನ್ನ ಬುದ್ಧಿಚಾತುರ್ಯವನ್ನೆಲ್ಲಾ ಉಪಯೋಗಿಸಿ, ತನ್ನ ಕಲಾಪ್ರೌಢಿಮೆಯನ್ನು ತೋರಿಸಲೆಂದೇ ಸೃಷ್ಟಿಸಿದ ಪ್ರೇಮಪುತ್ತಳಿಯಂತಿದ್ದಳು. ನಾಟ್ಯ ಭಂಗಿಯಲ್ಲಿ ಬಂದು, ಮೈ ಬಳುಕಿಸಿ, ಕೊರಳು ಕೊಂಕಿಸಿ, ಕೈ ಕುಣಿಸಿ, ತೀರಾ ನನ್ನ ಸಮೀಪಕ್ಕೆ ಬಂದು ನನ್ನ ಕಣ್ಣುಗಳಲ್ಲಿ ತನ್ನ ಕಣ್ಣುಗಳಿಟ್ಟಂತೆ ನನ್ನನ್ನೇ ನೋಡಿದಳು. ನನ್ನ ಆ ದಿವ್ಯ ಮುಗ್ಧ ಮುಖದ ತೇಜೋಪೂರ್ಣವಾದ ಸೌಂದರ್ಯರಾಶಿಯನ್ನು ವೀಕ್ಷಿಸಿ ವಿಸ್ಮಿತಳಾದಳು. ನನ್ನ ಸೌಂದರ್ಯರಾಶಿಯನ್ನು ಆಸ್ವಾದಿಸಿದಾಗ, ಅವಳ ಮುಖ ಉಜ್ವಲವಾದ ತೇಜಸ್ಸನ್ನು ಹೊರಸೂಸುತ್ತ, ಕಣ್ಣುಗಳು ನಕ್ಷತ್ರಗಳಂತೆ ಹೊಳೆಯಲಾರಂಭಿಸಿದವು.

ಯಾವ ಪ್ರತಿಕ್ರಿಯೆಯನ್ನೂ ತೋರದೆ, ನಾನು ನಿಂತಿರುವುದನ್ನು ನೋಡಿ, ಆಕೆ ತನ್ನಲ್ಲೇ ಮುಗುಳ್ನಕ್ಕಳು. ಅವಳ ಮುಗುಳು ನಗೆಯ ಮಾಧುರ್ಯವೇನು ! ಗಾಂಭೀರ್ಯವೇನು ! ಗಾಂಭೀರ್ಯದ ಅರ್ಥವೇನು ! ನನ್ನ ಮುಂದೆ ಆಗ ಅವಳು ನೃತ್ಯವನ್ನು ಆರಂಭಿಸಿದಳು.

ಜಣ್ -------ಜಣ್ -------ಝಣ್--------ಝಣ್-------ಕಣ್ಣ ಕಣ್ಣ-- ಥತ್------- ತೊಂ--------ಧೀಂ ಧೀಂ -----------ಏನು ಅಟ್ಟಹಾಸ ಏನು ವಯ್ಯಾರ. ದೂರದಿಗಂತಗಳು ನಡುಗುವಂತೆ ನರ್ತಿಸಿ ಹಾಡತೊಡಗಿದಳು.

"ಕುಣಿಯುವಳಾರೀ, ಭೈರವನಾರಿ, ನನ್ನ ಜೀವನ ರಂಗದಲ್ಲಿ ರೌದ್ರವ ತೋರಿ" ಎಂದು ನಾನು ನೋಡತೊಡಗಿದೆ.

ಓ ಸ್ವಾಮಿ - ನೀ ಹಾಡುವಂತೆ ಪ್ರೇರೇಪಿಸಿದರೆ, ನಾ ಹಾಡಿ ನರ್ತಿಸುವುದಿಲ್ಲವೇನು ?

ಓ ನಲ್ಲ - ನೀ ಪ್ರೀತಿಸೆಂದು ಪ್ರೇರೆಪಿಸಿದರೆ, ನಾ ಪ್ರೇಮಶಿರೋಮಣಿ ಆಗುವುದಿಲ್ಲವೇನು ?

ಓ ಗುರೂಜಿ - ನಿನ್ನ ಅಂತರ್ನೋಟದಿಂದಲೇ, ನನ್ನ ಹೃದಯ ಮಂಜು ಆವಿಯಾಗಿ ಅಂತರಾತ್ಮ ಸಾಕ್ಷಾತ್ಕಾರಕ್ಕೆ ಏರಿದೆ.

ಓ ದೇವ - ನೀ ಪೂಜಿಸೆಂದರೆ, ನಾನೋರ್ವ ಭಕ್ತ ಶಿರೋಮಣಿ ಆಗುವುದಿಲ್ಲವೇನು ?

ಓ ಸ್ವಾಮಿ - ನೀ ರಾಮನಾದರೆ, ನಾ ಸೀತೆಯಾಗಿ ಬರುವೆ

ಓ ನಲ್ಲ - ನೀ ಕೃಷ್ಣನಾದರೆ, ನಾ ರುಕ್ಮಿಣಿಯಾಗಿ ಬರುವೆ

ಓ ದೇವ - ನೀ ಬುದ್ಧನಾದರೆ, ನಾ ಯಶೋಧೆಯಾಗಿ ಬರುವೆ

ಓ ಸರ್ವೋತ್ತಮ - ನೀ ವಿಶ್ವವಿರಾಟಸ್ವರೂಪನಾದರೆ, ನಾ ಮೋಕ್ಷದಾಯಿನಿಯಾಗಿ ಬರುವೆ

ಅವಳು ಯಾವುದೋ ದಿವ್ಯ ಅತೀತ ಶಕ್ತಿಯ ಅಧೀನದಲ್ಲಿಯೇ ವರ್ತಿಸುತ್ತಿದ್ದಂತೆ ಭಾಸವಾಯಿತು. ಅಪ್ಸರ ಲೋಕದ ಅಪ್ಸರೆಯಂತೆ ಒಮ್ಮೆ ಕಂಡರೆ, ಗಂಧರ್ವಲೋಕದ ಗಾಯಕಿಯಂತೆ ಮತ್ತೊಮ್ಮೆ ಕಂಡು, ಯಕ್ಷಲೋಕದ ಯಕ್ಷಿಣಿಯಂತೆ, ಇನ್ನೊಮ್ಮೆ ಕಾಣುತ್ತಿದ್ದಳು.

ಕರಗುವ ಕರ್ಪೂರದಂತೆ, ಒಮ್ಮೆ ಕಂಡರೆ ಧಗಧಗನೆ ಉರಿಯುತ್ತಿರುವ ಕೆಂಡದಂತೆ ಇನ್ನೊಮ್ಮೆ ಪ್ರಕಾಶಿಸುತ್ತಿದ್ದಳು. ನಾಟ್ಯಮಯೂರಿಯಂತೆ ಒಮ್ಮೆ ಕಂಡರೆ, ಮರುಕ್ಷಣದಲ್ಲಿಯೇ ವಿರಾಟವಿಪ್ಲವ ಮೂರ್ತಿಯಂತೆ ವಿಜೃಂಭಿಸುತ್ತಿದ್ದಳು. ಭದ್ರಕಾಳಿಯಾಗಿ ಚಂಡಿಚಾಮುಂಡಿಯಾಗಿ, ಸೃಷ್ಟಿ, ಸ್ಥಿತಿ, ಲಯ ತಾಂಡವವನ್ನು ಪ್ರತಿಬಿಂಬಿಸುವ ಜಗನ್ಮಾತೆಯ ಸೃಷ್ಟಿ ಲೀಲಾ ತಾಂಡವವನ್ನು ಪ್ರತಿಧ್ವನಿಸುವಂತೆ ಪ್ರಜ್ವಲಿಸಿದಳು.

ಪ್ರೇಮದ ಪ್ರತ್ಯಕ್ಷ ಪರಮೇಶ್ವರಿಯೂ ನಿಜ. ಪ್ರಚಂಡ ಪ್ರಳಯ ಭೈರವಿಯೂ ನಿಜವೆಂಬಂತೆ, ಅವಳು ನರ್ತಿಸಿದಳು. ಅವಳು ಶಕ್ತಿ ಸವದತ್ತಿ ಎಲ್ಲಮ್ಮ, ಸರಸಿಯ ಮಾರಮ್ಮ, ಮೈಸೂರಿನ ಚಾಮುಂಡಿ, ಶೃಂಗೇರಿಯ ಶಾರದೆ, ಜೊತೆಗೆ ಕಾವೇರಿ, ಕಾಳಿ, ಶರಾವತಿ, ವರದೆ, ಭದ್ರೆ, ಕೃಷ್ಣೆಯಾಗಿ ಕಂಗೊಳಿಸುತ್ತಿದ್ದಳು. ಆ ದೃಶ್ಯವನ್ನು ಸುರರು, ಗಂಧರ್ವರು, ಯಕ್ಷರು, ಸಿದ್ಧರು, ಸಾಧ್ಯರು ಆಕಾಶದಲ್ಲಿ ನೋಡಿ ಆನಂದಿಸಿದರು.

ಆಕೆ ತನ್ನ ತೇಜೋರಾಶಿ ದಿವ್ಯ ಸ್ತ್ರೀರೂಪದಿಂದ ನನ್ನ ಕಣ್ಣಿಗೆ ಕಾಣಿಸಿಕೊಂಡಳು. ಸಮಸ್ತ ಮಂತ್ರಗಳ ಮಹಾಮಂತ್ರಾದಿ ದೇವತೆ, ಮಾಯಾ ಸ್ವರೂಪಿಣಿ, ಸಾಕ್ಷಾತ್ ಜಗಜ್ಜನನಿ ಶಕ್ತಿ ಸ್ವರೂಪಿಣಿಯಾದ ಆದಿಶಕ್ತಿ, ಸ್ವಯಂ ಪ್ರಕೃತಿ ಸ್ವರೂಪಿಣಿಯಾಗಿ ಆಕೆಯ ಭವ್ಯರೂಪ ಸೌಂದರ್ಯವು, ಸೌಂದರ್ಯವೇ ಸ್ತ್ರೀರೂಪವಾಗಿ ಪ್ರತಿಫಲಿಸಿತೋ ಎಂಬಂತೆ ಕಂಡಿತು.

ಆದರೂ ಆಗ ನಾನು ಅವಳಲ್ಲಿ ಅನುರುಕ್ತನಾಗದಿದ್ದುದನ್ನು ಕಂಡು, ನನ್ನ ಬಳಿ ಬಂದು ಶರಣಾಗತಿ ಭಾವದಲ್ಲಿ ಮಧುರವಾದ ಮಂದಹಾಸವನ್ನು ಬೀರುತ್ತಾ, "ನಾನು ಸಂಪೂರ್ಣವಾಗಿ ನಿಮಗೆ ಆತ್ಮಾರ್ಪಣೆ ಮಾಡಿಕೊಂಡೆ. ಈ ನಿಮ್ಮ ರೂಪಿಗೆ ಮನಸೋತು ಸ್ತ್ರೀ ಸಹಜವಾದ ಲಜ್ಜೆಯನ್ನು ಬಿಟ್ಟು ನಿಮ್ಮ ಮುಂದೆ ಕುಣಿದೆ. ಆದರೆ ನೀವು ಮಾತ್ರ ಗೊಮ್ಮಟನ ಹಾಗೆ ಯಾವ ಭಾವವನ್ನು ಪ್ರದರ್ಶಿಸದೆ, ನಿಮ್ಮ ಹೃದಯವನ್ನು ಅತಿ ಜಾಗರೂಕತೆಯಿಂದ ಗೋಪ್ಯವಾಗಿಟ್ಟಿದ್ದೀರಿ!" ಎಂದು ಹೇಳಿ, ಅವಳ ದೃಷ್ಟಿ ನನ್ನ ದೃಷ್ಟಿಯನ್ನು ಸಂಧಿಸಿತು.

ಆಕೆಯ ನಗು, ಅವಳ ಅಂತರಂಗದಲ್ಲಿ ತೆರೆಯಾಗಿ ಹೊರಬೀಳುತ್ತಿದ್ದ ಯಾವುದೋ ಅದಮ್ಯ ಆಕಾಂಕ್ಷೆಯ ಕುರುವಾಗಿದ್ದಿತು! ನನ್ನ ಪರವಾಗಿ ಹೃದಯದಲ್ಲಿ ಅನಂತ ಕೃತಜ್ಞತೆ ಉಕ್ಕಿ ಕಣ್ಣುಗಳಲ್ಲಿ ನೀರಾಗಿ ಹೊಮ್ಮಿತು.

ಆಗ ಅವಳೆಂದಳು "ಸ್ವಾಮಿ, ಕಲ್ಲರಳಿ ಹೂವಾಗುತ್ತಿದೆ. ನಿಮ್ಮ ಜೀವನವೂ ಅರ್ಥಪೂರ್ಣವಾಗಿ ಪರಿಪಕ್ವವಾಗಿದೆ. ನಿಮ್ಮಾತ್ಮವು ವಿಶ್ವದ ಸತ್ಯ ಸೌಂದರ್ಯಗಳಲ್ಲಿ ಚೆನ್ನಾಗಿ ಮಿಂದಿದೆ. ನಿಮ್ಮ ತಪಸ್ಸು ಸಾರ್ಥಕವಾಗಿ, ನೀವು ಧನ್ಯರಾಗಿದ್ದೀರಿ ".

" ಹೀಗೆ ಹೇಳುವ ನೀನು ಯಾರು" ? ನಾನು ಪ್ರಶ್ನಿಸಿದೆ.

ಆಧ್ಯಾತ್ಮಿಕವಿದ್ಯೆಯ ಮಹಿಮೆಯಿಂದ ನಾನು ಏಕಾಗ್ರಚಿತ್ತನಾಗಿ, ಅವಿದ್ಯೆಯನ್ನು ಹೋಗಲಾಡಿಸುವ ಮಹಾಸಾಧಕನಂತೆ ಸಂಸಾರವನ್ನು ಗೆಲ್ಲುವಂತೆ, ಸಂಸಾರ ಸಾಗರವನ್ನು ಲೀಲಾಜಾಲವಾಗಿ ದಾಟದಂತೆ, ದಾಟಿ ದಡಸೇರುವಂತೆ, ಬಹಳ ಎಚ್ಚರಕೆಯಿಂದ ಧೃತಿ (ಧೈರ್ಯ) ಗತಿ (ಗಮನ) ಮತಿ (ಬುದ್ಧಿ) ಕೆಡದಂತೆ ಅತ್ಯಂತ ಸಂಯಮದಿಂದ ದೃಢತೆಯಿಂದ ನಿಂತಿದ್ದೆನು.

" ನಾನು--------ನಾನು ---------ನಿಮ್ಮವಳೆ " ಅವಳೆಂದಳು.

" ನನಗೆ ನನ್ನವರೆನ್ನುವವರು ಯಾರೂ ಇಲ್ಲ, ಹೇಳು ಯಾರು ನೀನು" ? ನಾನು ಪ್ರಶ್ನಿಸಿದೆ.

" ಎಂದಿಗೂ ಇರಲಿಲ್ಲವೇ ? " ಮತ್ತೆ ಪ್ರಶ್ನಿಸಿದಳು.

" ಆಂ ! ಇದ್ದರು. ಇದ್ದು ಇಲ್ಲದಂತೆ ಇದ್ದರು (ಅನೇಕ ಜನ್ಮಗಳಲ್ಲಿ) ನೀನು ಯಾರು ?" ಮತ್ತೆ ಕೇಳಿದೆನು.

" ನಾನು ಯಾರು ! ನಿಮ್ಮ ಆ ಜೀವ ನನ್ನ ಕೈಯಲ್ಲಿಯೇ ಇದೆ" ಎಂದು ಅವಳು ಹೇಳಿದಳು.

" ಆಂ ! ನನ್ನ ಜೀವ ನಿನ್ನ ಕೈಯಲ್ಲಿದೆಯೊ ! ಅಹ್ಹಹ್ಹಾ, ಅಹ್ಹಹ್ಹಾ, ಇಲ್ಲ. ನಿನ್ನ ಜೀವ ನನ್ನ ಕೈಯಲ್ಲಿದೆಯೋ ? ಅಹ್ಹಹ್ಹಾ ಅಹ್ಹಹ್ಹಾ" ಎಂದು ನಾನು ಮುಗುಳ್ನಕ್ಕೆ.

" ಏನಿದು ರಾಮಸ್ವಾಮಿ -----ನನ್ನ ಗುರುತು ನಿನಗೆ ಸಿಕ್ಕಿಲ್ಲವೇ ಸ್ವಾಮಿ ?" ಅವಳೆಂದಳು

" ಏನು ನಾನು ರಾಮು---ನಿನಗೆ ಸ್ವಾಮಿ ? " ಆಶ್ಚರ್ಯ ವ್ಯಕ್ತಪಡಿಸಿದೆ.

" ಹೌದು---ಹಿಂದಿನ ಜನ್ಮದಲ್ಲಿ ರಾಮ----- ಈ ಜನ್ಮದಲ್ಲಿ ಸ್ವಾಮಿ, ಮುಂದಿನ ಜನ್ಮದಲ್ಲಿ ರಾಮನಾಗಿ ಸ್ವಾಮಿಯಾಗಬೇಕು, ನನ್ನಿಂದ ಬಿಡುಗಡೆ ಹೊಂದಬೇಕು" ಅವಳು ತಿಳಿಸಿದಳು.

" ನೀ ತಿಳಿದಿರುವ ಹಾಗೆ ನಾನು ರಾಮನೂ ಅಲ್ಲ, ನಾ ಸ್ವಾಮಿಯೂ ಅಲ್ಲ. ರಾಮಸ್ವಾಮಿಯೂ ಅಲ್ಲ, ನಿನಗೂ ನನಗೂ ಯಾವ ಸಂಬಂಧ ? " ಎಂದು ಕೇಳಿದೆನು.

"ಪ್ರಕೃತಿ ಪುರುಷರಿಗೆ ಇರುವ ಸಂಬಂಧ" ಎಂದು ಅವಳು ನುಡಿದಳು. "ನನಗೆ ಯಾವ ಸಂಬಂಧವೂ, ಯಾರ ಬಂಧನವೂ ಈಗ ಇಲ್ಲ, ಹಾಗಾದರೆ ನೀನು ಮಾಯೆಯೇ ? " ನಾನು ಕೇಳಿದೆನು.

" ಹೌದು ನಾನು ಮಾಯೆ. ಹಿಂದಿನ ಜನ್ಮದಲ್ಲಿ ರಾಮನಾಗಿ ನನ್ನನ್ನು ಗೆದ್ದೆ. ಈ ಜನ್ಮದಲ್ಲಿ ಸ್ವಾಮಿಯಾಗಿ ಗೆದ್ದೆ. ಮುಂದಿನ ಜನ್ಮದಲ್ಲಿ ಎರಡೂ ಆಗಿ ಗೆದ್ದರೆ, ನನ್ನ ಬಂಧನದಿಂದ ನೀವು ಎಂದೆಂದಿಗೂ ಮುಕ್ತರಾಗುತ್ತೀರಿ ".

" ಹಾಗಾದರೆ ನೀನು ನನ್ನನ್ನು ಕಾಡುತ್ತಿರುವೆಯೋ ?" ನಾನು ಪ್ರಶ್ನಿಸಿದೆನು.

" ನಾನು----ನಿಮ್ಮನ್ನು ಕಾಡದಿದ್ದರೆ, ನನ್ನ ಕೆಲಸವಾದರೂ ಏನು ? ಮುಂದಿನ ಜನ್ಮದಲ್ಲಿ ನಾನು ಮೂರು ಬಗೆಯಾಗಿ ನಿಮ್ಮನ್ನು ಪರೀಕ್ಷಿಸುವೆ. ನಿಮ್ಮನ್ನು ಮೋಹಿಸಿ, ಮದುವೆವಾಗಿ, ಮುಕ್ತನನ್ನಾಗಿ" ಮಾಡುವೆ ಎಂದು ಮಾಯಾ ರಹಸ್ಯ ತಿಳಿಸಿದಳು.

" ಓ ಜಗದಾಂಬ ! ನೀನು ಮೋಹಿನಿ ! ನೀನು ಮೋಹಿಸಿ, ಮದುವೆಯಾಗಿ, ಮುಕ್ತನನ್ನಾಗಿ ಮಾಡುವುದು ಈ ಶರೀರ ಮತ್ತು ಮನಸ್ಸನ್ನೇ ಹೊರತು ಆತ್ಮವನ್ನಲ್ಲ. ಬಿರುಗಾಳಿ ಎಬ್ಬಿಸುವುದು ನೀರಿನ ಸುಂದರ ಅಲೆಗಳನ್ನು ಮಾತ್ರ. ಅದರ ಆಳದಲ್ಲಿರುವ ಸಮುದ್ರವನ್ನು ಅಲುಗಾಡಿಸಲಾರದು. ಹೊರಗಿನ ಅಲೆ ಒಳಗಿನ ಆಳವನ್ನು ಹೇಳಲಾರದು, ಹಾಗೆ ನಿನ್ನ ಆಟ " ಎಂದು ನಾನು ಆತ್ಮರಹಸ್ಯ ತಿಳಿಸಿದೆನು.

" ಆದರೂ, ನಾನಿಲ್ಲದೇ ನೀವಿಲ್ಲ, ಮಾಯೆಯಾದ ನಾನು ಎಲ್ಲದಕ್ಕೂ ಸ್ಫೂರ್ತಿದಾಯಕಳು" ಎಂದು, ದೃಢನಿರ್ಧಾರದಿಂದ ಅವಳು ತಿಳಿಸಿದಳು. ಒಳಗೊಳಗೆ ಅಂತರಂಗದಲ್ಲಿ ನಮ್ಮಿಬ್ಬರಿಗೂ ಪರಸ್ಪರ ಸ್ಪರ್ಧಾ ಭಾವವೂ, ಪ್ರತಿಷ್ಠೆಯೂ, ಪೈಪೋಟಿ ಯೂ ನಡೆಯುತ್ತಿತ್ತು. ಅಖಂಡ ವಿಶ್ವಸ್ವರೂಪನಾಗಿ ಮೈತಳೆದು ನಿಂತಿದ್ದ ನಾನು ನನ್ನಲ್ಲೇ ಹುಟ್ಟಿ, ನನ್ನಲ್ಲೇ ಲೀನವಾಗುತ್ತಿದ್ದ ಮಾಯಾಲೀಲಾ ಸ್ವರೂಪಳನ್ನು ನೋಡಿ ಮುಗುಳ್ನಕ್ಕುಹೇಳಿದೆ.

" ಇದು ನನಗೆ ಮಾತ್ರ ಅನ್ವಯಿಸುವ ಮಾತಲ್ಲ, ನೀನಿಲ್ಲದೆ ನಾನಿಲ್ಲವೋ, ನಾನಿಲ್ಲದೇ ನೀನಿಲ್ಲವೋ ಅದೇ ಸರಿಯಾಗಿ ನಿನಗೆ ಇನ್ನೂ ತಿಳಿದಿಲ್ಲ."

" ಬ್ರಹ್ಮನಿಗೆ ಸರಸ್ವತಿ, ಶಿವನಿಗೆ ಪಾರ್ವತಿ, ವಿಷ್ಣುವಿಗೆ ಲಕ್ಷ್ಮೀ ಪ್ರೇರಕಶಕ್ತಿಗಳು. ಈ ಸೃಷ್ಟಿಯ ಸ್ಫೂರ್ತಿಗೆ ಅವರೇ ಕಾರಣರು. ಅಂತಹವರಿಗೆಲ್ಲಾ ಸ್ಫೂರ್ತಿಮೂಲ, ಶಕ್ತಿಮೂಲಳಾಗಿ ಮಹಾಸರಸ್ವತಿ, ಮಹಾಲಕ್ಷ್ಮೀ ಮತ್ತು ಮಹಾಕಾಳಿಯೆನ್ನಿಸಿ, ಆದಿ ಪರಾಶಕ್ತಿಯಾದ ನಾನು ನಿನಗೆ ಯಾರೂ ಅಲ್ಲವೋ " ಎಂದು ಚೀರಿದಳು. ಆ ಕ್ಷಣ ಅವಳ ಮುಖದಲ್ಲಿ ಬದಲಾವಣೆಯಾಗತೊಡಗಿತು. ಅವಳ ಕಣ್ಣುಗಳು ಕಿಡಿಗಳನ್ನು ಕಾರುತ್ತಾ, ನೆತ್ತಿಗೇರಿದ ಕೋಪವು ಬೆಂಕಿಯ ಜ್ವಾಲೆಯಂತೆ ಧಗಧಗಿಸಿ ಉರಿಯಲಾರಂಭಿಸಿತು. ಒಲಿದರೆ ನಾರಿ, ಮುನಿದರೆ ಮಾರಿ ಎಂಬಂತೆ ಘೋರ ಸಂಕಲ್ಪದಿಂದ ತನ್ನ ನಿರ್ಧಾರವನ್ನು ಅಕ್ಷರಶ: ಸತ್ಯಗೊಳಿಸಿದಳು. ಮನಸ್ಸಿನಲ್ಲಿ ಬಹಳವಾದ ಕೋಪವನ್ನು ತಳೆದು ಕಿಡಿಕಿಡಿ ಕೆಂಡವಾದಳು. ಹಲ್ಲುಗಳನ್ನು ಕಟಕಟನೆ ಕಡಿಯುತ್ತಿದ್ದಳು. ಕೋಪಾಗ್ನಿಯಿಂದ ದೇಹವೆಲ್ಲಾ ಉರಿಯಲಾರಂಭಿಸಿತು. ಆ ಕೋಪದ ಎಲ್ಲಾ ತಾಪವು ಕಣ್ಣುಗಳ ಮೂಲಕ ಹೊರಹೊರಡುವುದೋ ಎಂಬಂತೆ, ಕಣ್ಣಾಲಿಗಳು ಬೆಂಕಿಯ ಉರಿ ಕೆಂಡದಂತೆ ಕೆಂಪಾಗಿ ಕಾಣಿಸಿದ್ದವು.

ಪ್ರಳಯಕಾಲದಂತೆ ಸಮಸ್ತ ಬ್ರಹ್ಮಾಂಡವು ಅಲ್ಲೋಲಕಲ್ಲೋಲವಾಯಿತು. ಸರ್ಪರಾಜನಾದ ಆದಿಶೇಷನು, ಆದಿಕೂರ್ಮನು, ಅಷ್ಟದಿಗ್ಗಜಗಳು, ಸಪ್ತಕುಲ ಪರ್ವತಗಳು, ಏಳು ಸಮುದ್ರಗಳು, ಎಂಟು ದಿಕ್ಕುಗಳು, ಸಪ್ತರ್ಷಿಮಂಡಲ ತಾರೆಗಳು, ನವಗ್ರಹಗಳು, ಸೂರ್ಯ, ಚಂದ್ರರು ಭಯದಿಂದ ಕಂಪಿಸಿದರು.

ಆಗ ಒಂದು ಹೆಣ್ಣು ಅವಳ ಶರೀರದಿಂದ ಹೊರ ಬಂದಿತು. ಅವಳು ಎಲ್ಲ ರೀತಿಯಲ್ಲಿಯೂ ಶೀಲಳನ್ನು ಹೋಲುತ್ತಿದ್ದಳು. ಮತ್ತೊಂದು ಕ್ಷಣದಲ್ಲೇ ಇನ್ನೆರಡು ಹೆಣ್ಣುಗಳು ಅವಳ ಶರೀರದಿಂದ ಹೊರಬಂದವು. ಆಕೆ ನನ್ನನ್ನೇ ತೀಕ್ಷ್ಣವಾಗಿ ನೋಡಿ ನಿನ್ನನು ಸೇರದೆ ಇರಲಾರೆನು, ಎಂಬ ಉತ್ಕಟೇಚ್ಛೆಯಿಂದ ಹೊರಟಂತೆ ಅದೃಶ್ಯವಾಗತೊಡಗಿದಳು.

ನಾನು ಆಗ ಆ ಪ್ರಜ್ಞಾಲೋಕದಿಂದ ಹಿಂದಿರುಗಿ ಮತ್ತೆ ವಾಸ್ತವಿಕ ಲೋಕದಲ್ಲಿ ಎಚ್ಚೆತ್ತನು. ಆಗ ತಾನೆ ಉದಯವಾದಂತೆ ತೋರಿತು, ನನಗೆ ಹೊರಗಡೆಯ ಪ್ರಪಂಚ. ನನ್ನಲ್ಲಿ ಉನ್ಮೇಷಿತವಾದ ನವೋತ್ಥಾನವನ್ನು ಸಾಧಾರಣತೆಯ ಸೋಗಿನಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಹುದುಗಿಸಿಕೊಂಡು, ಇದೇನು ಕನಸೋ - ನನಸೋ ಎಂದು ಋಜುಭಾವದಿಂದ ವರ್ತಿಸುವುದೇ ಮಾನವೀಯತೆಯ ಸೌಜನ್ಯ, ಸೌಶೀಲ್ಯದ ಲಕ್ಷಣವೆಂದು ಅರಿತನು.

ಹೆಣ್ಣಿಗಾಗಿ, ಹೊನ್ನಿಗಾಗಿ, ಮಣ್ಣಿಗಾಗಿ ಆಸೆಪಟ್ಟು ಹೊಡೆದಾಡುವವರು, ಹೋರಾಡುವವರು ಕೇವಲ ಸಾಮಾನ್ಯ ಜನರು.

ಅಯ್ಯೋ ನನ್ನ ಬದುಕನ್ನು ವ್ಯಥಾ ಹಾಳು ಮಾಡುತ್ತಿರುವೆನಲ್ಲಾ! ಮಕ್ಕಳನ್ನು ಬೆಂಕಿಯಿಂದ ಸುರಕ್ಷಿತವಾಗಿಡಲೂ ತ್ಯಾಗಮಾಡುವ ಧೀರರಿದ್ದಾರೆ. ರಾಷ್ಟ್ರವನ್ನು ಪರಾಧೀನದಿಂದ ವಿಮೋಚನೆ ಮಾಡಲು ಮುಂದೆ ಬರುವ ವೀರರಿದ್ದಾರೆ. ಮಹಾವಿಪತ್ತುಗಳನ್ನೆದುರಿಸಿ ಭಾರಿ ಭಾರಿ ಶಿಖರಗಳನ್ನೇರುವ ಆಳವಾದ ಸಾಗರಗಳನ್ನು ದಾಟಿ ಹೋಗುವ ಸಾಹಸಿಗಳಿದ್ದಾರೆ. ದೀರ್ಘಕಾಲ ಸತತವಾಗಿ ಮಾನವನ ಕಲ್ಯಾಣಕ್ಕಾಗಿ ಯಾವ ಫಲಾಪೇಕ್ಷೆಯೂ ಇಲ್ಲದೆ ವೈಜ್ಞಾನಿಕ ಸಂಶೋಧನೆಗಳಲ್ಲಿ ತೊಡಗಿರುವ ಧೀಮಂತ ವಿಜ್ಞಾನಿಗಳಿದ್ದಾರೆ. ಅನೇಕ ನಿಜವಾದ ಜನೋಪಕಾರಿಗಳು, ವೀರರು, ಸಾಹಸಿಗಳು, ಸಮಾಜ ಸೇವಕರು ತಮ್ಮಲ್ಲಿ ಸುಪ್ತವಾಗಿರುವ ದಿಟ್ಟತನದಿಂದ ಜೀವನದ ಹಂಗು ತೊರೆದು ಹೋರಾಡುವ ಸಾಹಸ ಪ್ರವೃತ್ತಿಯಿಂದ ನಿಸ್ವಾರ್ಥಮನೋಭಾವ ದಿಂದ ಸಮಯಕ್ಕೆ ತಕ್ಕಂತೆ ವರ್ತಿಸುವ ವಿವೇಚನೆ, ಧೈರ್ಯ, ಸ್ಥೈರ್ಯ ಮುಂತಾದ ಗುಣಗಳಿಂದ ಶತ್ರುಗಳನ್ನು ಹಿಮ್ಮೆಟ್ಟಿಸುತ್ತಾರೆ. ದುರ್ಘಟನೆಯಲ್ಲಿ ಸಂಭವಿಸಬಹುದಾದ ಅನಾಹುತಗಳನ್ನು ತಪ್ಪಿಸುತ್ತಾರೆ, ನ್ಯಾಯಕ್ಕಾಗಿ ಹೋರಾಡುತ್ತಾರೆ. ನೊಂದ ಜನರ ಪರಿಚಾರಕರಾಗುತ್ತಾರೆ. ಅನ್ಯಾಯವನ್ನು ಎದುರಿಸುತ್ತಾರೆ. ಹೀಗೆ ವ್ಯಕ್ತಿ ಯನ್ನು, ಸಮಾಜವನ್ನು, ದೇಶವನ್ನು ಆಪತ್ತಿನಿಂದ ಪಾರು ಮಾಡುವ ಅಪದ್ಬಾಂಧವರೂ ಅನೇಕರಿದ್ದಾರೆ. ಇಂದು ಉತ್ತಮ ಬದುಕನ್ನು ಬದುಕಿದ್ದಾದರೆ, ನಾಳೆಗದು ಒಂದು ಸಂತಸದ ಸವಿನೆನಪಾಗಿ, ಮನಸ್ಸಿಗೆ ನೆಮ್ಮದಿ ನೀಡುವುದು ಎಂದು ಅವರೆಲ್ಲ ತಿಳಿದಿದ್ದಾರೆ.

ಪರೋಪಕಾರಗಳಿಂದ ಮನುಷ್ಯನ ಬಾಳು ಅರ್ಥಪೂರ್ಣ ಎನಿಸುವುದು. ಧರ್ಮ- ಅರ್ಥ- ಕಾಮ ಮೋಕ್ಷಗಳೆಂಬ ನಾಲ್ಕು ವಿಧದ ಪುರುಷಾರ್ಥಗಳು ಸಿದ್ಧಿಯಾಗಬೇಕಾದರೆ, ಪರೋಪಕಾರಾದಿ ಪುಣ್ಯಕಾರ್ಯ ಗಳೇ ಕಾರಣವಾಗುವುದು. ಇಂಥ ಜನರ ಜೀವನ ಅಮರಜೀವನ. ನಮ್ಮ ಜೀವನಸಾಫಲ್ಯವು ದಿನದ ಪ್ರತಿ ಯೊಂದು ಗಂಟೆಯಲ್ಲಿ, ಪ್ರತಿಯೊಂದು ಕ್ಷಣದಲ್ಲಿ, ನಾವು ಬದುಕುವ ರೀತಿಯನ್ನು ಹೊಂದಿಕೊಂಡಿದೆ. ಅದು ನಮ್ಮ ವ್ಯಕ್ತಿತ್ವದ ಸಾಕ್ಷಿ ಚಿತ್ರ. ಈ ಯೋಚನೆ ನನ್ನ ಮನಸ್ಸಿನ ಆಳವನ್ನು ಕಲಕಿತು. ಕ್ಷಣಕಾಲ ನಾನು ಯೋಚಿಸುತ್ತ ಮೌನವಾಗಿಯೇ ಇದ್ದ.

ಸತ್ಯದ ಮಹಾಸಾಗರದಲ್ಲಿ ಮನುಷ್ಯನು ಏನನ್ನು ಬಯಸುತ್ತಾನೋ, ಅದನ್ನು ಪಡೆಯುತ್ತಾನೆ. ಸೃಷ್ಟಿಯ ಹಿನ್ನೆಲೆಯ ನಿಯಮಗಳನ್ನು ಹುಡುಕಾಡಿದ ಐನ್ ಸ್ಟೀನ್ ವಿಶ್ವವ್ಯಾಪಕ ನಿಯಮಗಳನ್ನು (E=mc2) ಕಂಡುಹಿಡಿದ. ದೇವರಿಗಾಗಿ ಕಾತರಿಸಿದ ಸಂತ ಫ್ರಾನ್ಸಿಸ್ ದೈವಸಾಕ್ಷಾತ್ಕಾರ ಪಡೆದ. ಪ್ರಯತ್ನ ದಿಂದ ಪರಮಾರ್ಥಸಾಧ್ಯ ಎಂಬುದನ್ನು ಸಮರ್ಥಿಸಿದ.

ಆದರೆ ತಾನು ಕೇವಲ ಒಂದು ಹೆಣ್ಣಿಗಾಗಿ ತನ್ನ ಬಾಳ್ವೆಯನ್ನು ಒಂದು ನಿರ್ದಿಷ್ಟ ಗುರಿಯಿಂದ ಬದಲಿ ಸಲು ಇಚ್ಛಿಸುವುದರಲ್ಲಿ ಯಾವ ಪುರುಷಾರ್ಥ ಸಾಧಿಸಿದಂತಾಯಿತು?

ಆಗ ನಾನು ಅವಿವಾಹಿತನಾಗಿಯೇ ಇದ್ದುಕೊಂಡು, ಮಹಾಪುರುಷರ, ಸಾಧು ಸಂತರ ಜೀವನವನ್ನು ಅನುಸರಿಸಿ ಮಾನವಕುಲಕ್ಕೆ ಸೇವೆಮಾಡಿ, ಕೀರ್ತಿ ಸಂಪಾದಿಸಬೇಕೆಂದಿದ್ದ ಹಿಂದಿನ ಆದರ್ಶ, ಮತ್ತೆ ಮನದಲ್ಲಿ ಹೆಡೆಯೆತ್ತಿತ್ತು.

# 7. ಅನ್ವೇಷಣೆಯ ಹಾದಿಯ ಸಾಕ್ಷಾತ್ಕಾರದ ಅನುಭವಗಳು

ಅರಣ್ಯದಲ್ಲಿ ಸಂಚಲಿಸುವ ಸಿಂಹ ಒಮ್ಮೊಮ್ಮೆ ತನ್ನ ಮುಖವನ್ನು ಹಿಂದಕ್ಕೆ ತಿರುಗಿಸಿ, ನಡೆದುಬಂದ ದಾರಿಯನ್ನು ಅವಲೋಕಿಸುತ್ತದೆ. ಇದನ್ನು " ಸಿಂಹಾವಲೋಕನ " ಎನ್ನುತ್ತಾರೆ.

ಒಂದು ದಿನ ನನ್ನ ಅಂತಹ ಸಿಂಹಾವಲೋಕನದಿಂದ ನಾನು "ಸಾಕ್ಷರತೆ" "ಸಾರ್ಥಕತೆ" "ಸಾಕ್ಷಾತ್ಕಾರ" "ಸೃಷ್ಟಿಯ ರಹಸ್ಯ" ಮತ್ತು " ಮನುಕುಲದ ಭವಿಷ್ಯದ" ಅನ್ವೇಷಣೆಯ ಹಾದಿಯನ್ನು ಪರಿಶೀಲಿಸತೊಡಗಿದೆ.

ಮಾನವನ ಇತಿಹಾಸವನ್ನು ಅರಿತು ಮಹತ್ತನ್ನು ಸಾಧಿಸಿದವರೆಲ್ಲರೂ ಶ್ರಮಪಟ್ಟು ದುಡಿಯುತ್ತಿದ್ದವರು. ತಮ್ಮ ಕೆಲಸದಲ್ಲಿಯೇ ಮಗ್ನರಾಗುತ್ತಿದ್ದವರು. ಆ ಕೆಲಸ ಅವರಿಗೆ ಆನಂದವನ್ನು, ತೃಪ್ತಿಯನ್ನು ತಂದಿತ್ತು. ಆತ್ಮವಿಶ್ವಾಸ ನೀಡಿತ್ತು.

ಪ್ರಾಚೀನದ ಶಾಶ್ವತಮೌಲ್ಯದ ಸಾರಸರ್ವಸ್ವವನ್ನು ಹೀರಿಕೊಂಡು, ಜಗದ್ವಿಶಾಲ ವೈಜ್ಞಾನಿಕವಾದ ದೃಷ್ಟಿಯಿಂದ ಪೋಷಿತನಾಗಿ, ನೂತನ ಮೌಲ್ಯಗಳನ್ನು ಸಾಧಿಸುವಾತನು ಆಧುನಿಕ ಮಾನವನಾಗುತ್ತಾನೆ.

ನಾನು ವಿಶ್ವಮಾನವ ಸಂಸ್ಕೃತಿಯನ್ನು ಅಧ್ಯಯನ ಮಾಡಿದೆ. ನನ್ನ ತಿಳಿವು ಹೆಚ್ಚಿದಂತೆ ನಾನು ಸುಖಿಯಾಗಿದ್ದೆ. ಐಶ್ವರ್ಯ, ಅಂತಸ್ತು ಏನೇ ಇರಲಿ ಅವು ತಾತ್ಕಾಲಿಕ ಸುಖವನ್ನು ನೀಡಬಲ್ಲವು. ಆದರೆ, ಆತ್ಮ ಸಂತೋಷದಿಂದ ಮಾನವನು ಸುಖಿಯಾಗಬೇಕಾದರೆ, ಪಾರಮಾರ್ಥದಲ್ಲಿ ಹೇಳಿದಂತೆ ಮನಸು ನಶಿಸಿ, ಆತ್ಮ-ಪರಮಾತ್ಮನಲ್ಲಿ ಐಕ್ಯವಾಗಬೇಕು.

ವಿರಕ್ತಿ ಸಂಪಾದನೆ ಮಾಡಿಕೊಳ್ಳುವುದು ಸುಲಭದ ಕೆಲಸವಲ್ಲ. ಅದರ ಬಗ್ಗೆ ತಪಸ್ಸು ಮಾಡಬೇಕು. ಕಾಡಿಗೆ ಹೋಗಿ ಯೋಗಿ ಆಗುವುದು ಅದರ ಅರ್ಥವಲ್ಲ. ಮೂಗು ಹಿಡಿದು ಮೂಲೆಯಲ್ಲಿ ಕುಳಿತುಕೊಳ್ಳುವುದು ವಿರಕ್ತಿಯ ಭಾವವಲ್ಲ. ನಾನು ನನ್ನ ಮನಸ್ಸಿನ ಎಲ್ಲೆಕಟ್ಟಿನ ಪರಿಮಿತಿಯನ್ನು ದಾಟಿ ಆತ್ಮದ ಅರಿವನ್ನು ಪಡೆದಾಗ ವಿಶ್ವಚೈತನ್ಯದಲ್ಲಿ ನಾನು ಒಂದು ಬಿಂದು ಎಂದು ತಿಳಿದೆ. ಇದೇ ನಿಜವಾದ ಯೋಗದ ಗುರಿ ಎಂದು ನಾನು ತಿಳಿದಾಗ, ನಾನು ಅನೇಕ ಅತೀಂದ್ರಿಯ ಅನುಭವಗಳಿಂದ ಉತ್ತೇಜನ ಪಡೆದು ನನ್ನ ಯೋಗಾಭ್ಯಾಸದಲ್ಲಿ ಪೂರ್ಣ ಒಡೆತನ ಸಂಪಾದಿಸಿದೆ.

ಆಧ್ಯಾತ್ಮಿಕ ಪ್ರಜ್ಞೆಯ ಯಾತ್ರಿಯಾಗಿ ನನ್ನ ವಿಕಾಸದ ಸಿದ್ಧಿಗೆ ಅವಶ್ಯಕವಾದ ಚಿಂತನಾಂಶವನ್ನು ನನ್ನ ಚೇತನ ಸಂಪಾದಿಸಿತು. ಆ ದಕ್ಷತೆಯ ಪ್ರಜ್ಞೆ, ದೈಹಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಸುಖವನ್ನು ನನಗೆ ನೀಡಿತು.

ನನ್ನ ಅಂತರಾತ್ಮದ ನಿಗೂಢ ರಹಸ್ಯದಲ್ಲೂ ಬಾಹ್ಯದೃಷ್ಟಿಗೆ ತಿಳಿಯದಂತೆ ಅನೇಕ ವ್ಯಾಪಾರಗಳು ಜರುಗುತ್ತಿದ್ದವು. ನಾನು ಉದಾತ್ತ ಭಾವನೆಗಳಿಂದಲೂ, ಉನ್ನತ ಆದರ್ಶಗಳಿಂದಲೂ ಚ್ಯುತನಾಗದೆ ಮುಂದೆ ಸಾಗಿದೆ. ನನಗೆ ನನ್ನ ಪ್ರಜ್ಞೆಯ ಒಂದೊಂದು ಹೊಸ ಕಿಟಕಿಯೂ ಹೊಸ ಬಾಗಿಲು ತೆರೆದಂತೆಲ್ಲಾ ಪ್ರತಿಸಲವೂ ವಿಸ್ಮಯವಾಗುತ್ತಿತ್ತು.

ನಾನು ತುಂಬಾ ಧ್ಯಾನಶೀಲನೂ, ಅಂತರ್ಮುಖಿಯೂ ಆಗಿ ಭಗವಂತನ ಸಾನ್ನಿಧ್ಯವನ್ನು ಸರ್ವತ್ರ ಅನುಭವಿಸುವಂತೆ ಅನುಗ್ರಹವಾಗಲಿ, ನಶ್ವರವನ್ನು ದಾಟಿ ನನ್ನ ಅನ್ವೇಷಣೆ ಶಾಶ್ವತದಕಡೆ ಸಾಗಲಿ, ಭಗವಂತನೇ ನನ್ನ ಆನಂದ, ಆಶ್ರಯ, ಆಲಯವಾಗಿ ಲಭಿಸಲಿ ಎಂದು ನಿರಂತರ ಮೊರೆಯಿಡುತ್ತಿದ್ದೆ.

ಅಂದು ಸರ್ವವ್ಯಾಪಕ ಸಾನ್ನಿಧ್ಯದ ಅನುಭವವಾಗಿ ಪುಲಕಿತವಾದ ನನ್ನ ಪ್ರಜ್ಞೆಯು ತನ್ನ ಹಲವಾರು ಬಾಗಿಲುಗಳನ್ನು ತೆರೆದು ವಿಶ್ವಪ್ರಜ್ಞೆಗೆ ಪ್ರವೇಶ ಪಡೆಯಿತು. ನನ್ನ ಚೇತನ ತನ್ನ ಗ್ರಾಮೀಣ ಸತ್ವವನ್ನು ವಿಸರ್ಜಿಸಿ ವಿಶ್ವಭೂಮತ್ವಕ್ಕೆ ಪಾದಾರ್ಪಣೆ ಮಾಡಿತು.

ಆಧ್ಯಾತ್ಮ ಗಗನದ ಅನೇಕ ಉಜ್ವಲ ನಕ್ಷತ್ರಗಳೊಡನೆ ಜೀವಾತ್ಮ ಸಂಪರ್ಕಗೊಂಡು ತನ್ನ ತಮಃ ಪ್ರಪಂಚದಿಂದ ಮೇಲಕ್ಕೆ ಹಾರಿ ಅನಂತತೆಯ ಪ್ರದೇಶಗಳಲ್ಲಿ ವಿಹಾರಿಯಾಯಿತು. ಎಲ್ಲೆಯನ್ನು ಕಲ್ಪಿಸದೆ ನಿರಂತರವ್ರೂ ಮೇಲೇರಿ ಮುಂದುವರಿಯುತ್ತಿತ್ತು. ನನ್ನ ವ್ಯಕ್ತಿತ್ವ ಮತ್ತು ಆತ್ಮ ಹೆಚ್ಚು ಹೆಚ್ಚು ಸಮಂಜಸವಾಗಿ ಒಟ್ಟಾಗಿ, ಸಮನ್ವಯವಾಗಿ, ಅರ್ಥಪೂರ್ಣವಾಗಿ ಆನಂದಮಯವಾಗುತ್ತಿತ್ತು. ಕಣ್ಣಿಟ್ಟ ಕಡೆಯೆಲ್ಲ ಪರಮ ಪುರುಷೋತ್ತಮನ ನಿರಾಕಾರ, ಸಾಕಾರವೆ ಕಣ್ಣಿಗೆ ಬೀಳುತ್ತಿತ್ತು. ಮಮಕಾರ, ಅಹಂಕಾರ ಹೋದರಷ್ಟೆ ಈಶ್ವರನು ಬಂದು ಹೃದಯದಲ್ಲಿ ನೆಲೆಸುವುದು.

ನಾನು ಪದ್ಮಾಸನ ಹಾಕಿ ಸಾತ್ವಿಕ ಧ್ಯಾನದಲ್ಲಿ ಮಗ್ನನಾಗುತ್ತಿದ್ದಾಗ, ನನ್ನ ಚೇತನದ ಅದ್ವೈತ ಪ್ರಜ್ಞೆಯಲ್ಲಿ ವಿಶ್ವದ ಅಪಾರತೆ, ಅನಂತತೆಯ ಆ ಚಿಂತನೆಗಳನ್ನು ನೆನೆದು ಶೂನ್ಯಾನುಭವಕ್ಕೆ ಮೈ ಮರೆಯುತ್ತಿತ್ತು.

ಅಂದು ತುಂಬಿ ಬಂದ ಆ ಪೂರ್ಣ ಪ್ರವಾಹವನ್ನು ಭಾಷೆ ಬಣ್ಣಿಸಲಾರದಾಗಿತ್ತು. ಆ ಅನುಭವಗಳ ಜೀವಂತಿಕೆ, ಮಾಧುರ್ಯ ಮತ್ತು ಉಲ್ಲಾಸಮಯ ವಿಭವಗಳನ್ನು, ರಕ್ತಮಾಂಸಪೂರ್ಣವಾದ ರಸಮಯ ವ್ಯಕ್ತಿತ್ವಕ್ಕೆ ಹೋಲಿಸಿದರೆ, ಅಸ್ಥಿಪಂಜರ ಸದೃಶವಾಗಿ, ನೀರಸವಾಗಿ ಬಿಡುತ್ತಿದ್ದವು. ನನ್ನ ಆತ್ಮಕ್ಕೆ ಚೈತ್ರ ಪ್ರಕೃತಿಯ ಕಿಚ್ಚು ತಗುಲಿದಂತಾಗಿ ಹೊಸ ಚೇತನ ಎದೆಯಲ್ಲಿ ಮಿಂಚಿನಂತೆ ಸಂಚರಿಸುತ್ತಿತ್ತು. ಅದು ಆತ್ಮದ ಮಹಾ ಮಂಗಳಾರತಿಯ ಪರಮಿಳಿತ ಪಾವನ ಜ್ಯೋತಿಯನ್ನು ಪೋಷಿಸುವ ಕರ್ಪೂರವಾಗುತ್ತಿತ್ತು.

ಆಗ ಆನಂದ ಸ್ವರೂಪಿಯಾದ ಭಗವಂತ ಸೌಂದರ್ಯರೂಪಿಯಾಗಿ ಮೈದೋರಿ, ನನ್ನ ಆತ್ಮದಲ್ಲಿ ರಸವಾಗಿ ಪ್ರವಹಿಸುತ್ತಿದ್ದ. ಆ ಧ್ಯಾನದಲ್ಲಿ ಆಲೋಚನೆ ಇರಲಿಲ್ಲ. ತಾನೆ ಎಂಬ ಭಾವವ್ರೂ ಪ್ರಜ್ಞೆಯಿಂದ ಉರುಳಿ ಮಾಯವಾಯಿತು. ಆಗ ನಾನು ಅಪರಿಮಿತ ಆನಂದವನ್ನು ಅನುಭವಿಸುತ್ತಿದ್ದೆ.

ಭಗವಂತನ ನಿರಂತರ ಸಾನ್ನಿಧ್ಯಾನುಭವ ನನಗೆ ಹರ್ಷಪ್ರದವಾಗಿ ಒಬ್ಬ ಮಹಾಚೇತನನಿಗೆ ಲಭಿಸ ಬಹುದಾದ ತೃಪ್ತಿಯ ಪರಾಕಾಷ್ಠತೆಯನ್ನೇ ಅದು ನನಗೆ ತಂದು ಕೊಟ್ಟಿತು. ಆ ಭಾವಸಮಾಧಿಯ ರಸಾಗ್ನಿ ಗಂಗೆಯಲ್ಲಿ ಮುಳುಗಿ ಮಿಂದು ಜ್ವಾಲಾಮಯಾತ್ಮನಾದ ನನಗೆ ಈ ಕಹಿ ಜಗತ್ತಿನ ಹಿಂದೆ ಜಗತ್ತೆಲ್ಲವ್ರೂ ಶಾಂತಿ, ಸೌಂದರ್ಯ, ಆನಂದ, ಮೈತ್ರಿ, ಪ್ರೇಮಗಳಿಂದ ಒಳಗೊಂಡ ಸತ್ಯದ ಅನುಭವವಾಗುತ್ತಿತ್ತು. ನನ್ನ ಆನಂದ ವರ್ಣನಾತೀತವಾಗಿತ್ತು ಸುಖವ್ರೋ ಪರಾಕಾಷ್ಠೆಯನ್ನೇರಿತ್ತು. ಏನೋ ಒಂದು ರಸಾನಂದ ನನ್ನ ಚೇತನವನ್ನು ತುಂಬಿತ್ತು. ಅದೊಂದು ಅದ್ಭುತದ ಮತ್ತು ಸೌಂದರ್ಯದ ಔತಣವ್ರೊದಗಿಸಿತ್ತು. ಎಲ್ಲವ್ರೂ ಹೊಸತು, ಎಲ್ಲೆಲ್ಲಿಯೂ ಬೆರಗು !.

ಅಂದು 18 ಗಂಟೆಗಳ ನಿರಂತರ ಗಂಭೀರ ಧ್ಯಾನವ್ರೂ ನನ್ನನ್ನು ಆತ್ಮಸಾಧನೆಯ ಮಾರ್ಗದಲ್ಲಿ ಮತ್ತಷ್ಟು ದೂರ ಕೊಂಡೊಯ್ಯಿತು. ಆ ಧ್ಯಾನದಲ್ಲಿ, ನನಗೆ ಅಂತರಂಗದಲ್ಲಿ ಭಗವಂತನ ಪೂರ್ಣಸ್ವರೂಪ ಕಾಣಿಸಿಕೊಂಡಿತು. ಭಾವದಲ್ಲಿ ಅಂತರಂಗದಲ್ಲಿ ನನಗೆ ಭಗವಂತನ ದರ್ಶನವಾಯಿತು. ಆ ರೂಪ ಜೀವಂತ ವಾಗಿ ಚೈತನ್ಯಶಕ್ತಿಯಾಗಿ ನನ್ನ ಸರ್ವಸ್ವವನ್ನು ಸ್ವಾಧೀನಪಡಿಸಿಕೊಂಡಿತು.

ಅನೇಕ ಬ್ರಹ್ಮಾಂಡಗಳಿಂದ, ನಾನಾಲೋಕಗಳಿಂದ ಕೂಡಿದ ಆ ಭಗವಂತನು ನೋಡಿದವರ ಕಣ್ಮನಗಳಿಗೆ ಸೌಂದರ್ಯದಿಂದ ಹೊಳೆಯುತ್ತ, ಬೆಳಗುತ್ತ, ರಂಜಿಸುತ್ತ, ವಿರಾಜಿಸುತ್ತ, ಮೆರೆಯುತ್ತ, ರಾರಾಜಿಸುತ್ತ, ಶೋಭಿಸುತ್ತ, ವರ್ಣನಾತೀತವಾಗಿದ್ದನು. ಮಹಾ ತೇಜಸ್ಸಿನಿಂದ ಬೆಳಗುತ್ತಿದ್ದ ಸಾವಿರಾರು

ಚೈತನ್ಯಗಳ ಸ್ವರೂಪನಾದ ಭಗವಂತನನ್ನು ನೋಡಿ ನನ್ನ ಕಣ್ಣುಗಳಿಂದ ಆನಂದಬಾಷ್ಪವು ಧಾರೆಧಾರೆಯಾಗಿ ಹೊರಹೊಮ್ಮಿತು.

ಅಲ್ಲಿಯ ಚಿತ್ರ ವಿಚಿತ್ರ ವಿಸ್ಮಯಗಳನ್ನು ಆನಂದಾತಿಶಯವನ್ನು ಕಂಡು ನನ್ನ ದೇಹದಲ್ಲಿ ರೋಮಾಂಚನವು ಮೂಡಿತು. ತನು ಉಬ್ಬಿತು. ಆನಂದಾತಿರೇಕದಿಂದ ನನ್ನನ್ನು ನಾನು ಮರೆತು ಭಕ್ತಿಯೆಂಬ ಸಾಗರದಲ್ಲಿ ತೇಲಾಡಿದೆನು. ಭಕ್ತಿರಸದ ಆಸ್ವಾದನೆಯಿಂದ ನನ್ನ ಹೃದಯ ನಲಿನಲಿದಾಡಿತು.

ಹಿಂದೆ ಕ್ಷಣಿಕವಾಗಿ ಬಂದು ಹೋಗುತ್ತಿದ್ದ ದಿವ್ಯಾನುಭವ ಈಗ ನಿರಂತರ ಶಾಶ್ವತವಾಗಿದ್ದಂತೆ ತೋರಿತು. ನನ್ನ ಪ್ರಯತ್ನಕ್ಕೆ ಭಗವಂತನ ಕೃಪಾಹಸ್ತ ನೆರವಾಗಿದೆಯೆಂಬ ಶ್ರದ್ಧೆಮೂಡಿತು. ಸಾಕಾರ, ನಿರಾಕಾರ, ಎಲ್ಲವೂ ಆಗಿಯೂ, ಯಾವುದೂ ಆಗಿರದೆ, ಬರಿಯ ನಾನು ಭಾವಮಾತ್ರವಾಗಿದ್ದು ಎಂತಹ ವೇದಾಂತಿಯ ದರ್ಶನವೂ ತತ್ತರಿಸುವಂತಿತ್ತು ! ಅಂತೂ ನನ್ನ ಹೃದಯ ಪ್ರಾರ್ಥನೆ ಭಗವಂತನ ಚರಣಾರವಿಂದಗಳನ್ನು ಮುಟ್ಟಿತ್ತು !

ಅಂದು ತುಂಬಿ ಬಂದ ಆ ಪೂರ್ಣ ಪ್ರವಾಹವನ್ನು ಭಾಷೆ ಬಣ್ಣಿಸಲಾರದಾಗಿತ್ತು. ಭಗವಂತನಿಂದ ಅಂತರ್ವಾಣಿ ಮೊಳಗಿ, ಅಂತರ್ದರ್ಶನ ಪ್ರಜ್ವಲಿಸಿ, ನನಗೆ ಪರಿಪೂರ್ಣ ಆತ್ಮಬೋಧೆಯಾಗತೊಡಗಿತು.

" ಈ ಸೃಷ್ಟಿಯ ರಹಸ್ಯ ಮತ್ತು ಅದರ ರಚನೆಯ ಕ್ರಮ, ಆರಂಭ ಮತ್ತು ಕೊನೆ ಎಂಬ ಕಟ್ಟಳೆಗೆ ಅಥವಾ ನಿಯಮಕ್ಕೆ ಒಳಪಟ್ಟಿದೆ."

ಈ ಸೃಷ್ಟಿಯ, ಈ ಲೋಕದಲ್ಲಿ ಅಂಥ ನಿಯಮಕ್ಕೆ ಒಳಪಡದೆ ಇರುವುದು ಅಖಂಡ ಸಚ್ಚಿದಾನಂದ ವಸ್ತುವಾದ ಚೈತನ್ಯ ಒಂದೇ.

ಚೈತನ್ಯವೆಂಬುದೇ ಬ್ರಹ್ಮ ಮತ್ತು ಪರಬ್ರಹ್ಮ ಎಂಬ ಹೆಸರುಗಳಿಂದ ಕರೆಯಲ್ಪಡುವುದು. ಚೈತನ್ಯ ಅನಂತ, ಅಖಂಡ, ಸರ್ವಶಕ್ತಿಯಿಂದ ಕೂಡಿದೆ. ಇದಕ್ಕೆ ಸ್ತ್ರೀ ಮತ್ತು ಪುರುಷವೆಂಬ ಲಿಂಗಭೇದವಿಲ್ಲ. ಇದು ನಿರ್ಗುಣವಾದುದು. ಇದು ತಾನೇ ಸ್ವಯಂ ಪ್ರಕಾಶದಿಂದ ಹೊಳೆಯುತ್ತಿರುವುದು. ಇದನ್ನೇ ದಿವ್ಯ ಪ್ರಕೃತಿ ಅಥವಾ ಪರಾಪ್ರಕೃತಿ ಎಂದು ಕರೆಯುವುದು.

ಅಚಲವಾಗಿ ಚಲಿಸದೇ ಇರುವ ಈ ಚೈತನ್ಯಕ್ಕೆ ತನ್ನ ಇರುವಿಕೆಯನ್ನು ಬಿಟ್ಟು ಬದಲಾವಣೆಯನ್ನು ಹೊಂದಬೇಕೆಂದು " ಇಚ್ಛೆ " ಉಂಟಾಯಿತ್ತು.

ಆಗ ತಾನು ಅನೇಕ ರೂಪವಾಗಿ ಆಗಬೇಕು ಅಂದರೆ 'ಬಹುಸ್ಯಾಂ' ಎಂಬ ಒಂದು ಬಗೆಯ ಸಂಕಲ್ಪ ನಿಶ್ಚಯವಾಗಿತ್ತು.

ಆಗ ಚೈತನ್ಯದಲ್ಲಿ ಅನೇಕಬಗೆಯ 'ಸ್ಪಂದನಗಳು' ಅಂದರೆ ಅತೀ ಸೂಕ್ಷ್ಮವಾದ ಚಲನಗಳು ಉತ್ಪತ್ತಿಯಾಗಿ ಈ ಚಲನೆಗಳು ಅನೇಕ ಬಗೆಯಾಗಿರುವುವು. ಇದರಿಂದ ನಿರ್ಗುಣ ಪರಬ್ರಹ್ಮವೂ, ಸಗುಣ ಪರಬ್ರಹ್ಮವಾಗಿ ಆಯಿತು.

ಚಲನದಿಂದ ಒಂದು ವಸ್ತುವು ಒಂದು ಜಾಗದಿಂದ ಮತ್ತೊಂದು ಜಾಗಕ್ಕೆ ಹೋಗುತ್ತದೆ. ಚಲನವು ಉಂಟಾದಾಗಲೆಲ್ಲಾ ಸ್ಥಲನವು ಉಂಟಾಗುತ್ತದೆ. ಸ್ಥಲನ ಅಂದರೆ ನೀರಿನಲ್ಲಿ ನೆನೆಹಾಕಿದ ಬೀಜವು ಉಬ್ಬುವ ರೀತಿಯಲ್ಲಿ ಉಬ್ಬುವುದು ಎಂದು ಅರ್ಥ. ಯಾವ ವಸ್ತುವು " ಸ್ಥಲನ " ಅವಸ್ಥೆಯನ್ನು ಹೊಂದುತ್ತದೆಯೋ, ಆ ವಸ್ತುವಿನ ಅತಿಸೂಕ್ಷ್ಮವಾದ ಒಂದು ಭಾಗವು ಹೊರಕ್ಕೆ ಬರುತ್ತದೆ.

ಅಂದರೆ ದೊಡ್ಡಜ್ವಾಲೆಯಿಂದ ಉರಿಯುತ್ತಿರುವ ಬೆಂಕಿಯಿಂದ ಸಣ್ಣ ಕಿಡಿಗಳು ಹೊರಕ್ಕೆ ಬರುವ ಹಾಗೆ. ಈ ರೀತಿ ಪರಬ್ರಹ್ಮಚೈತನ್ಯದಿಂದ ಅನೇಕ ಸಗುಣ ಪರಬ್ರಹ್ಮ ಚೈತನ್ಯ ಕಿಡಿಗಳು ಹೊರಕ್ಕೆ ಬಂದಾಗ ಅವು ಬೇರೆಯಾಗಿ, ಅವೇ ಅನೇಕ ಜೀವಾತ್ಮರುಗಳಾಗಿ ರೂಪಗೊಂಡವು. ಅಂದರೆ ಏಕವಾಗಿಯೂ, ಪರಿಪೂರ್ಣವಾಗಿಯೂ, ಅಚಲವಾಗಿಯೂ ಇದ್ದ ಪರಬ್ರಹ್ಮನಲ್ಲಿ 'ಬಹುಸ್ಯಾಂ' ಎಂಬ ಸ್ಪಂದನಗಳು ಉಂಟಾಗಿ ಆ ಸಗುಣ ಪರಬ್ರಹ್ಮ ಚೈತನ್ಯ ಸ್ಪಂದನಗಳ ಕ್ರಿಯೆಯಿಂದಲೇ ಅನೇಕ ಜೀವಾತ್ಮರುಗಳು ಬಗೆಬಗೆಯ ಜೀವಿಗಳಾಗಿಯೂ, ಬ್ರಹ್ಮ, ವಿಷ್ಣು, ಮಹೇಶ್ವರರಾಗಿಯೂ ಹೊರಗೆ ಬಂದು ಪ್ರಕಟವಾದವು.

ಈ ರೀತಿ ಪರಬ್ರಹ್ಮ ಚೈತನ್ಯವು " ಅನೇಕವಾಗಬೇಕು " ಎಂದು ಸಂಕಲ್ಪ ಮಾಡಿದ್ದಕ್ಕೆ " ಲೀಲೆ " ಎಂದು ಹೆಸರು.

ಈ ರೀತಿ ಸಚ್ಚಿದಾನಂದಮೂರ್ತಿಯಾಗಿಯೂ, ಸತ್ಯಜ್ಞಾನ ಅನಂತವಾಗಿಯೂ, ಇಚ್ಛಾ ಜ್ಞಾನ ಕ್ರಿಯಾ ಶಕ್ತಿಗಳನ್ನು ಹೊಂದಿರತಕ್ಕ ಪರಬ್ರಹ್ಮ ಚೈತನ್ಯವು ತಾನು ಅನೇಕವಾದಾಗ ತನ್ನಲ್ಲಿ ಏಕವಾಗಿದ್ದಾಗ ಇದ್ದ ಕೆಲವು ಶಕ್ತಿಗಳನ್ನು ಉಪಯೋಗಿಸಿಕೊಂಡು ಸಗುಣ ಬ್ರಹ್ಮವಾಗಿ ತಾನು ಬೇರೆ ಎಂಬ ಪ್ರಜ್ಞೆ ( ಅಹಂಕಾರ ) ಅದಕ್ಕೆ ಮೂಡಿದಾಗ ಮಾಯೆಯು ಉದ್ಭವಿಸಿ ಅದರಲ್ಲಿಯ ಶಕ್ತಿಗಳು, ಗುಣಗಳು, ಜೀವಾತ್ಮರುಗಳ ರೂಪದಲ್ಲಿ ಹೊರಕ್ಕೆ ಬಂದು ಕನ್ನಡಿಯಂತೆ ಪ್ರತಿಬಿಂಬಿಸಿ ಪ್ರಕಟವಾದವು.

ತ್ರಿವಿಧ ಪ್ರಕೃತಿ ಗುಣಗಳಿರುವ ಸಗುಣಬ್ರಹ್ಮದ ಮಹತ್‌ತತ್ವವು ಸ್ತ್ರೀಲಿಂಗ, ಪುಲ್ಲಿಂಗ ಎಂಬ ಭೇದಗಳಿಂದ ಪರಮದೇವೋತ್ತಮನ ಇಚ್ಛೆಯಿಂದ ಆಧ್ಯಾತ್ಮಪ್ರಕೃತಿಯ ಅಂದರೆ ಪರಪ್ರಕೃತಿಯ ಚೈತನ್ಯದ ( ಮಾಯೆ ) ನೆರವಿನಿಂದ ಜೀವಬೀಜಗಳ ಸಂಯೋಗವಾಗಿ ಗರ್ಭಧರಿಸಿ ಜೀವಾತ್ಮರ ಅಸ್ತಿತ್ವಕ್ಕೆ ಕಾರಣವಾಗಿ ಗಿಡಮರ ಬಳ್ಳಿಗಳು, ಜೀವಜಂತುಗಳು, ಜಲಚರಗಳು, ಮೃಗಪಕ್ಷಿಗಳು, ಮಾನವರುಗಳ ಸೃಷ್ಟಿಕಾರ್ಯಕ್ಕೆ ನಾಂದಿ ಯಾಯಿತು.

ಈ ರೀತಿ ಪರಬ್ರಹ್ಮನ ಇಚ್ಛೆಮಾತ್ರದಿಂದ ಬಗೆಬಗೆಯ ಸೃಷ್ಟಿಗಳೆಲ್ಲಾ ಉಂಟಾಗಿ ಅನೇಕ ಬ್ರಹ್ಮಾಂಡ ವಾದವು. ಈ ಬ್ರಹ್ಮಾಂಡವು ಇಂತಹ ಅಸಂಖ್ಯಾತ ಕೋಟಿ ಬ್ರಹ್ಮಾಂಡಗಳಲ್ಲಿ ಒಂದು. ಒಂದು ಬ್ರಹ್ಮಾಂಡವು ಒಂದು ಸಾವಿರ ದಿವ್ಯಯುಗಗಳಾದ ಮೇಲೆ ಪ್ರಳಯವಾಗುತ್ತದೆ.

ಮನುಷ್ಯರ ಒಂದು ಹಗಲು ಒಂದು ರಾತ್ರಿ ಸೇರಿದರೆ ಒಂದು ದಿನ. ಏಳು ದಿನಗಳಿಗೆ ಒಂದು ವಾರ. 2 ವಾರಗಳಿಗೆ ಒಂದು ಪಕ್ಷ. 2 ಪಕ್ಷಗಳಿಗೆ ಒಂದು ತಿಂಗಳು. 2 ತಿಂಗಳಿಗೆ ಒಂದು ಋತು. 6 ಋತುಗಳಿಗೆ ಒಂದು ವರ್ಷ.

ಮನುಷ್ಯರ ಲೆಕ್ಕದಲ್ಲಿ ಅನೇಕ ಸಾವಿರ ವರ್ಷಗಳಿಗೆ ಒಂದು ಕಲಿಯುಗ. ಕಲಿಯುಗದ ಎರಡರಷ್ಟು ಆದರೆ ಒಂದು ದ್ವಾಪರಯುಗ, ಕಲಿಯುಗದ ಮೂರರಷ್ಟು ಆದರೆ ಒಂದು ತ್ರೇತಾಯುಗ, ಕಲಿಯುಗದ ನಾಲ್ಕರಷ್ಟು ಆದರೆ ಒಂದು ಕೃತಯುಗ.

ಈ ನಾಲ್ಕು ಯುಗಗಳು ಸೇರಿದರೆ ಒಂದು ದಿವ್ಯಯುಗ. ಇಂತಹ ದಿವ್ಯಯುಗಗಳು ಸಾವಿರ ಸೇರಿದರೆ ಬ್ರಹ್ಮನಿಗೆ ಒಂದು ಹಗಲು. ಹೀಗೆಯೇ ಒಂದು ಸಾವಿರ ದಿವ್ಯಯುಗಗಳು ಸೇರಿದರೆ ಬ್ರಹ್ಮನಿಗೆ ಒಂದು ರಾತ್ರಿ. ಬ್ರಹ್ಮದೇವನ ಹಗಲು ಕಾಲಕ್ಕೆ ಮನ್ವಂತರ ಎಂದು ಹೆಸರು. ಬ್ರಹ್ಮನ ರಾತ್ರಿಕಾಲಕ್ಕೆ ಪ್ರಳಯ ಎಂದು ಹೆಸರು.

ಬ್ರಹ್ಮನ ಕಾಲದಲ್ಲಿ ಲೋಕವನ್ನು ಹದಿನಾಲ್ಕು ಮಂದಿ ಅಧಿಕಾರಿಗಳು ಆಳುತ್ತಾರೆ. ಇವರಿಗೆ ಮನುಗಳು ಎಂದು ಹೆಸರು. ಇಬ್ಬರು ಮನುಗಳು ಒಂದು ಜೊತೆಯಾಗಿ ಯಾವಾಗಲೂ ರಾಜ್ಯಭಾರವನ್ನು ನಡೆಸುತ್ತಾರೆ. ಇವರಿಗೆ ಋಷಿಗಳೂ, ಇಂದ್ರಾದಿ ದೇವತೆಗಳೂ ಸಹಾಯ ಮಾಡುತ್ತಾರೆ.

ಈ ರೀತಿ ಮನ್ವಂತರವಾದ ಮೇಲೆ ಪ್ರಳಯವಾಗಿ ಬ್ರಹ್ಮನ ಮೊದಲುಗೊಂಡು ಇರುವೆಯವರೆಗೆ ಜೀವಕೋಟಿಗಳು ಹಲವು ರೂಪಗಳುಳ್ಳವಾಗಿ ಸಾಯುತ್ತಲೂ, ಹುಟ್ಟುತ್ತಲೂ ಇರುವುವು. ಇದನ್ನೇ ಪ್ರಕೃತಿ ಯೆಂದು ಹೇಳುವುದು.

## ಪ್ರತಿಯೊಂದು ಬ್ರಹ್ಮಾಂಡದಲ್ಲಿಯೂ 14 ಲೋಕಗಳಿವೆ.

ಅತಳ, ವಿತಳ, ಸುತಳ, ತಳಾತಳ, ಮಹಾತಳ, ರಸಾತಳ, ಪಾತಾಳ ಎಂಬ 7 ಕೆಳಗಡೆ ಲೋಕಗಳು. ಭೂಲೋಕ, ಭುವರ್ಲೋಕ, ಸ್ವರ್ಗಲೋಕ, ಮಹರ್ಲೋಕ, ಜನೋಲೋಕ, ತಪೋಲೋಕ, ಸತ್ಯಲೋಕ ಎಂಬ 7 ಮೇಲುಗಡೆ ಲೋಕಗಳು.

ಸತ್ಯಲೋಕವೇ ಮೊದಲಾಗಿ ಭೂಲೋಕ ಪರ್ಯಂತ ಇರುವ ಎಲ್ಲಾ ಲೋಕಗಳೂ ಒಂದರೊಳಗೆ ಮತ್ತೊಂದು ಬೇರೆ ಬೇರೆ ಸ್ಪಂದನಗಳನ್ನು ಒಳಗೊಂಡು ಸೇರಿಕೊಂಡಿವೆ. ಈ ಏಳು ಲೋಕಗಳಲ್ಲೂ ಏಳು ಉಪಲೋಕಗಳು ಇವೆ. ಈ ಎಲ್ಲಾ ಲೋಕಗಳೂ ಪಂಚಭೂತಗಳಿಂದ ಕೂಡಿವೆ.

ಸತ್ಯಲೋಕ ಆಕಾಶತತ್ವ ಪ್ರಧಾನವಾದದ್ದು, ತಪೋಲೋಕ ಮತ್ತು ಜನೋಲೋಕಗಳು ವಾಯುತತ್ವ ಪ್ರಧಾನವಾದುವು, ಮಹರ್ಲೋಕ ಮತ್ತು ಸ್ವರ್ಗಲೋಕಗಳು ಅಗ್ನಿತತ್ವ ಪ್ರಧಾನವಾದುವು, ಭುವರ್ಲೋಕ ಜಲತತ್ವ ಪ್ರಧಾನವಾದದ್ದು ಮತ್ತು ಭೂಲೋಕ ಪೃಥ್ವಿತತ್ವ ಪ್ರಧಾನವಾದದ್ದು.

ಬಿಸಿಲು, ಪ್ರತಿಬಿಂಬವಾದ ಛಾಯೆಯೂ ಇರುವಂತೆ, ಪರಬ್ರಹ್ಮರೂಪಿಯಾದ ಆತ್ಮನೂ, ಪ್ರತಿಬಿಂಬವಾದ ಜೀವನೂ ಈ ದೇಹದಲ್ಲಿ ವಾಸವಾಗಿರುವರು. ಪ್ರತಿಬಿಂಬವಾದ ಅಂತಃಕರಣವೇ ಜೀವನೆನ್ನಲ್ಪಡುವನು. ಜೀವಾತ್ಮರು ಸತ್ಯಲೋಕದಿಂದ ಹಿಡಿದು ಭೂಲೋಕದವರೆಗೆ ವ್ಯವಹರಿಸುತ್ತಾರೆ.

ಜೀವಾತ್ಮರು ಬೇರೆ ಬೇರೆ ಲೋಕಗಳಲ್ಲಿ ಸಂಚಾರಮಾಡುವಾಗ ಆ ಲೋಕಗಳಲ್ಲಿ ಪ್ರಧಾನವಾದ ತತ್ವಗಳಿಂದ ಕೂಡಿದ ಬೇರೆ ಬೇರೆ ಬಗೆಯ ದೇಹಗಳಿಂದ ವ್ಯವಹರಿಸುತ್ತಾರೆ.

ಭೂಲೋಕದಲ್ಲಿ ಜೀವಾತ್ಮರು ಪೃಥ್ವಿತತ್ವ ಪ್ರಧಾನವಾದ ಅನ್ನಮಯಕೋಶದಿಂದ ವ್ಯವಹಾರಮಾಡು ವಾಗ ಮನುಷ್ಯರೆಂದು ಕರೆಯಲ್ಪಡುತ್ತಾರೆ ಮತ್ತು ಪ್ರಾಣಮಯಕೋಶದಿಂದ ವ್ಯವಹಾರ ಮಾಡುವಾಗ ಛಾಯಾತ್ಮರೆಂದು ಕರೆಯಲ್ಪಡುತ್ತಾರೆ.

ಭುವರ್ಲೋಕದಲ್ಲಿ ಜಲ ಪ್ರಧಾನವಾದ ಕಾಮಮಯಕೋಶದಿಂದ ವ್ಯವಹಾರ ಮಾಡುವಾಗ ಜೀವಾತ್ಮರು ದೆವ್ವ, ಪಿಶಾಚಿ, ಭೂತ, ಗಾಳಿ, ಪೀಡೆ ಎಂದು ಕರೆಯಲ್ಪಡುತ್ತಾರೆ.

ಸ್ವರ್ಗಲೋಕದಲ್ಲಿ ಮತ್ತು ಮಹರ್ಲೋಕಗಳಲ್ಲಿ ಅಗ್ನಿ ಪ್ರಧಾನವಾದ ಮನೋಮಯ ಕೋಶದಿಂದ ವ್ಯವಹಾರಮಾಡುವಾಗ ಜೀವಾತ್ಮರು ದೇವ, ದೇವತೆಯೆಂದು ಕರೆಯಲ್ಪಡುತ್ತಾರೆ.

ಜನೋಲೋಕ ಮತ್ತು ತಪೋಲೋಕಗಳಲ್ಲಿ ವಾಯು ಪ್ರಧಾನವಾದ ಬುದ್ಧಿಮಯಕೋಶದಿಂದ ವ್ಯವಹಾರಮಾಡುವಾಗ ಜೀವಾತ್ಮರು ಸಿದ್ಧ, ಬುದ್ಧ, ಮಹಾತ್ಮ, ಋಷಿಯೆಂದು ಕರೆಯಲ್ಪಡುತ್ತಾರೆ.

ಸತ್ಯಲೋಕದಲ್ಲಿ ಆಕಾಶತತ್ವ ಪ್ರಧಾನವಾದ ಆನಂದಮಯಕೋಶದಿಂದ ವ್ಯವಹಾರಮಾಡುವಾಗ ಜೀವಾತ್ಮರು ಆತ್ಮರೆಂದು ಕರೆಯಲ್ಪಡುತ್ತಾರೆ.

ಆ ಆತ್ಮನೇ ಸಂಸಾರಿಯಂತೆ, ತನ್ನನ್ನು ತಾನು ಮರೆತಿರಲು ಜೀವಾತ್ಮನೆನಿಸುವನು.

ಆ ಆತ್ಮನೇ ಸೃಷ್ಟಿಯೆಂಬ ಸಂಸಾರವನ್ನು ಪಾಲಿಸುತ್ತ ಪರಮಾತ್ಮನೆನಿಸುವನು.

ಆ ಆತ್ಮನೇ ಸಂಸಾರವನ್ನು ಹೊಂದದೇ ಇದ್ದರೆ ಪರಬ್ರಹ್ಮನೆನಿಸುವನು.

ಭೂಲೋಕ, ಭುವರ್ಲೋಕ, ಸ್ವರ್ಗಲೋಕ, ಮಹರ್ಲೋಕ, ಜನೋಲೋಕ, ತಪೋಲೋಕ, ಸತ್ಯಲೋಕ ಎಂಬ ಏಳು ಮೇಲುಗಡೆ ಲೋಕಗಳಲ್ಲೂ ಆಯಾ ತತ್ವ ಪ್ರಧಾನವಾದ ಸ್ಥೂಲ, ಸೂಕ್ಷ್ಮ ಅಣುಗಳಿಂದ ಕೂಡಿದ 7 ಉಪಲೋಕಗಳಿವೆ.

ಈ ಭೂಲೋಕವು ಏಳು ಉಪಲೋಕಗಳಿಂದ ಕೂಡಿದೆ. ಅವು ಕ್ರಮವಾಗಿ ಘನವಸ್ತು, ಜಲವಸ್ತು, ಅನಿಲವಸ್ತು, ವಾಯುವಸ್ತು, ಆಕಾಶವಸ್ತು, ಅಹಂಕಾರವಸ್ತು, ಬುದ್ಧಿ ವಸ್ತುಗಳ ಅಣುಗಳಿಂದ ಕೂಡಿದೆ.

ಘನ, ಜಲ, ಅನಿಲವಸ್ತುಗಳ ಅಣುಗಳಿಂದ ಸ್ಥೂಲಶರೀರವು ಉಂಟಾಗಿದೆ.

ವಾಯು, ಆಕಾಶ, ಅಹಂಕಾರ, ಬುದ್ಧಿತತ್ವ ಅಣುಗಳಿಂದ ಛಾಯಾಶರೀರವು ಉಂಟಾಗಿದೆ.

ಅದೇ ರೀತಿ ಉಳಿದ ಆರು ಲೋಕಗಳಲ್ಲೂ ಏಳೇಳು ಉಪಲೋಕಗಳು ಇವೆ. ಮತ್ತು ಆಯಾ ತತ್ವ ಪ್ರಧಾನವಾದ ಸ್ಥೂಲ, ಸೂಕ್ಷ್ಮ ಅಣುಗಳಿಂದ ಕೂಡಿದ ಶರೀರಗಳು ಆ 7 ಉಪಲೋಕಗಳಲ್ಲಿವೆ.

ಜೀವಾತ್ಮರು ಮಾಡುವ ಕರ್ಮಗಳು ಅಂದರೆ ಕೆಟ್ಟ ಅಥವಾ ಒಳ್ಳೆಯ ಯೋಚನೆ ಮತ್ತು ಕಾರ್ಯಗಳ ಮೇಲೆ ಅಂಥ ಲೋಕದ ಹಾಗೂ ಉಪಲೋಕದ ಸ್ಥೂಲ, ಸೂಕ್ಷ್ಮ ಅಣುಗಳು ಅವರಲ್ಲಿ ಶೇಖರಗೊಂಡು ಅವು ಅಧಿಕಗೊಂಡಾಗ ಜೀವಾತ್ಮರು ಆ ಲೋಕಗಳ, ಉಪಲೋಕಗಳ ಸಂಪರ್ಕವನ್ನು ಆ ಅಣುಗಳಿಂದ ಮಾಡಲ್ಪಟ್ಟ ಶರೀರದ ಮೂಲಕ ಪಡೆಯುತ್ತಾರೆ.

ಕರ್ಮವೆಂದರೆ ಕ್ರಿಯೆ ಅಥವಾ ಕೆಲಸ ಎಂದು ಅರ್ಥ. ಕರ್ಮಗಳಲ್ಲಿ ಸತ್ಕರ್ಮ ಮತ್ತು ನೀಚಕರ್ಮ ಗಳೆಂದು ಎರಡು ವಿಧ. ಕರ್ಮವೇ ಪುನರ್ಜನ್ಮಕ್ಕೆ ಕಾರಣ. ಈಗಿನ ಕರ್ಮ ಮುಂದೆ ಮತ್ತೊಂದು ಕರ್ಮಕ್ಕೆ ಕಾರಣವಾಗುತ್ತದೆ. ಕಾರ್ಯ ಕಾರಣ ಸಂಬಂಧಕ್ಕೆ ಕಾರಣವಾದುದೆಲ್ಲ ಕರ್ಮ.

ನಾವು ಬಹಳ ಪರಿಶುದ್ಧವಾದ ಮನೋಭಾವದಿಂದ ಯೋಚಿಸಿ, ಕೆಲಸ ಮಾಡಿದರೆ ಮೇಲ್ಭಾಗದಲ್ಲಿರುವ ಲೋಕಗಳ ಹಾಗೂ ಪರಲೋಕಗಳ ತರಂಗ ಅಣುಗಳು ನಮ್ಮ ಶರೀರಕ್ಕೆ ಅಧಿಕವಾಗಿ ಸೇರುವುವು.

ಕೆಟ್ಟ ಮನೋಭಾವದಿಂದ ಯೋಚಸಿ ಕೆಲಸಮಾಡುವಾಗ ಕೆಳಭಾಗದಲ್ಲಿರುವ ಲೋಕಗಳ ಹಾಗೂ ಉಪಲೋಕಗಳ ತರಂಗ ಅಣುಗಳು ಶರೀರಕ್ಕೆ ಅಧಿಕವಾಗಿ ಸೇರುವುವು.

ಭೌತಿಕ ಜಗತ್ತು (ಪ್ರಕೃತಿ) ಸತ್ವ, ರಜ ಮತ್ತು ತಮಸ್ಸೆಂಬ ತ್ರಿಗುಣಗಳಿಂದ ಕೂಡಿದ್ದು, ಜೀವಾತ್ಮರು ಭೌತಿಕ ಪ್ರಕೃತಿ ಸಂಪರ್ಕದಲ್ಲಿ ಬಂದಾಗ ಸಹಜವಾಗಿ ತ್ರಿಗುಣಗಳಿಂದ ಬಂಧಿತರಾಗುತ್ತಾರೆ.

ಜೀವಾತ್ಮರು ಭೌತಿಕ ಜಗತ್ತಿನ ಸತ್ವ, ರಜ ಮತ್ತು ತಮಸ್ಸೆಂಬ ತ್ರಿಗುಣಗಳಿಂದ ಬದ್ಧರಾಗಿರುವುದರಿಂದ ಭೌತಿಕ ಪ್ರಕೃತಿಯ ತ್ರಿಗುಣಗಳಾದ ಸತ್ವ, ರಜೋ ಮತ್ತು ತಮೋಗುಣಗಳ ಪ್ರಭಾವದಲ್ಲಿ ವರ್ತಿಸುತ್ತಿರುತ್ತಾರೆ. ಅಂದರೆ ತಾಮಸಗುಣವು ಅಧಮ ನಾಸ್ತಿಕಬುದ್ಧಿಯ ಅಂಧಕಾರವನ್ನುಂಟುಮಾಡುತ್ತದೆ. ರಾಜಸಗುಣವು

ಮಧ್ಯಮ ಪ್ರವೃತ್ತಿಮಾರ್ಗವಾದ ದೇವತೋಪಾಸನೆಯನ್ನುಂಟು ಮಾಡುತ್ತದೆ. ಸಾತ್ವಿಕಗುಣವು ಉತ್ತಮ ಪರಿಶುದ್ಧ ಜ್ಞಾನವನ್ನುಂಟುಮಾಡುತ್ತದೆ.

ಜೀವಾತ್ಮರುಗಳ ಜೀವನವನ್ನು ನಿಯಂತ್ರಿಸಲು ಪಂಚಭೂತಗಳ ಅಂದರೆ ಆಕಾಶ, ವಾಯು, ಅಗ್ನಿ, ಜಲ, ಪೃಥ್ವಿ ಎಂಬ ಪಂಚತತ್ವಗಳ ಪಂಚೀಕರಣದಿಂದ

1. ಆಕಾಶ ಪಂಚಕಗಳಾದ ಐದು ಅಂತಃಕರಣಗಳು - ಜ್ಞಾತ (ಅರಿವು),ಚಿತ್ತ (ಸ್ಮರಿಸುವುದು), ಬುದ್ಧಿ, ಮನಸ್ಸು, ಅಹಂಕಾರ (ನಾನು)ಗಳು,

2. ವಾಯು ಪಂಚಕಗಳಾದ ಪಂಚಪ್ರಾಣಗಳು -

ಪ್ರಾಣ (ಶ್ವಾಸೋಛ್ವಾಸಕ್ಕೆ ನೆರವಾಗುವ ವಾಯು)

ಅಪಾನ (ಮಲವಿಸರ್ಜನೆಗೆ ನೆರವಾಗುವ ವಾಯು)

ಉದಾನ (ಸೀನು,ಬಿಕ್ಕಳಿಕೆ, ನಗೆ, ಹಾಡುವಿಕೆ, ಸ್ವಪ್ನದಲ್ಲಿ ಬಡಬಡಿಕೆಗೆ ನೇರವಾಗುವ ವಾಯು)

ವ್ಯಾನ (ಅನ್ನ ಪಾನೀಯಗಳ ರಸವನ್ನು ರೋಮಗಳಿಗೆ ಮುಟ್ಟಿಸಲು ನೆರವಾಗುವ ವಾಯು)

ಸಮಾನ (ಅನ್ನರಸವನ್ನು ನರನಾಡಿಗಳಿಗೆ ಸಮಭಾಗಮಾಡಿ ಹಂಚಲು ನೆರವಾಗುವ ವಾಯು)ಗಳು,

3. ಅಗ್ನಿ ಪಂಚಕಗಳಾದ - ಶ್ರೋತ್ರ (ಕಿವಿ), ತ್ವಕ್ಕು (ಚರ್ಮ), ಚಕ್ಷು (ಕಣ್ಣು), ಜಿಹ್ವ (ನಾಲಿಗೆ), ಘ್ರಾಣ (ಮೂಗು)ಗಳು

4. ಜಲ ಪಂಚಕಗಳಾದ ಐದು ಜ್ಞಾನೇಂದ್ರಿಯಗಳು - ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳು.

5. ಪೃಥ್ವಿ ಪಂಚಕಗಳಾದ ಐದು ಕರ್ಮೇಂದ್ರಿಯಗಳು - ವಾಕ್ಕು (ಮಾತು), ಪಾಣಿ (ಕೈ), ಪಾದ (ಕಾಲು), ಗುಹ್ಯ (ಜನನೇಂದ್ರಿಯ), ಗುದ (ಮಲ ವಿಸರ್ಜನಾಂಗ) ಗಳು ಉಂಟಾದವು.

ಆಗ ಪೃಥ್ವಿ ಮತ್ತು ಜಲತತ್ವಗಳಿಂದ ಸ್ಥೂಲ ಶರೀರವು,ಅಗ್ನಿ ಮತ್ತು ವಾಯುತತ್ವಗಳಿಂದ ಸೂಕ್ಷ್ಮ ಶರೀರವು, ಆಕಾಶ ಮತ್ತು ಅಹಂಕಾರಗಳಿಂದ ಕಾರಣ ಶರೀರಗಳು ಉಂಟಾದವು.

ಸ್ಥೂಲ ಶರೀರವು ಪೃಥ್ವಿ ಮತ್ತು ಜಲತತ್ವಗಳ ಪಂಚೀಕರಣದಿಂದ ಅಂದರೆ ಪೃಥ್ವಿ ಪಂಚಕಗಳಾದ ವಾಕ್ಕು, ಪಾಣಿ, ಪಾದ, ಗುಹ್ಯ, ಗುದಗಳು ಮತ್ತು ಜಲ ಪಂಚಕಗಳಾದ ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳಿಂದ ಉಂಟಾಗಿದೆ. ಇದು ಜಾಗ್ರತಾವಸ್ಥೆಯಲ್ಲಿ ಇರುವುದು ಅಂದರೆ ಎಚ್ಚರಿಕೆಯಲ್ಲಿರುವುದು. ಇದು ಕ್ರಿಯಾಶಕ್ತಿಯಿಂದ ಕೂಡಿದೆ.

ಸೂಕ್ಷ್ಮ ಶರೀರವು ಅಗ್ನಿ ಮತ್ತು ವಾಯುತತ್ವಗಳ ಪಂಚೀಕರಣದಿಂದ ಅಂದರೆ ದಶೇಂದ್ರಿಯಗಳಾದ ಐದು ಕರ್ಮೇಂದ್ರಿಯಗಳು - ವಾಕ್ಕು, ಪಾಣಿ, ಪಾದ, ಗುಹ್ಯ, ಗುದಗಳು (ಪೃಥ್ವಿ ಪಂಚಕಗಳು), ಐದು ಜ್ಞಾನೇಂದ್ರಿಯಗಳಾದ ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳು (ಜಲ ಪಂಚಕಗಳು) ಮತ್ತು ಪಂಚಪ್ರಾಣಗಳಾದ ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನಗಳು (ವಾಯು ಪಂಚಕಗಳು) ಹಾಗೂ ಎರಡು ಅಂತಃಕರಣ ಗಳಾದ ಮನಸ್ಸು ಮತ್ತು ಬುದ್ಧಿಗಳು (ಆಕಾಶ ಪಂಚಕಗಳು) ಈ 17 ತತ್ವಗಳಿಂದ ಉಂಟಾಗಿದೆ. ಇದು ಸ್ವಪ್ನಾವಸ್ಥೆಯಲ್ಲಿ ಇರುವುದು. ಅಂದರೆ ಕನಸ್ಸಿನಲ್ಲಿರುವುದು. ಇದು ಇಚ್ಛಾಶಕ್ತಿಯಿಂದ ಕೂಡಿದೆ.

ಈ 17 ತತ್ವಗಳಿಂದ ಜೀವಾತ್ಮನು ಸ್ವಪ್ನಾವಸ್ಥೆಯಲ್ಲಿ ವ್ಯವಹರಿಸುತ್ತ, ಈ ಸ್ಥೂಲ ಶರೀರವನ್ನು ಬಿಟ್ಟು, ಸೂಕ್ಷ್ಮ ಶರೀರ ಮತ್ತು ಕಾರಣ ಶರೀರಗಳ ಮೂಲಕ ಲೋಕಾಂತರಕ್ಕೆ ಹೋಗಿಬರುತ್ತಿರುತ್ತಾನೆ.

ಜೊತೆಗೆ ಈ ಜೀವಾತ್ಮನು ಮರಣಕಾಲದಲ್ಲಿ ಈ ಸ್ಥೂಲ ಶರೀರವನ್ನು ಬಿಟ್ಟು, ಸೂಕ್ಷ್ಮ ಶರೀರ ಮತ್ತು ಕಾರಣ ಶರೀರಗಳ ಮೂಲಕ ಬೇರೊಂದು ಹೊಸ ಸ್ಥೂಲ ಶರೀರದ ಮೂಲಕ ಪುನರ್ಜನ್ಮ ಪಡೆಯುತ್ತಿ ರುತ್ತಾನೆ.

ಕಾರಣ ಶರೀರವು ಆಕಾಶ ತತ್ವದ ಎರಡು ಅಂತಃಕರಣಗಳಾದ ಚಿತ್ತ ಮತ್ತು ಅಹಂಕಾರದಿಂದ ಉಂಟಾಗಿದೆ. ಕಾರಣ ಶರೀರವು ಪ್ರಾಣಾದಿವಾಯುಗಳಾದ ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ ವಾಯುಗಳನ್ನು ಒಳಗೊಂಡು ಸೂಕ್ಷ್ಮ ಶರೀರದಲ್ಲಿ ಅಡಗಿದೆ. ಇದು ಸುಷುಪ್ತಾವಸ್ಥೆಯಲ್ಲಿ ಇರುವುದು. ಅಂದರೆ ನಿದ್ರೆಯಲ್ಲಿರುವುದು. ಇದು ಜ್ಞಾನಶಕ್ತಿಯಿಂದ ಕೂಡಿದೆ.

ಸ್ಥೂಲ ಶರೀರ, ಸೂಕ್ಷ್ಮ ಶರೀರ ಮತ್ತು ಕಾರಣ ಶರೀರಗಳು ಪಂಚಕೋಶಗಳ ಮೂಲಕ ವ್ಯವಹಾರ ಮಾಡುತ್ತವೆ. ಆ ಪಂಚಕೋಶಗಳು ಕ್ರಮವಾಗಿ ಅನ್ನಮಯ ಕೋಶ, ಪ್ರಾಣಮಯ ಕೋಶ, ಮನೋಮಯ ಕೋಶ, ವಿಜ್ಞಾನಮಯ ಕೋಶ ಮತ್ತು ಆನಂದಮಯ ಕೋಶಗಳು.

ಅನ್ನಮಯ ಕೋಶದಿಂದ ಸ್ಥೂಲ ಶರೀರವು, ಪ್ರಾಣಮಯ ಕೋಶ ಮನೋಮಯಕೋಶ, ವಿಜ್ಞಾನ ಮಯ ಕೋಶಗಳಿಂದ ಸೂಕ್ಷ್ಮ ಶರೀರವು, ಆನಂದಮಯ ಕೋಶದಿಂದ ಕಾರಣ ಶರೀರವು ಕ್ರಮವಾಗಿ ಉಂಟಾಗಿವೆ.

ಅನ್ನಮಯ ಕೋಶ, ಪ್ರಾಣಮಯ ಕೋಶ, ಮನೋಮಯ ಕೋಶ, ವಿಜ್ಞಾನಮಯ ಕೋಶ ಮತ್ತು ಆನಂದಮಯ ಕೋಶಗಳಿಂದ ಕೂಡಿದ ಸ್ಥೂಲ ಶರೀರ, ಸೂಕ್ಷ್ಮ ಶರೀರ ಮತ್ತು ಕಾರಣ ಶರೀರಗಳಿಂದ ಅಂತಃಕರಣಗಳು, ಕರ್ಮೇಂದ್ರಿಯಗಳು ಜ್ಞಾನೇಂದ್ರಿಯಗಳು, ಪ್ರಾಣಾದಿವಾಯುಗಳು, ಪಂಚಶಕ್ತಿಗಳು, ಸಪ್ತಧಾತುಗಳು ಉಂಟಾದುವು.

ಅಂತಃಕರಣ ಪ್ರತಿಬಿಂಬವೇ ಜೀವನೆನಿಸಿಕೊಳ್ಳುವನು. ಬಿಸಿಲು, ಪ್ರತಿಬಿಂಬವಾದ ಛಾಯೆಯೂ ಇವು ಗಳಂತೆ ಪರಬ್ರಹ್ಮವಾದ ಆತ್ಮನೂ ಪ್ರತಿಬಿಂಬವಾದ ಜೀವನೂ ಇವರಿಬ್ಬರೂ ಈ ದೇಹದಲ್ಲಿ ವಾಸವಾಗಿರುವರು.

ಅಂತಃಕರಣವೆಂದರೆ ಅಂತರಿಂದ್ರಿಯಗಳಾದ ಜ್ಞಾತ (ಜ್ಞಾನ), ಮನಸ್ಸು, ಬುದ್ಧಿ, ಚಿತ್, ಅಹಂಕಾರ.

1. ಜ್ಞಾತ (ಜ್ಞಾನ) ಅಂದರೆ ಆಕಾಶತತ್ವದಲ್ಲಿ ತನ್ನ ಹಿಂದಿನ ಅನುಭವದ ಆಧಾರದಿಂದ ಸರ್ವವಿಷಯ ಗಳನ್ನು ಅರಿತು, ಗ್ರಹಿಸಿ, ತಿಳಿಸುವುದು.
2. ಚಿತ್ತ ಅಂದರೆ ಜಲತತ್ವದಲ್ಲಿ ನಾಭೀಸ್ಥಾನದಲ್ಲಿದ್ದುಕೊಂಡು ಸದಾ ವಿಷಯಗಳನ್ನು ಸ್ಮರಿಸುವುದು.
3. ಬುದ್ಧಿ ಅಂದರೆ ಅಗ್ನಿತತ್ವದಲ್ಲಿ ಮುಖ ಸ್ಥಾನದಲ್ಲಿದ್ದುಕೊಂಡು ಒಳ್ಳೆಯದು ಕೆಟ್ಟದ್ದು ನಿಶ್ಚಯಿಸುವುದು.
4. ಮನಸ್ಸು ಅಂದರೆ ವಾಯುತತ್ವದಲ್ಲಿ ಕಂಠ ಸ್ಥಾನದಲ್ಲಿದ್ದುಕೊಂಡು ಸಂಕಲ್ಪ ವಿಕಲ್ಪಮಾಡುವುದು.
5. ಅಹಂಕಾರ ಅಂದರೆ ಪೃಥ್ವಿತತ್ವದಲ್ಲಿ ಹೃದಯ ಸ್ಥಾನದಲ್ಲಿದ್ದುಕೊಂಡು ನನ್ನ ದೇಹ, ನಾನು ಎಂದು ಅಭಿಮಾನಿಸುವುದು.

ಪ್ರಕೃತಿ ಗುಣಸಂಗದಿಂದ ಜೀವಿಯು ಈ ಭೌತಿಕ ಜಗತ್ತಿನಲ್ಲಿ ಸಿಲುಕಿ ಕೊಂಡಿದ್ದಾನೆ. ಆ ಪ್ರಕೃತಿ ಗುಣಗಳು ಯಾವುವು. ಅವು ಹೇಗೆ ಕಾರ್ಯ ಮಾಡುತ್ತವೆ. ಹೇಗೆ ಬಂಧಿಸುತ್ತವೆ. ಮತ್ತು ಹೇಗೆ ಮೋಕ್ಷ ನೀಡುತ್ತವೆ ಎಂಬ ಜ್ಞಾನವು ಎಲ್ಲಾ ಜ್ಞಾನಕ್ಕಿಂತ ಶ್ರೇಷ್ಠವಾದದ್ದು. ಇಂತಹ ಜ್ಞಾನವೇ ದಿವ್ಯಜ್ಞಾನ.

ಪ್ರಕೃತಿ ಅಂದರೆ ಭೌತಿಕ ಜಗತ್ತು ಸತ್ವ,ರಜ ಮತ್ತು ತಮಸ್ಸೆಂಬ ತ್ರಿಗುಣಗಳಿಂದ ಕೂಡಿದೆ. ನಿತ್ಯವಾದ ಜೀವಿಯು ಈ ಪ್ರಕೃತಿ ಸಂಪರ್ಕದಲ್ಲಿ ಒಳಗಾದಾಗ ಅವನು ಈ ಗುಣಗಳಿಗೆ ಬದ್ಧನಾಗಿರುತ್ತಾನೆ.

ಈ ರೀತಿ ಜೀವಿಯು ಭೌತಿಕ ಜಗತ್ತಿಗೆ ಬದ್ಧನಾಗಿರುವುದರಿಂದ ಅವನು ಭೌತಿಕ ಪ್ರಕೃತಿಯ ತ್ರಿಗುಣಗಳು ಅಂದರೆ ಸತ್ವ, ರಜ ಮತ್ತು ತಮೋಗುಣಗಳ ಪ್ರಭಾವದಿಂದ ವರ್ತಿಸುತ್ತಾನೆ.

ಆದುದರಿಂದ ಭೌತಿಕ ಜಗತ್ತಿನಲ್ಲಿ ಪಡೆಯುವ ಜ್ಞಾನವೆಲ್ಲ ಭೌತಿಕ ತ್ರಿಗುಣಗಳಿಂದ ಕಲುಷಿತ ವಾಗಿರುತ್ತದೆ. ಈ ತ್ರಿವಿಧ ಪ್ರಕೃತಿ ಕಲುಷಿತವಲ್ಲದ ಜ್ಞಾನವೇ ದಿವ್ಯಜ್ಞಾನ.

ಆದುದರಿಂದ ಈ ದಿವ್ಯಜ್ಞಾನ ತ್ರಿವಿಧ ಪ್ರಕೃತಿ ಕಲುಷಿತವಾದ ಜ್ಞಾನ, ವಿಜ್ಞಾನ, ಸುಜ್ಞಾನಕ್ಕಿಂತ ಶ್ರೇಷ್ಠವಾದದ್ದು.

ಒಬ್ಬನು ಆಧ್ಯಾತ್ಮಿಕ ಗುಣಗಳನ್ನು ಬೆಳೆಸಿಕೊಂಡಾಗ ಅವನಿಗೆ ಮಾತ್ರ ದಿವ್ಯಜ್ಞಾನ ಪ್ರಾಪ್ತಿಯಾಗುವುದು. ಆಗ ಅವನು ಪರಮ ಪುರುಷನ ವೇದಿಕೆಯಲ್ಲಿ ಸೇರುವನು.

ಆಧ್ಯಾತ್ಮಿಕ ಗುಣಗಳನ್ನು ಬೆಳೆಸಿಕೊಂಡು ತ್ರಿಗುಣಾತೀತವಾದ ಜ್ಞಾನವನ್ನು ಹೊಂದಿದರೆ ಜೀವಿಯು ಭೌತಿಕ ಜಗತ್ತಿನ ಸೃಷ್ಟಿಯಿಂದಾಗಲಿ ಅಥವಾ ನಾಶದಿಂದಾಗಲಿ ಬಾಧಿತನಾಗುವುದಿಲ್ಲ. ಆದುದರಿಂದ ಭೌತಿಕ ತ್ರಿಗುಣಗಳ ತಿಳುವಳಿಕೆಯ ಜ್ಞಾನವು ಎಲ್ಲಾ ಜ್ಞಾನಕ್ಕಿಂತ ಶ್ರೇಷ್ಠವಾದದ್ದು.

ಸತ್ವಗುಣವು ಇತರ ಗುಣಗಳಿಗಿಂತ ಅತಿ ಶುದ್ಧವಾಗಿದ್ದು, ಸಕಲ ಪಾಪಕ್ರಿಯೆಗಳಿಂದ ಮುಕ್ತ ವಾಗಿರುತ್ತದೆ. ಸತ್ವಗುಣಸಂಪನ್ನರು ಸುಖ ಮತ್ತು ಅಪರಿಮಿತ ಜ್ಞಾನ ಭಾವನೆಯಿಂದ ಬದ್ಧರಾಗಿರುತ್ತಾರೆ. ಸತ್ವಗುಣದಲ್ಲಿ ಇರುವವರು ಭೌತಿಕ ಕ್ಲೇಶಗಳಿಂದ ಅಷ್ಟಾಗಿ ಬಾಧಿತರಾಗುವುದಿಲ್ಲ, ಜೀವಿಯು ಸತ್ವಗುಣ ದಲ್ಲಿದ್ದಾಗ ತಾನು ಜ್ಞಾನದಲ್ಲಿ ಮುಂದುವರಿದವನು ಮತ್ತು ಇತರರಿಗಿಂತ ಉತ್ತಮನು ಎಂದು ಭಾವಿಸುವುದರಲ್ಲಿ ಬದ್ಧನಾಗಿರುತ್ತಾನೆ. ಇದಕ್ಕೆ ದಾರ್ಶನಿಕರುಗಳು ಅತ್ಯುತ್ತಮ ಉದಾಹರಣೆಗಳು. ಇವರು ತಮ್ಮ ಜ್ಞಾನದ ಬಗ್ಗೆ ಹೆಮ್ಮೆಪಡುತ್ತ ತಮ್ಮ ಜೀವನದ ಸ್ಥಿತಿಗಳನ್ನು ಸುಧಾರಿಸಿಕೊಳ್ಳುವರಾದ್ದರಿಂದ ಒಂದು ಬಗೆಯ ಭೌತಿಕ ಸುಖವನ್ನು ಅನುಭವಿಸುತ್ತಾರೆ. ಜೀವನದಲ್ಲಿ ಈ ಪ್ರಗತಿಪರ ಸುಖದ ಭಾವನೆಯು ಅವರನ್ನು ಭೌತಿಕ ಪ್ರಕೃತಿಯ ಸತ್ವಗುಣಕ್ಕೆ ಬದ್ಧಗೊಳಿಸುತ್ತದೆ. ಹೀಗಾಗಿ ಅವರು ಸತ್ವಗುಣದಲ್ಲಿ ಕರ್ಮಮಾಡಲು ಆಕರ್ಷಿತರು.

ರಜೋಗುಣವು ಹೆಚ್ಚಾದಾಗ ಒಬ್ಬನು ಭೌತಿಕ ಭೋಗದ ತೃಷ್ಣೆ (ಇಚ್ಛೆ) ಬೆಳೆಸಿಕೊಳ್ಳುತ್ತಾನೆ. ಸ್ತ್ರೀಯರಿಗೆ ಪುರುಷರ ಆಕರ್ಷಣೆ, ಪುರುಷರಿಗೆ ಸ್ತ್ರೀಯರ ಆಕರ್ಷಣೆ ಉಂಟಾಗುತ್ತದೆ. ಇಂದ್ರಿಯ ಚಾಪಲ್ಯ ಬಯಸಿ ಅದಕ್ಕಾಗಿ ರಜೋಗುಣಿಯು ರಜೋಗುಣ ಹೊಂದಿರುವ ಹೆಂಡತಿ, ಮಕ್ಕಳು ಮತ್ತು ಮನೆ ಇವುಗಳಿಂದ ಸುಖೀ ಕುಟುಂಬ ಹೊಂದಲು ಬಯಸುತ್ತಾನೆ. ಅವರನ್ನು ತೃಪ್ತಿಪಡಿಸಲು ಸಮಾಜದಲ್ಲಿ ತನ್ನ ಗೌರವ ಕಾಪಾಡಿಕೊಳ್ಳಲು ಅವನು ಶ್ರಮಿಸಿ ದುಡಿಯಲೇ ಬೇಕಾಗುವುದು. ಸಮಾಜದಲ್ಲಿ ಅಥವಾ ರಾಷ್ಟ್ರದಲ್ಲಿ ಯಾವುದಾದರೂ ಗೌರವ ಬಯಸುತ್ತಾನೆ. ಅವನು ಸತ್ಕಾರ್ಯಗಳಿಗೆ ವೆಚ್ಚ ಮಾಡುತ್ತಾನೆ. ಕೆಲವು ಸಲ ಅವನು ಆಸ್ಪತ್ರೆಗಳನ್ನು, ದೇವಸ್ಥಾನಗಳನ್ನು, ಆಶ್ರಮಗಳನ್ನು, ಅನಾಥಾಶ್ರಮಗಳನ್ನು, ತೆರೆಯಲು ಸಂಘ – ಸಂಸ್ಥೆಗಳಿಗೆ ದಾನ ನೀಡುತ್ತಾನೆ. ಇಡೀ ಭೌತಿಕ ಜಗತ್ತೇ ರಜೋಗುಣ ಪ್ರಧಾನವಾಗಿದೆ.

ತಮೋಗುಣವು ಸತ್ವಗುಣಕ್ಕೆ ಪೂರ್ಣವಿರುದ್ಧ. ತಮೋಗುಣದ ಪ್ರಭಾವದಲ್ಲಿ ಪ್ರತಿಯೊಬ್ಬರೂ ಉನ್ಮತ್ತರಾಗಿ ಕೀಳಾಗುತ್ತಾರೆ. ಒಂದು ತರಹ ಹುಚ್ಚರಾಗಿರುತ್ತಾರೆ. ಏಕೆಂದರೆ, ಅವರು ವಾಸ್ತವಿಕವಾದುದ್ದನ್ನು ಇದ್ದಂತೆ ಅರಿಯಲಾರರು. ಇವರು ನಿರುತ್ಸಾಹಿಗಳೂ, ಮಾದಕದ್ರವ್ಯಾಭ್ಯಾಸಿಗಳೂ ಹಾಗೂ ನಿದ್ರಾಶೀಲರು. ತಾವು ಎಂದಾದರೂ ಒಂದು ದಿನ ಸಾಯುತ್ತೇವೆಂಬ ಅರಿವಿಲ್ಲದೆ ನಿತ್ಯಚೇತನವನ್ನು ಗಮನಿಸದೆ, ಹುಚ್ಚರಾಗಿ ಹಣಗಳಿಸುತ್ತ ಹಗಲಿರುಳು ಬಹುವಾಗಿ ಶ್ರಮಿಸುತ್ತಾರೆ. ತಮೋಗುಣದಲ್ಲಿ ಏನೇ ಮಾಡಿದರೂ ಅದು ಅವರಿಗಾಗಲೀ ಅಥವಾ ಅನ್ಯರಿಗಾಗಲೀ ಹಿತವಲ್ಲ.

ಮಾನವರಲ್ಲಿ ಕೆಲವು ಸಾರಿ ಸತ್ವಗುಣ ಪ್ರಧಾನವಾಗಿ ರಜೋ ಮತ್ತು ತಮೋಗುಣಗಳು ಹಿಮ್ಮೆಟ್ಟುತ್ತವೆ. ಮತ್ತೆ ಕೆಲವು ಸಾರಿ ರಜೋಗುಣಗಳು ಪ್ರಧಾನವಾಗಿ ಸತ್ವ ಮತ್ತು ತಮೋಗುಣಗಳು ಹಿಮ್ಮೆಟ್ಟುತ್ತವೆ. ಮತ್ತೆ ಕೆಲವು ಸಮಯಗಳಲ್ಲಿ ತಮೋಗುಣವು ಪ್ರಧಾನವಾಗಿ ರಜೋಗುಣ ಮತ್ತು ಸತ್ವಗುಣಗಳು ಹಿಮ್ಮೆಟ್ಟುತ್ತವೆ.

ಈ ರೀತಿ ವಿಶಿಷ್ಟ ಪ್ರಕೃತಿಯ ಗುಣ ಪ್ರಧಾನವಾದ ಪೈಪೋಟಿ ಪ್ರತಿವ್ಯಕ್ತಿಯಲ್ಲಿ ಸದಾ ನಡೆಯುತ್ತಿರುತ್ತದೆ. ಈ ಪೈಪೋಟಿ ವ್ಯಕ್ತಿಗಳ ಒಳ್ಳೆಯ ಮತ್ತು ಕೆಟ್ಟ ವ್ಯವಹಾರಗಳನ್ನು, ಅವರ ಚಟುವಟಿಕೆಗಳನ್ನು ಮತ್ತು ಅವರ ಆಹಾರವನ್ನು ಪ್ರಮುಖವಾಗಿ ಅವಲಂಬಿಸಿರುತ್ತವೆ.

ಈ ಪ್ರಕೃತಿಯ ಪೈಪೋಟಿ ಮೂರು ಭೌತಿಕ ಪ್ರಕೃತಿಗುಣಗಳಾಗಿದ್ದರೂ ಒಬ್ಬನು ಇಚ್ಛಿಸಿದ್ದಲ್ಲಿ ಅಭ್ಯಾಸ ಬಲದಿಂದ ಯಾವ ಗುಣವನ್ನಾದರೂ ಬೆಳೆಸಿಕೊಳ್ಳಬಹುದು. ಆದರೆ ಈ ಮೂರು ಗುಣಗಳನ್ನು ದಾಟಿ ಅವುಗಳಿಂದ ಮುಕ್ತನಾದವನು ಶುದ್ಧಸತ್ವದಲ್ಲಿ ಸೇರಿ ಮುಕ್ತಿ ಪಡೆಯುವನು.

ಸತ್ವಗುಣದಲ್ಲಿ ಒಬ್ಬನು ವಿಷಯಗಳನ್ನು ಸರಿಯಾದ ಸ್ಥಿತಿಯಲ್ಲಿ ಕಾಣಬಲ್ಲನು, ಶ್ರವಣಮಾಡಬಲ್ಲನು, ಆಸ್ವಾದಿಸಬಲ್ಲನು ಮತ್ತು ಜೀವನದಲ್ಲಿ ತೃಪ್ತಿ ಹೊಂದಬಲ್ಲನು.

ರಜೋಗುಣದಲ್ಲಿ ಒಬ್ಬನು ಅತಿವ್ಯಾಮೋಹ, ತೀವ್ರ ಪ್ರಯತ್ನ, ಮಿತಿಮೀರಿದ ಇಚ್ಛೆ ಮತ್ತು ದುರಾಸೆಯನ್ನು ಬೆಳೆಸಿಕೊಳ್ಳುತ್ತಾನೆ. ತಾನು ಆಗಲೇ ಗಳಿಸಿರುವ ಸ್ಥಿತಿಯಿಂದ ಎಂದೂ ತೃಪ್ತನಲ್ಲ. ಅವನು ತನ್ನ ಸ್ಥಿತಿಯನ್ನು ವೃದ್ಧಿಸಿಕೊಳ್ಳಲು ತೀವ್ರವಾಗಿ ಆಶಿಸುತ್ತಾನೆ.

ತಮೋಗುಣದಲ್ಲಿ ಒಬ್ಬನು ಅಂಧಕಾರ, ಅಪ್ರವೃತ್ತಿ, ಪ್ರಮಾದ ಮತ್ತು ಮೋಹಗಳನ್ನು ಬೆಳೆಸಿಕೊಳ್ಳುತ್ತಾನೆ.

ಈ ರೀತಿ ಸತ್ವ, ರಜ ಮತ್ತು ತಮೋಗುಣಗಳಿಂದ ಕೂಡಿದ ಭಿನ್ನ ಭಿನ್ನ ಜೀವಾತ್ಮರುಗಳಿಗೆ ಭಿನ್ನ ಭಿನ್ನ ಬಗೆಯ ಲೋಕಗಳಿವೆ.

**ಸತ್ವಗುಣಗಳನ್ನು ಹೊಂದಿದವರು,** ಮರಣಹೊಂದಿದಾಗ ಅವರವರ ಸತ್‌ಕರ್ಮಗಳಿಗೆ ಅನುಗುಣ ವಾಗಿ ಮಹರ್ಲೋಕದಲ್ಲಿ ಮಹಾತ್ಮರುಗಳಾಗಿಯೂ, ಜನೋರ್ಲೋಕದಲ್ಲಿ ಸಿದ್ಧಿಪುರುಷರುಗಳಾಗಿಯೂ, ತಪೋಲೋಕದಲ್ಲಿ ತಪಸ್ವಿಗಳು ಹಾಗೂ ಮಹರ್ಷಿಗಳಾಗಿಯೂ ಮತ್ತು ಸತ್ಯಲೋಕದಲ್ಲಿ ಆತ್ಮರೂಪಿ ಗಳಾಗಿಯೂ ಊರ್ಧ್ವಲೋಕಗಳನ್ನು ಹೊಂದುತ್ತಾರೆ.

ಅಲ್ಲಿ, ಅವರವರ ಸತ್‌ಕರ್ಮಗಳಿಗೆ ಅನುಗುಣವಾಗಿ ಅನೇಕ ರೀತಿಯ ಸುಖ ಮತ್ತು ಆನಂದಗಳನ್ನು ಅನುಭವಿಸುತ್ತಾರೆ. ಅವರವರ ಸತ್‌ಕರ್ಮಗಳಿಗೆ ತಕ್ಕಂತೆ ಕೆಲವು ವರ್ಷಗಳು ಸುಖ ಮತ್ತು ಆನಂದಗಳನ್ನು ಅನುಭವಿಸಿ ಮತ್ತೆ ಭೂಲೋಕದಲ್ಲಿ ಪುನರ್ಜನ್ಮ ಪಡೆಯುತ್ತ ಹೋಗುತ್ತಾರೆ.

**ರಜೋಗುಣಗಳನ್ನು ಹೊಂದಿದವರು,** ಮರಣ ಹೊಂದಿದಾಗ ಅವರು ತಮ್ಮ ಕಾಮ್ಯಕರ್ಮಗಳನ್ನು ಅನುಭವಿಸಲು ಸ್ವರ್ಗಲೋಕದಲ್ಲಿ ದೇವದೇವತೆ (ಸುರರು) ಗಳಾಗಿಯೂ, ಮತ್ತು ಭುವರ್ಲೋಕದಲ್ಲಿ ದೆವ್ವ, ಪಿಶಾಚಿ, ಗಾಳಿ, ಭೂತಗಳಾಗಿಯೂ ಊರ್ಧ್ವಲೋಕಗಳನ್ನು ಹೊಂದುತ್ತಾರೆ. ಅಲ್ಲಿ ಅವರವರ ಒಳ್ಳೆಯ ಮತ್ತು ಕೆಟ್ಟಕರ್ಮಗಳಿಗೆ ಅನುಗುಣವಾಗಿ ಅನೇಕ ರೀತಿಯ ಸುಖ ಮತ್ತು ದುಃಖಗಳನ್ನು ಅನುಭವಿಸುತ್ತಾರೆ. ಅವರವರ ಕರ್ಮಗಳಿಗೆ ತಕ್ಕಂತೆ ಕೆಲವು ವರ್ಷಗಳು ಸುಖ ಮತ್ತು ದುಃಖಗಳನ್ನು ಅನುಭವಿಸಿ, ಮತ್ತೆ ಭೂಲೋಕದಲ್ಲಿ ಪುನರ್ಜನ್ಮ ಪಡೆಯುತ್ತ ಹೋಗುತ್ತಾರೆ.

**ತಮೋಗುಣಗಳನ್ನು ಹೊಂದಿದವರು,** ಮೃತರಾದಾಗ, ಅವರು ಪಶುಲೋಕಗಳಲ್ಲಿ ಅಂದರೆ, ಅಧೋ ಲೋಕಗಳಾದ ಅತಳ, ವಿತಳ, ಸುತಳ, ತಳಾತಳ, ಮಹಾತಳ, ರಸಾತಳ, ಪಾತಾಳವೆಂಬ ಯಾವುದಾದ ರೊಂದು ಲೋಕದಲ್ಲಿ ಜನ್ಮವೆತ್ತುತ್ತಾರೆ. ಅವರು ಪಶು, ಪಕ್ಷಿ, ವಿಷಜಂತುಗಳು, ವೃಕ್ಷಗಳು ಇತ್ಯಾದಿ ಎಂಟು ದಶಲಕ್ಷ ಜೀವಯೋನಿಗಳಲ್ಲಿ ಜನ್ಮಿಸುವುದರಿಂದ ಅವರು ಹೇಯ ಸ್ಥಿತಿಗೆ ಇಳಿಯುತ್ತಾರೆ.

ಆತ್ಮವು ಮಾನವ ಜನ್ಮದ ವೇದಿಕೆಗೆ ತಲುಪಿದ ಮೇಲೆ ಮತ್ತೆ ಎಂದೂ ಕೆಳಗಿಳಿಯುವುದಿಲ್ಲ ಎಂದು ಕೆಲವರಲ್ಲಿ ಮನೋಭಾವವುಂಟು. ಇದು ಸರಿಯಲ್ಲ. ಒಬ್ಬನು ತಾಮಸಗುಣವನ್ನು ಬೆಳೆಸಿಕೊಂಡರೆ ಮರಣಾನಂತರ ಅವನು ಪಶುಜೀವನಕ್ಕೆ ಇಳಿಯುತ್ತಾನೆ. ಮತ್ತೆ ಅಲ್ಲಿಂದ ಮಾನವ ಜನ್ಮಕ್ಕೆ ಬರಲು ವಿಕಾಸ ಕ್ರಮದಲ್ಲಿ ತನ್ನನ್ನು ತಾನು ಉನ್ನತಿಸಿಕೊಳ್ಳಬೇಕಾಗುವುದು. ಇಲ್ಲದಿದ್ದರೆ ಮಾನವ ಜೀವಿಯು ಮತ್ತೆ ಮಾನವ ಮಟ್ಟಕ್ಕೆ ಬರುವುದು ಖಚಿತವಿಲ್ಲ.

ಸತ್ವಗುಣದಲ್ಲಿ ಮಾಡಿದ ಪುಣ್ಯಕರ್ಮದ ಫಲದಿಂದ ಶುದ್ಧ ಸತ್ವಗುಣದಲ್ಲಿರುವವರು ಎಲ್ಲಾ ಮೋಹ ಗಳಿಂದ ಮುಕ್ತರಾದ ಸುಖ ಸನ್ನಿವೇಶಿತರು. ಅದರಿಂದ ಅವರಲ್ಲಿ ನಿಜಜ್ಞಾನ ಬೆಳೆಯುತ್ತದೆ.

ರಜೋಗುಣದಲ್ಲಿ ಮಾಡಿದ ಕಾರ್ಯವು ಕ್ಲೇಶದಲ್ಲಿ ಪರಿಣಮಿಸುತ್ತದೆ. ಅದರಿಂದ ಲೋಭವು ಬೆಳೆಯುತ್ತದೆ. ಒಬ್ಬನು ಒಂದು ಗಗನಚುಂಬಿ ಕಟ್ಟಡ ಕಟ್ಟಬಯಸಿದರೆ ಅದನ್ನು ನಿರ್ಮಿಸುವ ಮೊದಲು ಹಣಗಳಿಸಲು ಸಾಕಷ್ಟು ಕಷ್ಟ ಮತ್ತು ದೈಹಿಕ ಶ್ರಮ ಪಡಬೇಕಾಗುವುದು. ನನಗೆ ಮನೆ ಇದೆ ಹಣವಿದೆ ಎಂದು ಏನೋ ಅಲ್ಪ ಮಾನಸಿಕ ಸುಖ ಇರಬಹುದು. ಆದರೆ ಅದು ನಿಜವಾದ ಸುಖವಲ್ಲ.

ತಮೋಗುಣದಲ್ಲಿ ಜನರು ಉನ್ಮತ್ತರಾಗುತ್ತಾರೆ. ಸನ್ನಿವೇಶಗಳಿಂದ ಆರ್ತರಾಗಿ ಸುರಾಪಾನಕ್ಕೆ ಶರಣು ಹೋಗುತ್ತಾರೆ. ತಮೋಗುಣದಲ್ಲಿ ಮಾಡಿದ ಕಾರ್ಯವು ಮೂಢತನದಲ್ಲಿ ಪರಿಣಮಿಸುತ್ತದೆ. ಅದರಿಂದ ಉನ್ಮತ್ತತೆ' ಮೋಹ ಮತ್ತು ಮೂಢತನ ಬೆಳೆಯುತ್ತದೆ.

ಮೂಕಪ್ರಾಣಿಗಳನ್ನು ವಧೆಮಾಡುವುದು ಕೂಡ ತಾಮಸಗುಣ ನಿಮಿತ್ತ. ಒಬ್ಬನು ಮಾಂಸಾಹಾರದಲ್ಲಿ ತೊಡಗಿದರೆ, ಅವನು ತಮೋಗುಣದಲ್ಲಿ ವರ್ತಿಸುತ್ತಿದ್ದಾನೆ. ತನ್ನ ಭವಿಷ್ಯವನ್ನು ಬಹು ಅಂಧಕಾರಕ್ಕೆ ದಬ್ಬುತ್ತಿದ್ದಾನೆ. ತಾವು ಯಾವ ಪ್ರಾಣಿಯನ್ನು ಕೊಂದರೂ, ಮುಂದಿನ ಜನ್ಮದಲ್ಲಿ ಅವರನ್ನು ಕೊಲ್ಲಲು ಆ ಪ್ರಾಣಿಯು ಅದಕ್ಕೆ ತಕ್ಕ ದೇಹ ಪಡೆಯುವುದೆಂದು ಪ್ರಾಣಿ ಹಂತಕರು ತಿಳಿದಿಲ್ಲ.

ಈ ಬ್ರಹ್ಮಾಂಡದ ಭೂಲೋಕ, ಭುವರ್ಲೋಕ ಮತ್ತು ಸ್ವರ್ಗಲೋಕಗಳಲ್ಲಿ ಅನುಭವಗಳನ್ನು ಹೊಂದಲು ಬಂದ ಜೀವಾತ್ಮರ ಸಂಖ್ಯೆ 6 ಸಹಸ್ರಕೋಟಿ. ಇನ್ನೂ ಅನೇಕ ಕೋಟಿ ಜೀವಾತ್ಮರು ಅವರು ಇದ್ದ ಲೋಕದಲ್ಲಿಯೇ ಇರುವರು. ಜೀವಾತ್ಮನು ಈಶ್ವರತ್ವವನ್ನು ಪಡೆಯಬೇಕಾದರೆ ಯೋಗ ಮಾರ್ಗ ಗಳನ್ನು ಹಿಡಿದು ಅನೇಕ ಜನ್ಮಗಳನ್ನು ಎತ್ತಿ ಸಾಧನೆಯನ್ನು ಮುಂದುವರಿಸಬೇಕಾಗುತ್ತದೆ.

ಮನುಷ್ಯ ಶರೀರವನ್ನು ಧರಿಸಿರುವ ಕೋಟ್ಯಾಂತರ ಜೀವಾತ್ಮರು ಭೂಲೋಕ, ಭುವರ್ಲೋಕ ಮತ್ತು ಸ್ವರ್ಗಲೋಕಗಳಲ್ಲಿ ಹೆಚ್ಚಾಗಿ ಜನ್ಮತಾಳುತ್ತಾರೆ. ಸಾಮಾನ್ಯವಾಗಿ ಜೀವಾತ್ಮರು ಈ ಮೂರು ಲೋಕಗಳಲ್ಲಿಯೂ ಅನೇಕ ಬಾರಿ ಜನ್ಮವನ್ನು ತಾಳಿ ಮರಣವನ್ನು ಹೊಂದುತ್ತಾರೆ. ಭೂಲೋಕದಲ್ಲಿ ಮನುಷ್ಯನಿಗೆ ತತ್, ತ್ವಂ, ಅಸಿ ಅಂದರೆ ಜೀವವೂ - ಬ್ರಹ್ಮವೂ ಬೇರೆಯಲ್ಲ ಎಂಬ ಜ್ಞಾನೋತ್ಪತ್ತಿಯಾದಾಗ ಜೀವನು ಈಶ್ವರತ್ವ ಪಡೆಯಲೂ ಯೋಗಮಾರ್ಗವನ್ನು ಅನುಸರಿಸುತ್ತಾನೆ.

ಯೋಗವೆಂದರೆ ಜೀವಾತ್ಮರನ್ನು ಬ್ರಹ್ಮದ ಜೊತೆಗೆ ಒಂದುಗೂಡಿಸುವುದು. ಗುರುವಿನಿಂದ ಜ್ಞಾನದ ಅನುಭವ ಅವರಿಗೆ ಉಂಟಾಗುವುದು. ಗುರುವು ಜೀವರಿಗೆ ರಾಜಯೋಗ, ಭಕ್ತಿಯೋಗ, ಜ್ಞಾನಯೋಗ, ಲಯಯೋಗ, ಕರ್ಮಯೋಗವೆಂಬ ಯೋಗಮಾರ್ಗಗಳನ್ನು ಅನುಸರಿಸಲು ತಿಳಿಸುವರು. ಈ ಯೋಗ ಮಾರ್ಗಗಳನ್ನು ಅನುಸರಿಸಿ ಜೀವಾತ್ಮರು ಅನೇಕ ಜನ್ಮದ ಯೋಗಸಾಧನೆಯಿಂದ ಪರಬ್ರಹ್ಮದಲ್ಲಿ ಮತ್ತೆ ವಿಲೀನವಾಗಿ ಸಾಕ್ಷಾತ್ಕಾರ ಹೊಂದುವರು. ಇದು ಸೃಷ್ಟಿಯ ಕ್ರಮ.

ಮನುಷ್ಯನು ಭೂಲೋಕದಲ್ಲಿ ಮರಣಹೊಂದಿದ ಮೇಲೆ ಏನಾಗುತ್ತದೆ ಎಂದರೆ ಜೀವಾತ್ಮನಿಗೂ ಸ್ಥೂಲ ದೇಹಕ್ಕೂ ಇದ್ದ ಸಂಬಂಧವು ಸಂಪೂರ್ಣವಾಗಿ ಬಿಟ್ಟು ಹೋಗುವುದು. ಆಗ ಜೀವಾತ್ಮನು ಛಾಯಾ ಶರೀರವನ್ನು ಹೊಂದುವನು. ಆಗ ಜೀವಾತ್ಮನು ಇಷ್ಟು ದಿವಸಗಳೂ ತಾನು ಉಪಯೋಗಿಸುತ್ತಿದ್ದ ಸ್ಥೂಲಶರೀರವನ್ನು ಬಿಟ್ಟು ಹೋಗಲು ಇಷ್ಟಪಡದೆ ಅಭಿಮಾನದಿಂದ ಶವದ ಸಮೀಪದಲ್ಲಿಯೇ ಇರುವನು.

ಆ ಛಾಯಾ ಶರೀರದಲ್ಲಿರುವ ಜೀವಾತ್ಮನು ನಾವು ಮಾಡುವ ಎಲ್ಲ ಕೆಲಸಗಳನ್ನು ನೋಡಬಲ್ಲನು. ಆದುದರಿಂದ ಬಂಧುಗಳ ರೋಧನಕ್ಕೆ ಕಾರಣವನ್ನು ತಿಳಿಯಲು ಅಶಕ್ತನಾಗಿ ದಿಗ್ಭ್ರಾಂತಿಯನ್ನು ಹೊಂದುವನು. ತಮ್ಮ ಬಂಧುಗಳು ಯಾವ ಕಾರಣಕ್ಕಾಗಿ ಇಷ್ಟು ದುಃಖ ಪಡುತ್ತಾರೆ ಎಂದು ತನ್ನ ಸುತ್ತಲೂ ಈ ಪ್ರಪಂಚ ದಲ್ಲಿರುವ ಜನರನ್ನು ಕೇಳುವನು. ಜೀವಾತ್ಮನು ನಮಗೆ ರೋಧನ ಮಾಡಬೇಡಿ, ನನಗೆ ಯಾವ ಕಷ್ಟವೂ ಇಲ್ಲ ಎಂದು ಆ ದೇಹದಲ್ಲಿರುವ ಇಂದ್ರಿಯಗಳಿಂದ ಎಷ್ಟು ಬಗೆಯಲ್ಲಿ ಹೇಳಿದರೂ ನಾವು ತಿಳಿದು ಕೊಳ್ಳ ಲಾರೆವು. ನಮಗೆ ಸೂಕ್ಷ್ಮದೃಷ್ಟಿ ಇಲ್ಲದಿರುವುದೇ ಇದಕ್ಕೆ ಕಾರಣ. ಇಷ್ಟು ವರ್ಷಗಳ ಕಾಲ ತಾನು ಉಪಯೋಗಿ ಸುತ್ತಿದ್ದ ಶರೀರವನ್ನು ತಾನು ಈಗ ಉಪಯೋಗಿಸುವುದಕ್ಕೆ ಆಗದೇ ಇರುವುದಕ್ಕಾಗಿ ಜೀವಾತ್ಮನು ದುಃಖ ಪಡುತ್ತಿರುವನು.

ಪ್ರಾಣ ಹೋದಮೇಲೆ ಜನರು ಗುಂಪುಗೂಡಿ ಶವವನ್ನು ಕಟ್ಟಿ ಶ್ಮಶಾನಕ್ಕೆ ತೆಗೆದುಕೊಂಡು ಹೋಗುವರು. ತನ್ನ ದೇಹವನ್ನು ಸ್ಮಶಾನದಲ್ಲಿ ದಹನ ಮಾಡುವಾಗ ಆ ದೇಹವನ್ನು ದಹನ ಮಾಡುವವರ ಮೇಲೆ ಜೀವಾತ್ಮನಿಗೆ ಬಹಳ ಕೋಪವು ಉಂಟಾಗುವುದು. ತನ್ನ ಪ್ರಿಯ ಬಂಧುಗಳೇ ತನ್ನ ದೇಹವನ್ನು ದಹನ ಮಾಡುವುದನ್ನು ಕಂಡು ಆಶ್ಚರ್ಯ ಪಡುವನು. ಕೆಲವರು ಸ್ಥೂಲ ಶರೀರವನ್ನು ಭೂಮಿಯಲ್ಲಿ ಹೂಳುತ್ತಾರೆ. ಆ ಸ್ಥೂಲಶರೀರದ ಮೇಲ್ಭಾಗದಲ್ಲಿ ಅವರ ಛಾಯಾ ಶರೀರವು ಆಕಾಶದಲ್ಲಿ ಕಾಣಿಸಿಕೊಳ್ಳುವುದು. ಗೋರಿ, ಸಮಾಧಿಗಳ ಸಮೀಪ ದಲ್ಲಿ ಈ ಛಾಯಾ ಶರೀರವನ್ನು ಕೆಲವರು ಕಂಡು ಸತ್ತವರು ಭೂತ, ಪಿಶಾಚಿಗಳ ರೂಪದಲ್ಲಿ ನಮ್ಮನ್ನು ಭಯಪಡಿಸುತ್ತಿದ್ದಾರೆಂದು ತಿಳಿದುಕೊಳ್ಳುವರು.

ಹೂಳಲ್ಪಟ್ಟ ಸ್ಥೂಲದೇಹವು ನಾಶಹೊಂದಿದಾಗ ಅಥವಾ ಬೆಂಕಿಯಲ್ಲಿ ಸುಡಲ್ಪಟ್ಟ ಮೇಲೆ ಸತ್ತವರು ತಮ್ಮ ಕರ್ಮಗಳಿಗೆ ಅನುಸಾರವಾಗಿ ಅಂದರೆ ಪಾಪಮಾಡಿದವರು ಭುವರ್ಲೋಕದಲ್ಲಿ ಕಾಮಮಯ ಶರೀರ ದಿಂದ ಮತ್ತು ಪುಣ್ಯ ಮಾಡಿದವರು ಸ್ವರ್ಗಲೋಕದಲ್ಲಿ ಅಶುದ್ಧ ಮನೋಮಯ ಕೋಶ ಮತ್ತು ಶುದ್ಧ ಮನೋಮಯ ಕೋಶಗಳಿಂದ ಅನುಭವಗಳನ್ನು ಹೊಂದಲು ಉದ್ಯುಕ್ತರಾಗುವರು. ಇದನ್ನೇ ಜನಗಳು ಸತ್ತಮೇಲೆ ನಾವು ಸ್ವರ್ಗಕ್ಕೆ ಹೋಗುತ್ತೇವೆ, ನಾವು ನರಕಕ್ಕೆ ಹೋಗುತ್ತೇವೆ ಎಂದು ಹೇಳುವುದು.

ಭುವರ್ಲೋಕ ಅಥವಾ ನರಕವೆಂದರೆ ತಾನು ಭೂಲೋಕದಲ್ಲಿ ವಾಸಮಾಡುತ್ತಿದ್ದಾಗ ಇಚ್ಛಿಸುವ ಕಾಮಗಳ ಅಂದರೆ ಆಸೆಗಳ ವಿಷಯವನ್ನು ಚಿಂತನೆ ಮಾಡುವುದಕ್ಕಾಗಿ, ಮಾಡಿದ ಪ್ರತಿಯೊಂದು ಪಾಪಕಾರ್ಯಕ್ಕೂ ಅದರ ಫಲರೂಪವಾಗಿ ಕಷ್ಟವನ್ನು ಅನುಭವಿಸುವುದಕ್ಕಾಗಿ ಏರ್ಪಾಡಾಗಿರುವ ಲೋಕ. ಅದಕ್ಕೆ ಇದನ್ನು ಕಾಮಲೋಕವೆಂದು ಸಹ ಕರೆಯುವರು. (ಆಸ್ಟ್ರೆಲ್ ಪ್ಲೇನ್)

ಭುವರ್ಲೋಕವು 7 ಉಪಲೋಕಗಳಿಂದ ಕೂಡಿದೆ. (ಸಬ್‌ಪ್ಲೇನ್‌ಗಳು) ಈ ಭುವರ್ಲೋಕದ ಪೈಕಿ 7, 6, 5 ಮತ್ತು 4ನೆಯ ಉಪಲೋಕಗಳು ಭೂಲೋಕದ ಸಮೀಪದಲ್ಲಿವೆ. ಈ ಉಪಲೋಕಗಳಿಗೆ ನರಕ ವೆಂದು ಹೆಸರು. ಇವನ್ನೇ ಯಮಲೋಕ, ಪಿತೃಲೋಕವೆಂದು ಸಹ ಕರೆಯುವರು.

ಭುವರ್ಲೋಕದ ಮೇಲುಭಾಗದಲ್ಲಿರುವ ಮಿಕ್ಕ 1, 2, ಮತ್ತು 3ನೆಯ ಉಪಲೋಕಗಳು ಕಾಮದಿಂದ (ಆಸೆಯಿಂದ) ಸತ್ಕರ್ಮಗಳನ್ನು ಮಾಡಿದ ಜನರು ಅವುಗಳ ಫಲವನ್ನು ಅನುಭವಿಸುವ ಸ್ವರ್ಗಲೋಕಕ್ಕೆ ಸಮಾನವಾದ ಪ್ರದೇಶಗಳು. ಈ ರೀತಿ ತಮ್ಮ ಕರ್ಮಾನುಸಾರ ವ್ಯಕ್ತಿಗಳು ಈ ಭುವರ್ಲೋಕದ 7 ಉಪಲೋಕ ಗಳಲ್ಲಿ ಕಾಣಿಸಿಕೊಳ್ಳುತ್ತಾರೆ.

ಈ ಭುವರ್ಲೋಕದ ಅಣುಗಳಿಗೆ ಜೀವಾತ್ಮರು ಯಾವ ವೇಷವನ್ನು ಧರಿಸಲು ಇಷ್ಟಪಡುತ್ತಾರೋ, ಅದಕ್ಕೆ ಅನುಸಾರವಾಗಿ ತಮ್ಮ ರೂಪವನ್ನು ಬದಲಾಯಿಸಿಕೊಳ್ಳುವ ಶಕ್ತಿಯು ಇರುತ್ತದೆ. ಅದಕ್ಕೆ ಇವರನ್ನು ಕಾಮರೂಪಿಗಳು ಅಥವಾ ಇಚ್ಛಾರೂಪಿಗಳು ಎಂದು ಕರೆಯುವುದು. ನಾವು ರಾಕ್ಷಸರು ಎಂದು ಹೇಳುವವರು ಬೇರೆ ಯಾರೂ ಅಲ್ಲದೆ ಭೂಲೋಕದಲ್ಲಿ ಕಾಮ, ಆಸೆ, ಪಾಪ ಮಾಡಿದವರು, ಸತ್ತ ಮೇಲೆ ಅದರ ಪ್ರಾಯಶ್ಚಿತ್ತಕ್ಕೆ ಈ ಭುವರ್ಲೋಕದಲ್ಲಿ ಕಾಣಿಸಿಕೊಳ್ಳುವ ವ್ಯಕ್ತಿಗಳು.

ಅದೇ ರೀತಿ ನಾವು ದೇವರು ಎಂದು ಹೇಳುವವರು ಭೂಲೋಕದಲ್ಲಿ ಆಸೆಗಳಿಗೆ ಒಳಗಾಗದೆ ನಿಸ್ವಾರ್ಥಿ ಗಳಾಗಿ, ಬೇರೆಯವರಿಗೆ ಸಹಾಯಮಾಡಿ ಜನಸೇವೆ ಮಾಡಿದ ಪುಣ್ಯವಂತರು. ಸತ್ತಮೇಲೆ ತಮ್ಮ ಸತ್ಕರ್ಮ ಸವಿಯಲು ಅವರೂ ಸ್ವರ್ಗಲೋಕದಲ್ಲಿ ದೇವರು ಎಂದು ನಾವು ತಿಳಿದಿರುವ ರೂಪದಲ್ಲಿ ಕಾಣಿಸುತ್ತಾರೆ. ಭೂಲೋಕದಲ್ಲಿ ಸ್ವಪ್ರಯೋಜನಕ್ಕಾಗಿ ಇತರರನ್ನು ಹಿಂಸೆ ಮಾಡಿದವರು, ಬಹಳ ಕ್ರೂರ ಸ್ವಭಾವವುಳ್ಳ ದರೋಡೆಕಾರರು, ಕುಡುಕರು, ವ್ಯಭಿಚಾರ ಮಾಡುತ್ತಿದ್ದವರು, ಇತರರಿಂದ ಕೊಲ್ಲಲ್ಪಟ್ಟು ಅಕಾಲಮರಣಕ್ಕೆ ತುತ್ತಾದವರು ಭುವರ್ಲೋಕದ 7, 6, 5 ಮತ್ತು 4ನೆಯ ಉಪಲೋಕಗಳಲ್ಲಿ ನಿದ್ರೆಯಲ್ಲಿರುತ್ತಾರೆ. ಆತ್ಮಹತ್ಯೆ ಮಾಡಿಕೊಂಡಿದ್ದವರು ಎಚ್ಚರವಾಗಿದ್ದು ಮನೋವ್ಯಥೆಯನ್ನು ಅನುಭವಿಸುತ್ತಾರೆ. ಪರೋಪಕಾರಾರ್ಥವಾಗಿ ಆತ್ಮಹತ್ಯೆ ಮಾಡಿಕೊಂಡಿದ್ದವರು ಈ ಪ್ರದೇಶದಲ್ಲಿ ಕೊಂಚ ಕಾಲ ಇರಬೇಕಾಗುತ್ತದೆ.

ಭೂಲೋಕದಲ್ಲಿ ವಾಸಮಾಡುತ್ತಿದ್ದಾಗ ದರೋಡೆಮಾಡುವ ಬೈರನೆಂಬುವನು ತನ್ನ ಕೆಲಸಕ್ಕೆ ಅಡ್ಡಿಯಾಗಿ ಬಂದ ದೇವಯ್ಯನೆಂಬ ಮನುಷ್ಯನ ತಲೆ ಒಡೆದು ಕೊಂದರೆ ಬೈರಸತ್ತಮೇಲೆ ಭುವರ್ಲೋಕದ 7 ಉಪಲೋಕ ದಲ್ಲಿ ಅದೇ ಜ್ಞಾಪಕದಿಂದ ತನ್ನಿಂದ ಕೊಲೆ ಮಾಡಲ್ಪಟ್ಟ ದೇವಯ್ಯನೆಂಬುವನ ರೂಪವು ತನ್ನನ್ನು ಕೊಲೆ ಮಾಡುವುದಕ್ಕೆ ಹಿಂಬಾಲಿಸಿ ಓಡಿಬರುವುದನ್ನು ಕಂಡು ಹೆದರಿಕೊಂಡು ಯಾತನೆ ಅನುಭವಿಸುವನು. ಇಂತಹವರು ಇಲ್ಲಿ ತಮ್ಮ ಪ್ರತಿಯೊಂದು ಪಾಪ ಕಾರ್ಯಕ್ಕೂ ಅದಕ್ಕೆ ಅನುಗುಣವಾದ ದಂಡನೆಯನ್ನು ಭುವರ್ಲೋಕದಲ್ಲಿರುವ ದೇವತೆಗಳಿಂದ (ಯಮಕಿಂಕರರಿಂದ) ಅನುಭವಿಸಿ ದುಃಖಿಗಳಾಗಿ ಮನೋವ್ಯಥೆ ಗೀಡಾಗುತ್ತಾರೆ.

ಭೂಲೋಕದಲ್ಲಿದ್ದಾಗ ತಮ್ಮ ಆಸೆಗಳು ಈಡೇರದೆ ಇದ್ದ ಕೆಲವು ತಿಂಡಿಪೋತರು ಕುಡುಕರು, ವ್ಯಭಿಚಾರ ಮಾಡುವವರು ಭೂಲೋಕದಲ್ಲಿ ವಾಸಮಾಡುವ ತಿಂಡಿಪೋತರ ಕುಡುಕರ, ವ್ಯಭಿಚಾರ

ಮಾಡುವವರ ಹತ್ತಿರ ಇದ್ದುಕೊಂಡು ತಮಗೆ ಇಷ್ಟವಾದ ತಿಂಡಿ ಪದಾರ್ಥಗಳಲ್ಲಿ ಹೆಂಡ ಸಾರಾಯಿಗಳಲ್ಲಿ, ಹುಡುಗ ಹುಡುಗಿಯರಲ್ಲಿ ಅವರಿಗೆ ಆಸೆಯನ್ನು ಉಂಟುಮಾಡಿ ಅವರು ತಿಂದು, ಕುಡಿದು ಭೋಗಿಸುವಾಗ ಅವರನ್ನು ಮಿತಿಮೀರಿ ತಿನ್ನುವಂತೆ ಕುಡಿಯುವಂತೆ, ಭೋಗಿಸುವಂತೆ ಪ್ರೇರೇಪಿಸಿ ಅವರ ರಸನೇಂದ್ರಿಯ ಗಳಿಗೆ ಪ್ರವೇಶಮಾಡಿ ಅಲ್ಲಿ ರುಚಿಸಾರವನ್ನು ಗ್ರಹಿಸಿ ಆನಂದಪಡುವರು .

ಇವರು ಭೂಲೋಕದಲ್ಲಿಲ್ಲದೆ ಕಾಮಲೋಕದಲ್ಲಿ ವಾಸಮಾಡುತ್ತಿದ್ದಾಗ್ಯೂ ಇತರರನ್ನು ದುಷ್ಕರ್ಮದಲ್ಲಿ ಪ್ರೇರಣೆ ಮಾಡುವುದರಿಂದ ಹೊಸದಾಗಿ ದುಷ್ಕರ್ಮಗಳನ್ನು ಮಾಡುತ್ತಲೇ ಇರುವರು.

ಇದೇ ರೀತಿ ಭೂಲೋಕದಲ್ಲಿದ್ದಾಗ ಅನೇಕ ದುಷ್ಟಶಕ್ತಿ ಅಥವಾ ಅಧಮ ಸಿದ್ಧಿ ಹೊಂದಿದ ಗುರುಗಳು, ಬಾಬಾಗಳು ಈಗ ತಮ್ಮ ಚಮತ್ಕಾರ ತೋರಿಸುವ ಆಸೆಯಿಂದ ಭೂಲೋಕದ ಅನೇಕ ವ್ಯಕ್ತಿಗಳ ಶರೀರಕ್ಕೆ ಪ್ರವೇಶಮಾಡಿ (ಪರಕಾಯ ಪ್ರವೇಶ) ತಮ್ಮನ್ನು ಜನರು ಉತ್ತಮ ಮನುಷ್ಯರೆಂದು ಹೇಳಬೇಕೆಂಬ ಉದ್ದೇಶ ದಿಂದ ಅವರ ಮೂಲಕ ಚಮತ್ಕಾರ ತೋರಿಸುವುದು' ಅವರ ಕೈಗೆ ಬೇರೆ ಸ್ಥಳದಲ್ಲಿ ಬೇರೆ ಊರುಗಳಲ್ಲಿದ್ದ ವಾಚು, ಉಂಗುರ, ತಾಳಿ, ವಿಭೂತಿಗಳನ್ನು ತಮ್ಮ ಅದೃಶ್ಯವಾದ ಕಾಮಶರೀರದ ಮೂಲಕ ತಂದು ಇಟ್ಟು ಹೋಗಿ ಜನರ ಮುಂದೆ ಪ್ರದರ್ಶಿಸಿ ನಮಗಲ್ಲದೆ ಮತ್ತಾರಿಗೆ ಇಂತಹ ಅದೃಷ್ಟವಿರುವುದು ಎಂಬ ದುರಾಭಿಮಾನದಿಂದ ಮೆರೆಯುತ್ತಾರೆ. ತಮ್ಮ ಅಧೀನದಲ್ಲಿರುವ ವ್ಯಕ್ತಿಗಳಿಗೆ ಅವರ ಕೈಗೆ ನೆನೆದಮಾತ್ರಕ್ಕೆ ಬರುವ ವಾಚು, ಉಂಗುರ ಪ್ರಸಾದಗಳನ್ನು ತಾನೇ ಸೃಷ್ಟಿಮಾಡಿದೆ ಎಂದು ನಂಬುವ ಹಾಗೆ ಮಾಡಿ, ತಮ್ಮ ಕಾಮ ಶರೀರದ ಮೂಲಕ ತಿಳಿಯಬಹುದಾದ ಕೆಲವು ಭೂತ, ಭವಿಷ್ಯ ಸಂಗತಿಗಳನ್ನು ಹೇಳಿ ಜಗತ್ತಿಗೆ ಕಾರಣವಾದ ಈಶ್ವರನೇ ನಾನು, ಪ್ರಪಂಚವು ತನ್ನಿಂದಲೇ ಉತ್ಪತ್ತಿಯಾಗುತ್ತಿದೆ, ತಾವೇ ದೇವರೆಂದು, ಗುರುಗಳೆಂದು, ಜಗತ್ತನ್ನಾಳುವ ಪ್ರಭುಗಳೆಂದು ಅವರ ಮೂಲಕ ಪ್ರಚಾರಮಾಡುವರು. ಇವರು ತಮ್ಮಲ್ಲಿಗೆ ಬರುವ ಶಿಷ್ಯರಿಗೆ ಹಾಗೂ ಜನರಿಗೆ ವಿಭೂತಿ ಮತ್ತು ಪ್ರಸಾದದಲ್ಲಿ ಗಾಂಜ, ಅಫೀಮನ್ನು ಸ್ವಲ್ಪ ಬೆರೆಸಿ ಕೊಡುತ್ತಾರೆ. ಆಗ ಶಿಷ್ಯರ ಮತ್ತು ಜನಗಳ ಮನಸ್ಸಿನಲ್ಲಿ ಈ ಗಾಂಜ, ಅಫೀಮಿನಿಂದ ಬರುವ ಉಲ್ಲಾಸ ವನ್ನು ಜನಸಾಮಾನ್ಯರು ಗುರುಗಳ ದೈವೀಶಕ್ತಿಯಿಂದ ಬಂತೆಂದು ತಪ್ಪಾಗಿ ತಿಳಿದು ಅವರನ್ನು ನಂಬುತ್ತಾರೆ. ಆ ನಂಬಿಕೆಯಲ್ಲಿ ಅವರು ಆ ಗುರುಗಳೇ ದೇವರೆಂದು ತಿಳಿದು ತಮ್ಮ ತನು, ಮನ, ಧನಗಳನ್ನು ಅವರಿಗೆ ಅರ್ಪಿಸಿ ಮೂರ್ಖರಾಗಿ ಪ್ರಚಾರ ಮಾಡುತ್ತಾರೆ.

ಆ ಗುರುಗಳು ತಮ್ಮ ಯೋಗ್ಯತೆಗೆ ಮೀರಿದ ವಿವಿಧರೀತಿಯ ವೇಷ - ಭಾಷೆಗಳುಳ್ಳವರಾಗಿರುವರು. ಇವರನ್ನೇ ಅಸುರೀ ಸಂಪತ್ತಿನ ಜನರು ಎಂಬುದಾಗಿ ಹೇಳುವುದು. ಇವರೇ ಪೂರ್ವಜನ್ಮಗಳಲ್ಲಿ ರಾವಣ ವಂಶಕ್ಕೆ ಸೇರಿದ ರಾಕ್ಷಸರು. ಈ ರೀತಿ ದುಷ್ಕರ್ಮ ಮಾಡುವ ಈ ಗುರು, ಬಾಬಾಗಳು ಭೂಲೋಕದಲ್ಲಿ ಮತ್ತೆ ಹುಟ್ಟಿ ಅಧೋಗತಿ ಹೊಂದುತ್ತಾರೆ. ಅತೀ ಬುದ್ಧಿ ಉಪಯೋಗಿಸಿ ಬೇರೆಯವರಿಗೆ ತೊಂದರೆ, ಸಂಕಟ, ಹತ್ಯೆ' ಅನಾಚಾರ, ಮಾಡಿದುದರ ಫಲದಿಂದ ಮುಂದಿನ ಜನ್ಮಗಳಲ್ಲಿ ಬುದ್ಧಿಮಾಂದ್ಯರು, ದಡ್ಡರು ಮತ್ತು ಮೂಢರಾಗಿ ಹುಟ್ಟುತ್ತಾರೆ. ಕೆಲವರು ಅಪಸ್ಮಾರಕ್ಕೆ ಈಡಾಗುತ್ತಾರೆ. ಇವರ ಹಿಡಿತದಲ್ಲಿರುವ ವ್ಯಕ್ತಿಗಳು ತಮ್ಮ ಅಸ್ತಿತ್ವ ಕಳೆದುಕೊಂಡು ಭೂಲೋಕದಲ್ಲಿ ಭ್ರಮೆಗೀಡಾಗುತ್ತಾರೆ. ಅವರಲ್ಲಿ ಅನೇಕರು ಅಪಸ್ಮಾರಕ್ಕೆ ಈಡಾಗುತ್ತಾರೆ. ಕಾರಣ ಇವರ ಪ್ರಜ್ಞೆ, ಭೂಲೋಕ ಮತ್ತು ಭುವರ್ಲೋಕಗಳಲ್ಲಿ ಅಲ್ಲಿಂದಿಲ್ಲಿಗೆ, ಇಲ್ಲಿಂದಲ್ಲಿಗೆ ಓಡಾಡುತ್ತ ಆಗಾಗ ಪ್ರಜ್ಞೆ ತಪ್ಪುತ್ತಾರೆ. ಇದನ್ನೇ ಮೂರ್ಛೆರೋಗ ಎನ್ನುವುದು.

ಭುವರ್ಲೋಕ 6ನೇ ಉಪಲೋಕದಲ್ಲಿ ಪಶುಪಕ್ಷಿಗಳನ್ನು ಸ್ವಪ್ರಯೋಜನಕ್ಕಾಗಿ ಕೊಂದವರೂ, ನ್ಯಾಯಾಧಿಪತಿಗಳಾಗಿದ್ದುಕೊಂಡು ಲಂಚವನ್ನು ತಿಂದು ದಂಡನೆ ಮಾಡತಕ್ಕವರನ್ನು ದಂಡಿಸದೆ, ದಂಡನೆಗೆ ಗುರಿಯಾಗಬಾರದ ಜನರನ್ನು ದಂಡಿಸುತ್ತಿದ್ದವರೂ ಸಣ್ಣಸಣ್ಣ ಕಳ್ಳತನವನ್ನು ಮಾಡಿದವರೂ ಡಂಭಾಚಾರಕ್ಕಾಗಿ ಯಜ್ಞಗಳನ್ನು ಮಾಡಿ ಪಶುಗಳನ್ನು ಹಿಂಸಿಸಿದವರೂ, ಇತರರ ಮನೆಗೆ ಬೆಂಕಿಯನ್ನು ಹಾಕಿ ಅವರಿಗೆ

ಕಷ್ಟವನ್ನುಂಟು ಮಾಡಿದವರೂ, ಬಹಳ ಲೋಭವುಳ್ಳವರಾಗಿ, ಅಹಂಕಾರ ಮಮಕಾರಗಳಿಂದ ಪ್ರೇರೇಪಿಸಲ್ಪಟ್ಟು ಬೇರೆಯವರಿಗೆ ದ್ರೋಹ ಮಾಡಿ ತಮ್ಮ ದೇಹವನ್ನು ಕಾಪಾಡಿಕೊಳ್ಳುತ್ತಿದ್ದವರೂ, ತಮಗೆ ಬಂದ ನೀಚ ಯೋಚನೆಗಳನ್ನು ಯಾವಾಗಲೂ ಮಾಡುತ್ತಾ ಕಾಲವನ್ನು ಕಳೆಯುತ್ತಿದ್ದವರು. ಇತರರು ಒಳ್ಳೆಯ ಆಭರಣ, ಉಡಿಗೆ ತೊಡಿಗೆ ತೊಡುವುದನ್ನು ಧನವಂತರಾಗಿರುವುದನ್ನು ನೋಡಿ ಸಹನೆಯಿಲ್ಲದೆ ಮನಸ್ಸಿನಲ್ಲಿ ಬಹಳ ವ್ಯಥೆಯನ್ನು ದುಃಖವನ್ನು ಅನುಭವಿಸುತ್ತಿದ್ದರೂ, ತಾವು ಸಂಪಾದಿಸಿರುವ ವಸ್ತುಗಳನ್ನು ನೋಡಿ ಸಂತೋಷಪಡುತ್ತಾ ಇನ್ನೂ ಹೆಚ್ಚಾಗಿ ಹೇಗಾದರೂ ಭೋಗವಸ್ತುಗಳನ್ನು ಸಂಪಾದಿಸಬೇಕೆಂದು ಆಸೆಯುಳ್ಳವರಾಗಿದ್ದವರು. ತಮ್ಮ ಪಾಪಗಳಿಗೆ ಪ್ರಾಯಶ್ಚಿತ್ತರೂಪವಾದ ಮನೋವ್ಯಥೆಗಳನ್ನು ಈ ಪ್ರದೇಶದಲ್ಲಿ ಅನುಭವಿಸುವರು.

ವಿಷಯ ಭೋಗಗಳಲ್ಲೇ ತನ್ನ ಬುದ್ಧಿಯನ್ನೆಲ್ಲಾ ಉಪಯೋಗಿಸುತ್ತಿದ್ದವನು. ಯಾರಾದರೂ ಯಾಚಿಸಿದರೆ ಅವರಿಗೆ ಆ ಸಮಯದಲ್ಲಿ ದಾನವನ್ನು ಕೊಟ್ಟು ಆಮೇಲೆ ತಾನು ಕಷ್ಟಪಟ್ಟು ಸಂಪಾದಿಸಿದ ಹಣವನ್ನು ಕೊಟ್ಟು ಮೋಸಗೊಂಡೆನಲ್ಲ ಎಂಬುದಾಗಿ ಯೋಚನೆ ಮಾಡುತ್ತಿದ್ದವರು, ಯಾವಾಗಲೂ ಇತರರಿಗೆ ಕೆಡುಕನ್ನೇ ಉಂಟು ಮಾಡುತ್ತಿದ್ದವರು, ಎಷ್ಟು ಅವಮಾನವಾದರೂ ಅದನ್ನು ಸ್ವಲ್ಪವೂ ಲಕ್ಷ್ಯಮಾಡದೇ ಅದರಿಂದ ತನಗೆ ಸ್ವಲ್ಪ ಹಣವಾದರೂ ದೊರಕಿದರೆ ಸಾಕೆಂದು ಯಾವ ಕಾರ್ಯವನ್ನಾದರೂ ಮಾಡುತ್ತಿದ್ದವರು, ತನ್ನನ್ನೇ ನಂಬಿಕೊಂಡಿರುವ ತನ್ನ ಪತ್ನಿಯನ್ನು, ಇತರ ಸ್ತ್ರೀಯರನ್ನು ದ್ವೇಷಿಸಿ ಹಿಂಸೆ ಮಾಡುತ್ತಿದ್ದವರು ತಾವು ಮನುಷ್ಯನಾಗಿ ಮಾಡಬೇಕಾದ ಜ್ಞಾನಾರ್ಜನೆಯನ್ನು ಮಾಡದೆ ತನ್ನ ಜನ್ಮವನ್ನು ಹಾಳುಮಾಡಿಕೊಳ್ಳುತ್ತಿದ್ದವರು, ಯಾವಾಗಲೂ ಇಂದ್ರಿಯ ಭೋಗಗಳ ವಿಷಯವನ್ನೇ ಮಾತನಾಡುತ್ತಿದ್ದವರು ಭುವರ್ಲೋಕದ ಈ 6ನೇ ಉಪಲೋಕದಲ್ಲಿ ತನ್ನ ಪಾಪಗಳಿಗೆ ಪ್ರಾಯಶ್ಚಿತ್ತ ರೂಪವಾದ ಮನೋವ್ಯಥೆಯನ್ನು ಅನುಭವಿಸುತ್ತಿರುವರು.

ಭುವರ್ಲೋಕದ 6ನೇ ಉಪಲೋಕದಲಿರುವ ಕೆಲವರು ತಾವು ಭೂಲೋಕದಲ್ಲಿ ಜೀವಿಸಿದ್ದಾಗ ತಾವು ಇಚ್ಛಿಸಿದ್ದ ಕಾಮಗಳನ್ನು ಅನುಭವಿಸುವುದಕ್ಕೆ ಮುಂಚೆಯೇ ತಮ್ಮ ಸ್ಥೂಲದೇಹವನ್ನು ತ್ಯಜಿಸಿದವರು. ಈಗ ಆ ಕಾಮಗಳನ್ನು ಅನುಭವಿಸಬೇಕೆಂಬ ಇಚ್ಛೆಯಿಂದ ತಮ್ಮ ಅಭಿಲಾಷೆಗಳನ್ನು ತಮ್ಮ ಬಂಧುಗಳಿಗೆ ತಿಳಿಸಬೇಕೆಂದು ಬಹಳ ವಿಧವಾಗಿ ಪ್ರಯತ್ನ ಮಾಡುವರು. ತಾವು ವಾಸ ಮಾಡುತ್ತಿದ್ದ ಸ್ಥಳಕ್ಕೆ ಬಂದು, ತಮ್ಮ ಬಂಧುಗಳು ತಮ್ಮನ್ನೂ ನೋಡಬೇಕೆಂದು ಬಹಳವಾಗಿ ಪ್ರಯತ್ನ ಮಾಡುವರು. ತಾವು ಪ್ರೀತಿಸುತ್ತಿದ್ದ ಜನರೊಂದಿಗೆ, ಮಾತನಾಡಬೇಕೆಂಬ ಉದ್ದೇಶದಿಂದ, ಪಿಶಾಚ ರೂಪದಿಂದ ಅವರ ಸಮೀಪದಲ್ಲಿಯೇ ಇರುವರು. ಯಾವ ಕಾರಣವೂ ಇಲ್ಲದೆ ಕೆಲವರಿಗೆ ಕೆಲವು ಶಬ್ದಗಳು ಕೇಳಿ ಬರುವವು, ನೀರು ಚುಮಕಿಸಿದಂತೆ ಆಗುವುದು, ಬಂಧುಗಳ ಗಮನವನ್ನು ಅನೇಕ ಬಗೆಯಲ್ಲಿ ಸೆಳೆದು ಅವರೊಡನೆ ಸಂಭಾಷಣೆ ನಡೆಸಲು ಹಲವು ಪ್ರಯತ್ನಗಳನ್ನು ಮಾಡುವರು. ಬಂಧುಗಳು ಅದನ್ನು ತಿಳಿಯಲು ಆಗುವುದಿಲ್ಲ. ತಾವು ಜೀವಿಸಿದ್ದಾಗ ಬಹಳವಾಗಿ ಪ್ರೀತಿಸುತ್ತಿದ್ದ ಆಭರಣಗಳನ್ನು ಇತರರು ಉಪಯೋಗಿಸಿದರೆ ಆ ನಗಗಳು ಇರುವ ಸ್ಥಳದಲ್ಲಿಯೇ ತಾವು ಇದ್ದು ಕೊಂಡು ಅವರನ್ನು ಹೆದರಿಸುತ್ತಾರೆ. ಇನ್ನೂ ಕೆಲವರು ತಮ್ಮ ಬಂಧುಗಳ ಸ್ವಪ್ನದಲ್ಲಿ ಕಾಣಿಸಿಕೊಂಡು ತಮ್ಮ ಮನೋಭೀಷ್ಟವನ್ನು ಅವರಿಗೆ ತಿಳಿಸುವರು. ಆ ಬಂಧುಗಳು ಆ ಅಭೀಷ್ಟಗಳನ್ನು ನೆರವೇರಿಸುವರು.

ಭುವರ್ಲೋಕದ 7 ಮತ್ತು 6 ಉಪಲೋಕಗಳನ್ನು ಯಮಪುರವೆಂದು ಕರೆಯುವರು. ಇಲ್ಲಿ ಭಯಂಕರವಾದ ನರಕಗಳಿರುವವು. ಈ ನರಕಗಳಲ್ಲಿ ಹಗಲೆಂಬುದೇ ಇಲ್ಲ. ಸದಾಕಾಲವೂ ಕತ್ತಲೆ ಕವಿದುಕೊಂಡಿರುವುದು. ಇವುಗಳಲ್ಲಿ 21 ನರಕಗಳು ಅತಿ ಮುಖ್ಯವಾದವು.

ಈ ಬಗೆಬಗೆಯ ನರಕದಲ್ಲಿ ಮೂತ್ರ, ರಕ್ತ, ಮಜ್ಜೆ, ಮಲ, ಮೇದಸ್ಸು, ವೀರ್ಯವು, ಶ್ಲೇಷ್ಮವು, ದುರ್ಗಂಧವು ಜೊತೆಗೆ ನಾನಾ ವಿಧದ ಕ್ರಿಮಿಗಳು, ವಜ್ರದಂತೆ ಕಠಿಣವಾದ ಕಾಗೆಗಳು ಹಾಗೂ ವಿಷಜಂತುಗಳು ಮತ್ತು ಮೃಗಗಳು 80 ಕೋಟಿಯ ಪ್ರಮಾಣದಿಂದ ಇರುವವು.

ಭೂಲೋಕದಲ್ಲಿ ಹೆಚ್ಚಾಗಿ ಪಾಪಗಳನ್ನು ಮಾಡಿದವರನ್ನು ಈ ನರಕಗಳಿಗೆ ತಳ್ಳಿ ಬಿಡುವರು. ಈ ನರಕ ದ್ವಾರಗಳಲ್ಲಿ ರಾಕ್ಷಸರು ಬಿಚ್ಚುಗತ್ತಿಗಳನ್ನು ತಮ್ಮ ಕೈಯಲ್ಲಿ ಹಿಡಿದುಕೊಂಡು ಯಾರನ್ನೂ ಹೊರಕ್ಕೆ ಬಿಡದೆ ಬಹು ಎಚ್ಚರದಿಂದ ರಕ್ಷಿಸಿಕೊಂಡಿರುವರು.

ಈ ನರಕದಲ್ಲಿ ಆಗುವ ಶಿಕ್ಷೆಗಳನ್ನು ಕೇಳಲಿಕ್ಕೆ ಕೂಡ ಭಯವಾಗುವುದು. ಕಾಗೆಗಳು ಒಂದು ಕಡೆ ಮೈಯನ್ನು ಕುಕ್ಕಿ ನೋಯಿಸುತ್ತಿರುವುವು. ಕ್ರೀಮಿಗಳು ಮೈಯನ್ನು ಕಡಿದು ಕಡಿದು ಗಾಯ ಮಾಡುತ್ತಿರುವುವು. ನೋವನ್ನು ತಾಳಲಾರದೆ ಪಾಪಿಷ್ಠರು ಸದಾಕಾಲವೂ ಪ್ರಲಾಪಿಸುತ್ತಿರುವರು. ಬಹುಕಷ್ಟಪಟ್ಟು ಮೇಲಕ್ಕೆ ಏಳೋಣವೆಂದು ಪ್ರಯತ್ನ ಪಡುವರು. ಆ ವೇಳೆಯಲ್ಲಿ ಮೇಲುಗಡೆಯಿಂದ ಕಾಗೆಗಳು ಕುಕ್ಕುತ್ತಾ ಬರಲು ಹಾಗೆ ಏಳಲಿಕ್ಕೆ ಆಗದೆ ನರಕಕೂಪದಲ್ಲಿ ಮುಳುಗುತ್ತಿರುವರು.

ಆ ನರಕದಲ್ಲಿ ಪಾಪಿಗಳು ಅಯ್ಯೋ! ಅಪ್ಪಾ!! ಸಾಕಪ್ಪಾ!!! ಈ ಕಷ್ಟವನ್ನು ಪಡಲಾರೆವು ಎಂದು ಬೊಬ್ಬಿಡುತ್ತಿರುವರು. ಯಮನ ಆಜ್ಞೆಯಿಂದ ನರಕವಾಸಿಗಳಿಗೆ ಅವರವರ ಪಾಪಕರ್ಮಾನುಸಾರವಾಗಿ ಶಿಕ್ಷೆಯಾಗುತ್ತಿರುವುದು.

ಆಗ ಅವರ ಕಾಮಮಯ ಶರೀರವು ಅದನ್ನು ಕಡಿದರೆ, ಬಡಿದರೆ, ಚುಚ್ಚಿದರೆ, ಸೆಳೆದರೆ, ಸುಟ್ಟರೆ, ಸಿಗಿದರೆ, ಕುಕ್ಕಿದರೆ, ಕಚ್ಚಿದರೆ, ಹಿಂಸಿಸಿದರೆ ಕೊರೆದರೆ ನಾಶವಾಗದೆ ಆದರೆ ನೋವು ಮಾತ್ರ ಗೊತ್ತಾಗುವ ಯಾತನಾ ಶರೀರವಾಗಿ ಮಾರ್ಪಾಡಾಗಿರುವುದು.

ಪರರ ದ್ರವ್ಯ ಅಪಹರಿಸುತ್ತಿದ್ದವರನ್ನು, ಕ್ಷುದ್ರರೂ ಹಾಗೂ ಇತರರ ಮನೆಯ ಊಟದಲ್ಲೇ ನಿರತರಾದವರನ್ನು ರೌರವ ನರಕದಲ್ಲಿ ಕಾದ ಎಣ್ಣೆಯಲ್ಲಿ ಬೇಯಿಸುತ್ತಾರೆ. ಕೃತಘ್ನರೂ, ಸುಳ್ಳು ಆಶ್ವಾಸನೆ ಕೊಟ್ಟು ಮಕ್ಕಳನ್ನು ಮದುವೆ ಮಾಡಿದವರನ್ನು ಮಹಾ ರೌರವ ನರಕದಲ್ಲಿ ಅಗ್ನಿಯಿಂದ ಸುಡುತ್ತ ಹರಿತವಾದ ಶಸ್ತ್ರಾಸ್ತ್ರಗಳಿಂದ ತುಂಡುತುಂಡಾಗಿ ಕತ್ತರಿಸುವರು. ದುಷ್ಟ ದೃಷ್ಟಿಯಿಂದ ಪರರ ಪತ್ನಿಯರನ್ನು ನೋಡುತ್ತಿದ್ದವರ ಕಣ್ಣನ್ನು ಅಂಧತಾಮಿಶ್ರ ನರಕದಲ್ಲಿ ಉಕ್ಕಿನ ಕೊಕ್ಕುಳ್ಳ ಪಕ್ಷಿಗಳು ಕುಕ್ಕುತ್ತಿರುವುವು. ಗುರು, ದೇವತೆ, ತಪಸ್ವಿಗಳನ್ನು ನಿಂದಿಸಿದವರನ್ನು ಪ್ರತಪ್ತವೆಂಬ ನರಕದಲ್ಲಿ ಅವರ ನಾಲಗೆ ಕೀಳುವರು. ಮಿತ್ರರಿಗೆ ದ್ರೋಹಮಾಡಿದವರನ್ನು, ಗ್ರಂಥಗಳನ್ನು, ಕಾದಂಬರಿಗಳನ್ನು ತದ್ವಿರುದ್ಧ ವಿಮರ್ಶೆ ಮಾಡಿದವರನ್ನು ವಿದಾರಕವೆಂಬ ನರಕದಲ್ಲಿ ಗರಗಸದಿಂದ ಕೊಯ್ಯುವರು.

ತಮಗೆ ಕೇಡುಮಾಡದ ಪ್ರಾಣಿಗಳ ಪ್ರಾಣ ತೆಗೆದಿರುವವರನ್ನು ನಿಕುಂಭವೆಂಬ ನರಕದಲ್ಲಿ ಕಾದಿರುವ ಮರಳ ಮೇಲೆ ಸುಡುವರು. ಸುಳ್ಳು ಸಾಕ್ಷಿ ಹೇಳುತ್ತಿದ್ದವರನ್ನು, ಸುಳ್ಳು ಲೆಕ್ಕ ಬರೆಯುತ್ತಿದ್ದವರನ್ನು ಬೀಭೀತ್ಸವೆಂಬ ನರಕದಲ್ಲಿ ಅವರುಗಳ ಬಾಯಿಗೆ ಅಮೇಧ್ಯ, ಮೂತ್ರಗಳನ್ನು ತುಂಬುವರು. ಗುರುವಿಗೆ, ಅತಿಥಿಗೆ, ಭೃತ್ಯರಿಗೆ ಭೋಜನ ನೀಡದೆ ಉಣ್ಣುತ್ತಿದ್ದವರನ್ನು ಕುತ್ಸಿಕವೆಂಬ ನರಕದಲ್ಲಿ ಊಟ ಕೊಡದೆ ತಳ್ಳುವರು.

ತಾವು ಮಾತ್ರ ಉಂಡು ತೇಗಿ ಇತರರಿಗೆ ವ್ಯಥೆಪಡಿಸುತ್ತಿದವರನ್ನು ಹಾವು, ಚೇಳು, ಹರಿತವಾದ ಮುಳ್ಳುಗಳಿಂದ ತುಂಬಿರುವ ದುರ್ಗಮವೆಂಬ ನರಕದಲ್ಲಿ ಹಾಕುವರು. ಪರರ ಪತ್ನಿಯರಲ್ಲಿ ಆಸಕ್ತರಾಗಿದವರನ್ನು ಕಾದ ಕಬ್ಬಿಣದ ಕಂಭಗಳಿರುವ ದುಸ್ಸಹವೆಂಬ ನರಕದಲ್ಲಿ ಆ ಕಾದ ಕಬ್ಬಿಣದ ಕಂಬಗಳಿಗೆ

ಆಲಂಗಿಸುವರು. ಹೆಂಗಸರು, ಗುರು, ದೇವತೆಗಳ ದ್ರವ್ಯ ಅಪಹರಿಸಿದವರನ್ನು ಆಕರ್ಷಕವೆಂಬ ನರಕದಲ್ಲಿ ಕಾದ ಇಕ್ಕಳದಿಂದ ಸೆಳೆಯುವರು.

ಅಭಕ್ಷವನ್ನು ಭಕ್ಷಿಸುತ್ತಿದ್ದ ನೀಚರನ್ನು ಸಂದಂಶವೆಂಬ ನರಕದಲ್ಲಿ ಕಬ್ಬಿಣದ ಕೊಕ್ಕಿರುವ ಹದ್ದುಗಳು ಭಕ್ಷಿಸುತ್ತಿರುವುವು. ಬ್ರಹ್ಮಹತ್ಯೆಮಾಡಿದವರನ್ನು ಅಧೋಮುಖವೆಂಬ ಅತಿಭಯಂಕರವಾದ ನರಕದಲ್ಲಿ ಮರದ ಕೊಂಬೆಗಳಿಗೆ ಅಧೋಮುಖವಾಗಿ ಕಟ್ಟಿ ಕೆಳಗೆ ಅಗ್ನಿ ಹಾಕಿ ಸುಡುವರು. ಬೇರೆಬೇರೆ ರೀತಿಯ ದ್ರವ್ಯಗಳನ್ನು ಅಪಹರಿಸಿದವರನ್ನು ನಿಯಂತ್ರಕವೆಂಬ ನರಕದಲ್ಲಿ ಬಂಧನಗಳಿಂದ ಕಟ್ಟಿ ಸುತ್ತಲೂ ಕ್ರಿಮಿ, ಚೇಳು, ಕೀಟಗಳಿಂದ ಕಚ್ಚಿಸುವರು.

ಇತರರ ನಿಂದ್ಯ ಕಾರ್ಯಮಾಡುತ್ತಿದ್ದವರಿಗೆ, ಅಸೂಯೆ ಪಡುತ್ತಿದ್ದವರಿಗೆ ಭೀಷ್ಣವೆಂಬ ನರಕದಲ್ಲಿ ಹೇನು, ತಿಗಣೆ, ನೊಣಗಳು ಪೀಡಿಸುವುವು. ಬಲಿ ಕೊಟ್ಟವರನ್ನು ಕೊಲೆ, ಖೂನಿ ಮಾಡಿದವರನ್ನು ಕ್ಷುದ್ರದವೆಂಬ ನರಕದಲ್ಲಿ ತಮ್ಮ ಮಾಂಸವನ್ನು ತಾವೇ ತಿನ್ನುವಂತೆ ಮಾಡುವರು. ವ್ರತ ಕೆಡಿಸಿದವರನ್ನು, ಪಾಷಂಡಿಗಳನ್ನು ಆದಿಕ್ಷಾರವೆಂಬ ನರಕದಲ್ಲಿ ಹರಿತವಾದ ಆಯುಧದಿಂದ ಕತ್ತರಿಸಿ ಅವರಿಗೆ ಉಪ್ಪು ತುಂಬುವರು.

ಶಾಸ್ತ್ರ, ಕಾವ್ಯ, ಕನ್ಯೆ ಇವರನ್ನು ಕೆಡಿಸಿದವರನ್ನು ನಿಧಾಗಕವೆಂಬ ನರಕದಲ್ಲಿ ಉರಿಯುತ್ತಿರುವ ಕೆಂಡಗಳ ನಡುವೆ ನಿಲ್ಲಿಸುವರು. ನಾಸ್ತಿಕರು, ಮರ್ಯಾದೆ ಕ್ರಮ ಉಲ್ಲಂಘಿಸಿದವರೂ, ಘಾತಕರೂ ಆಗಿದ್ದವರನ್ನು ಹರಿತವಾದ ಮುಳ್ಳು ತುಂಬಿರುವ ಕೂಟ ಶ್ಮಾಲ್ಪಲಿಯೆಂಬ ನರಕದಲ್ಲಿ ಮೇಲಕ್ಕೆ ಹತ್ತಿಸಿ ಕೆಳಕ್ಕೆ ಮುಳ್ಳುಗಳ ಮೇಲೆ ತಳ್ಳಿ ಉರುಳಿಸುವರು. ಶಾಸ್ತ್ರವನ್ನು ವಿಕ್ರಯಿಸುತ್ತಿದ್ದವರನ್ನು ದುರುದ್ದೇಶದಿಂದ ಗ್ರಂಥಗಳನ್ನು ಜಾತಿ ಮತ ಕುಲ ನೋಡಿ ಮನಸ್ಸಿಗೆ ಬಂದ ಹಾಗೆ ವಿಮರ್ಶಿಸುತ್ತಿದ್ದವರನ್ನು ಅಸಿಪತ್ರವನವೆಂಬ ನರಕದಲ್ಲಿ ಅತಿ ಚೂಪಾದ ಎಲೆಗಳ ಕಾಡುಗಳಲ್ಲಿ ಹಾಕಿ ಹಿಂಸಿಸುವರು.ಅಧರ್ಮವನ್ನು, ಪಾಪವನ್ನು ಮಾಡುತ್ತಿದ್ದವರು ವೈತರಣೀ ನದಿ ಎಂಬ ನರಕವನ್ನು ದಾಟಲಾರದೆ ಅದರಲ್ಲಿ ಮುಳುಗಿ ಮುಳುಗಿ ಏಳುತ್ತ ದುಃಖಪಡುವರು.

ಇತರ ನರಕಗಳ ಸಂಖ್ಯೆಗೆ ಮಿತಿಯಿಲ್ಲ. ಭೂಲೋಕದಲ್ಲಿ ಬಗೆಬಗೆಯ ಲಂಚ ತಿನ್ನುತ್ತಿದ್ದವರಿಗೆ, ತರತರದ ಸುಳ್ಳು ಲೆಕ್ಕ ಬರೆಯುತ್ತಿದ್ದವರಿಗೆ, ವಿಧವಿಧ ಸುಳ್ಳು ಸಾಕ್ಷಿ ಹೇಳುತ್ತಿದ್ದವರಿಗೆ ನರಕದಲ್ಲಿ ಗರಗಸ, ಚಮ್ಮಟಿಗೆ, ಕೊಡತಿ, ಸುತ್ತಿಗೆ, ಶೂಲ, ಪಾಶ, ಒತ್ತಿ ಹಿಡಿಯುವ ಇಕ್ಕಳ, ಬಾಚಿಗಳು, ಕತ್ತರಿಗಳು ಮುಂತಾದ ಮೂವತ್ತೆರಡು ಬಗೆಯ ಆಯುಧಗಳಿಂದ ಯಮಕಿಂಕರರು ಹಿಂಸಿಸುವರು.

ಭೂಲೋಕದಲ್ಲಿ ಸಕ್ಕರೆಗೆ, ಕಾಫಿಗೆ, ಹಾಲಿಗೆ, ಅಕ್ಕಿಗೆ ಇನ್ನೂ ಮುಂತಾದ ಭೋಜನ ಪದಾರ್ಥಗಳಿಗೆ ಕಲಬೆರಕೆಮಾಡಿ ಲಾಭಗಳಿಸುತ್ತಿದ್ದವರಿಗೆ, ಔಷಧಿಗಳನ್ನು ಕಲಬೆರಕೆ ಮಾಡುತ್ತಿದ್ದವರಿಗೆ ನರಕದಲ್ಲಿ ಕಾದ ಮರಳು, ಚೀರಣದ ಉಳಿ, ದಬ್ಬಳ, ರಂಧ್ರ ಕೊರೆಯುವ ಬೈರಿಗೆಗಳು, ಉಳಿಗೆಗಳು, ಅರಗುಗಲ್ಲು, ಅರೆಯಬಂಡೆ, ಉಕ್ಕಿನ ಗುಂಡುಗಳು, ಕಬ್ಬಿಣದ ಸರ, ಗುದ್ದಲಿ, ಚೂರಿ, ಚಾಕು ಇಂತಹ ಆಯುಧಗಳಿಂದ ಯಮಕಿಂಕರರು ಶಿಕ್ಷೆಯನ್ನು ಕೊಡುವರು.

ಭೂಲೋಕದಲ್ಲಿ ಬೇರೆಯವರ ಆಸ್ತಿ ಹಣಕಾಸು ಕದಿಯುತ್ತಿದ್ದವರಿಗೆ, ಬೇರೆಯವರನ್ನು ಕೊಲೆ ಖೂನಿ ಮಾಡಿಸುತ್ತಿದ್ದವರಿಗೆ, ಬೇರೆಯವರ ಒಡವೆ ವಸ್ತ್ರಗಳನ್ನು ಅಪಹರಿಸುತ್ತಿದ್ದವರಿಗೆ ನರಕದಲ್ಲಿ ಕಾದಿರುವ ಕಂಭಗಳು, ಕಾದ ಸೀಸದ ಗುಂಡುಗಳು, ಕಾದಿರುವ ತವರ ಮತ್ತು ತಾಮ್ರದ ಪ್ರತಿಮೆಗಳು, ಕಾದ ಉಕ್ಕಿನ ವಿಗ್ರಹಗಳು, ಕಡಾಯಿಗಳಲ್ಲಿ ಕಾದಿರುವ ಎಣ್ಣೆ, ಕಾದ ಅಂಬಲಿ, ಕಾದ ಕಬ್ಬಿಣ, ಸುಡುತ್ತಿರುವ ಕಲ್ಲಿನ ಗಾಣಗಳಿಂದ ಶಿಕ್ಷೆ ಕೊಡುವರು.

ಭೂಲೋಕದಲ್ಲಿ ಸವತಿಯರ ಮಕ್ಕಳಿಗೆ ಹಿಂಸೆ ಮಾಡುತ್ತಿದ್ದವರು, ತಮ್ಮ ಸ್ವಾರ್ಥಕ್ಕಾಗಿ ಗಂಡಂದಿರನ್ನು ಅವರ ಬಂಧು ಬಳಗದಿಂದ ದೂರ ಮಾಡುತ್ತಿದ್ದವರು, ಬೇರೆಯವರ ತಲೆ ಹೊಡೆಯುತ್ತಿದ್ದವರು, ವಿನಾ ಕಾರಣ

ಆಳುಗಳನ್ನು ಹಿಂಸಿಸುತ್ತಿದ್ದವರು ನರಕದಲ್ಲಿ ಕವಣೆಯ ಕಲ್ಲು, ಬೀಸುವ ಕಲ್ಲು, ಒನಕೆಗಳು, ದೊಡ್ಡ ದೊಡ್ಡ ದೊಣ್ಣೆಗಳು, ಚಾಟಿಗಳು ಕಲ್ಲಿನ ಹರಳುಗಳು ಬಿಲ್ಲು, ಕೊರಡುಗಳಿಂದ ಶಿಕ್ಷೆ ಅನುಭವಿಸುವರು.

ಭೂಲೋಕದಲ್ಲಿ ಸುಳ್ಳು ಆಶ್ವಾಸನೆ ಕೊಡುತ್ತಿದ್ದ ಮಂತ್ರಿಗಳನ್ನು, ಅಧಿಕಾರಿಗಳನ್ನು ಚಾಡಿಕೋರರನ್ನು, ಮನೆ ಹಾಳರನ್ನು, ಹೆಣ್ಣು ಮಕ್ಕಳನ್ನು ಹಾಳು ಮಾಡುತ್ತಿದ್ದವರನ್ನು, ಯಂತ್ರ ಮಂತ್ರ ತಂತ್ರ ಮಾಡಿಸು ತ್ತಿದ್ದವರನ್ನು, ಚಿಕ್ಕಮಕ್ಕಳನ್ನು ಬಲಿ ಕೊಡುತ್ತಿದ್ದವರನ್ನು ನರಕದಲ್ಲಿ ಬಾಚಿಗಳಿಂದ ಕೆತ್ತುತ್ತಿರುವರು, ಬೈರಿಗೆಗಳಿಂದ ಕೊರೆಯುತ್ತಿರುವರು, ಹಳ್ಳಗಳಲ್ಲಿ ಹೂಳುವರು, ಮರಳಿ ಮೇಲಕ್ಕೆತ್ತಿ ಹೊಡೆಯುವರು, ಕೆಳಕ್ಕೆ ತಳ್ಳುವರು, ನಾಲಿಗೆಯನ್ನು ಕಿತ್ತು ಹಾಕುವರು, ನೆತ್ತಿಯನ್ನು ತಿವಿದು ರಕ್ತವನ್ನು ಸೋಲಿಸುವರು, ಸೀಸವನ್ನು ಕಾಯಿಸಿ ಕಿವಿಗಳಲ್ಲಿ ಸುರಿಯುವರು.

ಭೂಲೋಕದಲ್ಲಿ ಅನಾಥ ಆಶ್ರಮಗಳ, ಮಠಗಳ, ದೇವಸ್ಥಾನಗಳ, ಛತ್ರ ಶಾಲೆಗಳ ಹಾಸ್ಟಲ್‌ಗಳ ಹಣವನ್ನು ದುರುಪಯೋಗಪಡಿಸಿ ಮೋಸ ಮಾಡಿದ್ದವರನ್ನು, ಸರ್ಕಾರದಲ್ಲಿ ಜನರ ಹಣವನ್ನು ಲೂಟಿಮಾಡಿದ ಮಂತ್ರಿಗಳನ್ನು, ಎಂ.ಎಲ್.ಎ., ಎಂ.ಎಲ್.ಸಿ.ಗಳನ್ನು ಸೆಕ್ರೆಟರಿಗಳನ್ನು, ಡೈರೆಕ್ಟರ್‌ಗಳನ್ನು, ಪ್ರೊಫೆಸರ್‌ಗಳನ್ನು, ಅಮಲ್ದಾರ್‌ಗಳನ್ನು, ಅಸಿಸ್ಟೆಂಟ್ ಕಮಿಷನರ್‌ಗಳನ್ನು, ಪೋಲಿಸ್ ಆಫೀಸರ್‌ಗಳನ್ನು, ಇನ್‌ಸ್ಪೆಕ್ಟರ್‌ಗಳನ್ನು, ಡಾಕ್ಟರ್‌ಗಳನ್ನು, ಇಂಜಿನಿಯರ್‌ಗಳನ್ನು ಯಮಭಂಟರು ನರಕದಲ್ಲಿ ಮುಳ್ಳಿನ ಕಟ್ಟುಗಳಿಂದ ಹೊಡೆಯುವರು, ಕೈಕಾಲುಗಳನ್ನು ಮೈಯನ್ನೂ ಸುಡುವರು, ಉರಿಯುವ ಬೆಂಕಿಯಲ್ಲಿ ತಳ್ಳಿ ಬಿಟ್ಟು, ಹೊರಕ್ಕೆದ್ದು ಬಾರದಂತೆ ಸೀಳು ನಾಯಿಗಳನ್ನು ಕಾವಲಿಟ್ಟಿರುವರು.

ಭೂಲೋಕದಲ್ಲಿ ಪ್ರಾಣಿಗಳನ್ನು ಹಿಂಸೆ ಮಾಡುತ್ತಿದ್ದವರನ್ನು, ಬೇರೆಯವರಿಗೆ ಹೊಡೆದು ನೋಯಿಸು ತ್ತಿದ್ದವರನ್ನು, ಹೀನಾಮಾನವಾಗಿ ಬೇರೆಯವರನ್ನು ಬಯ್ಯುತ್ತಿದ್ದವರನ್ನು, ಜಿಪುಣ ಸ್ವಭಾವದಿಂದ ಕಷ್ಟದಲ್ಲಿ ರುವವರಿಗೆ ಸಹಾಯ ಮಾಡದೆ ಇರುತ್ತಿದ್ದವರನ್ನು, ಹಸಿದಿರುವವರ ಮುಂದೆ ತಿಂದು, ಕುಡಿದು ತೇಗಿ ಅಹಂಕಾರಪಡುತ್ತಿದ್ದವರನ್ನು, ಬೇರೆಯವರನ್ನು ಹಾಳಾಗಬೇಕೆಂದು ಬಯಸಿ ಕೆಟ್ಟ ಮಾರ್ಗಕ್ಕೆ ಎಳೆಯುತ್ತಿದ್ದ ವರನ್ನು, ಸಿದ್ಧಿ ಮಾಡಲು, ಮಕ್ಕಳ ಪ್ರಾಣಗಳನ್ನು ಬಲಿಕೊಟ್ಟು ದುಷ್ಟ ದೇವತೆಗಳನ್ನು ಆರಾಧಿಸಿ ಚಾರಣ, ಮಾರಣ, ತಾರಣ, ಉಚ್ಚಾಟಣ, ಆಕರ್ಷಣ ಮುಂತಾದ ಸಿದ್ಧಿಗಳನ್ನು ಮಾಡಿಕೊಂಡು ಬೇರೆಯವರನ್ನು ಹಿಂಸಿಸುತ್ತಿದ್ದವರನ್ನು, ತಾವೇ ಮಹಾತ್ಮರು, ದೇವರು ಎಂದು ಚಮತ್ಕಾರ ತೋರಿ ಜನರನ್ನು ನಂಬಿಸಿ ಅವರಿಂದ ದೇವರೆಂದು ಹೊಗಳಿಸಿಕೊಳ್ಳುತ್ತಿದ್ದವರನ್ನು ನರಕದಲ್ಲಿ ಹೋದಾಗ ಯಮಕಿಂಕರರು ಇವರುಗಳ ಹೊಟ್ಟೆಯನ್ನು ಕೊಯ್ಯುವರು, ಪಕ್ಕೆಗಳನ್ನು ಕೊಯ್ಯುವರು, ತಲೆ ಕಡಿಯುವರು, ಬೆರಳು ಕಡಿಯುವರು, ಕೈಕಾಲು ಸೀಳಿ ಹಾಕುವರು. ಮೇಲಕ್ಕೆ ತೂಗುಹಾಕಿ ಕೆನ್ನೆಗಳನ್ನು, ಕಿವಿಗಳನ್ನು ಕೊಯ್ಯುವರು. ಯಮನ ಆಜ್ಞೆಯಿಂದ ಈ ನರಕವಾಸಿಗಳನ್ನು ಹುಲಿ, ಕರಡಿ, ಹಂದಿ, ತೋಳ, ಕ್ರೂರ ಸರ್ಪ, ಕಾಡೆಮ್ಮೆ, ಚೇಳುಗಳು, ಕ್ರೂರವಾದ ಜಿರಿಗಳು, ಸೊಳ್ಳೆಗಳು, ಉಣ್ಣೆಗಳು, ತಿಗಣೆ, ನೊಣ, ಕಾಡು ಬೆಕ್ಕು ಮುಂತಾದ ಕ್ರೂರವಾದ ಜಂತುಗಳು ಇರುವ ನರಕದಲ್ಲಿ ಹೊರಕ್ಕೆ ಬಾರದಂತೆ ತಳ್ಳಿ ಬಿಡುವರು.

ಈ ರೀತಿ ಮನುಷ್ಯರು ಭೂಲೋಕದಲ್ಲಿ ಜೀವಿಸಿದ್ದಾಗ ಎಂತೆಂತಹ ಪಾಪಕೃತ್ಯಗಳನ್ನು ಮಾಡಿದ್ದರೋ ಅದಕ್ಕೆ ತಕ್ಕ ನರಕಯಾತನೆಗಳನ್ನು ಅನುಭವಿಸಲೇ ಬೇಕಾಗಿರುವುದು. ಯಮಭಂಟರು ನರಕದಲ್ಲಿ ಪಾಪಿ ಗಳನ್ನು ಅನೇಕ ರೀತಿಯಲ್ಲಿ ದಂಡಿಸಿ ಅವರವರು ಮಾಡಿದ ಪಾಪಗಳಲ್ಲಿ ಅರ್ಧವನ್ನು ಕ್ಷಯಮಾಡಿ ಉಳಿದ ಅರ್ಧವನ್ನು ಸಂಗಡ ಕಟ್ಟಿ ಮರಳಿ ಭೂಲೋಕಕ್ಕೆ ಕಳುಹಿಸುವರು.

ಭೂಲೋಕದಲ್ಲಿ ಹೀನವಾದ ಸಂಸಾರ ಸುಖಗಳಿಗೆ ಆಸೆಪಟ್ಟು ಮರಳಿ ಪಾಪಗಳನ್ನು ಮಾಡಿ ಸತ್ತ ಮೇಲೆ ಮತ್ತೆ ನರಕಕ್ಕೆ ಹೋಗುವರು. ಹೀಗೆ ಕಲ್ಪಾಂತರದವರೆಗೆ ಹುಟ್ಟುತ್ತಲೂ, ಪಾಪ ಕರ್ಮಗಳನ್ನು ಮಾಡುತ್ತಲೂ, ಸಾಯುತ್ತಲೂ, ನರಕದಲ್ಲಿ ಪಾಪದ ಫಲಗಳನ್ನು ಅನುಭವಿಸುತ್ತಲೂ ಮನುಷ್ಯರು ತೊಳಲುತ್ತಿರುವರು.

ಭುವರ್ಲೋಕದ **5**ನೇಯ ಮತ್ತು **4**ನೇಯ ಉಪಲೋಕದಲ್ಲಿ :

ಭೂಲೋಕದಲ್ಲಿದ್ದಾಗ ಸಾಮಾನ್ಯ ಮನುಷ್ಯರಂತೆಯೇ ಇದ್ದುಕೊಂಡು, ಸ್ವಪ್ರಯೋಜನಕ್ಕಾಗಿ ಕಾಮ ದಿಂದ ಸಣ್ಣಪುಟ್ಟ ತಪ್ಪುಗಳನ್ನು ಮಾಡುತ್ತಿದ್ದವರು ಈ ಪ್ರದೇಶದಲ್ಲಿ ವಾಸ ಮಾಡುವರು. ಈ ಜನರಿಗೆ ತಾವು ಮುಂದುವರಿಯಬೇಕೆಂಬ ಯೋಚನೆಯು ಇರುವುದೇ ಹೊರತು ಭೂಲೋಕದ ಕಡೆ ದೃಷ್ಟಿಯು ಸ್ವಲ್ಪವೂ ಇರುವುದಿಲ್ಲ. ಈ ಪ್ರದೇಶದಲ್ಲಿರುವವರು ಬಹಳ ಜಾಗ್ರತೆಯಾಗಿ ಇಲ್ಲಿಂದ ಮೇಲಿನ ಉಪಲೋಕ ಗಳಿಗೆ ಹೋಗುವರು.

ಭುವರ್ಲೋಕದ **3** ನೇಯ ಉಪಲೋಕದಲ್ಲಿ :

ಇತರರಿಗೆ ಸಹಾಯವನ್ನು ಮಾಡಿ ಅದರಿಂದ ತನಗೆ ಒಂದು ಸನ್ಮಾನವು ಉಂಟಾಗಬೇಕೆಂಬ ಅಭಿಲಾಷೆ ಯಿಂದ ಮತ್ತು ಜನರು ಹೊಗಳಬೇಕೆಂದು ಆಶಿಸುತ್ತಿದ್ದವರು, ಪರಲೋಕದಲ್ಲಿ ಈ ಕೆಲಸದಿಂದ ತಾನು ಸ್ವರ್ಗ ಸುಖವನ್ನು ಅನುಭವಿಸಬೇಕೆಂಬ ಆಸೆಯಿದ್ದ ಜನರೂ, ಮನ್ಮಥ, ರಂಭೆಯ ಸಂಭೋಗವೇ ಮುಂತಾದ ವಿಷಯ ಸುಖಗಳನ್ನು ಅನುಭವಿಸುವುದಕ್ಕಾಗಿಯೇ ಯಜ್ಞಯಾಗದಿಗಳನ್ನು ಮಾಡಿಸಿದವರೂ, ಸ್ವರ್ಗಸುಖವನ್ನು ಅನುಭವಿಸಬೇಕೆಂಬ ಉದ್ದೇಶದಿಂದ ತಾವು ಜೀವಿಸಿದ್ದಾಗ ಕೊಳ, ಕೆರೆ, ದೇವಸ್ಥಾನ, ಛತ್ರ, ತೋಪುಗಳನ್ನು ನಿರ್ಮಾಣ ಮಾಡಿಸಿದ ಜನರೂ ಇಲ್ಲಿ ತಕ್ಕ ಸುಖ ಅನುಭವಿಸುತ್ತಿರುವರು.

ಭುವರ್ಲೋಕದ **2** ನೇಯ ಉಪಲೋಕದಲ್ಲಿ :

ಜನ ಸಮುದಾಯಕ್ಕೆ ಒಳ್ಳೆಯದನ್ನುಂಟು ಮಾಡುವುದೇ ಸ್ವಪ್ರಯೋಜನವೆಂದು ನಂಬಿ ಅನೇಕ ರೀತಿಯ ಜನಸೇವೆ ಮಾಡಿದವರು ಈ ಪ್ರದೇಶದಲ್ಲಿ ತಕ್ಕ ಸುಖವನ್ನು ಅನುಭವಿಸುತ್ತಿರುವರು.

ಭುವರ್ಲೋಕದ **1** ನೇಯ ಉಪಲೋಕದಲ್ಲಿ :

ಭೂಲೋಕದಲ್ಲಿ ವಾಸ ಮಾಡುತ್ತಿದ್ದಾಗ ಕೇವಲ ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತಶಾಸ್ತ್ರ, ಮೊದಲಾದ ಐಚ್ಛಿಕ ವಿದ್ಯೆಯನ್ನು ಅಭ್ಯಾಸಮಾಡಿ ನಾಸ್ತಿಕರಾಗಿದ್ದವರೂ ತರ್ಕವಾದವನ್ನು ಮಾಡುವವರೂ ಈ ಪ್ರದೇಶ ದಲ್ಲಿರುತ್ತಾರೆ.

ಭುವರ್ಲೋಕ ಅಥವಾ ಕಾಮಲೋಕದಲ್ಲಿ ವಾಸ ಮಾಡುವುದು ನಾವು ತಿಳಿದಷ್ಟು ಕೆಟ್ಟದ್ದಲ್ಲ. ಏಕೆಂದರೆ ಈ ಲೋಕದಲ್ಲಿ ಜೀವಾತ್ಮನು ಮಾಡಿದ ತಪ್ಪಿಗೆ ಶಿಕ್ಷೆ ಮತ್ತು ಪ್ರಾಯಶ್ಚಿತ್ತ ಅನುಭವಿಸುವುದರಿಂದ ಆತನಿಗೆ ಪಾಪ ಕ್ಷಯವುಂಟಾಗುತ್ತದೆ. ಅವನು ಅನುಭವಿಸಿದ ಎಲ್ಲಾ ಮನೋವ್ಯಥೆಗಳಿಂದ ವಿರಕ್ತಿಯುಂಟಾಗಿ ಜೀವನಿಗೆ ಜ್ಞಾನವು ಹುಟ್ಟುವುದು. ಈ ಕಾರಣದಿಂದ ಈ ಲೋಕದ ವಾಸವೂ ಜೀವಾತ್ಮರಿಗೆ ತಾತ್ಕಾಲಿಕವಾಗಿ ಒಂದು ತರಹ ಲಾಭದಾಯಕವಾಗಿರುತ್ತದೆ.

ಭುವರ್ಲೋಕವನ್ನು ಬಿಟ್ಟನಂತರ ಜೀವಾತ್ಮನು ಕಾಮ ಶರೀರವನ್ನು ಬಿಟ್ಟು ಅಶುದ್ಧ ಮನೋಮಯ ಶರೀರದೊಡನೆ ಸ್ವರ್ಗಲೋಕದ ಕೆಳಗಿನ ಉಪಲೋಕದಲ್ಲಿ ಪ್ರದೇಶಗಳಿಗೆ ಹೋಗುತ್ತಾನೆ.

ಸ್ವರ್ಗಲೋಕದ ಕೆಳಗಿನ **7** ನೇಯ ಉಪಲೋಕದಲ್ಲಿ:

ಇಲ್ಲಿ ನಿಷ್ಕಾಮಕರ್ಮಿಗಳು ಇರುತ್ತಾರೆ. ನಿಷ್ಕಾಮ ಭಕ್ತಿಯು ಮಾತ್ರ ನಮ್ಮನ್ನು ಈ ಲೋಕಕ್ಕೆ ಕರೆ ದೊಯ್ಯುವುದು. ಧರ್ಮ ಬುದ್ಧಿಯುಳ್ಳವರು, ತಮ್ಮ ಮಕ್ಕಳ ಒಳ್ಳೆಯ ಗುಣಗಳನ್ನೇ ಯಾವಾಗಲೂ ಸ್ತೋತ್ರ ಮಾಡುತ್ತಿದ್ದ ತಂದೆ ತಾಯಿಗಳೂ, ತಮ್ಮ ಗುರುಗಳ ಯೋಗ್ಯತೆಯನ್ನು ಯಾವಾಗಲೂ ಸ್ಮರಿಸಿಕೊಂಡು ಆನಂದ ಪಡುತ್ತಿದ್ದ ಶಿಷ್ಯರು, ತಮ್ಮ ತಂದೆ ತಾಯಿ ಮುಂತಾದವರ ಗುಣಗಳನ್ನೇ ಯಾವಾಗಲೂ ಪ್ರಶಂಸೆ ಮಾಡುತ್ತಿದ್ದ ಮಕ್ಕಳು, ಭೂಲೋಕದಲ್ಲಿ ಪ್ರಾಣಿಗೂ ಮನುಷ್ಯರಿಗೂ ದಯೆತೋರುತ್ತಿದ್ದವರು, ಹಗಲೂ ರಾತ್ರಿಯೂ ಸ್ವಲ್ಪ ತನ್ನ ಸುಖವನ್ನು ಗಮನಿಸದೇ ತನ್ನ ಹೆಂಡತಿ ಮಕ್ಕಳಿಗಾಗಿ ಯಾವಾಗಲೂ ಶ್ರಮಪಡುತ್ತಿದ್ದ ಕೂಲಿಯವನೂ ಸಹ ಈ ಸಬ್ ಪ್ಲೇನಿಗೆ ಬರುವನು. ಭೂಲೋಕದಲ್ಲಿ ವಾಸ ಮಾಡುತ್ತಿದ್ದರೋ, ತಾವು ಯಾವ ಜನರನ್ನು ಪ್ರೀತಿಸುತ್ತಿದ್ದರೋ' ಯಾರನ್ನು ಪೂಜೆ ಮಾಡುತ್ತಿದ್ದರೋ, ಯಾರಿಗೆ ಸಹಾಯವನ್ನು ಮಾಡಿದರೋ, ಅಂತಹ ಮನುಷ್ಯರ ರೂಪಗಳನ್ನು ಚಿಂತನೆಮಾಡಿ, ಮನೋರೂಪಗಳನ್ನು ಕಟ್ಟಿಕೊಂಡು ಅವುಗಳನ್ನು ತಮ್ಮ ಮನಸ್ಸಿಗೆ ತೃಪ್ತಿಯಾಗುವಷ್ಟು ಚೆನ್ನಾಗಿ ಅಲಂಕರಿಸಿ, ಪೂಜೆ ಮಾಡಿ, ಆ ಆನಂದದಿಂದ ತಮ್ಮ ಸ್ವಪ್ರಯೋಜನ ವನ್ನೇ ಮರೆಯುವರು.

ಸ್ವರ್ಗಲೋಕದ **6** ನೇಯ ಉಪಲೋಕದಲ್ಲಿ :

ಭಗವಂತನು ಮನುಷ್ಯ ರೂಪವುಳ್ಳವನು, ಮನುಷ್ಯರಿಗೆ ಇರುವ ಹಾಗೆಯೇ ಅವನಿಗೂ ಸ್ವಭಾವ ಗಳುಂಟು. ಆದರೆ ಅಪಾರವಾದ ಶಕ್ತಿಗಳೂ ಇವೆ. ಅವನನ್ನು ಪ್ರಾರ್ಥಿಸಿದರೆ ಅವನು ನಮ್ಮನ್ನು ಉತ್ತಮ ಸ್ಥಿತಿಗೆ ತರುತ್ತಾನೆ. ಬೇಡಿಕೆಗಳನ್ನು ಸಲ್ಲಿಸದೇ ಹೋದರೆ ನಮಗೆ ಕೇಡು ಉಂಟಾಗುತ್ತದೆ ಎಂದು ನಂಬುತ್ತಿದ್ದ ಜನರು, ಇತರ ದೇವರಿಗಿಂತ ನಮ್ಮ ಊರ ದೇವರೇ ಶ್ರೇಷ್ಠನೆಂದು ನಂಬುತ್ತಿದ್ದವರೂ, ಗಂಡನನ್ನೇ ಎಲ್ಲಕ್ಕಿಂತ ಹೆಚ್ಚಿನ ದೇವರೆಂದು ನಂಬಿಕೊಂಡಿದ್ದ ಸ್ತ್ರೀಯೂ, ತನ್ನ ಮನೆಯಲ್ಲಿ ಒಂದು ವಿಗ್ರಹವನ್ನು ಇಟ್ಟುಕೊಂಡು ಅದಕ್ಕೆ ಎಲ್ಲಾ ಪೂಜೆಗಳನ್ನು ಸಲ್ಲಿಸುತ್ತಿದ್ದವರೂ ಸಹ ಈ ಪ್ರದೇಶದಲ್ಲಿಯೇ ಇರುತ್ತಾರೆ. ಒಂದು ವಿಗ್ರಹವನ್ನೇ ತಮ್ಮ ಸರ್ವಸ್ವವೆಂದು ತಿಳಿದುಕೊಂಡು ಭಕ್ತಿಯನ್ನು ಸಲ್ಲಿಸಿ ಆರಾಧಿಸುತ್ತಿದ್ದವರೂ ಈ ಸಬ್ ಪ್ಲೇನ್‌ನಲ್ಲಿ ತಾವು ಪೂಜೆ ಮಾಡುತ್ತಿದ್ದ ವಿಗ್ರಹದ ರೂಪವನ್ನೇ ಯಾವಾಗಲೂ ಸಮ್ಮುಖದಲ್ಲಿಯೇ ಇರಿಸಿಕೊಂಡು ಮತ್ತೊಂದು ಚಿಂತೆ ಯಾವುದೂ ಇಲ್ಲದೇ ಅದನ್ನು ಪೂಜೆ ಮಾಡಿ ಆನಂದ ಪಡುವರು. ಸ್ವರ್ಗಲೋಕದ ಭೋಗ ಭಾಗ್ಯವನ್ನು ಇವರು ಅನುಭವಿಸುವರು. ಇವರು ನೆನೆದರೆ ಅವಶ್ಯವಾದ ರುಚಿಕರ ಭೋಜನ ಪಾನೀಯಗಳು ಸಿಗುವವು. ಇವರು ಸವಿಜೇನನ್ನು ಅಮೃತವನ್ನು ಸವಿದು ಸಂತೃಪ್ತಿಯಿಂದ ಇರುವರು. ಇವರ ಸುಂದರ ಸುಗಂಧ ಸೂಸುವ ಶರೀರವನ್ನು ಹೊಂದಿ ಸಂತೋಷದಿಂದ ಉಲ್ಲಾಸವಾಗಿ ಸ್ವರ್ಗಸುಖ ಅನುಭವಿಸುವರು. ಅನೇಕ ಮಧುರವಾದ ಸಂಗೀತ, ನಾಟ್ಯಗಳನ್ನು ನೋಡುತ್ತಲೂ ಕೇಳುತ್ತಲೂ ಹರ್ಷದಿಂದಿರುವರು. ಇವರ ಮನಸ್ಸಿನಲ್ಲಿ ಸದ್ಭಾವನೆಗಳೇ ಮೂಡಿ ಯಾವಾಗಲೂ ಆನಂದವಾಗಿರುವರು. ಇದನ್ನೇ ಸ್ವರ್ಗಸುಖವೆನ್ನುವುದು.

ಸ್ವರ್ಗಲೋಕದ **5** ನೇಯ ಉಪಲೋಕದಲ್ಲಿ :

ಶ್ರೀರಾಮಚಂದ್ರನಲ್ಲೋ, ಶ್ರೀಕೃಷ್ಣನಲ್ಲೋ, ಶ್ರೀಯೇಸುಕ್ರಿಸ್ತನಲ್ಲೋ, ಶ್ರೀಮಹಮದ್‌ಪೈಗಂಬರನಲ್ಲೋ, ಶ್ರೀಮಹಾವೀರನಲ್ಲೋ, ಶ್ರೀಬುದ್ಧನಲ್ಲೋ, ಶ್ರೀಬಸವೇಶ್ವರನಲ್ಲೋ, ಶ್ರೀಗುರುನಾನಕ್‌ರಲ್ಲೋ ಬಹಳ ಭಕ್ತಿ ಯಿಟ್ಟು ತಾವು ಅವರ ಹಾಗೆ ಪ್ರಜೆಗಳಿಗೆ ಸೌಖ್ಯವುಂಟು ಮಾಡಬೇಕೆಂದು ಜನರಿಗೆ ಉಪಕಾರವನ್ನು ಮಾಡುತ್ತಿದ್ದವರು. ತಮ್ಮ ಕಷ್ಟ ಕಾಲದಲ್ಲಿ ತಮ್ಮ ಇಷ್ಟದೇವರೇ ಉಪದೇಶ ಮಾಡುವರೆಂದು ನಂಬಿ ಕೊಂಡಿದ್ದವರು ಈ ಪ್ಲೇನಿನಲ್ಲಿ ಇರುತ್ತಾರೆ. ಇವರು ಅನೇಕ ಸ್ವರ್ಗಸುಖಗಳನ್ನು ಅನುಭವಿಸುತ್ತಿರುವರು.

ಸ್ವರ್ಗಲೋಕದ **4** ನೇಯ ಉಪಲೋಕದಲ್ಲಿ :

ಯಾವುದೊಂದು ಸ್ವಪ್ರಯೋಜನ ಉದ್ದೇಶವೂ ಇಲ್ಲದೇ ಕೇವಲ ಪಾರಮಾರ್ಥಿಕ ಉದ್ದೇಶಕ್ಕಾಗಿಯೇ ಭೌತಶಾಸ್ತ್ರವನ್ನು ಪರೀಶೀಲನೆ ಮಾಡುತ್ತಿದ್ದವರು, ಭರತಶಾಸ್ತ್ರ, ಸಂಗೀತಶಾಸ್ತ್ರ, ಮುಂತಾದ ಶಾಸ್ತ್ರಗಳನ್ನು ಮುಂದಕ್ಕೆ ತರಲು ಪ್ರಯತ್ನ ಮಾಡುತ್ತಿದ್ದವರು, ಗ್ರಂಥಗಳನ್ನು ಬರೆಯುತ್ತಿದ್ದವರು ಸ್ವಲ್ಪವಾದರೂ ಸ್ವಾರ್ಥತೆ ಯಿಲ್ಲದೆ ಲೋಕಸೇವೆ ಮಾಡುತ್ತಿದ್ದ ಜನರು ಈ ಲೋಕಕ್ಕೆ ಬರುತ್ತಾರೆ. ತಾವು ವಾಸ ಮಾಡುತ್ತಿದ್ದಾಗ ಯಾವ ಯಾವ ವಿಧವಾದ ಶಾಸ್ತ್ರಗಳನ್ನು ಅಭ್ಯಾಸ ಮಾಡುತ್ತಿದ್ದರೋ ಅಂತಹ ಶಾಸ್ತ್ರಗಳನ್ನೇ ಈ ಸಬ್ ಪ್ಲೇನಿನಲ್ಲಿ ಆಯಾ ಶಾಸ್ತ್ರಗಳ ನಿರ್ಮಾಣಕರಾದ ಆದಿ ಪುರುಷರಿಂದ ಅಭ್ಯಾಸ ಮಾಡಿ ಬಹಳ ಸಂತೋಷ ಪಡುವರು.

ಒಟ್ಟಿನಲ್ಲಿ ಭೂಲೋಕದಲ್ಲಿ ನಿಷ್ಕಾಮ ಕರ್ಮಗಳಿಂದ ಉಂಟಾಗುವ ಎಲ್ಲಾ ಫಲಗಳನ್ನು ಕೆಳಭಾಗದ ಸ್ವರ್ಗಲೋಕವೆಂದು ಹೇಳಲ್ಪಡುವ ಉಪಲೋಕಗಳಲ್ಲಿ ಜನರು ಅನುಭವಿಸುತ್ತಾರೆ.

ಇನ್ನೂ ಉತ್ತಮವಾದ ಸ್ವರ್ಗಲೋಕದ ಮೇಲಿನ ಉಪಲೋಕಗಳಾದ **3, 2,** ಮತ್ತು **1** ನೇಯ ಉಪಲೋಕಗಳಲ್ಲಿ ಸತ್ಪುರುಷರಾಗಿದ್ದ ಸದ್ಗುರುಗಳು, ಬಾಬಾಗಳು, ಮೌಲ್ವಿಗಳು ಪಾದ್ರಿಗಳು ವಾಸಿಸುತ್ತಾರೆ. ಇವರು ಭೂಲೋಕದಲ್ಲಿ ಹುಟ್ಟಿದಾಗ ಕೆಲವು ಮಧ್ಯಮ ಮತ್ತು ಉತ್ತಮ ಸಿದ್ಧಿಗಳನ್ನು ಪಡೆದು ಲೋಕ ಕಲ್ಯಾಣಕ್ಕಾಗಿ ನಿಷ್ಕಲ್ಮಶ ಮನಸ್ಸಿನಿಂದ ಸೇವೆ ಸಲ್ಲಿಸುತ್ತಿದ್ದವರು. ಇವರು ಭೂಲೋಕದಲ್ಲಿರುವ ತಮ್ಮ ಶಿಷ್ಯರ ಪರಕಾಯ ಪ್ರವೇಶ ಮಾಡಿ ಶಿಷ್ಯರ ಜನರ ಮತ್ತು ವಿಜ್ಞಾನಿಗಳ ಸಂಶಯವನ್ನು ನಿವಾರಣೆ ಮಾಡಿ ಅವರಿಗೆ ಸದ್ಬುದ್ಧಿ, ಜ್ಞಾನವನ್ನು ಉಂಟುಮಾಡುತ್ತಿರುವರು.

ಕೆಲವರು ಅನೇಕ ಗುರು ಪೀಠವನ್ನು ಅಲಂಕರಿಸಿ ಜನಗಳ ಸೇವೆ ಮಾಡಬೇಕೆಂಬ ಉದ್ದೇಶದಿಂದ ಧರ್ಮಛತ್ರಗಳನ್ನು, ಶಾಲಾ ಕಾಲೇಜಗಳನ್ನು ತೆಗೆದು ಪುಣ್ಯ ಕಟ್ಟಿಕೊಳ್ಳುತ್ತಾರೆ. ಇಂತಹ ಮಹಾತ್ಮರು ತಮ್ಮಲ್ಲಿಗೆ ಬರುವ ಎಲ್ಲರನ್ನು ಬಡವ, ಶ್ರೀಮಂತ, ಪ್ರಭಾವಶಾಲಿ, ಸ್ವಜಾತಿ ಅನ್ಯಜಾತಿ, ರೂಪವಂತ, ಕುರೂಪಿ, ಹೆಂಗಸು, ಗಂಡಸು, ನೀಚ, ಉತ್ತಮ, ನಮ್ಮ ದೇಶದವನು, ಹೊರಗಿನ ದೇಶದವನು, ಎಂಬ ಯಾವ ತಾರತಮ್ಯವೂ ಇಲ್ಲದೆ ಸಮಾನ ಮನೋಭಾವದಿಂದ ಕಾಣುತ್ತಾರೆ. ಅವರು ಎಲ್ಲರಲ್ಲಿಯೂ ಇರುವ ಜೀವಾತ್ಮನು ಒಂದೇ ಆದುದರಿಂದ ನಿಮ್ಮಲ್ಲಿರುವ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಳ್ಳಿ. ನೀವೇ ದೇವರ ಅಂಶ, ನೀವೇ ದೇವರು ಎಂದು ಶಿಷ್ಯರನ್ನು ಸನ್ಮಾರ್ಗಕ್ಕೆ ಪ್ರಚೋದಿಸಿ ತಮ್ಮ ಬಗ್ಗೆ ಏನನ್ನೂ ಹೇಳಿಕೊಳ್ಳದೇ ಸರಳ ರೀತಿಯ ಜೀವನ ನಡೆಸಿ ಆದರ್ಶಮೂರ್ತಿಗಳಾಗಿರುವರು. ಇಂಥ ಗುರುಗಳು ಬಾಬಾಗಳು ಮತ್ತೊಮ್ಮೆ ಭೂಲೋಕದಲ್ಲಿ ಜನಿಸಿದಾಗ ಉತ್ತಮ ಜ್ಞಾನಿಗಳಾಗಿ ಸರ್ವಸಂಪತ್ತನ್ನು ಉಳ್ಳವರಾಗಿ ಅದನ್ನು ಲೋಕ ಕಲ್ಯಾಣಕ್ಕೆ ವಿನಿಯೋಗಿಸುವರು. ಅವರ ಶಿಷ್ಯರಾಗಿದ್ದವರು ಸಹ ಉತ್ತಮ ಕುಲದಲ್ಲಿ ಹುಟ್ಟಿ ಮೇಧಾವಿಗಳಾಗಿ ಜನರ ಹಿತಕ್ಕಾಗಿ ತಮ್ಮ ಜನ್ಮವನ್ನು ಮುಡುಪಾಗಿಟ್ಟು ಸೇವೆ ಸಲ್ಲಿಸುವರು. ಇವರೇ ಹಿಂದಿನ ಜನ್ಮಗಳಲ್ಲಿ ಶ್ರೀ ರಾಮಚಂದ್ರನ ವಂಶಕ್ಕೆ ಸೇರಿದ ದೇವತೆಗಳು.

ಭೂಲೋಕದಲ್ಲಿ **50- 60** ವರ್ಷಗಳವರಿಗೂ ಜೀವಿಸಿ ಅನೇಕ ಕೆಟ್ಟ ಕೆಲಸಗಳನ್ನು ಮಾಡಿ ಜನರು **40-50** ವರ್ಷಗಳ ಕಾಲದಲ್ಲಿ ಅದರ ಫಲರೂಪವಾದ ಕಷ್ಟಗಳನ್ನೆಲ್ಲಾ ಅನುಭವಿಸುವರು. ಇದೇ ರೀತಿ ಯಾಗಿಯೇ ಭೂಲೋಕದಲ್ಲಿ ವಾಸಮಾಡುವಾಗ ನಿಷ್ಕಾರ್ಮವಾಗಿ ಭಕ್ತಿಯಿಂದ ಒಳ್ಳೆಯ ಕೆಲಸಗಳನ್ನು ಮಾಡಿದ ಜನರು ಸ್ವರ್ಗಲೋಕದಲ್ಲಿ ಒಂದು ಸಾವಿರವರ್ಷಗಳವರೆವಿಗೆ ವಾಸಮಾಡಿ ತಮ್ಮ ಜ್ಞಾನಶಕ್ತಿಯನ್ನು ವೃದ್ಧಿಪಡಿಸಿಕೊಳ್ಳುವರು.

ಈ ರೀತಿ ವ್ಯಕ್ತಿ ಸತ್ತ ಮೇಲೆ ಆತನ ಕರ್ಮಗಳಿಗೆ ತಕ್ಕಂತೆ ಭುವರ್ಲೋಕದಲ್ಲಿ ಮತ್ತು ಸ್ವರ್ಗಲೋಕದಲ್ಲಿ ಕಾಮಶರೀರ ಮತ್ತು ಅಶುದ್ಧ ಮನೋಮಯ ಶರೀರದ ಎಲ್ಲಾ ಕೆಲಸಗಳು ಪೂರೈಸಿದ

ತರುವಾಯ ಅವುಗಳಲ್ಲಿದ್ದ ಎಲ್ಲಾ ಶಕ್ತಿಗಳು ಚದರಿ ಹೋಗುವುವು. ಆಗ ಜೀವಾತ್ಮನು ಶುದ್ಧ ಮನೋಮಯ ಕೋಶದಲ್ಲಿ ಸೇರಿಹೋಗುವನು. ಈ ಶುದ್ಧ ಮನೋಮಯ ದೇಹವನ್ನು ಜೀವಾತ್ಮನ ಖಾಯಂ ದೇಹವೆಂದೇ ನಾವು ಧಾರಾಳವಾಗಿ ಹೇಳಬಹುದು. ಈ ದೇಹದೊಂದಿಗೆ ಜೀವಾತ್ಮನು ಮಹರ್ಲೋಕದಲ್ಲಿ ಶಾಶ್ವತಸ್ಥಿತಿಗೆ ಬರುವನು. ಮಹರ್ಲೋಕದಲ್ಲಿ ಕೆಳಗಿನ ಮೂರುಲೋಕಗಳಲ್ಲಿ ತನ್ನ ಮೂರು ಶರೀರಗಳಿಂದ ತಾನು ಪಡೆದ ಅನುಭವಗಳಿಂದ ತನಗೆ ಉಂಟಾದ ಲಾಭನಷ್ಟಗಳ ಲೆಕ್ಕವನ್ನು ವಿಮರ್ಶೆ ಮಾಡಿಕೊಳ್ಳುವನು.

ತನ್ನ ಮನೆಯಾದ ಮಹರ್ಲೋಕದಿಂದ ಜೀವಾತ್ಮನು ಮತ್ತೆ ಭುವರ್ಲೋಕದ ಉಪಲೋಕಗಳ ಮುಖಾಂತರ ಭೂಲೋಕಕ್ಕೆ ಬಂದು ಇಲ್ಲಿ **50-60** ವರ್ಷಗಳ ಕಾಲ ಜೀವಿಸಿ, ಇಲ್ಲಿ ಅನುಭವಹೊಂದಿ ಕರ್ಮಕ್ಕೆ ತಕ್ಕಂತೆ ಕಾಮಲೋಕ ಮತ್ತು ಸ್ವರ್ಗಲೋಕಗಳಲ್ಲಿ ಅನುಭವಹೊಂದಿ ಮಹರ್ಲೋಕಕ್ಕೆ ಹಿಂದಿರುಗುವನು. ಈ ರೀತಿ ಜೀವಾತ್ಮನಿಗೆ ಜ್ಞಾನೋದಯವಾಗುವವರೆಗೂ " ಪುನರಪಿ ಜನನಂ ಪುನರಪಿ ಮರಣಂ " ಉಂಟಾಗುತ್ತಿರುತ್ತದೆ. ಭೂಲೋಕದಲ್ಲಿ ಮನುಷ್ಯನಿಗೆ ತತ್, ತ್ವಂ, ಅಸಿ ಅಂದರೆ ಜೀವವೂ-ಬ್ರಹ್ಮವೂ ಬೇರೆಯಲ್ಲ ಎಂಬ ಜ್ಞಾನೋತ್ಪತ್ತಿಯಾದಾಗ ಜೀವನು ಈಶ್ವರತ್ವ ಪಡೆಯಲೂ ಯೋಗಮಾರ್ಗವನ್ನು ಅನುಸರಿಸುತ್ತಾನೆ.

ಯೋಗವೆಂದರೆ ಜೀವಾತ್ಮರನ್ನು ಬ್ರಹ್ಮದ ಜೊತೆಗೆ ಒಂದುಗೂಡಿಸುವುದು. ಆಗ ಗುರುವಿನಿಂದ ಜ್ಞಾನದ ಅನುಭವ ಅವರಿಗೆ ಉಂಟಾಗುವುದು. ಗುರುವು ಜೀವರಿಗೆ ರಾಜಯೋಗ, ಭಕ್ತಿಯೋಗ, ಜ್ಞಾನಯೋಗ, ಲಯಯೋಗ, ಕರ್ಮಯೋಗವೆಂಬ ಯೋಗಮಾರ್ಗಗಳನ್ನು ಅನುಸರಿಸಲು ತಿಳಿಸಿದರು. ಈ ಯೋಗ ಮಾರ್ಗಗಳನ್ನು ಅನುಸರಿಸಿ ಜೀವಾತ್ಮರು ಅನೇಕ ಜನ್ಮದ ಯೋಗಸಾಧನೆಯಿಂದ ಪರಬ್ರಹ್ಮದಲ್ಲಿ ಮತ್ತೆ ವಿಲೀನವಾಗಿ ಸಾಕ್ಷಾತ್ಕಾರ ಹೊಂದುವರು. ಆ ಕ್ರಮದ ರಹಸ್ಯ ಹೀಗಿದೆ.

ಸುಮಾರು ಆರು ಅಡಿ ಉದ್ದದ ಈ ಮಾನವ ಶರೀರದ ಇಂದ್ರಿಯಗಳ ಪ್ರಜ್ಞೆ, ಯೋಚನೆ ಮತ್ತು ವಿವೇಚನೆಯಲ್ಲಿ ಪ್ರಪಂಚದ ಅಸ್ತಿತ್ವ, ಅದು ಅಸ್ತಿತ್ವಕ್ಕೆ ಬಂದ ರೀತಿ, ಅಸ್ತಿತ್ವದಿಂದ ಕೊನೆಯಾಗುವ ಕ್ರಮಗಳು ಅಡಕವಾಗಿವೆ.

ಮನುಷ್ಯನಾಗಲೀ ಪ್ರಾಣಿಯಾಗಲಿ ಯಾವುದೇ ವಸ್ತುವಾಗಲೀ ಅದು ಮೂಲತಃ " ದೈವೀಚೇತನ " ಎಂಬುದು ವಾಸ್ತವ ಸತ್ಯ. ಪ್ರತಿಯೊಬ್ಬರಲ್ಲೂ ಸಾವಿಲ್ಲದ ನೋವಿಲ್ಲದ ದೇಶ ಕಾಲದ ನಿಯಮಗಳಿಗೆ ಅಧೀನವಾಗದ ಸತ್ವ, ಸತ್ಯ ಅಡಗಿದೆ.

ಪ್ರತಿಯೊಂದು ಜೀವಿಯಲ್ಲೂ ಭಗವಂತನಿದ್ದಾನೆ. ಆ ಭಗವಂತನು ಆತ್ಮಜ್ಯೋತಿಯ ರೂಪದಲ್ಲಿದ್ದಾನೆ. ಅದೇ ಸಾವಿಲ್ಲದ ನೋವಿಲ್ಲದ ಶಾಶ್ವತವಾದ ಅರಿವಿನ ಬೆಳಕು. ಅದೇ ಸತ್ಯದ ಬೆಳಕು. ಅದೇ ಸಚ್ಚಿದಾನಂದ ದ ಬೆಳಕು.

ಜಾತಿ, ಮತ, ಕುಲ, ಗೋತ್ರ ಭೇದವಿಲ್ಲದೆ - ಬಲಿಷ್ಠ, ದುರ್ಬಲ, ಶ್ರೀಮಂತ, ಬಡವ ಎಂಬ ತಾರತಮ್ಯ ವಿಲ್ಲದೆ ಪ್ರತಿಯೊಬ್ಬ ವ್ಯಕ್ತಿಯಲ್ಲೂ ಎಂದೆಂದೂ ನಂದದೆ ಎಲ್ಲರಲ್ಲೂ ಬೆಳುಗುತ್ತಿರುವ ಆ ಆತ್ಮಜ್ಯೋತಿಯೇ ಅಮರ ಜ್ಯೋತಿ, ಅಖಂಡ ಜ್ಯೋತಿ.

ಇದು ಸಂತನಲ್ಲೂ, ಸಾಮಾನ್ಯನಲ್ಲೂ, ಸಂತುಷ್ಟನಲ್ಲೂ, ದುಃಖಿತನಲ್ಲೂ, ನೀತಿನಿಷ್ಠನಲ್ಲೂ, ನೀತಿಬಾಹಿರ ದುಷ್ಟನಲ್ಲೂ, ಸುಂದರ ವ್ಯಕ್ತಿಯಲ್ಲೂ, ಕುರೂಪಿಯಲ್ಲೂ, ಪ್ರಾಣಿಗಳಲ್ಲೂ, ಎಲ್ಲರಲ್ಲೂ, ಎಲ್ಲೆಲ್ಲೂ ಬೆಳಗುತ್ತಿರುವ ಜ್ಯೋತಿಯೇ ಈ ಆತ್ಮಜ್ಯೋತಿ.

ಎಲ್ಲರೂ ಈ ದಿವ್ಯಜ್ಯೋತಿಯಾದ ಸಾಗರದಿಂದಲೇ ಬಂದವರು. ಪ್ರತಿಯೊಂದು ಜೀವಿಯ ಹಿನ್ನೆಲೆಯಲ್ಲಿರುವ ಪರಮಸತ್ಯ ಇದೊಂದೇ. ಪರಿಪೂರ್ಣ ಸತ್ಯ ಇದೊಂದೇ. ಇದೇ ಪರಮಾರ್ಥ ಸತ್ಯ. ಇದೇ ವಿಶ್ವದ ಮೂಲಭೂತ ಏಕತೆ. ಇದೇ ವಿಶ್ವಪ್ರಜ್ಞೆ.

ನಮ್ಮಲ್ಲಿರುವ ಈ ಅಪಾರಶಕ್ತಿಯ ಜ್ಯೋತಿಯನ್ನು ನಾವು ಮನಗಂಡಾಗಲೇ ನಮ್ಮಲ್ಲಿ ಸತ್ಯದ ಬೆಳಕು ಹರಿಯುತ್ತದೆ. ಶ್ರದ್ಧೆಯೊಂದೇ ಅದನ್ನು ಪ್ರಕಟಗೊಳಿಸುವ ಸಾಧನ ಮಾರ್ಗ.

ಒಬ್ಬನು ಈ ಪ್ರಕೃತಿಗುಣಗಳ ವಿಷಯದಲ್ಲಿ ಕರ್ಮವಿಜ್ಞಾನವನ್ನು ತಿಳಿದುಕೊಳ್ಳದಿದ್ದರೆ ಅವನ ಜೀವನ ದಾರಿ ತಪ್ಪುತ್ತದೆ. ಕರ್ಮವಿಜ್ಞಾನವನ್ನು ತಿಳಿದುಕೊಂಡರೆ ಆಧ್ಯಾತ್ಮ ಜೀವನವನ್ನು ಅಳವಡಿಸಿಕೊಂಡು ದಿವ್ಯವೇದಿಕೆಯನ್ನು ಹೊಂದಿ ಪರಮಾನಂದವನ್ನು, ಪರಂಧಾಮವನ್ನು ಪಡೆಯಬಹುದು.

ತ್ರಿಗುಣ ಜ್ಞಾನಿಯಾದವನು ಭೌತಿಕ ಪ್ರಕೃತಿಗುಣಗಳ ಪ್ರಭಾವದಿಂದ ನಿಯಂತ್ರಿತನಲ್ಲ. ಅದರಿಂದ ಆತನು ಮುಕ್ತನು. ಆ ತ್ರಿಗುಣ ಜ್ಞಾನಿಯಾದವನು ಭೌತಿಕದೇಹ ಸಂಬಂಧ ತ್ರಿಗುಣಗಳನ್ನು ದಾಟಿದಾಗ ಜನನ ಮರಣ ಚಕ್ರದಿಂದ ಮುಕ್ತನಾಗಬಲ್ಲನು. ಮತ್ತು ಈ ದೇಹದಲ್ಲಿಯೇ ಅವನು ಆಧ್ಯಾತ್ಮ ಜೀವನವನ್ನು ಅನುಭವಿಸಬಲ್ಲನು.

ಒಬ್ಬನು ಭೌತಿಕ ಪ್ರಕೃತಿಗುಣಗಳ ಪ್ರಭಾವದಿಂದ ಮುಕ್ತನಾದಾಗ ಮಹಾಭಾವದಿಂದ ಭಕ್ತಿಯುತ ಸೇವೆಯಲ್ಲಿ ಪ್ರವೇಶಿಸುತ್ತಾನೆ. ಭಕ್ತಿಯುತ ಸೇವೆಯು ಭೌತಿಕ ಬಂಧನದಿಂದ ಬಿಡುಗಡೆ ಮಾಡಿ ಮುಕ್ತಿಯನ್ನು ನೀಡುತ್ತದೆ.

ಏಕೆಂದರೆ ಮಹಾಭಾವಸ್ಥಿತನಾದ ದೇಹವು ಭೋಗ ಬಯಸುವುದಿಲ್ಲ. ಅವನು ಎಲ್ಲಾ ಭೌತಿಕ ಚಟುವಟಿಕೆಗಳಲ್ಲಿ ಸಮಭಾವದಿಂದ ವರ್ತಿಸುವನು. ಮಿಥ್ಯವಾದ ಮಾನಾಪಮಾನಗಳಿಂದ ಪ್ರಭಾವಿತನಲ್ಲ. ತನ್ನನ್ನು ಗೌರವಿಸದಿರುವುದನ್ನು ಗಮನಿಸುವುದಿಲ್ಲ. ಕಲ್ಲೇ ಇರಲಿ ಅಥವಾ ಬಂಗಾರದ ತುಂಡೇ ಇರಲಿ ಅದನ್ನು ಸಮಾನವಾಗಿ ಕಾಣುವನು. ಪ್ರಿಯ ಮತ್ತು ವೈರಿಗಳನ್ನು ಸಮಾನವಾಗಿ ನೋಡುವನು. ನಿಂದೆ ಮತ್ತು ಸ್ತುತಿ ಮಾಡುವವರನ್ನು ಸಮಾನವಾಗಿ ನೋಡುವನು.

ವ್ಯಕ್ತಿಯು ಪ್ರಕೃತಿ ಗುಣಗಳನ್ನು ದಾಟಿದಾಗ ಮಹಾಭಾವದಲ್ಲಿ ಎಲ್ಲಾ ರೂಪಗಳು ಪೂರ್ಣವಾಗಿ, ದಿವ್ಯವಾಗಿ, ಆನಂದಮಯವಾಗಿ, ಜ್ಞಾನಪೂರ್ಣವಾಗಿ ನಿತ್ಯವಾದವುಗಳಾಗಿರುತ್ತವೆ.

ಭೌತಿಕವಾದ ಪ್ರಕೃತಿ ಗುಣಗಳನ್ನು ದಾಟುವುದು ಕಷ್ಟಸಾಧ್ಯವಾಗಿದ್ದರೂ ಮಾನವನು ಮಹಾಭಾವದಲ್ಲಿ ತೊಡಗಿದರೆ ಸಹಜವಾಗಿ ಅವುಗಳನ್ನು ಅವನು ದಾಟಬಲ್ಲನು. ಬ್ರಹ್ಮನ್ ಆಗಿ ಪರಬ್ರಹ್ಮತ್ವವನ್ನು ಹೊಂದಬಹುದು.

ಬ್ರಹ್ಮನ್ ದಿವ್ಯ ಸಾಕ್ಷಾತ್ಕಾರದ ಪ್ರಾರಂಭ.

ಪರಮಾತ್ಮನು ಮಧ್ಯದಲ್ಲಿರುವ ದಿವ್ಯ ಸಾಕ್ಷಾತ್ಕಾರದಲ್ಲಿ ಎರಡನೆಯ ಹಂತ.

ಪರಮದೇವೋತ್ತಮ ಪುರುಷನು ಪರತತ್ವದ ಅಂತಿಮ ಸಾಕ್ಷಾತ್ಕಾರ.

ಈ ರೀತಿ ಜ್ಞಾನಸ್ಥಿತನಾಗಿ ಮಾನವನು ದಿವ್ಯ ಪ್ರಕೃತಿಯನ್ನು ಹೊಂದಿ ಪ್ರತಿಷ್ಠಿತನಾದಾಗ ಅವನು ಸೃಷ್ಟಿಕಾಲದಲ್ಲಿ ಹುಟ್ಟುವುದಿಲ್ಲ ಅಥವಾ ಪ್ರಳಯದಲ್ಲಿ ನಾಶವಾಗುವುದಿಲ್ಲ.

ಜೀವನವನ್ನು ಯಜ್ಞವೆಂದು ಭಾವಿಸುವವನಿಗೆ ಕರ್ಮದಿಂದ ಪಾಪವು ಎಂದಿಗೂ ಬರುವುದಿಲ್ಲ. ಇಹಪರಗಳೆರಡರ ಬಂಧನದಿಂದಲೂ ಮುಕ್ತರಾದ ಜ್ಞಾನಿಗಳೂ ಕೂಡ ಸಾಮಾನ್ಯ ಜನರಂತೆ ಕರ್ಮ ಮಾಡುವರು. ಅವರು ಫಲಾಪೇಕ್ಷೆಯಿಲ್ಲದೆ ಕೆಲಸ ಮಾಡುವರು. ಅಹಂಕರ್ತಾ ಎಂಬ ಭಾವನೆಯಿಲ್ಲದೆ ಜೀವನ ನಡೆಸುವರು.

ಪರಮ ದಿವ್ಯಲೋಕಗಳನ್ನು ತಲುಪಿದ ಮುಕ್ತಾತ್ಮರು ಪರಮದೇವೋತ್ತಮನ ದಿವ್ಯಪ್ರೇಮ ಸೇವಾ ನಿರತರಾಗಿ ಮೋಕ್ಷಾನಂತರ ವ್ಯಕ್ತಿಗತ ಆತ್ಮನ ವ್ಯಕ್ತಿತ್ವವನ್ನು ಕಳೆದುಕೊಳ್ಳದೆ ಆನಂದವಾಗಿರುವರು.

ಈ ರೀತಿ ಮಾನವರು ಪರಿಪೂರ್ಣ ದಿವ್ಯಜ್ಞಾನವನ್ನು ಪಡೆದಾಗ ತ್ರಿಗುಣಗಳಿಂದ ಮುಕ್ತರಾಗಿ ಜನನ ಮರಣಗಳಿಂದ ಬಿಡುಗಡೆಹೊಂದಿ, ಪರಮ ದೇವೋತ್ತಮ ಪುರುಷನೊಡನೆ ಸಮ್ಮಿಲನಹೊಂದಿ ಅವನಲ್ಲೇ ಲೀನರಾಗಿ ಸಮಾನತೆಯನ್ನು ಹೊಂದುತ್ತಾರೆ.

ಮನುಷ್ಯ ಸಾಮಾನ್ಯವಾಗಿ ಭೋಗಾಭಿಲಾಷಿ. ಸುಖವನ್ನು ತ್ಯಾಗಮಾಡಲಾರ, ದುಃಖವನ್ನುಮಾತ್ರ ಸದಾ ಬೇಡವೆನ್ನುತ್ತಾನೆ. ಸಾಮಾನ್ಯ ಮನುಷ್ಯನು ತಾನು ಸಂಪಾದಿಸಿದ ಆಸ್ತಿಯನ್ನು ಮತ್ತೊಬ್ಬರಿಗೆ ಕೊಡಬಲ್ಲ. ಆ ಆಸ್ತಿಯನ್ನು ಒಂದು ಸಾರಿ ಅವನು ಮತ್ತೊಬ್ಬರಿಗೆ ದಾನ ಮಾಡಿದರೆ ಅದು ಮಗಿದು ಹೋಯಿತು. ಅದನ್ನು ಅವನು ಕಳೆದುಕೊಂಡಂತೆಯೇ. ಜ್ಞಾನವನ್ನು ದಾನಮಾಡಿದರೆ ಅದು ಎಂದಿಗೂ ಬತ್ತದು. ಉರಿಯುತ್ತಿರುವ  ಒಂದೇ ಒಂದು ಜ್ಯೋತಿಯಿಂದ ಪ್ರಪಂಚಕ್ಕೆಲ್ಲಾ ಬೆಳಕನ್ನು ನೀಡುವಷ್ಟು ಅಸಂಖ್ಯಾತ ಜ್ಯೋತಿಗಳನ್ನು (ಸೊಡರುಗಳನ್ನು) ಹೊತ್ತಿಸಬಹುದು.  ಹಾಗೆಯೇ ಜ್ಞಾನ.

ಎಲ್ಲಾ ದುರ್ಭಾವನೆಗಳ ಬೇರನ್ನು ಕಿತ್ತೊಗೆದು ಕಾಯಾ, ವಾಚಾ, ಮನಸಾ ಪರಿಶುದ್ಧವಾಗಿ ಅಹಂಕಾರ ಮತ್ತು ಆಸೆಯನ್ನು ಜ್ಞಾನದಿಂದ ದಹಿಸಿ ನೀವು ಬ್ರಹ್ಮ ಸಮಾಧಿಯಲ್ಲಿ ಸ್ಥಿತರಾದಾಗ ನಾಮ, ರೂಪ, ಅಹಂಕಾರ ಎಲ್ಲವೂ ಸುಟ್ಟು ಹೋಗುತ್ತವೆ. ಅನಂತರ ನಿಮ್ಮ ಆತ್ಮಸಾಕ್ಷಾತ್ಕಾರಕ್ಕೆ ದಾರಿ ತನ್ನಷ್ಟಕ್ಕೆ ತಾನೇ ತೆರೆಯುವುದು. ಆ ದಾರಿಯಲ್ಲಿ ನಿರ್ಭಯವಾಗಿ ನುಗ್ಗಿ ಸ್ಥಿತಪ್ರಜ್ಞನಾಗು. ಆಗ ನಿತ್ಯಸತ್ಯವೂ  ನಿತ್ಯಶುದ್ಧವೂ, ಮುಕ್ತವೂ, ಕಾಲ ದೇಶಗಳನ್ನು ಮೀರಿ ನಿಂತಿರುವುದೂ ಆದ ಪರಬ್ರಹ್ಮ ವೊಂದೇ ಸತ್ಯ ಎಂಬ ಅರಿವು ನಿನಗಾಗುತ್ತದೆ.

''ಸರ್ವವೂ ಬ್ರಹ್ಮವೇ ಅಲ್ಲದೇ ಬೇರೆ ಏನೂ ಇಲ್ಲ. ಪರಿಶುದ್ಧವಾದ ಬ್ರಹ್ಮಕ್ಕೆ ಸ್ವರೂಪವೇ ಇಲ್ಲ. ಅಲ್ಲಿ, ಇಲ್ಲಿ, ಮುಂದೆ, ಹಿಂದೆ, ಬಲಗಡೆ, ಎಡಗಡೆ,  ಕೆಳಗೆ, ಮೇಲೆ, ಎಲ್ಲಾಕಡೆಯೂ ಪರಿಪೂರ್ಣ ಪರಬ್ರಹ್ಮವು ಒಂದೇ ಇರುವುದು ಬೇರೆ ಏನೂ ಇಲ್ಲ. ಭ್ರಾಂತಿರೂಪವಾದ ಈ ಜಗತ್ತು ಇಲ್ಲವೇ ಇಲ್ಲ. ಆ ಪರಬ್ರಹ್ಮವು ನಿನ್ನ ಕರ್ಮರಹಿತವಾದ ನಿಜಸ್ವರೂಪವೆಂದು ಅರಿ.

ಈ ದೇಹವನ್ನೂ, ಮನಸ್ಸನ್ನೂ, ಬುದ್ಧಿಯನ್ನೂ, ಅದರ ವೃತ್ತಿಗಳನ್ನೂ, ಜೀವವನ್ನೂ ಯಾವ ಜ್ಞಾನ ತಿಳಿಯುತ್ತಿರುವುದೋ ಅದೇ ಸರ್ವಸಾಕ್ಷಿಯಂತಲೂ, ಆತ್ಮನೆಂತಲೂ, ಬ್ರಹ್ಮವೆಂತಲೂ, ಶುದ್ಧ ಅರಿವೆಂತಲೂ, ಶುದ್ಧ ಚೈತನ್ಯವೆಂತಲೂ, ಪ್ರಜ್ಞಾವೆಂತಲೂ, ಕೂಟಸ್ಥನೆಂತಲೂ, ಅಚಲನೆಂತಲೂ ಹೇಳಲ್ಪಡುವುದು. ಆ ಜ್ಞಾನವೇ ನೀನೆಂದು ತನ್ಮಯನಾಗಿರು.

ಜಾಗ್ರತ, ಸ್ವಪ್ನ, ಸುಷುಪ್ತಿ ಎಂಬ ಮೂರವಸ್ಥೆಗಳಲ್ಲಿ ತೋರುವ ಸರ್ವಪದಾರ್ಥವನ್ನೂ, ಜ್ಞಾನಾಜ್ಞೇಯ ಗಳನ್ನೂ, ಧ್ಯಾನಾಧ್ಯೇಯಗಳನ್ನೂ, ಲಕ್ಷ್ಯಾಲಕ್ಷ್ಯಗಳನ್ನೂ, ದೃಶ್ಯಾದೃಶ್ಯಗಳನ್ನೂ, ಊಹಾಪೋಹಗಳನ್ನೂ, ಸರ್ವವನ್ನೂ ಮಿಥ್ಯವೆಂದರಿತು, ಭ್ರಾಂತಿಇಲ್ಲದವನಾಗಿ, ಅಹಂಕಾರ ನಾಶವಾಗಿ ಸರ್ವಸಾಕ್ಷಿಯಾದ ತಾನೇ ಬ್ರಹ್ಮವೆಂದು ಸದಾ ತನ್ನಲ್ಲಿ ತನ್ನನ್ನು ನೋಡುತ್ತಾ ಸಾಕ್ಷಿಯಾಗಿ ಬ್ರಹ್ಮಾಕಾರದಿಂದಿರುವವನೇ ಜೀವನ್ಮುಕ್ತನು.

ಆತ್ಮನು ಬೇರೆ ಪರಬ್ರಹ್ಮವು ಬೇರೆ ಎಂದು ಭೇದ ಎಣಿಸುವವರು ಜನನ ಮರಣಗಳ ಚಕ್ರದಲ್ಲಿ ಸಿಲುಕಿ ಪುನರ್ಜನ್ಮ ಪಡೆಯುವರು. ಸತ್ಯವೇ ಜ್ಞಾನ' ಭ್ರಾಂತಿಯೇ ಅಜ್ಞಾನ. ಇದನ್ನು ಅರಿಯುವುದೇ ಮುಕ್ತಿಗೆ ನಾಂದಿ.

ಈ ಶರೀರದಲ್ಲಿ ಆತ್ಮನು ತನಗೆ ಶರೀರವಿಲ್ಲದೆ ನಾಶರಹಿತನಾಗಿ ವಾಸಿಸುತ್ತಿದ್ದಾನೆ. ಈ ಆತ್ಮನೇ ಪರಬ್ರಹ್ಮವು. ಈ ಲೋಕದಲ್ಲಿ, ಈ ಶರೀರದಲ್ಲಿರುವ ಈ ಆತ್ಮನೇ ಆ ಪರಲೋಕದಲ್ಲಿ ಪರಬ್ರಹ್ಮನಾಗಿರುವನು. ಆ ಪರಲೋಕದಲ್ಲಿ ಪರಬ್ರಹ್ಮವೇ ಈ ಲೋಕದಲ್ಲಿ ಈ ಶರೀರದಲ್ಲಿ ಆತ್ಮಸ್ವರೂಪದಿಂದ ನಿವಾಸಿಯಾಗಿರುವನು.

ಬ್ರಹ್ಮಜ್ಞಾನವಿಲ್ಲದೆ ವ್ಯರ್ಥವಾಗಿ ಮೂಢ ವೈರಾಗ್ಯದಿಂದ ಆಶ್ರಮ ಸನ್ಯಾಸವನ್ನು ತೆಗೆದುಕೊಂಡು ತಾಯಿ, ತಂದೆ, ಪುತ್ರ, ಪುತ್ರಿ, ಗೃಹಗಳನ್ನು ಬಿಟ್ಟು ಹೋಗುವುದು ವ್ಯರ್ಥವಾಗುವುದು.

ಕಾಮಕ್ರೋಧಾದಿಗಳನ್ನು ಬಿಟ್ಟು ತಿರುಗುವವನೇ ಮುಕ್ತನು. ಮಿಕ್ಕ ವೇಷಧಾರಿಗಳಾದ ಸನ್ಯಾಸಿಗಳು ಮುಕ್ತಿಹೊಂದಲಾರರು. ಜ್ಞಾನ ನಮ್ಮ ಸಂಶಯ, ಭಯ, ಚಿಂತೆಗಳನ್ನು ಪರಿಹಾರ ಮಾಡುತ್ತದೆ. ಜ್ಞಾನಕ್ಕೆ ಪಾಪ ಪರಿಹಾರ ಮಾಡುವ ಶಕ್ತಿಯೂ, ಕರ್ಮ ಬಂಧನವನ್ನು ಕಡಿದು ಹಾಕುವ ಶಕ್ತಿಯೂ ಉಂಟು. ಜ್ಞಾನದಷ್ಟು ಪವಿತ್ರವಾದ ಶುಭಪ್ರದವಾದ ಇದಕ್ಕೆ ಸಮನಾದ ವಿಷಯ ಮತ್ತೊಂದಿಲ್ಲ.

ನೀನು, ಭಗವಂತ ಎರಡೂ ಬೇರೆಯಲ್ಲ. ಈ ದ್ವೈತಭಾವನೆ ಅಸತ್ಯ. ಎಲ್ಲ ಅಖಂಡ. ಏಕ. ಅದೇ ನೀನು. ಅದು ಯಾರು ಹೇಳಿಕೊಡುವಂತದ್ದಲ್ಲ. ನಿನಗೆ ಅದು ದೊರಕಬೇಕು. ಗುರು ಅನುಗ್ರಹವಿದೆ. ನಾನು ಬೇರೆಯಲ್ಲ ನೀನು ಬೇರೆಯಲ್ಲ, ನೀನು ನನ್ನ ಅಂಶವೆಂದು ಅರಿತು ನನ್ನನ್ನು ಸೇರುವುದೇ ನಿನ್ನ ಗುರಿಯಾಗಿರಬೇಕು. ಅದೇ ಆತ್ಮಜ್ಞಾನ. ಅದೇ ಬ್ರಹ್ಮ ಜ್ಞಾನ. ಆತ್ಮ-ಪರಮಾತ್ಮನಲ್ಲಿ ಲೀನವಾಗಿ ಏಕತೆಯನ್ನು ಅನುಭವಿಸಿದರೆ ಸಾಕ್ಷಾತ್ಕಾರ ಉಂಟಾಗುವುದು.

ನೀನು ಅದನ್ನು ಅನುಭವಿಸಿ ತಿಳಿದುಕೊಳ್ಳಬೇಕು. ಆ ಆನಂದವೇ ಅಮೃತ. ಅದೇ ಸತ್ಯ. ಅದೇ ಪರಮ ಸತ್ಯ. ಅದೇ ಪಾರಮಾರ್ಥಿಕ ಸತ್ಯ. ಆತ್ಮಜ್ಞಾನ ಪಡೆಯದೆ, ಕೇವಲ ಮಾನಸಿಕ ಸಿದ್ಧಿಗಳನ್ನು ಮನಃಪೂರ್ವಕ ಬಯಸುವ ಸಾಧುಗಳಿಗೆ, ಮುನಿಗಳಿಗೆ, ಸಿದ್ಧಿಪುರುಷರುಗಳಿಗೆ ಮಹಾಸಿದ್ಧಿಗಳು ಲಭ್ಯವಾಗಿದ್ದರೂ ಮುಕ್ತಿ ದೊರೆಯಲಿಲ್ಲ. ಸಾಕ್ಷಾತ್ಕಾರ ವುಂಟಾಗಲಿಲ್ಲ.

ಏಕೆಂದರೆ ತನ್ನ ಮರೆತು ಜಗಪ್ರತಿಷ್ಠಿತ ಲೌಕಿಕ ಸಿದ್ಧಿಗಳಲ್ಲಿ ಚಿತ್ತವಿಟ್ಟವರು ಪುನರ್ಜನ್ಮಕ್ಕೆ ಬರುವರು.

ಕಾರಣ ಸಿದ್ಧಿಗಳಲ್ಲಿ ಎರಡು ವಿಧಗಳು ಇರುವುವು. ಅವು ಮನೋಸಿದ್ಧಿಗಳು ಮತ್ತು ಆತ್ಮಸಿದ್ಧಿ.

ಮನೋಸಿದ್ಧಿಗಳಲ್ಲಿ ನಾಲ್ಕು ವಿಧಗಳಿವೆ. ಆತ್ಮಸಿದ್ಧಿಯಲ್ಲಿ ಒಂದೇ ವಿಧ.

ಆತ್ಮಜ್ಞಾನ ಪಡೆಯದೆ, ಮುಕ್ತಿಯು ದೊರೆಯುವುದಿಲ್ಲ. ಸಾಕ್ಷಾತ್ಕಾರವುಂಟಾಗುವುದಿಲ್ಲ.

ಈ ಸಿದ್ಧಿಗಳ ವಿವರ ಹೀಗಿದೆ.

ಮನೋಸಿದ್ಧಿಗಳಲ್ಲಿ ನಾಲ್ಕು ವಿಧಗಳು

ಉತ್ತಮ ಸಿದ್ಧಿಗಳು, ಮಧ್ಯಮ ಸಿದ್ಧಿಗಳು, ಅಧಮ ಸಿದ್ಧಿಗಳು ಮತ್ತು ಅಧಮಾಧಮ ಸಿದ್ಧಿಗಳು.

ಉತ್ತಮ ಸಿದ್ಧಿಗಳಲ್ಲಿ ಅಣಿಮಾಸಿದ್ಧಿ, ಮಾಹಿಮಾಸಿದ್ಧಿ, ಗರಿಮಾಸಿದ್ಧಿ, ಲಘಿಮಾಸಿದ್ಧಿ, ಪ್ರಾಪ್ತಿಸಿದ್ಧಿ, ಪ್ರಾಕಾಮ್ಯಸಿದ್ಧಿ, ಈಶತ್ವಸಿದ್ಧಿ, ವಶತ್ವಸಿದ್ಧಿ

ಈ ಎಂಟು ಸಿದ್ಧಿಗಳು ಉತ್ತಮ ಮನೋಸಿದ್ಧಿಗಳು ಇವೇ ಅಷ್ಟಮಹಾಸಿದ್ಧಿಗಳು.

ಮಧ್ಯಮ ಸಿದ್ಧಿಗಳಲ್ಲಿ ದೂರಶ್ರವಣಸಿದ್ಧಿ, ದೂರದರ್ಶನಸಿದ್ಧಿ, ಮನೋವೇಗಸಿದ್ಧಿ, ಕಾಮರೂಪಸಿದ್ಧಿ, ಪರಕಾಯ ಪ್ರವೇಶ ಸಿದ್ಧಿ, ಸ್ವೇಚ್ಛಾಮರಣಸಿದ್ಧಿ, ಕ್ರೀಡಾಸಿದ್ಧಿ, ಕಾಳಾಸಿದ್ಧಿ, ಅನೂರ್ಮಿಸಿದ್ಧಿ, ಆಜ್ಞಾಸಿದ್ಧಿ.

ಈ ಹತ್ತು ಸಿದ್ಧಿಗಳು ಮಧ್ಯಮ ಮನೋಸಿದ್ಧಿಗಳು.

ಅಧಮ ಸಿದ್ಧಿಗಳಲ್ಲಿ ಕಾಲಜ್ಞಾನಸಿದ್ಧಿ, ಅಭಾದಿತಸಿದ್ಧಿ, ಚಿತ್ತಾಭಿಜ್ಞತೆಸಿದ್ಧಿ, ಸಂಭವಸಿದ್ಧಿ, ವಿಜಯಸಿದ್ಧಿ. ಈ ಐದು ಸಿದ್ಧಿಗಳು ಅಧಮ ಮನೋಸಿದ್ಧಿಗಳು.

ಅಧಮಾಧಮ ಸಿದ್ಧಿಗಳಲ್ಲಿ ಮಾರಣಸಿದ್ಧಿಗಳು, ಚಾರಣಸಿದ್ಧಿಗಳು, ಮೋಹನಸಿದ್ಧಿಗಳು, ಸ್ತಂಭನ ಸಿದ್ಧಿಗಳು, ಉಚ್ಚಾಟನಸಿದ್ಧಿಗಳು, ಆಕರ್ಷಣಸಿದ್ಧಿಗಳು.

ಈ ಆರು ಸಿದ್ಧಿಗಳು ಅಧಮಾಧಮ ಮನೋಸಿದ್ಧಿಗಳು.

## ಉತ್ತಮ ಮನೋಸಿದ್ಧಿಗಳಲ್ಲಿ

ಅಣಿಮಾದಿ ಸಿದ್ಧಿ - ಅಂದರೆ ಲೋಕದಲ್ಲಿಸೂಕ್ಷ್ಮ ರೂಪದಲ್ಲಿ ಅಣುವಿನಂತೆ ತಿರುಗುವುದು. ಸೂಕ್ಷ್ಮ ರೂಪದಲ್ಲಿ ಅಣುವಿನಂತೆ ಸಣ್ಣವನಾಗಿ ಗುಹೆ, ಕೊಳ, ಗಿಡದ ಪೊದರು, ಗವಾಕ್ಷಿ, ಕಿವಿ, ಬಾಯಿ ಮೂಗು ಮುಂತಾದ ನವದ್ವಾರ ರಂಧ್ರಗಳಲ್ಲಿ ತಾನು ಹೋಗಿ ಬರುವುದೇ ಅಣಿಮಾದಿ ಸಿದ್ಧಿ .

ಮಹಿಮಾ ಸಿದ್ಧಿ - ಅಂದರೆ ಮಹಿಮೆಯನ್ನು ತೋರಿಸುವುದು. ಎಮ್ಮೆ ಹೋಗಿ ಆಕಳಾಗುವುದು, ಸ್ತ್ರೀ ಬದಲು ಪುರುಷನಾಗುವುದು. ಈ ರೀತಿ ನಾನಾ ಮಹಿಮೆಯನ್ನು ತೋರಿಸುವುದೇ ಮಹಿಮಾ ಸಿದ್ಧಿ.

ಗರಿಮಾ ಸಿದ್ಧಿ - ಅಂದರೆ ಭೂಮಿಗಿಂತ ಹೆಚ್ಚು ಭಾರವುಳ್ಳವನಾಗುವುದು. ಗಿರಿಗಳಿಗಿಂತಲೂ ತಾನು ಅಧಿಕ ಭಾರವುಳ್ಳವನಾಗುವುದು. ಶತಕೋಟಿ ಕಬ್ಬಿಣ ಸರಪಳಿಯನ್ನು ಎಳೆಯುವುದು.

ಲಘಿಮಾ ಸಿದ್ಧಿ - ಅಂದರೆ ಲಘುವಾಗಿ ಮೇಲೆ ಹಾರುವುದು. ಮಾರುತಿಯಂತೆ ಸಮುದ್ರದ ಮೇಲೆ ಹಾರುವುದು. ನೆಗೆಯಲಿಕ್ಕೆ ಬಾರದ ವಸ್ತುವನ್ನು ಆಕಾಶಕ್ಕೆ ತಗೆದುಕೊಂಡು ಹೋಗುವುದು. ವೈಕುಂಠ, ಧ್ರುವ ಲೋಕಗಳಲ್ಲಿ ತಿರುಗುವುದು.

ಪ್ರಾಪ್ತಿ ಸಿದ್ಧಿ - ಅಂದರೆ ತಾನು ಇಚ್ಛಿಸಿದ್ದು ದೊರಕುವುದು. ಎಲ್ಲಿ ಬೇಕಾದರಲ್ಲಿ ಮೃಷ್ಟಾನ್ನ, ಭಕ್ಷ್ಯಾದಿಗಳನ್ನು ಉಂಟುಮಾಡುವುದು. ಮೃಷ್ಟಾನ್ನ, ಭಕ್ಷ್ಯಾದಿಗಳನ್ನು ಪ್ರಾಪ್ತಿ ಮಾಡಿಕೊಂಡು ಇಹಲೋಕದ ವರಿಗೆ ಬಡಿಸುವುದು, ಇಂದ್ರನ ಮತ್ತು ಶಿವನ ಸಭೆಗಳಿಗೆ ತಾನು ಇಲ್ಲಿಂದ ಹೋಗಿ ಇಳಿಯುವುದು.

ಪ್ರಾಕಾಮ್ಯ ಸಿದ್ಧಿ - ಅಂದರೆ ಯಾರಾದರೂ ಬಯಸಿದ ಯಾವ ಪದವಿಯನ್ನಾದರೂ ಕೊಡುಸುವುದು. ಪರರು ಬೇಡಿದ ರಾಜ್ಯ, ಸ್ವರ್ಗ, ಮಂತ್ರಿಪದವಿ, ದ್ರವ್ಯ, ನ್ಯಾಯಗಳಲ್ಲಿ (ಕೋರ್ಟಿನ) ಜಯ ಕೊಡುವುದು. ಆಯಸ್ಸು,ಸೌಂದರ್ಯ, ಬಹುಬಗೆಯ ಕಲೆ, ವಿಜ್ಞಾನ ಮುಂತಾದವುಗಳನ್ನು ಬಯಸಿದವರಿಗೆ ಕೊಡುಸುವುದು.

ಈಶತ್ವ ಸಿದ್ಧಿ - ಅಂದರೆ ಪ್ರಭುತ್ವ ಪಡೆಯುವುದು. ತಾನೇ ಬ್ರಹ್ಮ, ವಿಷ್ಣು, ಮಹೇಶ್ವರ, ಇಂದ್ರ, ಅಗ್ನಿ, ನೈರುತ್ಯ ಮುಂತಾದ ಸಮಸ್ತ ದೇವರು ಆಗುವುದು.

ವಶತ್ವ ಸಿದ್ಧಿ - ಅಂದರೆ ತಾನು ಸರ್ವವನ್ನು ಸ್ವಾಧೀನಪಡಿಸಿಕೊಂಡು ವಶವರ್ತಿಯಾಗಿ ಮಾಡಿ ಕೊಳ್ಳು ವುದು. ಬ್ರಹ್ಮ, ವಿಷ್ಣು, ಮಹೇಶ್ವರ, ಇಂದ್ರಾದಿ ದೇವತೆಗಳು ಮತ್ತು ಸರಸ್ವತಿ, ಲಕ್ಷ್ಮಿ, ಪಾರ್ವತಿ ಮುಂತಾದ ದೇವತೆ ಗಳನ್ನು, ಮೃಗ, ಪಕ್ಷಿ, ಜಲಚರ ಮುಂತಾದುವುಗಳನ್ನು ತನ್ನ ವಶವರ್ತಿಯಾಗಿ ಮಾಡುವುದೇ ವಶತ್ವ ಸಿದ್ಧಿ.

ಈ ಎಂಟು ಅಷ್ಟ ಮಹಾಸಿಧ್ಧಿಗಳು, ಉತ್ತಮ ಮನೋಸಿಧ್ಧಿಗಳು. ಈ ಅಷ್ಟಮಾ ಸಿಧ್ಧಿಗಳು ಶುದ್ಧ ಬ್ರಹ್ಮನ ಸನ್ನಿಧಿಯಲ್ಲಿರುವುವು.

## ಮಧ್ಯಮ ಸಿಧ್ಧಿಗಳಲ್ಲಿ

ದೂರಶ್ರವಣ ಸಿಧ್ಧಿ - ಅಂದರೆ ಬೇರೆ ಕಡೆ, ದೂರದೇಶಗಳಲ್ಲಿ ನಡೆಯುವ ಸುದ್ದಿಯು ತನಗಿಲ್ಲಿಯೇ ಅರಿಕೆಯಾಗುವುದು. ದೂರದೇಶಗಳಲ್ಲಿ ಆಡುವ ಮಾತನ್ನು ತಾನಿದ್ದಲ್ಲಿ ಕೇಳುವುದು. ಅಂದರೆ ಅನ್ಯರ ಸುಖ ದುಃಖದ ವಾರ್ತೆಗಳು ರೋಷ, ವೇಷ, ಮಂತ್ರ, ಶಾಸ್ತ್ರ, ತತ್ವಗಳ ನುಡಿಗಳು ತನಗೆ ದೂರದಿಂದ ರೇಡಿಯೋ ದಂತೆ ಕೇಳಿಬರುವುದು.

ದೂರದರ್ಶನ ಸಿಧ್ಧಿ - ಅಂದರೆ ಬೇರೆ ಕಡೆ ನಡೆಯುವ ದೃಶ್ಯಗಳೆಲ್ಲ ತನ್ನ ಕಣ್ಣೆದುರಿಗೇನೇ ಇರುವಂತೆ ಕಾಣುವುದು. ತನಗೆ ಬಹುದೂರದಲ್ಲಿರುವ ಊರು, ಕಾಡು, ತೀರ್ಥಕ್ಷೇತ್ರ, ಸುಖ-ದುಃಖದ ಪ್ರಸಂಗಗಳನ್ನು ಇಲ್ಲಿಂದಲೇ ಕಾಣುವುದು ದೂರದರ್ಶನ ಸಿಧ್ಧಿ.

ಮನೋವೇಗ ಸಿಧ್ಧಿ - ಎಲ್ಲಿಗೆ ಹೋಗಬೇಕೆಂದು ಬಯಿಸಿದರೆ ಆ ಸ್ಥಳಕ್ಕೆ ನೆನೆದ ಮಾತ್ರಕ್ಕೆ ಕರೆದೊಯ್ದು ಬಿಡುವುದೇ ಮನೋವೇಗ ಸಿಧ್ಧಿ. ಅಂದರೆ ನೆನಪು ಆದ ಸ್ಥಳಕ್ಕೆ ತಾನು ಮನೋವೇಗದಿಂದ ಹೋಗುವುದು. ಕಾಶಿ, ಕೈಲಾಸ, ವೈಕುಂಠ, ಮುನಿಗಳ ಲೋಕಗಳಿಗೆ ನೆನೆದಾಕ್ಷಣ ಹೋಗುವುದು.

ಆಜ್ಞಾ ಸಿಧ್ಧಿ - ಅಂದರೆ ಜಗತ್ತೆಲ್ಲವೂ ತನ್ನಾಜ್ಞೆಯಂತೆ ನಡೆದುಕೊಳ್ಳುವಷ್ಟು ಶಕ್ತಿ ಸಂಪಾದನೆ ಮಾಡುವುದು. ಮೂರು ಲೋಕಗಳು, ನದಿಗಳು, ಪರ್ವತಗಳು, ಸಾಗರಗಳು, ಪಂಚಭೂತಗಳು, ಇಂದ್ರಾದಿ ದೇವತೆಗಳು ತನ್ನಾಜ್ಞೆಯಂತೆ ನಡೆದುಕೊಳ್ಳುವಂತೆ ಸರ್ವಜ್ಞತೆ ಪಡೆಯುವುದು ಆಜ್ಞಾ ಸಿಧ್ಧಿ .

ಪರಕಾಯ ಪ್ರವೇಶ ಸಿಧ್ಧಿ - ಅಂದರೆ ತಾನೇ, ಬೇರೆ ಮನುಷ್ಯರು, ಪಶುಗಳು, ಕಪಿಗಳು, ಹಾವುಗಳು, ಕ್ರಿಮಿಗಳು, ದೇವತೆಗಳು, ರಾಕ್ಷಸರು ಮುಂತಾದವರ ದೇಹಗಳಲ್ಲಿ ಪ್ರವೇಶಿಸಿ ಅವುಗಳ ಸ್ವಭಾವದಂತೆ ಸಹಜವಾಗಿ ವರ್ತಿಸುವುದೇ ಪರಕಾಯ ಪ್ರವೇಶ ಸಿಧ್ಧಿ.

ಸ್ವೇಚ್ಛಾ ಮರಣ ಸಿಧ್ಧಿ - ಅಂದರೆ ತನ್ನಿಚ್ಛೆಯಂತೆ ತನಗೆ ಬೇಕಾದ ಯಾವ ಕಾಲದಲ್ಲಿಯಾದರೂ ಸಾಯುವುದು. ಇಚ್ಛೆ ಇಲ್ಲದಿದ್ದರೆ ಯುಗಯುಗಗಳ ತನಕ ಸಾಯದೆ ಇರುವುದು. ಅಂದರೆ ಎಷ್ಟೊ ಅವತಾರಗಳು ಗತಿಸಿದರೂ ಪ್ರಳಯ ಕಾಲದವರೆಗೆ ಬದುಕಿರುವ ಇಚ್ಛೆ.

ಕಾಮರೂಪ ಸಿಧ್ಧಿ - ಅಂದರೆ ತನ್ನ ಇಷ್ಟಬಂದ ರೂಪವನ್ನು ಧರಿಸುವುದೇ ಕಾಮರೂಪ ಸಿಧ್ಧಿ. ಹಾವು, ಚೇಳು, ಹುಲಿ, ಕರಡಿಗಳ ರೂಪಧಾರಣ ಮಾಡುವುದು ಹಾಗೂ ಮುದುಕನು ಹುಡುಗನಾಗುವುದು ಇಲ್ಲವೆ ಹುಡುಗನು ಮುದುಕನಾಗುವುದು.

ಕ್ರೀಡಾ ಸಿಧ್ಧಿ - ಅಂದರೆ ತಾನು ಹಂದಿ, ಹುಲಿ, ಕರಡಿ, ಕಪಿ ಮುಂತಾದ ನಾನಾ ಪ್ರಾಣಿಗಳ ರೂಪಗಳನ್ನು ಧರಿಸಿ ಪುಷ್ಕರಣಿ, ಗೋಪುರ, ಅಡವಿಗಳಲ್ಲಿ ಅಡಗಿಕೊಂಡು ತನ್ನ ಸೌಭಾಗ್ಯ ಸತಿಯೊಡನೆ ಸುಖ ಅನುಭವಿಸುತ್ತ ಕ್ರೀಡಿಸುವುದು.

ಕಳಾ ಸಿಧ್ಧಿ - ಕಳೆ ಅಂದರೆ ತಾನು ಬಹಳ ತೇಜಸ್ಸಿನಿಂದ ಹೊಳೆಯುವುದು. ತನ್ನ ಕೈ, ಕಾಲು, ಮುಖ ಮುಂತಾದ ಅವಯವಗಳು ಸೂರ್ಯ ಚಂದ್ರ ನಕ್ಷತ್ರಗಳ ಕಾಂತಿಯಂತೆ ಹೊಳೆಯುವಂತೆ ಮಾಡುವುದೇ ಕಳಾ ಸಿಧ್ಧಿ.

ಅನೂರ್ಮಿ ಸಿದ್ಧಿ - ಊರ್ಮಿ ಅಂದರೆ ಕಷ್ಟ, ಕ್ಲೇಶ, ಇದಾಗದಂತೆ ಮಾಡುವುದು. ಹಸಿವಿನಲ್ಲಿ ಇದ್ದವನಿಗೆ ಹಸಿವು ಆಗದಂತೆ ಮಾಡುವುದು. ಬಾಯಾರಿಕೆ ಇದ್ದವನಿಗೆ ಬಾಯಾರಿಕೆ ಆಗದಂತೆ ಮಾಡುವುದು. ದುಃಖ ಇದ್ದವನಿಗೆ ಶೋಕ ಆಗದಂತೆ ಮಾಡುವುದು. ಮೋಹಿಸದೆ ಇದ್ದವನಿಗೆ ಮೋಹಿಸುವಂತೆ ಮಾಡುವುದು. ಕೊಂದುಬಿಟ್ಟರೂ ಸಾಯದಂತೆ ಮಾಡುವುದು.

ಈ ಹತ್ತು ಸಿದ್ಧಿಗಳು ಮಧ್ಯಮ ಮನೋಸಿದ್ಧಿಗಳು.

## ಅಧಮ ಸಿದ್ಧಿಗಳಲ್ಲಿ

ಕಾಲಜ್ಞಾನ ಸಿದ್ಧಿ - ಅಂದರೆ ಭೂತ, ವರ್ತಮಾನ, ಭವಿಷ್ಯಗಳನ್ನು ತಿಳಿದುಕೊಂಡು ಸ್ವಲ್ಪವೂ ತಪ್ಪಿಲ್ಲದೆ ಹೇಳುವುದೇ ಕಾಲಜ್ಞಾನ ಸಿದ್ಧಿ.

ವಿಜಯ ಸಿದ್ಧಿ - ಅಂದರೆ ವಿವಿಧಶಾಸ್ತ್ರಗಳಲ್ಲಿಯೂ, ಸರ್ವವಿದ್ಯೆಗಳಲ್ಲಿಯೂ ವಾಗ್ವಾದದಲ್ಲಿ ಯಾರಿಗೂ ಸೋಲದೆ, ಅನ್ಯರನ್ನು ಸೋಲಿಸಿ ತಾನು ಜಯಗಳಿಸುವುದೇ ವಿಜಯ ಸಿದ್ಧಿ.

ಚಿತ್ತಾಭಿಜ್ಞತೆ ಸಿದ್ಧಿ - ಅಂದರೆ ಬೇರೆಯವರ ಮನಸ್ಸಿನಲ್ಲಿ ಇರುವುದನ್ನು ತಿಳಿದುಕೊಂಡು, ಅವರು ನೋಡಿದ್ದನ್ನು, ಅವರ ಮನದಲ್ಲಿದ್ದ ಸುಖದುಃಖಗಳನ್ನು ತಾನೀಗ ಅರಿತು ಸ್ವಲ್ಪವೂ ತಪ್ಪಿಲ್ಲದೆ ಅವರಿಗೆ ಹೇಳುವುದೇ ಚಿತ್ತಾಭಿಜ್ಞತೆ ಸಿದ್ಧಿ.

ಅಬಾಧಕ ಸಿದ್ಧಿ - ಅಂದರೆ ಸುಖದುಃಖಾದಿ ದ್ವಂದ್ವಗಳಲ್ಲಿ, ಮೃದು-ಕಠಿಣ ಮಾತುಗಳಲ್ಲಿ, ನೀರು-ಬೆಂಕಿಗಳಲ್ಲಿ ಬಾಧೆಯನ್ನು ಹೊಂದದೆ ಇರುವುದೇ ಅಬಾಧಕ ಸಿದ್ಧಿ.

ಸ್ತಂಭನ ಸಿದ್ಧಿ - ಅಗ್ನಿಸ್ತಂಭನ ಅಂದರೆ ಬೆಂಕಿಯ ಝಳವನ್ನು ನಿರ್ವಿಷ್ಣ ಮಾಡುವುದು, ವಾಯು ಸ್ತಂಭನ ಅಂದರೆ ಗಾಳಿಯನ್ನು ತಡೆಯುವುದು, ಜಲಸ್ತಂಭನ ಅಂದರೆ ನೀರನ್ನು ಅಡ್ಡಿಮಾಡಿ ಹರಿಯದಂತೆ ತಡೆಯುವುದು, ನೀರಿನ ಮೇಲೆ ನಡೆಯುವುದು ಇವೇ ಮೊದಲಾದವು ಸ್ತಂಭನ ಸಿದ್ಧಿಗಳು.

ಈ ಐದು ಸಿದ್ಧಿಗಳು ಅಧಮ ಮನೋಸಿದ್ಧಿಗಳು. ಬುದ್ಧಿವಂತರಿಗೆ ಈ ಐದು ಅಧಮಸಿದ್ಧಿಗಳು ಪ್ರಾಪ್ತವಾಗಬಹುದು.

## ಅಧಮಾಧಮ ಸಿದ್ಧಿಗಳಲ್ಲಿ

ಮಾರಣ ಸಿದ್ಧಿ - ಯಾವ ಕ್ರಿಯೆಯಿಂದ ಯಾವುದೇ ಜೀವಿಯ ಪ್ರಾಣ ನಾಶವಾಗಲ್ಪಡುವುದೋ ಅದಕ್ಕೆ 'ಮಾರಣ' ವೆಂದು ಹೆಸರು. ಮಾಟ, ಮಂತ್ರಗಳ ಮೂಲಕ ಬೇರೆ ಮನುಷ್ಯರು, ಪ್ರಾಣಿಗಳು ಮರಣ ಹೊಂದುವಂತೆ ಮಾಡಿಸುವ ಮಾನಸಿಕ ಕ್ರಿಯಾ ಸಾಮರ್ಥ್ಯಕ್ಕೆ ಮಾರಣ ಸಿದ್ಧಿಗಳು ಎಂದು ಹೆಸರು.

ವಿದ್ವೇಷಣ ಸಿದ್ಧಿ - ಯಾವ ಕ್ರಿಯೆಯಿಂದ ಇಬ್ಬರು ಮಿತ್ರರಲ್ಲಿ ಅಥವಾ ಬಂಧುಗಳಲ್ಲಿ ವೈರತ್ವವನ್ನು ಉಂಟುಮಾಡಲಾಗುವುದೋ ಅದಕ್ಕೆ 'ವಿದ್ವೇಷಣ' ವೆಂದು ಹೆಸರು. ಮಾಟ, ಮಂತ್ರಗಳ ಮೂಲಕ ಬೇರೆ ಇಬ್ಬರು ಮಿತ್ರರಲ್ಲಿ ಅಥವಾ ಬಂಧುಗಳಲ್ಲಿ ವೈರತ್ವವನ್ನು ಉಂಟುಮಾಡಲಾಗುವುದೋ ಅಂತಹ ಮಾನಸಿಕ ಕ್ರಿಯಾ ಸಾಮರ್ಥ್ಯಕ್ಕೆ ವಿದ್ವೇಷಣ ಸಿದ್ಧಿಗಳು ಎಂದು ಹೆಸರು.

ಮೋಹನ ಸಿದ್ಧಿ - ಯಾವ ಕ್ರಿಯೆಯಿಂದ ಯಾವುದೇ ಸ್ತ್ರೀ-ಪುರುಷರನ್ನು ಮೋಹಿಸುವಂತೆ ಮರಳು ಮಾಡಲಾಗುವುದೋ ಅದಕ್ಕೆ 'ಮೋಹನ' ವೆಂದು ಹೆಸರು. ಮಾಟ, ಮಂತ್ರಗಳ ಮೂಲಕ ಬೇರೆ

ಸ್ತ್ರೀ-ಪುರುಷರನ್ನು ಮೋಹಿಸುವಂತೆ ಮರಳುಮಾಡಲಾಗುವುದೋ ಅಂತಹ ಮಾನಸಿಕ ಕ್ರಿಯಾ ಸಾಮರ್ಥ್ಯಕ್ಕೆ ಮೋಹನ ಸಿದ್ಧಿಗಳು ಎಂದು ಹೆಸರು.

ಸ್ತಂಭನ ಸಿದ್ಧಿ - ಯಾವ ಕ್ರಿಯೆಯಿಂದ ಸಮಸ್ತ ಜೀವರಾಶಿಗಳನ್ನು ಸ್ತಬ್ಧವಾಗಿ ನಿಲ್ಲಿಸಲಾಗುವುದೋ ಅದಕ್ಕೆ 'ಸ್ತಂಭನ' ವೆಂದು ಹೆಸರು. ಮಾಟ, ಮಂತ್ರಗಳ ಮೂಲಕ ಬೇರೆ ಸ್ತ್ರೀ-ಪುರುಷರು ಬಾಯಿ ತೆರೆಯ ದಂತೆ ಮರಳುಮಾಡಲಾಗುವುದೋ ಅಂತಹ ಮಾನಸಿಕ ಕ್ರಿಯಾ ಸಾಮರ್ಥ್ಯಕ್ಕೆ ಸ್ತಂಭನ ಸಿದ್ಧಿಗಳು ಎಂದು ಹೆಸರು.

ಉಚ್ಚಾಟನ ಸಿದ್ಧಿ - ಯಾವ ಕ್ರಿಯೆಯಿಂದ ಯಾವುದೇ ಸ್ತ್ರೀ - ಪುರುಷರನ್ನು ತನ್ನ ಮನೆ, ದೇಶ, ಸ್ಥಾನ ಗಳಿಂದ ದೂರಮಾಡಲಾಗುವುದೋ ಅದಕ್ಕೆ 'ಉಚ್ಚಾಟನ' ವೆಂದು ಹೆಸರು. ಮಾಟ, ಮಂತ್ರಗಳ ಮೂಲಕ ಬೇರೆ ಸ್ತ್ರೀ-ಪುರುಷರ ಮನೆ, ದೇಶ, ಸ್ಥಾನಗಳಿಂದ ದೂರಮಾಡಲಾಗುವುದೋ ಅಂತಹ ಮಾನಸಿಕ ಕ್ರಿಯಾ ಸಾಮರ್ಥ್ಯಕ್ಕೆ ಉಚ್ಚಾಟನ ಸಿದ್ಧಿಗಳು ಎಂದು ಹೆಸರು.

ಆಕರ್ಷಣ ಸಿದ್ಧಿ - ಮಾಟ, ಮಂತ್ರಗಳ ಮಾನಸಿಕ ಕ್ರಿಯಾ ಸಾಮರ್ಥ್ಯದ ಮೂಲಕ ಯಾವುದೇ ಪ್ರಾಣಿ, ಪಕ್ಷಿ, ಮನುಷ್ಯರನ್ನು ತನ್ನ ಹತ್ತಿರ ಬರುವಂತೆ ಮಾಡಲಾಗುವುದೋ ಅದಕ್ಕೆ 'ಆಕರ್ಷಣ' ವೆಂದು ಹೆಸರು.

ತನ್ನನ್ನು ಮರೆತು ಜಗತ್‌ಪ್ರತಿಷ್ಠಿತ ಲೌಕಿಕ ಮನೋಸಿದ್ಧಿಗಳಲ್ಲಿ ಚಿತ್ತವಿಟ್ಟವರು ಮತ್ತೆ ಪುನರ್ಜನ್ಮಕ್ಕೆ ಬರುವರು.

ಇಂತಹ ಜಗಪ್ರತಿಷ್ಠಿತ ಲೌಕಿಕ ಮನೋಸಿದ್ಧಿಗಳನ್ನು ಬಯಸುವ ಅನೇಕ ಸಿದ್ಧಿಪುರುಷರುಗಳು, ಸಾಧುಗಳು, ಋಷಿಗಳು, ಸಂತರು, ಮುನಿಗಳು, ಮಹಾತ್ಮರುಗಳು ಮಹಾಸಿದ್ಧಿಗಳಿದ್ದರೂ ಅವರು ಸಾಕ್ಷಾತ್ಕಾರ ಹೊಂದುವುದಿಲ್ಲ. ಮುಕ್ತಿಯನ್ನು ಅವರು ಪಡೆಯವುದಿಲ್ಲ.

ಉದಾಹರಣೆಗೆ ವಿಶ್ವಾಮಿತ್ರನು ವಶಿಷ್ಠರಿಗೆ ನಿರರ್ಥಕವಾಗಿ ಉಪದ್ರವಕೊಟ್ಟು ತನ್ನ ಗರ್ವವನ್ನೇ ಪ್ರದರ್ಶಿಸಿದನು. ಅಗಸ್ತ್ಯಮುನಿಗಳು ಸಮುದ್ರವನ್ನೇ ಕುಡಿದು ಅಪಕೀರ್ತಿಗೆ ಗುರಿಯಾದರು.ಕಾರ್ತವೀರ್ಯನು ಕಾಮಧೇನುವನ್ನು ಜಮದಗ್ನಿಯ ತಪೋವನದಿಂದ ತಂದು ಕ್ಷಾಮಕಾಲ ನಿವಾರಿಸಲೆತ್ನಿಸಿದನು. ಆದರೆ ಋಷಿಯ ಕೋಪಾಗ್ನಿಗೆ ತಾನು ತನ್ನ ಸಾವಿರ ಮಕ್ಕಳೊಂದಿಗೆ ಸುಟ್ಟು ಬೂದಿಯಾದನು.

## ಆತ್ಮಸಿದ್ಧಿ ಒಂದೇ ಒಂದು

ಇದು ದಿವ್ಯ ಆತ್ಮಜ್ಞಾನ. ಸಾಕ್ಷಾತ್ಕಾರ ಸಿದ್ಧಿ. ದಿವ್ಯ ಆತ್ಮ ಸಾಕ್ಷಾತ್ಕಾರ ಸಿದ್ಧಿ ಅಂದರೆ ತನ್ನ ಇರುವಿನ ಅರಿವಿನ ಸಾಕ್ಷಾತ್ಕಾರ. ಈ ದಿವ್ಯಆತ್ಮ ಸಾಕ್ಷಾತ್ಕಾರ ಸಿದ್ಧಿ ನಾಲ್ಕು ಪ್ರಕಾರವಾಗಿ ಫಲಿಸುವುದು.

ಅವುಗಳೇ ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ,ಸಾಯುಜ್ಯವೆಂಬ ಪರಮಶ್ರೇಷ್ಠ ಪುರುಷಾರ್ಥಗಳು.

ಪರಮಪುರುಷನಾದ ಭಗವಂತನ ಗುರುಪಾದಸೇವೆಯಲ್ಲಿ ಸದಾಕಾಲ ನಿರತನಾಗಿದ್ದರೆ ಸಾಲೋಕ್ಯ ಪಾಪ್ತಿಯಾಗುವುದು.

ಸಾಲೋಕ್ಯ ಪ್ರಾಪ್ತಿಯಾಗಿ ಅವರಿಗೆ ಸದಾಕಾಲ ಶ್ರೀಗುರುವಚನೋಪದೇಶದಲ್ಲಿ ನಂಬಿಕೆಯುಂಟಾದಾಗ ಸಾಮೀಪ್ಯ ಪ್ರಾಪ್ತಿಯಾಗುವುದು.

ಸಾಮೀಪ್ಯ ಪ್ರಾಪ್ತಿಯಾಗಿ ಭಗವಂತನ ಸ್ವರೂಪವನ್ನು ತದೇಕವಾಗಿ ಅವರು ಸದಾಕಾಲ ಧ್ಯಾನಮಾಡು ವುದರಿಂದ ಸಾರೂಪ್ಯಪ್ರಾಪ್ತಿಯಾಗುವುದು.

ಆಗ ನಾನಾರೆಂದು ವಿಚಾರಿಸಲು, ಚತುರ್ಭುಜನು, ಕೈಗಳಲ್ಲಿ ಶಂಖ, ಸುದರ್ಶನ ಚಕ್ರಗಳನ್ನು ಹಿಡಿದ ಪೀತಾಂಬರವುಳ್ಳ ಶ್ರೀ ಮಹಾವಿಷ್ಣು ಭಗವಂತನ ಪ್ರತಿಬಿಂಬ ತಾನಿರುವನು. ಶ್ರೀ ಮಹಾವಿಷ್ಣು ಭಗವಂತನ ಶಿರ, ಕರ, ಕಣ್ಣು, ಕೈ-ಬಾಯಿ ನಡೆ-ನುಡಿ, ಒಟ್ಟಾರೆ ಅವನ ವಿರಾಟ ದೇಹವೆಲ್ಲವೂ ತನ್ನದೆಂದು ನಿಸ್ಸಂದೇಹವಾಗಿ ತಿಳಿದು ಆ ಪರಮಪುರುಷನಿಗೂ ಮತ್ತು ತನಗೂ ಏನೊಂದು ಭೇದವನ್ನು ಕಾಣದಿರುವುದೇ ಸಾರೂಪ್ಯ ಎನಿಸುವುದು.

ಇದೇ ತನ್ನ ಪರಮಾತ್ಮ ಪ್ರತಿಬಿಂಬ ಸ್ವರೂಪ ಜ್ಞಾನವೆಂಬ ಸಾರೂಪ್ಯ ಆತ್ಮ ಸಿದ್ಧಿ.

ಸಾರೂಪ್ಯ ಪ್ರಾಪ್ತಿಯಾಗಿ ಈ ಸಾರೂಪ್ಯದಲ್ಲೇ ತನ್ನ ಭಾವವನ್ನು ದಾಟಿ ತನ್ನ ನಿಜವಾದ ಅಖಂಡ, ಅನಂತ, ಸಚ್ಚಿದಾನಂದ, ಸತ್ಯಜ್ಞಾನ ಪರಬ್ರಹ್ಮ ಸ್ವರೂಪ ಜ್ಞಾನದಲ್ಲಿ ಸಮ್ಮಿಲನವಾಗಿ ಲೀನವಾಗಿ ಹೋಗುವುದೇ ಸಾಯುಜ್ಯ ಆತ್ಮಸಿದ್ಧಿ.

ಇದೇ ಪರಮ ಸಿದ್ಧಿಯಾದ ಪರಬ್ರಹ್ಮಸಿದ್ಧಿ. ಇದೇ ಸಿದ್ಧಿಗಳಲ್ಲಿ ನಿಜವಾದ ಉತ್ತಮೋತ್ತಮ ಸಿದ್ಧಿ. ಇದೇ ರಾಜಯೋಗ ಸಿದ್ಧಿ. ಇದೇ ಕೈವಲ್ಯ.''

ಈ ರೀತಿ ಭಗವಂತನಿಂದ ನನಗೆ ಅಂತರ್‌ವಾಣಿ, ಅಂತರ್‌ದರ್ಶನಗಳ ಸಹಾಯದಿಂದ ಪರಿಪೂರ್ಣ ಆತ್ಮಬೋಧೆನೆಯಾಗಿ, ಸಾಕ್ಷಾತ್ ಪರಬ್ರಹ್ಮಸಿದ್ಧಿ ಅಂದರೆ ದಿವ್ಯಆತ್ಮ ಸಾಕ್ಷಾತ್ಕಾರ ಸಿದ್ಧಿ ಅಂದರೆ ನನ್ನ ಅರುವಿನ ಇರುವಿನಲ್ಲಿ ಪೀತಾಂಬರವುಳ್ಳ ಚತುರ್ಭುಜ ಶ್ರೀ ವಿಷ್ಣು ಭಗವಂತ ಕರಗಳಲ್ಲಿ ಶಂಖ, ಸುದರ್ಶನ ಚಕ್ರಗಳನ್ನು ಹಿಡಿದು ನಾನೇ ಭಗವಂತನ ಪ್ರತಿಬಿಂಬವಾಗಿರುವ ಸಾರೂಪ್ಯ ಆತ್ಮ ಸಿದ್ಧಿಯ ಅನುಭವ ಸಾಕ್ಷಾತ್ಕಾರ ಗೋಚರಿಸಿತು.

ಆಗ ನನ್ನ ಆತ್ಮಜ್ಞಾನದಲ್ಲಿ ದಿವ್ಯ ಆತ್ಮಜ್ಞಾನದ ಬೆಳಕು ಹರಡಿತು. ಪರಬ್ರಹ್ಮಾನಂದದಲ್ಲಿ ಮಗ್ನನಾಗಿ ಬದುಕಿನ ಮಧುರಾಮೃತವಾದ ಆನಂದದಲ್ಲಿ ತಲ್ಲೀನನಾದೆ. ನನ್ನ ಚೇತನವೆಲ್ಲ ಹೊತ್ತಿಕೊಂಡಂತೆ ಪ್ರಜ್ವಲಿಸುತ್ತಿತ್ತು. ಆಗ ನನ್ನಲ್ಲಿದ್ದ ಸ್ವಯಂ ಜ್ಯೋತಿಯು ತನ್ನನ್ನು ತಾನೇ ಹೊತ್ತಿಕೊಂಡಂತೆ ಉರಿಯುತ್ತಿತ್ತು. ಜ್ವಾಲಾಮಯವಾಗಿತ್ತು. ಆಗ ಆತ್ಮದ ಅಮೃತ ತತ್ವದ ಭಾವವನ್ನು ನಾನು ಆಶ್ರಯಿಸಿದ್ದೆನು.

ಭಕ್ತಿ ಅಲೆಅಲೆಯಾಗಿ ಚಿಮ್ಮಿ ಕಂಪಿಸುತ್ತ ಪುಳಕಿಸುತ್ತ ಆನಂದ ಸುಧೆಯ ಸವಿ ತಲೆಗೇರಲು ಆನಂದ ಬಾಷ್ಪ ಸುರಿದು ನಾನು ಪರವಶನಾದೆನು. ಭಕ್ತಿಯ ಭರದಲ್ಲಿ ಈ ಲೋಕದ ಅರಿವು ಅಳಿದು ಆನಂದದ ಕಡಲಿನಲ್ಲಿ ನನ್ನ ಮನಸ್ಸು ತೇಲುತ್ತಿತ್ತು.

ನನ್ನ ಮುಖ ಕಮಲವು ಮಳೆಯ ಧಾರೆಯಂತೆ ದಯಾರಸವನ್ನು ಧಾರೆ ಧಾರೆಯಾಗಿ ಸುರಿಸುತ್ತಲೇ ಇತ್ತು. ಆಗ ನಾನು ಹರ್ಷಸಾಗರದಲ್ಲಿ ಓಲಾಡಿ, ತೇಲಾಡಿ ಮುಳುಗಾಡುತ್ತಿದ್ದೆನು. ನನ್ನ ಹೃದಯ ಮಾನಸ ಸರೋವರದಿಂದ ಹೊಸದಾಗಿ ಹೊರಹೊಮ್ಮಿದ್ದ ಆನಂದ ಗಂಗೆ ಪ್ರವಾಹವಾಗಿ ಉಕ್ಕಿ ಹರಿಯುವಂತಿತ್ತು.

ಈ ಸಾಕ್ಷಾತ್ಕಾರವಾಗುತ್ತಲೇ ನಾನು ಆನಂದಾತಿರೇಕದಿಂದ ಮೈ ಮರೆತೆ. ಸೃಷ್ಟಿ ಒಂದು ಲೀಲೆ. ಈ ಜಗತ್ತೇ ನಾಟಕರಂಗ, ಜೀವಿಗಳೆಲ್ಲ ಆ ಲೀಲಾ ನಾಟಕದಲ್ಲಿ ಪಾತ್ರಧಾರಿಗಳು. ಜಗತ್ತಿನ ಜಡತೆಯೂ ಸ್ಥೂಲತೆಯೂ ವಾಸ್ತವತೆಯೂ ಕನಸಿನಂತೆ, ಮಿಥ್ಯವಾಗಿ ತೋರಿದವು. ಇಂದ್ರಿಯಗಳಿಗೆ ಗೋಚರವಾಗುವುದಕ್ಕಾಗಿ ವೇಷ ಹಾಕಿಕೊಂಡು ಸಮುದ್ರದ ತರಂಗಗಳಾಗಿ ಕಂಡವು.

ಆ ದಿನದಿಂದ ಯಾವುದೋ ಒಂದು ತತ್ವ, ಯಾವುದೋ ಒಂದು ಸೂಕ್ಷ್ಮ ನನಗೆ ಅರ್ಥವಾಗುತ್ತಿತ್ತು. ಜೊತೆಗೆ ಅರ್ಥದ ಗೂಢಾರ್ಥದ ಅರಿವು ಬರುತ್ತಿತ್ತು. ಇಡೀ ಪ್ರಪಂಚಕ್ಕೆ ಅನ್ವಯಿಸಬಹುದಾದ ಯಾವುದೋ ಒಂದು ಅನ್ಯೋನ್ಯ ಸಂಬಂಧ ಸ್ಪಷ್ಟವಾಗಿ ನನಗೆ ಗೋಚರಿಸುತ್ತಿತ್ತು.

ಪರಮಾತ್ಮನು ಅದ್ವೈತ ರೂಪಿ, ದ್ವೈತ ರೂಪಿ, ವಿಶಿಷ್ಟಾ ದ್ವೈತಸ್ವರೂಪಿಯಾಗಿ ಮೆರೆಯುವ ಏಕಮೇವಾ ದ್ವಿತೀಯವಾದ ವಿಶ್ವಚೇತನಾಸ್ವರೂಪನೆಂಬ ಸ್ಪಷ್ಟ ಅಭಿಪ್ರಾಯಕ್ಕೆ ನಾನು ಬಂದೆ.

ಆಯಾ ಮತದಾರ್ಶನಿಕರ, ಸಾಧೂ ಸಂತರ, ಫಕೀರರ, ಭಗವಂತನ ಚರಣದಾಸರ ಅವಧೂತರ, ಯೋಗಿಗಳ, ಜೋಗಿಗಳ ಚಿಂತನೆಯ ಫಲದಂತೆ ಪರಮಾತ್ಮನ ವಿಶ್ವ ಚೇತನಾಸ್ವರೂಪ ಅರಿವಾಗುತ್ತದೆ ಎಂದು ನಾನು ಅರಿತೆ.

ಹೀಗೆ ಸಮನ್ವಯಗೊಳಿಸಿದ ಚಿಂತನದಿಂದ, ಜೈನ, ತೀರ್ಥಂಕರ, ವಚನಸಾರ, ಬೌದ್ಧಮತದ ಬೋಧನೆ, ಸಿಖರ ಗುರುಗ್ರಂಥ ಸಾಹೇಬ, ಸೂಫಿ, ಸುನ್ನಿ, ಖುರಾನ್ ಹಾಗೂ ಕ್ರೈಸ್ತರ ಧರ್ಮಶಾಸ್ತ್ರಗಳೆಲ್ಲವೂ ಪರಮಾತ್ಮನ ವಿಶ್ವರೂಪ ದಿಗ್ದರ್ಶನ ಎಂಬುದರ ಅರಿವು ನನ್ನಲ್ಲಿ ಮೂಡಿತು.

ಮನದಲ್ಲಿ ವಿಶ್ವಮೈತ್ರಿ ಮೂಡಿ ಎಲ್ಲರ ಮೇಲೆಯೂ, ಎಲ್ಲದರ ಮೇಲೆಯೂ ಅಕ್ಕರೆ ಉಕ್ಕಿತು. ನನ್ನ ಜೀವಮಾನ ಕಟ್ಟಡದಲ್ಲಿ ಆ ಒಂದು ಕ್ಷಣದ ಬಾಳು, ಗೋಪುರ ತುದಿಯ ಕಳಸದ ಚಿನ್ನದ ಡೆಂಕಣಿಯಾಗಿ ಸ್ವರ್ಗದೊಡನೆ ಸರಸವಾಡಿತು. ನಾನು ಸಂಸಾರದ ಗೊಡವೆಗೆ ಹೋಗದೆ ಭಕ್ತಿಯಿಂದ ದೇವರ ಕಿಂಕರ ನಾಗಿ ಸೇವೆ ಮಾಡಿಕೊಂಡಿರಲು ನಿರ್ಧರಿಸಿದೆ:

ನನ್ನ ಅಂತರಂಗದಲ್ಲಿ ಯಾವುದೋ ಒಂದು ಕರೆ ಸದಾ ಮೊರೆಯುತ್ತಿತ್ತು. ಅನಂತತೆಯ ಬಸಿರಿ ನಿಂದ ಅರ್ಥ ಪೂರ್ಣವಾಗಿ ಅದು ಬರುತ್ತಿತ್ತು. ಕಣ್ಣು ಮುಚ್ಚಿದರೆ ಸಾಕು ಈ ಪ್ರಪಂಚವೆಲ್ಲಾ ಎತ್ತಲೋ ಜಾರಿ ಹೋದಂತಾಗಿ ತೇಜೋಮಯವಾದ ಬಾನಿನಲ್ಲಿ ನಾನು ಹಾರಾಡುತ್ತಿದ್ದೇನೆ ಎನ್ನುವ ಅನುಭವ ಆಗುತ್ತಿತ್ತು. ನಾನು ನೋಡಿದರೆ ನೀಲಾಕಾಶವೆ ನೋಡಿದಂತಾಗುತ್ತಿತ್ತು.! ನುಡಿದರೆ ಸಮುದ್ರವೆ ನುಡಿದಂತಾ ಗುತ್ತಿತ್ತು! ನಡೆದರೆ ಪರ್ವತವೆ ಚಲಿಸಿದಂತಾಗುತ್ತಿತ್ತು .

ನನ್ನ ಅಂತರ್‌ಮನಸ್ಸಿನಲ್ಲಿ ಇಲ್ಲಿಯವರೆಗೆ ನಿದ್ರಿಸುತ್ತಿದ್ದ ಅಗಾಧವಾದ ಮಾನಸಿಕ ಚೈತನ್ಯ ಎಚ್ಚರ ಗೊಳ್ಳುತ್ತಿತ್ತು. ವಿಶಾಲ ಪ್ರಪಂಚದ ವಿಚಾರಗಳನ್ನು ಕುರಿತು ವ್ಯವಹರಿಸುತ್ತಿದ್ದೆ. ಪ್ರಕೃತಿ ಪ್ರಪಂಚದ ಸೌಂದರ್ಯ ದಲ್ಲಿಯೂ ಭಾವಸಮಾಧಿಯಲ್ಲಿಯೂ ಅಧ್ಯಯನ ಆಲೋಚನೆಗಳಲ್ಲಿಯೂ ಜೀವನ ಸುಧಾರಣೆಯ ಕಲ್ಪನಾ ಸ್ವರ್ಗವೊಂದನ್ನು ನಿರ್ಮಿಸಿಕೊಂಡೆ. ಲೋಕಕಲ್ಯಾಣ ಮಾಡುವಂತಹ ಪವಾಡ ಸದೃಶ ಶಕ್ತಿ ನನಗೆ ಲಭಿಸ ಲೆಂದು ಪ್ರಾರ್ಥಿಸಿದೆ.

ಸರ್ವೇಶ್ವರ! ನನ್ನನ್ನು ದಿವ್ಯಜ್ಞಾನಿಯನ್ನಾಗಿ ಮಾಡು, ಅದರ ಪ್ರದರ್ಶನಕ್ಕಾಗಿ ಅಲ್ಲ, ಮಾನವ ಸೇವೆಗಾಗಿ ಮತ್ತು ತನ್ಮೂಲಕ ನಿನ್ನ ಸೇವೆಗಾಗಿ ಎಂದು ಮೊರೆಯಿಟ್ಟೆ.

ಅನಂತ ಪ್ರಯತ್ನದ ಯತ್ನಶೀಲವೇ ಮಹಾಸಾಧನೆಯಾಗಿ ಭುವನ ಸಮಸ್ತವೂ ಅರ್ಥಪೂರ್ಣವಾಗಿ ಅನುಭವ ವೇದ್ಯವಾಗುತ್ತಿತ್ತು. ಆ ವೇಳೆಯಲ್ಲಿ ನನಗೆ ಸೃಷ್ಟಿಯ ಅನೇಕ ರಹಸ್ಯಗಳು ತಿಳಿಯುತ್ತಿದ್ದವು. ನಾನು ಇಲ್ಲಿಯವರೆಗೆ ಕರ್ಮಯೋಗಿಯಾಗಿ, ತಪಸ್ವಿಯಾಗಿ ಬೆಳೆಸಿಕೊಂಡು ಬಂದ ವಿಚಾರಶೀಲತೆಗೆ ಈ ಜ್ಞಾನದ ಗೋಚರ ಮೆರಗು ಕೊಟ್ಟು ನೂರ್ಮಡಿ ಹೆಚ್ಚಿಸಿತು.

ಅಣುವಿನಲ್ಲಿಯ ರಹಸ್ಯವನ್ನು ಭೇದಿಸುವುದರಲ್ಲಿ ಜಯಶಾಲಿಯಾದ ವಿಜ್ಞಾನಿಯ ಉತ್ಸಾಹದಂತೆ ನನ್ನ ಮುಖದಲ್ಲಿ ಕಾಂತಿ ಉಂಟಾಗುತ್ತಿತ್ತು.

ನನ್ನ ದೇಹವೂ ಆತ್ಮದ ಒಂದು ಭಾಗ ಮಾತ್ರವಾಗಿರುವಂತೆ ಭಾಸವಾಗಿ, ನಡೆಯುತ್ತಿದ್ದರೂ ತೇಲುತ್ತಿದ್ದಂತೆ ಅನುಭವವಾಯಿತು. ನನಗೆ ನನ್ನ ಅನುಭವ ಮಹಾ ಅದ್ಭುತವಾಗಿ ತೋರಿತು. ಇಷ್ಟು ಸ್ವಲ್ಪ ತ್ಯಾಗದಿಂದ ಎಂತಹ ಮಹಾಭೋಗ ಲಭಿಸುತ್ತದೆ ! ಏಕಾಗಬಾರದು ? ಎಂದುಕೊಂಡೆ. ಸಲಸಲವೂ ನವ ಪ್ರತಿಜ್ಞೆಯಿಂದ, ನವ ಉತ್ಸಾಹದಿಂದ, ನವ ಆಸೆಯಿಂದ ನನ್ನ ಆತ್ಮವು ರೆಕ್ಕೆ ಬಿಚ್ಚಿ ಹಾರುತ್ತಿತ್ತು.

ಎಂತಹ ನಾಟಕದಲ್ಲಿಯೂ ಇಂತಹ ಮಂಗಳಕರ ಇಷ್ಟಸಿದ್ಧಿ ಈ ರೀತಿ ಒದಗುವುದು ಸಾಧ್ಯವೆ! ಭಗವಂತನ ಕೃಪೆ ಅಷ್ಟು ಅನಿರೀಕ್ಷಿತವಾಗಿ ಆ ಪ್ರಮಾಣದಲ್ಲಿ, ಪ್ರವಾಹದೋಪಾದಿಯಲ್ಲಿ ನುಗ್ಗಿ ಬಂದು ಅಪ್ಪಳಿಸಿದರೆ ಯಾವ ಚೇತನಕ್ಕೆ ತಾನೇ ದಿವ್ಯ ಸಾಕ್ಷಾತ್ಕಾರವಾಗದಿರಲು ಸಾಧ್ಯ?

ಆಗ ನನಗೆ ಯಾವ ದುಃಖವಿಲ್ಲ, ಚಿಂತೆಯಿಲ್ಲ, ಯಾರ ಮೇಲೂ ದ್ವೇಷಾಸೂಯೆಗಳಿಲ್ಲ. ನಾನು ತಲುಪಿರುವ ಸ್ಥಿತಿಯಲ್ಲಿ ರೋಗ, ದುಃಖ, ಸಂತೋಷ ನಿರಾಶೆ, ಅತೃಪ್ತಿ ಯಾವುದೂ ಇಲ್ಲ.

ಎಲ್ಲ ರೀತಿಯ ಭಾವನೆಗಳಿಂದ ನಾನೀಗ ಮುಕ್ತ. ನಾನೀಗ ತೃಪ್ತನು.ಸದಾ ಸುಖಿ. ಆ ದೈವರಸಾನುಭವದ ಸವಿಯಲ್ಲಿ ಮಿಂದು ಮುಳುಗಿ ಮೈಮರೆತನು. ಭಗವದಾನಂದವನ್ನು ಅನುಭವಿಸುವ ನನಗೆ ಈಗ ಪ್ರಪಂಚವೇ ಸಪ್ಪೆ. ಅಮೃತದ ರುಚಿ ನೋಡಿದ ಮೇಲೆ ಯಾವುದು ತಾನೇ ನಾಲಿಗೆಗೆ ರುಚಿಸಬೇಕು? ಭಗವದಾನಂದ ನನ್ನನ್ನು ಸರ್ವದಾ ಸುಖಮಯವಾಗಿ ಇಟ್ಟಿರುತ್ತದೆ ಎಂದುಕೊಂಡೆ.

ಕೊಠಡಿಯಿಂದ ಹೊರಗೆ ಬಂದ ನಾನು ಗಗನದ ಕಡೆಗೆ ನೋಡಿದಾಗ, ನನ್ನ ಮನಸ್ಸು ಶಾಂತಿಸಾಗರವಾಗಿತ್ತು. ಅಸಂಖ್ಯ ನಕ್ಷತ್ರಮಯವಾಗಿದ್ದ ಆ ಮಧ್ಯರಾತ್ರಿ ಗುರುವಿನ ಆಶೀರ್ವಾದದಂತೆ ತೋರಿತು. ಎದೆಯಲ್ಲಿ ಉಕ್ಕುತ್ತಿದ್ದ ಶಾಂತಿ ಆನಂದಗಳ ಉತ್ಕರ್ಷದಿಂದ ಮೈ ಮನಸ್ಸು ಗರಿಯಂತೆ ಹಗುರವಾಗಿತ್ತು. ಶಾಂತವಾಗಿ ಆನಂದಪೂರ್ಣವಾಗಿತ್ತು. "ಜಗತ್ತು ನನ್ನೊಳಗಿದೆ ನಾನು ಜಗತ್ತಿನಲ್ಲಿಲ್ಲ" ಎಂಬಂತೆ ಅನುಭವವಾಯಿತು.

ಕಲ್ಲಿನಿಂದ ಹೂವು ಮೂಡುತ್ತದೆಯೆಂದು ನಾನು ಭಾವಿಸಿರಲಿಲ್ಲ! ಎಂಥ ಆನಂದ ! ಎಂತಹ ಪರಮ ಶಾಂತಿ ! ಅನುಭವಿಸುವ ಮೊದಲು ಯಾರಿಗೆ ತಾನೆ ಹೇಗೆ ಗೊತ್ತಾಗಬೇಕು?

ಮಾನವರು ಸಂಸಾರವೆಂಬ ಸ್ವಪ್ನ ಸುಖಕ್ಕೆ ಆಸೆ ಪಟ್ಟು ಮೋಕ್ಷವೆಂಬ ನಿತ್ಯ ಸುಖದಿಂದ ವಂಚಿತರಾಗಿದ್ದಾರೆ. ನಾನು ಯಾವ ಆನಂದ ಸಾಗರದಲ್ಲಿ ಮುಳುಗಿ ತೇಲುತ್ತಿದ್ದೇನೋ ಅದನ್ನು ಇತರರಿಗೂ ಹಂಚಿ ಅವರ ಬದುಕನ್ನು ಕೃತಾರ್ಥ ಮಾಡಬೇಕೆಂಬ ಹಂಬಲ ನನ್ನ ಹೃದಯದಲ್ಲಿ ತುಂಬಿತು.

ಜನರನ್ನೂ ಹಳೆಯ ಮತ ಮೌಢ್ಯ ಸಂಕುಲಗಳಿಂದ ಪಾರುಮಾಡಿ, ಅವರಿಗೆ ವೈಚಾರಿಕತೆಯನ್ನೂ, ವೈಜ್ಞಾನಿಕತೆಯನ್ನೂ ನೀಡಿ ನಿಜವಾದ ವೇದಾಂತದ ಆಧ್ಯಾತ್ಮ ಶ್ರೀಯೆಡೆಗೆ ಅವರನ್ನು ಕರೆದೊಯ್ಯಬೇಕು ಎಂಬುದು ನನ್ನ ಉದ್ದೇಶವಾಗಿತ್ತು.

ಸರ್ವಧರ್ಮ ಸಮನ್ವಯ ಭಾವನೆ ಮೈ ತಳೆಯಬೇಕು. ಮಾನವ ಸಂಸ್ಕೃತಿಯ ಜೀವಾಳವಾದ ಪರಧರ್ಮ ಸಹಿಷ್ಣುತೆ, ವಿಶ್ವ ಭ್ರಾತೃತ್ವ, ವಿಶ್ವಮಾನವ ಸಂದೇಶ ಹಿರಿಮೆ ಮತ್ತು ಗರಿಮೆಯಾಗಬೇಕು.

ನರನು ನಾರಾಯಣನಾಗುವ, ಜೀವೇಶ್ವರನು ಸರ್ವೇಶ್ವರನಾಗುವ ಕಾರ್ಯಸಿದ್ಧಿ ನಡೆಯಬೇಕು. ಶಿಕ್ಷಣದ ಧ್ಯೇಯವು ಮಾನವನನ್ನು ಪುನೀತನನ್ನಾಗಿ ಮಾಡುವ ಜ್ಞಾನತತ್ವದೊಂದಿಗೆ ಸ್ವರ್ಗದತ್ತ ಏರಬೇಕು.

ಸರ್ವಾಂಗಿಕರಣ ಉನ್ನತಿ ಆದಾಗಲೇ ಜೀವನ ಸಾಕ್ಷಾತ್ಕಾರವಾಗಿ ಪರಮಸತ್ಯದ ಅರಿವುಂಟಾಗಿ ಬದುಕು ಸಾರ್ಥಕವಾಗುವುದು.

ವಿಶ್ವದ ಮಾನವರೆಲ್ಲರೂ ಪರಸ್ಪರ ಪ್ರೀತಿಸುವ ಸುವರ್ಣಯುಗದ ಭವ್ಯ ಭವಿಷ್ಯ ದಿನದ ಜಗತ್ತನ್ನು ಕಂಡು ದಿವ್ಯ ಚೇತನವಾದೆ ನಾನು. ಆಗ ನಾನು ಭಕ್ತನಾಗಿ, ಭಗವನ್ನಾಮ ಸಂಕೀರ್ತನದಲ್ಲಿ ಮೈ ಮರೆತು ನಿಸ್ಸಂಗ ಚೇತನನಾದೆ.

ಈ ದೈವೀಕೃಪೆ ನನಗೆ ಸುಲಭವಾಗಿ ಲಭಿಸಿರಲಿಲ್ಲ. ಅದಕ್ಕಾಗಿ ತುಂಬಾ ಕಷ್ಟಪಟ್ಟು ಹಗಲಿರುಳೂ ನಿಷ್ಠೆಯಿಂದ ಮನಸ್ಸು ಮಗ್ನಮಾಡಿ ಲೌಕಿಕವೂ ಸಾಮಾಜಿಕವೂ ಆಗಿರುವ ಎಷ್ಟೋ ಕರ್ತವ್ಯಗಳನ್ನು, ಮರ್ಯಾದೆಗಳನ್ನು ಉಲ್ಲಂಘಿಸಬೇಕಾಗಿ ಬಂದು ಕಟು ಟೀಕೆಗೂ ನಿಂದೆಗೂ ಒಳಗಾಗಿದ್ದೆ. ಬಂಧು ಬಳಗದವ ರಂತಿರಲಿ ಕಡೆಗೆ ಒಡಹುಟ್ಟಿದವರ, ತಾಯಿತಂದೆಗಳ ಅಕ್ಕರೆಯನ್ನೂ ಅಲಕ್ಷಿಸುವಷ್ಟು ಉಗ್ರವಾಯಿತು. ಅಷ್ಟೇ ಅಲ್ಲ, ಅನೇಕ ಜನ್ಮಗಳ ಕಠೋರವೂ, ನಿಷ್ಠುರವೂ ಆದ ಸಾಧನೆ ತಪಸ್ಯೆಗಳಿಲ್ಲದೆ ಈ ಸಿದ್ಧಿ ದೊರಕು ವುದಿಲ್ಲ ಎಂಬ ಸತ್ಯ ನನಗೆ ತಿಳಿಯಿತು.

ಹೌದು ನಾ ಕಂಡ ಸತ್ಯ! ನೋಡಿದ ಸವಿನೋಟ! ದಿವ್ಯ ಆನಂದದ ಅನುಭವ! ಈ ಎಲ್ಲವನ್ನೂ ನಿಜವಾದ ಮಾನವತಾವಾದಿಗಳಾದ ಕೆಲವು ಜನರಿಗೆ ಹೇಳಬೇಕು ಎಂದುಕೊಂಡೆ. ನಾನು ಇಷ್ಟು ದಿನ ಪಟ್ಟ ಕಷ್ಟ ಸಾರ್ಥಕವಾಯಿತೆಂದು ನನಗೆ ನನ್ನ ಬಗ್ಗೆ ಆತ್ಮಾಭಿಮಾನ ಉಂಟಾಯಿತು.